ಸಂಪುಟ ೩
ಸಂಚಿಕೆ ೪

ಕರ್ನಾಟಕ ಭಾರತಿ

ಅಕ್ಷಯ ತೃತೀಯಾ ಸಂಚಿಕೆ
೧೯೭೧

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ ಡಾಯರೆಕ್ಟರ್, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೩ ಸಂಚಿಕೆ : ೪

ಅಕ್ಷಯ ತೃತೀಯಾ ಸಂಚಿಕೆ

ಕ್ರಿ.ಶ. ೧೯೭೧ ಶಾ.ಶ. ೧೮೯೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೩, ಸಂಚಿಕೆ : ೪

ಏಪ್ರಿಲ್ ೧೯೭೧

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪರಿವಿಡಿ

ಬೆಳಗು ಬರೆದಿತ್ತು ' ಶೂನ್ಯ '

' ಬಸವಣ್ಣನೆಂಬ ಜ್ಯೋತಿ '

ಬೆಳಗುತ್ತಲಿದ್ದಿತು

ಥಾಳವಾಗಿ.

ಸಕಲ ಜೀವಾತ್ಮರುಗಳು ಕಣ್ಣುತೆರೆದೆದ್ದು–

ಕುಳಿತಿದ್ದರದರ ಬೆಳಕಿನಲ್ಲಿ.

ಬ್ರಹ್ಮಾನಂದ ತಬ್ಬಿಕೊಂಡಿತ್ತು ಚರಾಚರಗಳ.

ನೆಲ ಜಲ ತೇಜ ವಾಯು ಆಕಾಶ ಎಲ್ಲವೂ

ಪಠಿಸುತಿದ್ದವು—

' ಓಂ ಶಾಂತಿಃ ! ಶಾಂತಿಃ !! ಶಾಂತಿಃ !!! '

......ಬೆಳಗು ಬರೆದಿತ್ತು ' ಶೂನ್ಯ '

....

ಇದು ಕನಸೆ ?

ಇದ್ದಕ್ಕಿದ್ದಂತೆ ಆರಿಹೊಯಿತ್ತಲ್ಲಾ ' ಜ್ಯೋತಿ '

ಕತ್ತಲೆಯುಲ್ಲಿ ಕಾಣಿಸದೆ ಹೋದರಲ್ಲಾ ' ಅಸಂಖ್ಯಾತ ಶರಣರು '

ಗಾಳಿ ಬೀಸಿ ಕಳೆದಿರಬೇಕೆ ' ಇದನು ' ?

' ಇದು ' ಬಿರುಗಾಳಿಯಲ್ಲಿಯೇ ಹೊತ್ತಿಕೊಂಡಿತ್ತಲ್ಲಾ !

' ಆಚಾರವೆಂಬ ಬತ್ತಿ ' ಕುಡಿಯ ಬಿಟ್ಟಿರಬೇಕೆ ?

ಆಚಾರವೇ ಸ್ವರ್ಗವಾಗಿ ಇಳೆಯ ತುಂಬಿತ್ತಲ್ಲಾ !

' ಭಕ್ತಿರಸವೆಂಬ ತೈಲ ' ತೀರಿತ್ತೆ ?

ಭಕ್ತಿಭಾಂಡಾರವಾಗಿತ್ತಲ್ಲಾ !

' ಕಲ್ಯಾಣವೆಂಬ ಪ್ರಣತಿ ' ಒಡೆಯಿತ್ತೆ ?

ಅಹುದೋ ಬಹುದೋ......ಹೇಳಬಲ್ಲವರಾರು ?

.........ನಿಶೆಯು ಬರೆಯಿತು ಶೂನ್ಯ.

....

ಬೆಳಗು ಬರೆದಿತ್ತು 'ಶೂನ್ಯ'

★ **ಶಿವಶರಣ ಜಾವಳಿ**

ಸಿದ್ಧರಾಮನ ಎರಡು ಶಾಸನಗಳು

"ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು" ಎಂಬ ಲೇಖನವನ್ನು ಪ್ರಕಟಿಸಿದ ಶ್ರೀ ವೃಷಭೇಂದ್ರ ಸ್ವಾಮಿಗಳು, ಇವುಗಳಲ್ಲಿ ಅನೇಕ ಶಾಸನಗಳು ಇನ್ನೂ ಪರಿಷ್ಕೃತವಾಗಿಲ್ಲವೆಂದೂ, ಮತ್ತೆ ಕೆಲವುಗಳ ವಿವರಗಳು ದೊರಕಿಲ್ಲ ವೆಂದೂ ಬರೆದಿದ್ದಾರೆ.[೧] ಈ ಕೊರತೆಯನ್ನು ಪಾರ್ಶ್ವವಾಗಿ ನೀಗಿಸುವ ಉದ್ದೇಶ ದಿಂದ, ಇಲ್ಲಿ ಎರಡು ಶಾಸನಗಳನ್ನು ಪರಿಷ್ಕರಿಸಿ ಪ್ರಕಟಿಸುತ್ತಿದ್ದೇನೆ. ಒಂದು ಉಸ್ಮಾನಾಬಾದ್ ಜಿಲ್ಲೆಯ, ತುಳಜಾಪುರ ತಾಲೂಕಿನ, ಇಟ್ಕಲ್ ಗ್ರಾಮದ್ದು, ಮತ್ತೊಂದು ಧಾರವಾಡ ಜಿಲ್ಲೆಯ, ಸವಣೂರ ತಾಲೂಕಿನ ಮಂತ್ರವಾಡಿ ಗ್ರಾಮದ್ದು. ಈ ಎರಡು ಶಾಸನಗಳೂ ಶಿಲಾಸ್ತಂಭಗಳ ಮೇಲೆ ಬರೆಯಲ್ಪಟ್ಟವೆ. ಮತ್ತು ಎರಡೂ ಆಯಾ ಊರಿನ ಮಾರುತಿ ಮಂದಿರದ ಹತ್ತಿರವೇ ಇವೆ, ಎರಡು ಶಾಸನಗಳೂ, ದೇವಗಿರಿ ಯಾದವ ಚಕ್ರವರ್ತಿ ಸಿಂಘಣದೇವನ ಕಾಲಕ್ಕೆ ಸೇರಿದುವು. ಇಟ್ಕಲ್ ಶಾಸನವು ಕ್ರಿ. ಶ. ೧೨೧೭ ರ ವರ್ಷದ್ದಾದರೆ, ಮಂತ್ರ ವಾಡಿಯದು ಕ್ರಿ.ಶ. ೧೨೩೪ ರದ್ದು. ಎರಡೂ ಶಾಸನಗಳೂ ಶ್ರೀ ಸಿದ್ಧರಾಮನ ವಚನ (?) ದಿಂದ ಪ್ರಾರಂಭವಾಗುತ್ತವೆ.

ಈ ವರೆಗೆ ೨೧ ಶಾಸನಗಳು ಖಚಿತವಾಗಿ ಸಿದ್ಧರಾಮನ ವಚನಗಳುಳ್ಳವಾಗಿ ಕಂಡುಬಂದಿವೆ.[೨] ಇವುಗಳಲ್ಲಿ ಪ್ರಸ್ತುತ ಎರಡು ಶಾಸನಗಳನ್ನೊಳಗೊಂಡು ಒಟ್ಟು ೧೧ ಶಾಸನಗಳು ನಂದಿ ಸ್ತಂಭಗಳ ಮೇಲೆ ಇವೆ. ಅವು ಇಂಡಿ ತಾಲೂಕಿನ ಚೋರ್ಗಿ,[೩] ಕೂಡಗಿ,[೪] ಕಪ್ಪನಿಂಬರಗಿ,[೫] ಮುದ್ದೇಬಿಹಾಳ ತಾಲೂಕಿನ ಫಡಕೆ ನೂರ,[೬] ಸೊರಬ ತಾಲೂಕಿನ ಕೊಳಿಸಾಲೆ,[೭] ಹುಬ್ಬಳ್ಳಿ ತಾಲೂಕಿನ ಬುಡರ

---

೧. ವೃಷಭೇಂದ್ರಸ್ವಾಮಿ, ಎಸ್. ಎಂ., "ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು", *The Karnatak University Journal: Humanities*, vol. X. 1966, pp. 192–214.

೨. ಚಿತ್ರದುರ್ಗ ಶಾಸನದಲ್ಲಿ "ಕೊಳ್ಳಿಕಳ್ಳ - -" ಎಂಬ ಗದ್ಯವಿದೆ ಆದರೆ ಶಾಸನವಾತ್ರ ಜಿಮ್ಮತ್ತನಕಲ್ಲು ಸಿದ್ಧನಾಥನಿಗೆ ಸಂಬಂಧಿಸಿದ ಕಾರಣ ಇದನ್ನು ಸಿದ್ಧರಾಮನಿಗೆ ಸಂಬಂಧಿ ಸಿದ ಶಾಸನಗಳಿಂದ ಪ್ರತ್ಯೇಕಿಸಬೇಕಾಗುತ್ತದೆ. ಆಗ ಸಿದ್ಧರಾಮನ ಶಾಸನಗಳ ಸಂಖ್ಯೆ ೨೧ ಎಂದು ಹೇಳಬೇಕಾಗುತ್ತದೆ.

೩. *S. I. I.*, vol. XX, No. 177, p. 222.

೪. *Ibid.*, No. 185, P. 234.

೫. *Ibid.*, No. 201, p. 249.

೬. *S.I.I.*, vol. XV, No. 190, p. 233.

೭. *E.C.* VIII, ಸೊರಬ 561, p. 243.

ಸಿಂಗಿ,[೮] ಕಟನೂರ.[೯] ಧಾರವಾಡ ತಾಲೂಕಿನ ಕೊಟ(ಬಾ)ಗಿ,[೧೦] ಸವಣೂರ ತಾಲೂಕಿನ ಮಂತ್ರವಾಡಿ,[೧೧] ಮತ್ತು ಹಾವೇರಿ ತಾಲೂಕಿನ ಸಂಗೂರು,[೧೨] ಈ ಎಲ್ಲ ಸ್ಥಳಗಳಲ್ಲಿನ ಶಾಸನಗಳೂ ಚೌಕವಾದ ಸ್ತಂಭಗಳ ಮುಖಗಳ ಮೇಲೆ ಬರೆಯಲ್ಪಟ್ಟಿವೆ. ಈ ಸ್ತಂಭಗಳ ಮೇಲೆ[೧೩] ನಂದಿವಿಗ್ರಹಗಳು ಸುಂದರವಾಗಿ ಕಡೆಯಲ್ಪಟ್ಟಿವೆ. ಇಟ್ಕಲ್ ಶಾಸನವು ಸ್ತಂಭದ ಮೇಲಿದ್ದರೂ, ಇದರ ಮೇಲೆ ನಂದಿವಿಗ್ರಹವು ಇದೆಯೋ ಇಲ್ಲವೋ ನನಗೆ ತಿಳಿದಿಲ್ಲ. ಇವಲ್ಲದೆ, ಇಂತಹವೇ ನಂದಿವಿಗ್ರಹವುಳ್ಳ ಸ್ತಂಭಗಳು ಶಿರಹಟ್ಟಿ ತಾಲೂಕಿನ ವೆಂಕಟಾಪುರ, ಶಿಶುನಾಳ, ಮತ್ತು ರೋಣ ತಾಲೂಕಿನ ಯಾವಗಲ್ಲಿನಲ್ಲಿ ಇವೆ.[೧೪] ಆದರೆ ಇವುಗಳ ಮೇಲೆ ಶಾಸನಲೇಖ ಇದೆಯೋ ಇಲ್ಲವೋ ಎಂಬುದು ಪ್ರಸ್ತುತ ತಿಳಿದಿಲ್ಲ. ಇದಲ್ಲದೆ ಇವುಗಳಲ್ಲಿ ಅನೇಕ ಶಾಸನಗಳು ಈಗ ಮಾರುತಿ ಮಂದಿರಗಳ ಸಮೀಪದಲ್ಲಿ ರುವುದನ್ನು ಕೂಡ ಗಮನಿಸಬಹುದು. ಈ ಕೆಲವೊಂದು ವೈಶಿಷ್ಟ್ಯಗಳನ್ನು ಸೂಚಿಸಿ, ಪ್ರಸ್ತುತ ಎರಡು ಶಾಸನಗಳನ್ನು ಅಭ್ಯಸಿಸಬಹುದು.

೧. ಇಟ್ಕಲ್ ಶಾಸನ

ಮೇಲೆ ಹೇಳಿದಂತೆ, ಈ ಶಾಸನವು ಊರಿನ ಮಾರುತಿ ಮಂದಿರದ ಬಳಿಯ ಸ್ತಂಭದ, ಚಾಕ ಭಾಗದ ನಾಲ್ಕು ಮುಖಗಳ ಮೇಲೆ ಬರೆಯಲ್ಪಟ್ಟಿದೆ. ಈ ಶಾಸನದ ಪ್ರತಿಯನ್ನು ನನಗೆ ಒದಗಿಸಿದವರು ಮರಾಠವಾಡ ವಿಶ್ವವಿದ್ಯಾಲಯದ ಮರಾಠಿ ವಿಭಾಗದ ಡಾ. ಡಬ್ಲ್ಯು. ಎಲ್. ಕುಲಕರ್ಣಿಯವರು ಹಾಗೂ ಶ್ರೀ ಸುಧಾಕರ ಅಹಂಕಾರೆಯವರು. ಇವರಿಬ್ಬರಿಗೂ ನನ್ನ ಧನ್ಯವಾದಗಳು.[೧೫]

---

೮. *Karnatak University Journal, Humanities*, vol. VI, 1962, p. 128.

೯. *Annual Report of South Indian Epigraphy for 1942*, p. 258.

೧೦. S. I. I., Vol. XV, No. 195, p.

೧೧. ಲೇಖಕನು ಸ್ವತಃ ನೋಡಿರುವನು.

೧೨. E. I., Vol. XXIII, p. 189.

೧೩. ಸಿದ್ಧ ರಾಮನ ವಚನಗಳುಳ್ಳ ನಾಲ್ಕು ಶಾಸನಗಳು ನಂದಿ ಸ್ತಂಭಗಳ ಮೇಲೆ ಇರುವುದೆಂಬ ಸಂಗತಿಯನ್ನು ನನ್ನ ಗಮನಕ್ಕೆ ತಂದ ಡಾ. ಗುರುವರವರಿಗೆ ನನ್ನ ಕೃತಜ್ಞತೆಗಳು.

೧೪. ವೆಂಕಟಾಪುರ ಮತ್ತು ಶಿಶುನಾಳ ಸ್ತಂಭಗಳ ಮಾಹಿತಿಯನ್ನು ಶ್ರೀ. ಏ. ಎಂ. ಅಣ್ಣಿಗೇರಿಯವರೂ, ಯಾವಗಲ್ಲಿನ ಸ್ತಂಭದ ವಿಷಯವನ್ನು ನನ್ನ ಮಿತ್ರ ಡಾ. ಅ. ಸುಂದರರವರೂ, ನನಗೆ ತಿಳಿಸಿದ್ದಾರೆ. ಈ ಇಬ್ಬರು ಮಿತ್ರರ ಉಪಕಾರವನ್ನು ಇಲ್ಲಿ ಸ್ಮರಿಸುತ್ತೇನೆ.

೧೫. ಇಟ್ಕಲ್ ಶಾಸನದ ಮೇಲೆ ಆಂಗ್ಲ ಭಾಷೆಯ ಲೇಖನವನ್ನು ಮರಾಠವಾಡ ವಿಶ್ವವಿದ್ಯಾಲಯದ ಪತ್ರಿಕೆಯಲ್ಲಿ ಪ್ರಕಟಿಸಲಾಗುವದು.



ಸಿದ್ಧರಾಮನ ಶಾಸನವುಳ್ಳ ನಂದಿ ಸ್ತಂಭ
(ಸಂಗೂರ, ತಾ. ಹಾವೇರಿ, ಜಿ. ಧಾರವಾಡ)

ಮೊದಲಿಗೆ ಈ ಶಾಸನದಲ್ಲಿ ಶ್ರೀ ಸಿದ್ಧರಾಮನ ವಚನ(?)ದ ಪೂರ್ಣ ಪಾಠವನ್ನು ಕೊಡಲಾಗಿದೆ (೧ ರಿಂದ ೧೮ ಸಾಲುಗಳು). ವಚನದ ಕೊನೆಯಲ್ಲಿ "ಎಂಬುದು ಗುರು ವಚನ" ಎಂದು ಬರೆದಿರುವುದು ಗಮನಾರ್ಹವಾದ ವಿಷಯ. ಇದರ ತರುವಾಯ ಯಾದವ ಚಕ್ರವರ್ತಿ ಶ್ರೀ ಸಿಂಘಣನ ಗುಣಾವಳಿಗಳನ್ನು ವರ್ಣಿಸಿದೆ (ಸಾಲುಗಳು ೧೯-೩೦). ಮುಂದೆ ಉಪ್ಪರವಟ್ಟಿ ಖೇಡದ ದೇಶಾಧಿಪತಿ ಮಹಾ ಪ್ರಧಾನ ಮಗರ ಮುರಾರಿ ಸಂಗಮ ದೇವರ ಗುಣಗಳನ್ನೂ, ಬಿರುದುಗಳನ್ನೂ ವರ್ಣಿಸಿ ಅವರು ಎತ್ತಿನೂರನ್ನು ಲಿಂಗಾಪುರವೆಂದು ಪ್ರಸಿದ್ಧ ಪಡಿಸಿ ಅಲ್ಲಿ ಆಳುತ್ತ ಕುಮಾರ ಜೈರಂಗಿ ದೇವ, ಲಿಂಗದೇವ, ಗಣೇಶ್ವರದೇವ, ಪರಗಿದೇವ ಮತ್ತು ಶಿವಮುದು ಶಂಭುದೇವ ಸಹಿತ, ಶಕವರ್ಷ ೧೧೩೯ ನೆಯ ಈಶ್ವರ ಸಂವತ್ಸರದ ಪುಷ್ಯ ಬಹುಳ ಏಕಾದಶಿ ಸೋಮವಾರ,[೧೩] ಉತ್ತರಾಯಣ ಸಂಕ್ರಮಣ, ಸೂರ್ಯ್ಯ ಗ್ರಹಣದ ಪರ್ವಕಾಲದಲ್ಲಿ (ಇಟ್ಟಗೆ ಹಳ್ಳಿಯನ್ನು ?). ಸೊಂನಲಿಗೆಯ ಕಪಿಲ ಸಿದ್ಧಿ ಮಲ್ಲಿಕಾರ್ಜುನ ದೇವರ ಅಂಗ ಭೋಗ ರಂಗ ಭೋಗ ಜೀರ್ಣೋದ್ಧಾರಕ್ಕೆ ಮತ್ತು ಅನ್ನ ಸತ್ರಕ್ಕೆ ಎಂದು ಧಾರಾಪೂರ್ವಕವಾಗಿ ದಾನ ಮಾಡಿದರೆಂದು ತಿಳಿದುಬರುತ್ತದೆ. ಈ ಇಟ್ಟಗೆ ಹಳ್ಳಿಯು ಅಣಂದೂರ ೩೦೦ರ ಕಂಪಣದೊಳಣ ಅಂಕುಲಗೆ ಉಂಕ್ಕೆ ಸಂಬಂಧಿಸಿ ಗ್ರಾಮ(ಬಾಡ)ವೆಂದು ಹೇಳಿದೆ.

ಇಲ್ಲಿ ಉಲ್ಲೇಖಿಸಿರುವ ಊರುಗಳೆಂದರೆ, ಉಪ್ಪರವಟ್ಟಿ ಖೇಡ, ಎತ್ತಿನೂರು, ಲಿಂಗಾಪುರ, ಸೊಂನಲಿಗೆ, ಅಣಂದೂರು, ಅಂಕುಲಗೆ ಮತ್ತು ಯಿಟ್ಟಗೆ ಹಳ್ಳಿ. ಉಪ್ಪರವಟ್ಟಿ ಖೇಡವನ್ನು ಗುರುತಿಸಲು ಸಾಧ್ಯವಾಗಿಲ್ಲ. ಎತ್ತಿನೂರು ಮತ್ತು ಲಿಂಗಾಪುರ ಹೆಸರಿನ ಅನೇಕ ಗ್ರಾಮಗಳು ಇವೆ. ಶಾಸನದಲ್ಲಿ ಎತ್ತಿನೂರನ್ನು ಲಿಂಗಾಪುರವೆಂದು ಪ್ರಸಿದ್ಧಿ ಮಾಡಿದರೆಂದು ಊರಿನ ಹೆಸರನ್ನು ಬದಲಿಸಿರುವ ವಿಷಯ ನಮಗೆ ತಿಳಿದುಬರುತ್ತದೆ. ಸೊಂನಲಿಗೆಯುಂತೂ ಸುಪ್ರಸಿದ್ಧ ಸೊಲ್ಲಾಪುರ ಅಣಂದೂರು, ಇಂದಿನ ತುಳಜಾಪುರ ತಾಲೂಕಿನ ಅಣದೂರು[೧೪]. ಅಂಕುಲಗೆಯು ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಅಂಕಲಗಿ ಇರಬಹುದು. ಯಿಟ್ಟಗೆ ಹಳ್ಳಿಯು ತುಳಜಾಪುರ ತಾಲೂಕಿನ, ಈ ಶಾಸನ ದೊರಕಿರುವ, ಇಟ್ಕಲ್ ಗ್ರಾಮವು.

---

೧೩. ಈ ತಾರೀಖು ಕ್ರಿ. ಶ. ೧೨೧೭ನೆಯ ಡಿಸಂಬರ್ ತಿಂಗಳ ೨೭ನೇ ತಾರೀಖು ಸೋಮವಾರಕ್ಕೆ ಸರಿಯಾಗಿ ಹೊಂದುತ್ತದೆ. ನೋಡಿ, Swami kanu pillai, Indian Ephimeres, Vol. IV, p. 37

೧೪. ಅಣಂದೂರಿನ ಒಂದು ಕನ್ನಡ ಶಾಸನವನ್ನು ಈ ಲೇಖಕನು ಪರಿಷ್ಕರಿಸಿ ಪ್ರಕಟಿಸಿದ್ದಾನೆ Nagaraja Rao, M. S., & Ahankare, S. V., "A New Epigraph from Andur", Marathawada University Journal, Vol. III, No. 2, pp. 90-96.

ಇಟ್ಕೆಲ್

ಶಾಸನದ ಪೂರ್ಣಪಾಠ

೧ ಸ್ವಸ್ತಿ ಶ್ರೀ ಓಂ ಜಯಪರಮೆಶ್ವರ[೧೮] ಪುರಮಾತ್ಮ ಯೀಸ್ವರ[೧೯] ನೂರ್ವ್ವಿ ಪ

೨ ರ್ವ್ವಿ ಅಡಂಗಿ ಕೊಡಿಪ್ಪ ನುಂ ಯಿಾ ಬಂಣ್ಣಿಗೆ ಯಾಗಿ ಯೋಗಿಗಳ

೩ ಮನದ ಕೊನೆಯು ಜೋತೀ ಸ್ವರ[೨೦] ನುಂ ವ್ರಿಸಭ[೨೧] ನ ರೂಪಾಗಿ ಯು (ಜ)

೪ ಮೂ ನ ನುಂ ಆ ಚಾಯ್ಯನುಂ ತಾನೆ ಯಾಗಿ ಯೋಗಿ ಯೋಗಾದಿ ಸಂ ಪ (ಂ ನ)

೫ ಬಗೆಯಂ ಗಳೆಲ್ಲ ವಂ ಸಂಪಾದಿಸಿ ಯೋಗರಮಣೀ (ಯು)

೬ ಕ್ಷೇತ್ರವನೆ ಸ್ಥಳವಿಟ್ಟು ಶಲಾಖೆ[೨೨] ವಿಡಿದು ಅಭಿನವ ಶ್ರೀ ಸೈ ಳ (ವನೆ)[೨೩]

೭ ಮಾಡಿ ಕಪಿಲ ಸಿದ್ಧ ಮಲ್ಲೇಶ್ವರ ದೇವರು ನೆಲಸಿ ನಿಂದು ಪ್ರ (ಂ ಣ್ಯ)

೮ ಪಾಪಂಗಳಂ ಬರಂ ಪೇಳ್ದು ಬೆಸ ಪೇಳುತ್ತ ವಿರುಲು ಯೇಂ (ಬೆ) ಸಂ

೯ ದೇವಾ ಯೆ ನಲು ಯಿೊ ಸ್ಥಾನದಲು ಮಾನ್ಯವಾಗಿ ಊರು ಗಳಂ ಭೂಮಿ

೧೦ ಗಳ ಧನಂಗಳನುಂ ಯಿೊ ಲಿಂಗಕ್ಕೆ ಹಸ್ತೋದಕಂ ಮಾಡಿ ಕೊಟ್ಟುದು ಮಂ

೧೧ ಮನಂ ಪೇ ಸ ದೆ ಕಳೆದು ಕೊಂಡಿಹೆ ನೆಂಬಾತನ ಮಾತಾ ಪಿತ್ರ

೧೨ ಗಳೆಲ್ಲ ರಂ ಎಪ್ಪತ್ತೇಳು ಕೋಟಿ ವರುಷಂ ಬರಂ ಪುಳು ಗೊಂಡದ ನರಕ ದೊಳಿಕ್ಕಿ

೧೩ ನೀನಾಹುತಿ ಗೊಳಿತ್ತಿರು ಗಂಡಾ ಎಲೆ ಪಾಪವೇ ಯಿೊ ದೇವನ ಭೂಮಿ ಧನಕ್ಕ

೧೪ ಂ ಜು ವೆನೆಂದು ಪಾವಡದ್ದ೯ಂತೆ ಮನಂ ಬೆದಱ ಪೊಡವೊಟ್ಟ ನಂ ಬೇಗ ಶಿಘ್ರಂ

---

೧೮. ಪರಮೇಶ್ವರ

೧೯. ಯೀಶ್ವರ

೨೦. ಜ್ಯೋತೀಶ್ವರನುಂ

೨೧. ವೃಷಭ

೨೨. ಕೆಲಕಡೆಗಳಲ್ಲಿ 'ಸಲಾಖೆ' ಎಂದು ಬರುತ್ತದೆ.

೨೩. ಶ್ರೀ ಶೈಲ

೧೫ ಕೊಂಡು ಬಾ ಕಂಡಾ ಎಲೆ ಪುಣ್ಯವೇ ನೀ ಕವಿಳಾಸಕ್ಕೆ[೨೪] ಯಿಂತೀ ಎರ

೧೬ ಡರ ಬೆಂನಲು[೨೫] ಪುಣ್ಯ ಪಾಪಗಳು ಹದ್ದುರ್ಕೊಂಡಿದ್ದುರ್ ಯ್ಯುದು.

೧೭ ತಪ್ಪದು ದಿಠ ದಿಠಂ ಸತ್ಯಂ ಗಂಡಿರೆ ಎಂಬುದು ಗುರುವ

೧೮ ಚ ನ || ಶ್ರಿಶ್ರಿ[೨೬]

೧೯ ಶ್ರಿ ಸ್ವಸ್ತಿ ಸಮಧಿ ಗತ ಪಂಚ ಮಹಾ

೨೦ ಸಬ್ದ[೨೭] ದ್ವಾರಾ ವತೀ ಪುರ ವರಾ

೨೧ ಧೀ ಸ್ವರಂ[೨೮] ವಿಷ್ಣು ವಂಸೋ

೨೨ ದ್ಭವಂ ಯಾದವ ಕುಳ

೨೩ ಕಳಿಕಾ ವಿಶ್ವಾಸ ಭಾ

೨೪ ಸ್ಕರ ಮಾಳದಿ ಮಲ್ಲ (೦) ಅರಿ ರಾ

೨೫ ಯು ಉರ ಸೆಲ್ಲ (೦) ಗೂಜ್ಜರ ವಾರ

೨೬ ಣಂ ಕುಶಂ ಯು ರಿ ರಾಯು

೨೭ ಜ ಗ ಝು ೦ ಪ ರಾ ಯ ವಿಭಾ್ರ

೨೮ ಡಂ ರಾ ಯು ನಾರಾಯು

೨೯ ಣ ಶ್ರೀ ಮತು ಯಾದವ ಪ್ರ

೩೦ ತಾಪ ಚಕ್ರವರ್ತ್ತಿ ಶ್ರೀ ಸಿಂಗಣ

---

೨೪. ಕೈಲಾಸ

೨೫. "ಬೆಂಗೆ" ಎಂಬ ರೂಪವೂ ಇರುವುದುಂಟು. ಈ ಶಾಸನದಲ್ಲಿಯೂ, ಮಂತ್ರವಾಡಿ ಶಾಸನದಲ್ಲಿಯೂ 'ಬೆಂನಲು' ಎಂದಿದೆ.

೨೬. ಈ ಬಗ್ಗೆ ಪಾಠಾಂತರ ವೈಪರೀತ್ಯವನ್ನು ವಿವೇಚಿಸುತ್ತಾ. ಶ್ರೀ ವೃಷಭೇಂದ್ರಸ್ವಾಮಿಯವರು. "ಜಂಬಗಾವ್ (೪) ಮತ್ತು ಇಟ್ಟಲ್ (೬) ಶಾಸನಗಳನ್ನು ಬಿಟ್ಟರೆ, ೧೨೫೬ ರ ಸೊರಬ ಶಾಸನದ ವರೆಗೆ, ಎಲ್ಲಿಯೂ 'ಶ್ರೀ ಸಿದ್ಧರಾಮನಾಥನ ಶ್ರೀವಚನ' ಎಂಬುದು ಕಾಣಿಸುತಿಲ್ಲ. ೪, ೬ ನೆಯ ಶಾಸನಗಳು ಇನ್ನೂ ಸಂಪೂರ್ಣ ಪರಿಷ್ಕೃತಗೊಂಡು ಪ್ರಕಟವಾಗಿಲ್ಲವಾದ್ದರಿಂದ, ತತ್ಕಾಲಕ್ಕೆ ಅವುಗಳಲ್ಲಿ ಬರುವ ಗುರು ಸಿದ್ಧರಾಮನಾಥ ದೇವರ ವಚನ "ಎಂಬ ಪಾಠಾಂತರ ಗ್ರಾಹ್ಯವಲ್ಲ" ವೆಂದು ಬರೆದಿದ್ದಾರೆ. Karnatak University Journal, Humanities, Vol X, p. 205. ಆದರೆ ಪ್ರಸ್ತುತ ಶಾಸನವು ಕ್ರಿ. ಶ. ೧೨೧೭ ನೆ ವರ್ಷದ್ದಾಗಿದ್ದು ಇದರಲ್ಲಿ "ಗುರುವಚನ" ವೆಂಬ ಪಾಠಾಂತರ ಮಾತ್ರವಿದೆ. ಕ್ರಿ. ಶ. ೧೨೩೪ ರ ಮಂತ್ರವಾಡಿ ಶಾಸನದಲ್ಲಿಯೂ, ಯುಡಹಳ್ಳಿ ಮತ್ತು ಕೊಟಬಾಗಿಯ ಶಾಸನಗಳಲ್ಲಿಯೂ "ಗುರು ಸಿದ್ಧರಾಮನಾಥ ದೇವರ ವಚನ" ವೆಂಬ ಪಾಠಾಂತರ ವಿರುವುದನ್ನು ಗಮನಿಸಬಹುದು.

೨೭. ಶಬ್ದ

೨೮. ಪುರವರಾಧಿಶ್ವರಂ.

೩೧ ದೇವ ರಾಜ್ಯಾಭಿ ವ್ರಿದ್ಧಿ ಪ್ರವ
೩೨ ರ್ದ್ಧ ಮಾನ ಮಾ ಚಂದ್ರಾ
೩೩ ರ್ಕ್ಕ ತಾರಂ ಬರಂ ಸಲುತ್ತ ವಿರ
೩೪ ಲು ಶ್ರೀ ಮತು ಸಕ ವರ್ಷ
೩೫ ದ ೧೧೩೯ ನೆಯ ಯೀಶ್ವರ
೩೬ ಸಂವತ್ಸರದ ಪುಸ್ಯ ಬ
೩೭ ಹುಳ ೧೧ ಸೋಮ
೩೮ ವಾರ ವಿತೀ ಪಾತ[೨೯] ಉತ್ತರಾಯಣ ಸಂಕ್ರಮಣ ಸೂರ್ಯ್ಯಗ್ರಹಣ.
೩೯ ದ ಮುಂದೆ ಸ್ವಸ್ತಿ ಸಮಸ್ತ ಪ್ರಸಸ್ತಿ[೩೦] ಸಹಿತಂ ಶ್ರೀ ಮತ್ತು ಪ್ಪುರವಟ್ಟಿ
ಖೇಡದ.
೪೦ ಸಕಳ ಲಖ್ಮಿ ಪತಿಯನೆತದ್ದೇಸಾಧಿ ಪತಿಯು ವತಿ[೩೧] ಜನ ಕು
೪೧ ಸ್ಮಾ ನಾಯಕಂ ಊರ್ದ್ದಂಡ ಮಂಡಳಿಕ ಮಗಿರ ಗ್ರಾ ಹು ಮನೋ
ನುಮ
೪೨ ವಬ್ಬರ ಅಹಂಕಾರ ಪ್ರಧಾನ ವಿರಾಹು ಹೊಯಿ ಸಣ ದಿ ಸಾ ಪಟ್ಟ
೪೩ ತುರೆಯ ಸಂಘಟ್ಟ ಕೂರ್ಮ್ಮಗಿರಿ ಘಟ್ಟ ಯತಿ ವಿಶಯ ಹ ಯೂ ರೂ
೪೪ ಢ ಪ್ರೌಢ ರೇಖಾ ರೇವಂತ ಪರ ಬಳ ಕ್ರಿತಾಂತ ಮಂತ್ರಿ ನಾಯ
೪೫ ಕ ಪ್ರಮುಖ ದರ್ಪ್ಪ ಕಲಿಕಾಲ ಕೃಪ ಯಾದವ ರಾಜ್ಯ ಸಮುಧ[೩೨]ರಣ
ರಾಯ
೪೬ ನಾಥರ ಶ್ರೀಮ ನು ಮಹಾ ಪ್ರಧಾನ ಮಗರ ಮುರಾರಿ ಸಂಗಮ
೪೭ ದೇವ ನಾಯಕರುಂ ಕುಮಾರ ಜಯಿ ತಿಗಿ ದೇವ ಲಿಂಗದೇವ ಗಣೇಶ್ವರ
ದೇವ ಪ
೪೮ ರಿಗಿ ದೇವ ಸಿವ ಮುದು ಶಂಭು ದೇವ ಯಿಂತೀ ಕುಮಾರರು ಸಹಿತ
೪೯ ಎತ್ತಿ ನೂರ ಲಿಂಗಾ ಪುರವೆಂದು ವಿಖ್ಯಾ ತಿ ವ ಮಾಡಿ ಸಮಸ್ತ ತಂತ್ರ
೫೦ (ಪಾಳರ) ಶ್ರೀಕರಣಂಗಳು ವೆಲ್ಲಸಿ ಸುಖ ಸಂಕತಾ ವಿನೋ ದದಿಂ
೫೧ ರಾಜ್ಯಂ ಗೆ ಯ್ಯುತ್ತ ಮಿರ್ದ್ದು ಸ್ವಸ್ತಿ ಶ್ರೀ ಮತು
.... ದ
೫೨ ಕ್ಷಿಣ ವಾರಣಾಸಿ ಅಭಿನವ ಶ್ರೀ ಸೈಳ ವೆನಿಪ ಸೊಂನಲಿಗೆ

---

೨೯. ವ್ಯತೀಪಾತ
೩೦. ಪ್ರಶಸ್ತಿ
೩೧. 'ವ' ಸಾಲಿನ ಮೇಲೆ ಬರೆದಿದೆ.
೩೨. ಸಮುದ್ಧರಣ

೫೩ ಯ ಪುರದ ಶ್ರೀ ಮನು ಮಹಾ ಮಹಿಮ ಕಪಿಲ ಸಿದ್ಧಿ ಮಲ್ಲಿ ಕಾರ್ಜುನ ದೇ(ವ)

೫೪ ರ ಅಂಗ ಭೋಗ ರಂಗ ಭೋಗ ಜೀರ್ನೊದ್ಧಾರ ಅಮಂ೩೩ ಸತ್ರ ಕಂ

೫೫ ಆಣಂ ದೂರ ೩೦೦ ಋ ರ ಕಂಪ ಣ ಅಂಕುಲಗೆಂಭತ್ತ ಱೊಳಗ

೫೬ ಣ ಬಳಿಯ ಬಾಡ ಯಿಟ್ಟಗೆಯ ಹಳ್ಳಿಯುಮ್ನಂ ಆ ನಾಲ್ಕು ಸೀಮೆ ಯಿಂ

೫೭ ದೊಳಗಣ ಭೂ ಮಿ ಜಲ ಪಾಶಾಣ ವ್ರಿಕ್ಷ ನಿಧಿ ನಿಧಾನ ನಿಕ್ಷೇ

೫೮ ಪ ನೆಲವಾಳು ಬಾಳವಾಲು ಮಂನೆಯ ಕೊಡಗೆ ಯೀ ಮೂಲಿಗ ಸ

೫೯ ಕಲ ಉಭೆಯ ತೇಜ ಸ್ವಾ ಮ್ಯಂ ಸಹಿತಂ ಸರ್ಬ್ಬ ನಮಸ್ಯ ವಾಗಿ ಸಂಗಮ ದೇವ

೬೦ ನಾಯಕರು ತಮ್ಮ ಹೆಹರ ದಿಂ ಧಾರಾ ಪೂ ಬ್ರ್ಬ ಕಂ

೬೧ ಮಾಡಿ ಕೊಟ್ಟ ಧರ್ಮ್ಮ ವಾ ಚಂದ್ರಾರ್ಕ್ಕ ತಾರಂ ಬರಂ ಸಲುತ್ತ ವಿರಲು

೬೨ ಮಂಗಳ ಮಹಾ ಶ್ರೀ ಶ್ರೀ ಶ್ರೀ.

೨. ಮಂತ್ರವಾಡಿಯ ಶಾಸನ

ಈ ಶಾಸನವು ಕೂಡ, ಊರಿನ ಪೂರ್ವದಿಕ್ಕಿನಲ್ಲಿರುವ ಮಾರುತಿ ಗುಡಿಯ ಹೊರಭಾಗದಲ್ಲಿದೆ. ಶಾಸನವಿರುವ ನಂದಿ ಸ್ತಂಭವನ್ನು ಒಂದು ಕಲ್ಲಿನ ಕಟ್ಟೆಯ ಮೇಲೆ ನಿಲ್ಲಿಸಿದೆ. ಮೇಲಿರುವ ನಂದಿಯು ಪೂರ್ವಾಭಿ ಮುಖವಾಗಿದ್ದರೆ, ಶಾಸನವು ದಕ್ಷಿಣ ಮುಖದ ಮೇಲೆ ಬರೆಯಲ್ಪಟ್ಟಿದೆ ೩೪

ಪ್ರಾರಂಭದಲ್ಲಿ ಪರಮೇಶ್ವರ ಪ್ರಾರ್ಥನೆಯಿದೆ. (ಸಾಲುಗಳು ೧ ೨). ನಂತರ ಸಿದ್ಧರಾಮ ವಚನ(? ದ ಪೂರ್ಣ ಪಾಠವಿದೆ (ಸಾಲುಗಳು ೩ ರಿಂದ ೨೪) ಅದು "ಗುರುಸಿದ್ಧ ರಾಮನಾಥ ದೇವರ ವಚನ" ವೆಂದು ಕೊನೆಗೊಳ್ಳುವು ದನ್ನು ಗಮನಿಸಬಹುದು. ಇದರ ತರುವಾಯ ಯಾದವ ಚಕ್ರವರ್ತಿ ಶ್ರೀಸಿಂಘಣ ದೇವನ ಗುಣವನ್ನೂ, ಪರಾಕ್ರಮವನ್ನೂ ಹಾಗೂ ಬಿರುದಾವಳಿಗಳನ್ನೂ, ವರ್ಣಿಸುವ ಭಾಗವಿದೆ (ಸಾಲುಗಳು ೨೫ ರಿಂದ ೩೬). ಆಮೇಲೆ ಶಕ ವರ್ಷ

---

೩೩. ಅನ್ನ

೩೪. ಸಂಗೂರಿನ ಶಾಸನವೂ ಕೂಡ ನಂದಿ ಸ್ತಂಭದ ದಕ್ಷಿಣ ಮುಖದಲ್ಲಿ ಬರೆದಿರುವುದನ್ನು ಗಮನಿಸಬಹುದು.

೧೧೫೬[೩೫] ನೆಯ ಜಯ ಸಂವತ್ಸರದ, ವೈಶಾಖ ಬಹುಳ ಪ್ರತಿಪದೆ. ಸೋಮವಾರ, ವ್ಯತಿಪಾತ ಸಂಕ್ರಮಣದಂ ಹೊಂನಬೊಂಮಿಸೆಟ್ಟಿಯರು. ತಮ್ಮ ದೇಶದೊಳಗಣ ಮಂತ್ರವೀಡನ್ನು' ತಮ್ಮ ಸ್ವಹಸ್ತದಿಂದ ಧಾರಾಪೂರ್ವಕವಾಗಿ ಸೊಂನಲಿಗೆಯ ಕಪಿಲಸಿದ್ಧಿ ಮಲ್ಲಿಕಾರ್ಜುನ ದೇವರಾದಿಯಾಗಿ, ಯಾನಾವಿ ಬಾಗಿಲಿನ ಅನಂತ ಸಾಹಸ್ರಲಿಂಗಕ್ಕೆ, ನಿತ್ಯಹೋಮಾಹುತಿ ಮತ್ತು ನಿತ್ಯರ್ಘ್ಯಕ್ಕೆ ಧರ್ಮ ಮಾಡಿದರೆಂದು ಹೇಳಿದೆ. ಅಲ್ಲದೆ, ಹೊಂನ ಬೊಂಮಿಸೆಟ್ಟಿಯರ ಗುಣಗಳನ್ನು, ಬಿರುದಾವಳಿಗಳನ್ನು ಪೂರ್ಣವಾಗಿ ವಿವರಿಸಿದೆ (ಸಾಲುಗಳು ೩೮–೪೯). ಈ ಬೊಂಮಿಸೆಟ್ಟಿ ಆರ್ಯ ಮಲ್ಲಿಸೆಟ್ಟಿಯರ ಪುತ್ರನೆಂದು ತಿಳಿದು ಬರುತ್ತದೆ (ಸಾಲುಗಳು ೫೩-೫೪).ರಟ್ಟಿಹಳ್ಳಿ ಶಾಸನದಲ್ಲಿ[೩೬] ಇವರು ಆರ್ಯ ಬೊಮ್ಮನ ಮೊಮ್ಮಗನೆಂದೂ, ಆರ್ಯಮಲ್ಲಿ ಮತ್ತು ರಾಜಲಿದೇವಿಯರ ಪುತ್ರನೆಂದೂ, ರೇವ, ಚಾವುಂಡ ಮತ್ತು ಅಚಲರ ಸಹೋದರನೆಂದೂ, ಕಾಮಲದೇವಿಯ ಪತಿಯೆಂದೂ, ಮತ್ತು ಗುಪ್ತಮಲ್ಲನ ಪಿತನೆಂದೂ ಹೇಳಿದೆ. '' ಈ ಶಾಸನದ ಪ್ರಮುಖ ವ್ಯಕ್ತಿಯಾದ ಈತನು ಯಾದವರ ಕೈಕೆಳಗೆ ಮುಳುಗುಂದ ನಾಡನ್ನಾಳುವ ಅಧಿಕಾರಿ,[೩೭] ಕೊಡಮೊಘೆ, ಕೊಪ್ಪಳ, ದ್ವಾರಸಮುದ್ರಗಳನ್ನು ಸುಟ್ಟ ಈ ಪರಾಕ್ರಮಿ ಪರಮ ಶಿವಬಕ್ತ.[೩೮] ಸೊರಬದ ಶಾಸನಗಳಲ್ಲಿ ಈತನನ್ನು '' ಆದಿಗಣಾವತಾರ '' ನೆಂದು ಕರೆಯಲಾಗಿದೆ.[೩೯] ಈತನ ಜಂಗಮನ ಭಕ್ತಿಯನ್ನಂತೂ ಈ ಶಾಸನ ಅಪೂರ್ವ ರೀತಿಯಲ್ಲಿ ಉದ್ಘೋಷಿಸುತ್ತದೆ"[೪೦] ಎಂದು ಡಾ. ಕಲಬುರ್ಗಿಯವರು ಬರೆದಿದ್ದಾರೆ.[೪೧]

ಇನ್ನು ಈ ಶಾಸನದಲ್ಲಿ ಉಲ್ಲೇಖಿಸಿರುವ ಊರಿನ ಹೆಸರುಗಳೆಂದರೆ, ಕಾಲಡಿ ೯೬ (ಸಾಲು ೬೦) ಮಂತ್ರವೀಡು (ಸಾಲು ೬೧) ಮತ್ತು ಸೊನ್ನಲಿಗೆ (ಸಾಲು ೬೨). ಕಾಲಡಿಯನ್ನು ಇಂದಿನ ಶಿರಹಟ್ಟಿ ತಾಲೂಕಿನ ಮತ್ತು ಮಂತ್ರ ನಾಡಿಯಿಂದ ೨ ಮೈಲು ಉತ್ತರಕ್ಕಿರುವ ಕಾರಡಿಗೆ ಎಂದು ಗುರುತಿಸಬಹುದು. ಇಂದಿನ ಮಂತ್ರವಾಡಿಯೇ ಶಾಸನದಲ್ಲಿ ಹೇಳಿರುವ ಮಂತ್ರವೀಡು. ಮೇಲೆ ಹೇಳಿದಂತೆ ಸೊಂನಲಿಗೆಯಂತೂ ಇಂದಿನ ಸೊಲ್ಲಾಪುರ.

---

೩೫. ಕ್ರಿ. ಶ. ೧೨೩೪.

೩೬. ಈ ಶಾಸನವಿನ್ನೂ ಅಪ್ರಕಟಿತ. ಈ ಸೂಚನೆಗೂ, ಮುಂದಿನ ಎರಡು ಸೂಚನೆಗಳಿಗೂ, ನನ್ನ ಗಮನವನ್ನು ಸೆಳೆದ ಡಾ. ಮಲ್ಲಿನಾಥ ಕಲಬುರ್ಗಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.


೩೭. E. C. VII, ಹೊನ್ನಾಳಿ, ೪೩ ಬೆಳಗುತ್ತಿ. ಇದರಲ್ಲಿ ಹೊಂನ ಬೊಂಮಿಸೆಟ್ಟಿಯು ಬನವಾಸಿ ಯನ್ನಾಳುವ ವಿಚಾರ ಬಂದಿದೆ.

೩೮. E. C. VIII, ಸೊರಬ ೨೭೫, ೨೭೬.


೩೯. ಅದೇ ಕಡೆಯಲ್ಲಿ.

೪೦. ಚೌಡದಾನಪುರದ ಶಾಸನದಲ್ಲಿಯೂ ಈತನ ಹೆಸರು ಬಂದಿದೆ. ಶಿವದೇವ ವಿಜಯ ಅನುಬಂಧ.


೪೧. ಕಲಬುರ್ಗಿ, ಎಂ. ಎಂ., ಶಾಸನಗಳಲ್ಲಿ ಶಿವಶರಣರು, ೧೯೭೦, ಧಾರವಾಡ, ಪು. ೧೦೨




೧



೨




೩



೪

ಇಟ್ಕಲ್ ಶಾಸನ



ಮಂತ್ರವಾಡಿಯ ಶಾಸನ

೩ ಮಂತ್ರವಾಡಿ

೧ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮ
೨ ರ ಚಾರವೆ ತ್ರೈಳೋಕ್ಯ ನಗರಾರಂಭ ಮೂಲ
೩ ಸ್ತಂಭಾಯ ಸಂಭವೆ॥ ಸ್ವಸ್ತಿ ಶ್ರೀ ಓಂಪರಮೇ
೪ ಸ್ವರ[೪೨] ಪರಮಾತ್ಮ ಯೀ ಶ್ವರನುರ್ವಿರ್ಗೆ ಪರ್ವಿರ್ಗ ಯುಡಂ
೫ ಗಿ ಕೊಂಡಿಪ್ಪನು ಯೋರ್ಬಣ್ಣಿಗೆ ಯಾಗಿ[೪೩] ಯೋಗಿಗಳ
೬ ಮನದ ಕೊನೆಯ ಜ್ಯೋತೀಶ್ವರ ನುಂ ವ್ರಿಶ ಬರೂ[೪೪] ಪಾ
೭ ಗಿ ಯಜಮಾನ ನುಂ ಯಾ ಚಾರ್ಯ್ಯ ನೂ ತಾನೆಯಾ
೮ ಗಿ ಯೋಗಾದಿ ಸಂಪಂನ ಬಗೆಯುಂ[೪೫] ಗಳೆಲ್ಲ ವಂ ಸಂಪಾ
೯ ದಿಸಿ ಯೋಗ ರಮಣೀಯ ಕ್ಷೇತ್ರ ಮನೆ ಸ್ಥಳ ವಿಟ್ಟು ಸ
೧೦ ಲಾಖೆ ವಿಡದು ಯಭಿನವ ಶ್ರೀ ಸ್ಯೆ ಬಿ ವನೆ ಮಾಡಿ
೧೧ ಕಪಿಲ ಸಿದ್ಧ ಮಲ್ಲೇಶ್ವರ ದೇವರೆ ನೆಲಸಿ ನಿಂದು ಪು
೧೨ ಣ್ಯ ಪಾಪಂ ಗಳಿಂ ಬರ ಪ್ಪೇಳ್ದು ಬೆಸವೇಳುತ್ತ ಮಿ
೧೩ ರಲು ಎಂ ಬೆಸಂ ದೇವಾ ಎನಲು ಯೀ ಸ್ಥಾನದ
೧೪ ಲು ಮಾನ್ಯ ವಾಗಿ ಪೂರುಗಳಂ ಭೂಮಿಗಳಂ ಧನಂ
೧೫ ಗಳನು ಯೀ ಲಿಂಗಕ್ಕೆ ಹಸ್ತೋದ ಕಂ ಮಾಡಿ ಕೊಟ್ಟುದು ಮಂ
೧೬ [೪೬] ಮನ ಪೇಸದೆ[೪೭] ಕೊಂಡಿಪೆನೆಂಬಾತನ ಮಾತಾಮಾತೆ ಪ
೧೭ ಪಿತೃಂಗಳೆಲ್ಲವಂ ಎಪ್ಪತ್ತೇಳು ಕೋಟಿ ಪರಿ ಶಂಬರಂ ಪು
೧೮ ಳ್ಗೊಂಡದ ನರಕನೊಳಿಕ್ಕಿ ನೀನಾ ಹುತಿಗೊಳುತಿರು
೧೯ ಕಂಡಾ ಎಲೆ ಪಾಪವೇ ಯೀ ದೇವನ ಭೂಮಿ ಧನಕ್ಕಾ ನಂ
೨೦ ಜಾವೆನೆಂದು ಪಂದೆಯಂ ಪಾಪತರ್ದಂತೆ ಮನಂ ಬಿದ ಜಿ ಪೊತ

---

೪೨. ಪರಮೇಶ್ವರ

೪೩. ಓರ್ವರ್ಗಂ ಮಿಗೆ, ಪೊಬ್ಬಣ್ಣಿಗೆ, ನೊರ್ವಣ್ಣಿಗೆ, ಓಬ್ಬರ್ಣ್ಣಿಗೆ ಮುಂತಾಗಿ ವಿವಿಧ ಪಾಠಗಳಿವೆ. ವಿವರಗಳಿಗೆ ನೋಡಿ: ವೃಷಭೇಂದ್ರಸ್ವಾಮಿ, ಎಸ್. ಎಂ., "ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು", The Karnatak University Journal, Humanities, Vol. X, 1966, ಪು. 204.

೪೪. ವೃಷಭ

೪೫. ಬಳಿಯುಂ (ಚು, ತಡ, ಸಂ); ಕಳಿಯುಂ (ಗುಂಡ ಕರ್ಜಗಿ)

೪೬. ೧೬ನೇ ಸಾಲಿನಿಂದ ೨೪ನೇ ಸಾಲಿನ ವರೆಗಿನ ಭಾಗವು ಎಲ್ಲ ಶಾಸನಗಳಲ್ಲಿಯೂ ಸಾಮಾನ್ಯ.

೪೭. ಉಳಿದ ಶಾಸನಗಳಲ್ಲಿ "ಕಳಿದು" ಕೊಂಡಿಸೆ, ಎಂದು ಬರುತ್ತದೆ ನೋಡಿ ವೃಷಭೇಂದ್ರಸ್ವಾಮಿ, ಪು. ೨೦೫

೨೧ ವಟ್ಟನಂ ಬೇಗ ಶೀಘ್ರಂ ಕೊಂಡುಬಾ ಕಂಡಾ ಎಲೆ ಪುಣ್ಯವೇ ನೀಂ ಕವಿ
೨೨ ಳಾಸಕ್ಕೆ ಯಿಂತೀ ಎರಡರ ಬೆಂನಲು[೪೮] ಪುಣ್ಯ ಪಾಪ ಗಳು
೨೩ ಪಾರ್ದ್ದುಂ ಕೊಂಡಿರ್ದ್ದು ಯ್ಯುದು ತಪ್ಪದು ದಿಶಂ[೪೯] ಸತ್ಯ ಗಂಡಿರೆ
೨೪ ಎಂಬುದು ಗುರುಸಿದ್ಧ ರಾಮನಾಥ ದೇವರ ವಚನ ॥[೫೦] ಸ್ವಸ್ತಿ
೨೫ ಸಮಧಿ ಗತ ಪಂಚ ಮಹಾ ಸಬ್ದ ದ್ವಾರಾವತೀ ಪುರವರಾ
೨೬ ಧೀಸ್ವರಂ ವಿಷ್ಣು ವಂಶೋದ್ಭವಂ ಯಾದವ ಕುಳ ಕಮಳ ಕಳಿಕಾ
೨೭ ವಿಭಾಷ ಭಾಸ್ಕರಂ ಯರಿರಾಯ ಜಗರ್ಜ್ಜ ಪ ನಿಜ
೨೮ ಭಾಜ ಮಂದರ ಮಥಿತ ಮಾಳ ಮಹಾರ್ನ್ನವೋ ತ್ಸಳಿತ
೨೯ ಲಕ್ಷ್ಮೀ ಸ್ವಯಂ ಬರಂ ಗೂರ್ಜ್ಜರವಾರಣಾಂಕುಸ ತೆಲುಂಗ ರಾ
೩೦ ಯ ಸಿರಃ ಕಮಳ ನಾಳ ಮೊಳೋ ತ್ಪಾಟನಕರಂ ಕರ್ನ್ನಾ
೩೧ ಟ ರಾಯ ವಂಸಾಭಿರಾಮಂ ಗಿರಿದುರ್ಗ್ಗ ಜಲದುರ್ಪ್ಪವನ[೫೧]
೩೨ ದುರ್ಗ್ಗ ನೆಲ ದುರ್ಗ್ಗ ವಿದ್ರಾವಣಂ ರಾಯ ವಿಭಾಡ ರಾ
೩೩ ಯ ನಾರಾಯಣ ಯಾದವ ಪ್ರತಾಪ ಚಕ್ರವರ್ತ್ತಿ ಶ್ರೀ
೩೪ ಸಿಂಘಣದೇವ ವಿಜಯ ರಾಜ್ಯ ಉತ್ತರೋತ್ತರಾಭಿವ್ರಿ
೩೫ ದ್ಧಿ ಪ್ರವರ್ದ್ಧ ಮಾನವಾಚಂದ್ರಾರ್ಕತಾರಂಬರಂ ಸಲು
೩೬ ತ್ತ ವಿರಲು ॥ ಶ್ರೀ ಮತು ಸಕ ವರುಷ ೧೧೫೬ನೆ ಯು
೩೭ ಜೆಯ ಸಂವತ್ಸರ ದ ವೈ ಶಾಖ ಬ ೧ ಸೋಮವಾರ ವಿತಿ ಪಾ
೩೮ ತದ ದಕ್ಷಿಣಾಯ[೫೨] ಸಂಕ್ರ ಮಹಳ ದ[೫೩] ಮುಂದೆ ॥ ಸ್ವಸ್ತಿ ಸಮ
೩೯ ಸ್ತ ಭವನ ವಿಖ್ಯಾತ ಪದ್ಮವನ ಜಾತ ಮನೂಜ ಮಾಂಧಾ
೪೦ ತ ವಿನೆಯ ಜನ ಪ್ರೀತ ಸನುಮಾನ ಪುರಾತದಾ
೪೧ ರಿಂದ್ರ ತಿಮಿರ ಮಾರ್ತ್ತಂಡ ಕದನ ಪ್ರಚಂಡ ಮಾನಕ
೪೨ ನಕಾ ಚಳ ಗಂಭೀರ ರತ್ನಾಕರ ಕುಮುದೆಯ ಪೂ
೪೩ ರ್ಣ್ಣ ಚಂದ್ರ ವಿಭವಾ ಮರೇಂದ್ರ ದೀನಾರ್ತ್ತ ಜನವನಮ
೪೪ ತ ಸಮೆಯ ದ್ರೋಹ ಕಾಳಾನಳಂ ದುಷ್ಟ ಸಮೆಯದೀ
೪೫ ಕ್ಷಿತನಂ ಸಿಷ್ಟ ಸಮೆಯ ರಕ್ಷಕನು ಮುದ್ದಂಡ ಮಂಡ

---

೪೮. ಸಾಮಾನ್ಯವಾಗಿ 'ಬೆಂಗೆ' ಎಂದಿರುತ್ತದೆ. ಆದರೆ ಈ ಶಾಸನದಲ್ಲಿಯೂ, ಇಟ್ಗಿಲ್ ಶಾಸನದಲ್ಲಿಯೂ 'ಬೆಂನಲು' ಎಂದು ಬರೆದಿದೆ.

೪೯. ಸಾಮಾನ್ಯವಾಗಿ ದಿಶ ದಿಶಂ ಎಂದಿರುತ್ತದೆ. ಇದರಲ್ಲಿ ಒಂದೇ ದಿಶವಿದೆ.

೫೦. ಪದಸೂಚಿ ಸಂಖ್ಯೆ ೨೬ನ್ನು ನೋಡಿ.

೫೧. ದುರ್ಗ್ಗ.

೫೨. ನ ಬರೆದಿಲ್ಲ.

೫೩. ಸಂಕ್ರಮಣ.

೪೬ ಳಿಕ ಗರ್ವ್ವ ಪರ್ವ್ವತ ವಜ್ರಭೀಷಣನುಂ ಶ್ರೀಮನ್ಮ
೪೭ ಹಾ ಪ್ರಧಾನ ಮನೇಕ ದೇಶಾಧಿಪತಿ... (ಲ)
೪೮ ಕ್ಷ್ಮೀಪತಿ ನಿಯೋಗ ಯೋಗ ಯೋಗಾಂಧ (ನ) ರಪತಿ....
೪೯ ....ಮೆರಡರ ಹಯ್ಯೆ ಕೊಂಕಣ ಮಲಯ ದೇಶ
೫೦ ... ಪೂರ್ವ್ವ ಪರ್ವ್ವತ ಸರ್ವ್ವಸ್ವ ಸೂಱೆ ಕಾಱ ಶ್ರೀಮ
೫೧ ತು ಸಿಂಘನ ದೇವ ದಕ್ಷ ದಕ್ಷಿಣ ಭುಜದಂಡನುಂ
೫೨ ಶ್ರೀ ಸೋಮನಾಥ ದೇವ ದಿಬ್ಯ ಶ್ರೀಪಾದ ಪದ್ಮಾ ರಾ
೫೩ ಧಕನುಮಪ್ಪ ಅಯ್ಯ್ವ ಮಲ್ಲಿ ಸೆಟ್ಟಿಯರ ಬ್ರಿಯುತ
೫೪ ನೂ ಜನುಂ ಸಕಳ ಲಕ್ಷ್ಮೀ ಪತಿ ಮಂಮನೇಕ ದೇಶಾಧಿ
೫೫ (ಪತಿ) ಯುವತಿ ಜನಚಿತ್ತ. ಣರಿಂ ಕಲಿಯುಗ ಶ್ರೀಯಾಳ ನ್ನಾ ರ. ಕ.
೫೬ ಮದ ಗಜ ಜ್ಯಾ ತ ನಿಯಮಚಿತ್ತನುಂ ಶ್ರೀಮತುರುಂ ವೀತ ಮಲ್ಲಿ
೫೭ ಕಾರ್ಜ್ಜುನ ದೇವರ ದಿವ್ಯಶ್ರೀಪಾದ ಪದ್ಮಾರಾಧಕನುಂ ರಿಪು ಬಳ ನಾಡ ...ದ
೫೮ ಕ್ಷಿ ಣೋತ್ತರ ಪೂರ್ವ್ವ ಪಶ್ಚಿಮಾ[54]ಭಿ ವಳಯ ವಿಖ್ಯಾತ ಕೀರ್ತ್ತಿಯುಂ ಆಗಗಾ ಪು
೫೯ ಣ್ಯ ಮೂರ್ತ್ತಿಯು ರಪ್ಪ ಶ್ರೀಮತು ಹೊಂನ ಬೊಂಮ್ಮಿಸೆಟ್ಟಿಯರು ತಂವಾ ದೇ
೬೦ ಶ ದೊಳಗಿನ ಕಾಲಡಿ ತೊಂಭತ್ತಾ ಱ ಱೊಳ ಗಣಮಂತ್ರ ವೀಡಸು ॥ ಸ್ವಸ್ತಿ ಶ್ರೀಮತು
೬೧ ಜಂಬೂದ್ವೀಪ ಶಿಖಾಮಣಿ ದಕ್ಷಿಣ ವಾರಣಾಸಿ ಯಭಿನವ ಶ್ರೀಸ್ಯೆಳ[55] ವೆನಿಪ
೬೨ ಶ್ರೀ ಶೊಂನಲಿಗೆಯ[56] ಪುರವರಾಧೀಸ್ವರು[57] ನುಮಪ್ಪಂ ಶ್ರೀಕಪಿಲ ಶಿದ್ಧ[58] ಮಲ್ಲಿಕಾರ್ಜ್ಜು
೬೩ ನ ದೇವರಾದಿಯಾಗಿ ಯೂನಾಟ ಬಾಗಿಲದೊಳಗಣ ಅನನ್ತ ಸಾಹ

---

೫೪. ಪಶ್ಚಿಮ

೫೫. ಶ್ರೀ ಶೈಲ

೫೬. ಸೊಂನಲಿಗೆ

೫೭. ಪುರವರಾಧೀಶ್ವರ

೫೮. ಸಿದ್ಧ

೬೪ ಸ್ರಲಿಂಗಂ. ದಿಗಿ. ಆಯುಷ್ಯಸರ್ಬ್ಬ[೪೯] ತೀರ್ತ್ತಂ[೫೦]ಗಳೊಳಗಣ ಜಲಕೇತು
ಜಲ

೬೫ ಭೂಮಿ ತಳಕ್ಕೆ ಮೆಲ್ಲ ನಿತ್ಯ ಹೋಮಾಹುತಿಗೆ ಆ ಹೊಲದಲು ಅನಂ

೬೬ ತ ದೆವರ್ಕ್ಕಳಗೆಜಿಯಂತನ. ತ. ಮಂಗಳ ನಿತ್ಯರ್ಘ್ಯಕ್ಕೆ ಆ ಹೊಂಸ
ಬೊಂಮಿ

೬೭ ಸೆಟ್ಟಿಯುವರು ತಂಮ ಸ್ವಾ ಹಸ್ತದಿಂ ಧಾರಾ ಪೂರ್ವ್ವಕಂ ಮಾಡಿ ಕೊಟ್ಟ
ಧರ್ಮ್ಮಮಂ

೬೮ ಮಾ ಚಂದ್ರಾರ್ಕ್ಕ ತಾರಂ ಬರಂ ಸಲುತ್ತಮಿರಲು ಮಂಗಳ ಮಹಾ
ಶ್ರೀ ಶ್ರೀ ಶ್ರೀ

★ ಎಂ. ಎಸ್. ನಾಗರಾಜರಾವ್

---

೪೯. ಸರ್ವ್ವ

೫೦. ತೀರ್ತ್ಥ

ಬಿತ್ತನೆಯ ಪ್ರತೀಕ-ಕಾಳವ್ವನ ಹಬ್ಬ

ಆಧುನಿಕತೆಯ ಪ್ರಭಾವದಿಂದಾಗಿ ನಮ್ಮಲ್ಲಿಯ ಅನೇಕ ಹಬ್ಬಗಳು, ಪದ್ಧತಿಗಳು, ಆಚಾರ-ವಿಚಾರಗಳು ಸಂಪ್ರದಾಯಕವಾದವುಗಳೆಂದು ಅಥವಾ ಮೂಢನಂಬಿಕೆಗಳೆಂದು ಕಡೆಗಣಿಸಲ್ಪಡುತ್ತವೆ. ಈ ಮನೋಭಾವನೆಯ ಜೊತೆಗೆ ಇವುಗಳ ನಿಜ ಅರ್ಥ ತಿಳಿಯದೆ, ಹಬ್ಬಗಳ ಉದ್ದೇಶ ನಶಿಸಿ ಹೋಗಿರುವುದೂ ಒಂದು ಕಾರಣ. ಹೀಗೆ ಅರ್ಥಕಳೆದುಕೊಂಡ ಅನೇಕ ಹಬ್ಬಗಳಲ್ಲಿ, ಜಾನಪದ ರೀತಿಯಲ್ಲಿ ಆಚರಿಸುವ ಕಾಳವ್ವನ ಹಬ್ಬವೂ ಒಂದು.

ಜಾನಪದ ರೀತಿಯಂತೆ 'ಕಾಳವ್ವ', ಬಿತ್ತುವ ಬೀಜಗಳ ಅಧಿದೇವತೆ, ಅವುಗಳ ಫಲಶಕ್ತಿ ಕೂಡ. ಈ ದೇವತೆಯನ್ನು 'ಕಾಳಿಕಾದೇವಿ', 'ಬನ್ನಿ ಕಾಳವ್ವ' ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ಬನ್ನಿ ಕಾಳವ್ವ ಬರುವುದು ವೀರಭದ್ರದೇವರೊಂದಿಗೆ, ಅವನ ಹೆಂಡತಿಯಾಗಿ, ಈಕೆ ಇರುವ ಜಾಗೆ ಬನ್ನಿ ಮರಗಳ ಬುಡದಲ್ಲಿ, ಕಾಡು ಗಲ್ಲುಗಳ ರೂಪದಲ್ಲಿ ಕಾಳವ್ವ, ಧಾನ್ಯ-ಫಲದ ಅಧಿದೇವತೆಯಾದ್ದರಿಂದ ಬಿತ್ತುವ ಬೀಜಗಳಿಗೂ 'ಕಾಳವ್ವ' ಎಂದು ಭಾವಿಸಿ ಅವಳಿಗೆ ಗೌರವಾರ್ಥವಾಗಿ ಈ ಹಬ್ಬವನ್ನು ಆಚರಿಸಲಾಗುತ್ತಿದೆ.

ಕಾಳವ್ವನ ಹಬ್ಬಕ್ಕೆ ಸಂಸ್ಕೃತ ಗ್ರಂಥಗಳ ಆಧಾರಗಳಿದ್ದಂತಿಲ್ಲ. ಇದನ್ನು ಜಾನಪದ ರೀತಿಯಲ್ಲಿ ಮಾಘ ಮಾಸದಲ್ಲಿ (ಜನವರಿ-ಫೆಬ್ರುವರಿ) ಆಚರಿಸಲಾಗುವುದು. ಮಾಘ ಮಾಸಕ್ಕೆ ಧಾನ್ಯಗಳನ್ನು ಒಕ್ಕುವುದು ಮುಗಿದಿದ್ದು, ರೈತರು ಧಾನ್ಯದವಸಗಳನ್ನು ಮನೆಗೆ ತಂದಿರುತ್ತಾರಾದರೂ ಅವುಗಳನ್ನು ಇನ್ನೂ ಮಾರಿರುವುದಿಲ್ಲ. ಮತ್ತು ಕ್ರಿಮಿ ಕೀಟ ಮುಂತಾದವುಗಳಿಂದ ಸುರಕ್ಷಿತವಾಗಿಡಲು ಇನ್ನೂ 'ಹಗೇವು'ಗಳಲ್ಲಿ ಹಾಕಿರುವುದಿಲ್ಲ, ಧಾನ್ಯಗಳನ್ನು ಬೇರ್ಪಡಿಸಿದ ನಂತರ ಹುಲ್ಲನ್ನು ಬಣವೆಗಳ ರೂಪದಲ್ಲಿ ಕಣಗಳಲ್ಲಿ ಒಟ್ಟಿರುತ್ತಾರಾದರೂ ಆ ಬಣವೆಗಳಿಂದ ಇನ್ನೂ ಹುಲ್ಲು ತರಲು ಪ್ರಾರಂಭ ಮಾಡಿರುವುದಿಲ್ಲ. ಏಕೆಂದರೆ ಕಾಳವ್ವನ ಹಬ್ಬ ಮಾಡದೆ ಬಣವೆಗಳಿಂದ ಹುಲ್ಲನ್ನು ತರಬಾರದೆಂಬ ನಿರ್ಬಂಧವಿದ್ದು, ಇದನ್ನೇನಾದರೂ ಮುರಿದರೆ "ಹುಲ್ಲು ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅಥವಾ ಬೇಗನೇ ಮುಗಿದು ಹೋಗುತ್ತದೆ" ಎಂಬ ನಂಬಿಕೆಯೂ ಇದೆ. ಆದ್ದರಿಂದ ಅಲ್ಲಿಯ ವರೆಗೆ ಬೇಕಾಗುವಷ್ಟು ಹುಲ್ಲನ್ನು ಪ್ರತ್ಯೇಕವಾಗಿ ಒಂದೆಡೆ ಇಟ್ಟಿರುತ್ತಾರೆ.

ಅದೂ ಅಲ್ಲದೆ ಮುಖ್ಯವಾಗಿ ಮುಂದಿನ ವರ್ಷಕ್ಕೆ ಬಿತ್ತಲು ಬೇಕಾಗುವಂತಹ, ಸಾಕಷ್ಟು ಉತ್ತಮವಾದ ಬೀಜಗಳನ್ನು ತೆಗೆದಿಟ್ಟು ಕೊಂಡಿರುತ್ತಾರಾದರೂ ಅವುಗಳನ್ನು ಉತ್ತಮವಾದವುಗಳೆಂದು ಪರಿಗಣಿಸಿ

ತೆಗೆದಿಟ್ಟಿರುವುದಿಲ್ಲ. ಹೀಗೆ ಮಾಡುವುದಕ್ಕೆ ಮುಂಚೆ ಬೀಜಗಳು ಉತ್ತಮ ವಾದವುಗಳೇ? ಎಂಬುದನ್ನು ಪರೀಕ್ಷಿಸಲು ಕಾಳವ್ವನ ಹಬ್ಬ ಒಂದು ಅವಕಾಶವನ್ನು ನೀಡುತ್ತದೆ. ಇದೇ ಈ ಹಬ್ಬದ ಮುಖ್ಯ ಉದ್ದೇಶ. ಕಾಳವ್ವನ ಹಬ್ಬದ ವಿಶೇಷವೆಂದರೆ ಕಾಳವ್ವನಿಗೆ ಪ್ರಿಯವಾದ, ಅನೇಕ ಬಗೆಯ ಸಸಿಗಳಿಂದ ಆರತಿ ಮಾಡಿ ಆಕೆಯನ್ನು ಪ್ರಸನ್ನಳನ್ನಾಗಿ ಮಾಡುವುದು. ಹೀಗೆ ಪ್ರಸನ್ನ ಳಾದ ದೇವಿ "ಬಿತ್ತನೆಯ ಬೀಜಗಳಿಗೆ ಮತ್ತು ಹುಲ್ಲಿನ ಬಣವೆಗಳಿಗೆ ಅಧಿಕ ಶಕ್ತಿ ಅಥವ ಹೆಚ್ಚಳ ತರುತ್ತಾಳೆ," ಎಂಬ ನಂಬಿಕೆ ಇದೆ. ಆದ್ದರಿಂದ ಈ ಹಬ್ಬಕ್ಕೆ ಎಂಟು ದಿನಮುಂಚೆ ಎಲ್ಲಾ ರೈತ ಕುಟುಂಬದವರು ತಾವು ಆ ವರ್ಷ ಬಿತ್ತನೆ ಗೆಂದು ತೆಗೆದಿಟ್ಟಿರುವ ಬೀಜಗಳಿಂದ ಸ್ವಲ್ಪ ತೆಗೆದು ಮಣ್ಣಿನ ಅಥವ ತೆಂಗಿನ ಚಿಪ್ಪುಗಳಲ್ಲಿ ಗೊಬ್ಬರದಲ್ಲಿ ಬೆರಸಿ, ಸಾಕಷ್ಟು ನೀರು ಹಾಕಿ, ಮೊಳಕೆ ಬೆಳೆ ಯಲು ಬಿಡುತ್ತಾರೆ. ಇದಕ್ಕೆ ಗಾಳಿ ಮತ್ತು ಬೆಳಕು ವಿಶೇಷವಾಗಿ ಬರದಂತೆ ಒಂದು ಮಡಕೆಯನ್ನು ಮುಚ್ಚುತ್ತಾರೆ. ಹಬ್ಬದ ವೇಳೆಗೆ ಈ ಮೊಳಕೆಗಳು ತೆಳ್ಳಗೆ, ಬೆಳ್ಳಗೆ ಉದ್ದನಾಗಿ ಬೆಳೆದಿರುತ್ತವೆ. ಹಬ್ಬದ ದಿನ ಇದನ್ನೇ ಆರತಿಯ ನ್ನಾಗಿ ಮಾಡಿಕೊಂಡು ಆಯಾ ಕುಟುಂಬದವರು ದೇವಸ್ಥಾನಕ್ಕೆ ತರುತ್ತಾರೆ.

ಹಬ್ಬದ ದಿನ ಮಧ್ಯಾಹ್ನದ ನಂತರ ಕನ್ಯೆಯರು (ಕೋರು ಹುಡಿಗೆ ಯರು) ಸಸಿಗಳ ಆರತಿಯನ್ನು ತೆಗದುಕೊಂಡು, ಹಿರಿಯರ ನೇತೃತ್ವದಲ್ಲಿ, ಭಜನೆ, ಸಮೂಹ ಅಥವ ವಾದ್ಯದವರೊಡಗೂಡಿ ಮೆರವಣಿಗೆಯಲ್ಲಿ ಕಾಳವ್ವ ನನ್ನು ಕೂಡಿಸಿರುವ ದೇವಸ್ಥಾನಕ್ಕೆ ಆರತಿ, ಹಣ್ಣು-ಕಾಯಿಗಳ ಜೊತೆಗೆ ಬಂದು, ಕೆಲವು ಸಸಿಗಳ 'ತಲೆ' ಯನ್ನು ಕಿತ್ತು ನೈವೇದ್ಯ ಮಾಡಿ ಹಿಂತಿರು ಗುತ್ತಾರೆ. ದೇವತೆಗೆ ಬೆಳಗಿದ ನಂತರ ಈ ಆರತಿಯು ಫಲಶಕ್ತಿಯನ್ನು ನೀಡುವ ವಸ್ತುವಾಗುವುದೆಂಬ ನಂಬಿಕೆ ಇದೆಯಾದ್ದರಿಂದ ಈ ಆರತಿಯೊಡನೆ ಹಿಂತಿರು ಗುವಾಗ ಅದನ್ನು ಹಿಡಿದವರು ಬಹಳ ಜಾಗರೂಕತೆಯಿಂದಿರಬೇಕಾಗುತ್ತದೆ, ಏಕೆಂದರೆ ಇದು-ಫಲಶಕ್ತಿಯ ವಸ್ತುವಾದ್ದರಿಂದ ಬೇರೆ ಕುಲಕ್ಕೆ (Clan) ಅಥವ ಕುಟುಂಬಕ್ಕೆ ಸೇರಿದವರು, ಇದನ್ನು ಕದಿಯಲು ಪ್ರಯತ್ನಿಸುತ್ತಾರೆ. ಅದರಲ್ಲೂ, ಬಹಳ ಉತ್ಕೃಷ್ಟವಾಗಿ ಬೆಳೆದು ಕಾಳವ್ವನಿಗೆ ಮೆಚ್ಚಿಗೆಯಾದ ಆರತಿಯನ್ನೇ ಕದಿಯಬೇಕೆಂಬುದು ಅವರ ಆಸೆ. ಆದರೆ ಈ ಕನ್ಯೆಯರ ಬೆಂಗಾವಲಿಗೆ ಬಂದ ಹಿರಿಯ ಮಹಿಳೆಯರು ಮತ್ತು ಗ್ರಾಮದ ಹಿರಿಯರು ಸದಾ ಎಚ್ಚರಿಕೆಯಿಂದ ಇದ್ದು ಇಂತಹ ಗಲಭೆಗಳು ಆಗದಂತೆ ನೋಡಿಕೊಳ್ಳುವ ರಾದರೂ ತರುಣರು ಕದ್ದೇ ಕದಿಯುತ್ತಾರೆ.

ಆರತಿಯನ್ನು ಕದಿಯುವುದು, ಕದ್ದವರ ಮತ್ತು ಆರತಿಯನ್ನು ಕಳೆದು ಕೊಂಡವರ ಕುಟುಂಬಗಳ ನಡುವೆ ಗಲಭೆಗಳನ್ನು ತರುವುದು ಸಹಜ. ಏಕೆಂದೆರೆ ಆರತಿಯನ್ನು ಕಳೆದುಕೊಂಡ ಕುಟುಂಬ ಆ ವರ್ಷದ ಫಲಶಕ್ತಿ

ಯನ್ನು ಕಳೆದುಕೊಳ್ಳುತ್ತಾರೆ. ಅಲ್ಲದೆ ಒಬ್ಬ ಕನ್ಯೆಯಿಂದ ಆರತಿಯನ್ನು ಕಿತ್ತುಕೊಳ್ಳುವದೆಂದರೆ ಆಕೆಯ ಕೈಹಿಡಿದಂತೆ ಅಥವ ಆಕೆಯ ಶೀಲ ಭಂಗ ಮಾಡಿದಂತೆಯೇ ಸರಿ, ಆದ್ದರಿಂದ ಅವನನ್ನು ಹಿಡಿದು ಆರತಿಯನ್ನು ಮತ್ತೆ ಪಡೆಯಲು ಪ್ರಯತ್ನಿಸುವುದಲ್ಲದೆ ಮುಂದೆ ಆ ಕನ್ಯೆಯನ್ನು ಆರತಿ ಕದ್ದವನಿಗೇ ಕೊಟ್ಟು ಲಗ್ನಮಾಡುತ್ತಿದ್ದರು. ಅದು ಅಲ್ಲದೆ ಆರತಿ ಕದಿಯುವುದು ಕುಟುಂಬಕ್ಕೆ ಗೌರವ ತರುವ ಕ್ರಿಯೆಯೂ ಆಗಿರುತ್ತಿತ್ತು. ಆ ತರುಣನು ಗ್ರಾಮದ ಎಲ್ಲಾ ತರುಣಿಯರ ಆರತಿಗಳನ್ನು ಬಿಟ್ಟು ತಮ್ಮ ಕುಟುಂಬದ ಆರತಿಯನ್ನು ಕದ್ದನೆಂದರೆ ಇದು ಅತೀ ಉತ್ತಮವಾದದ್ದೆಂದು ಇಡೀ ಗ್ರಾಮದಲ್ಲೇ ಪ್ರಚಾರವಾಗುತ್ತಿತ್ತು. ಅದೂ ಅಲ್ಲದೆ ಒಬ್ಬ ತರುಣಿ ತನ್ನ ಆರತಿಯನ್ನು ಕದಿಯಲು ಅವಕಾಶವಿತ್ತಳೆಂದರೆ ಆಕೆಗೂ ಆ ತರುಣನ ಮೇಲೆ ಮನಸ್ಸಿದೆ ಎಂಬ ಅರ್ಥವಾಗುತ್ತದೆ. ಏಕೆಂದರೆ ಕದಿಯುವುದು ಒಂದು ಕಡೆಯಿಂದ ಸಾಧ್ಯವಿಲ್ಲ— ಒಂದು ಕಡೆಯವರು ಇವಕ್ಕೆ ಅವಕಾಶ ಮಾಡಿಕೊಟ್ಟರೆ ಮಾತ್ರ ಇನ್ನೊಂದು ಕಡೆಯವರಿಗೆ ಕದಿಯಲು ಸುಲಭವಾಗಿ ಸಾಧ್ಯವಾಗುತ್ತದೆ. ಆದ್ದರಿಂದ ಹೆಚ್ಚಿನ ಜಗಳಕ್ಕೆ ಅವಕಾಶ ಮಾಡಿಕೊಡದೆ ಗ್ರಾಮದ ಹಿರಿಯರು ಆ ತರುಣ-ತರುಣಿಯರ ವಿವಾಹವನ್ನು ನೆರವೇರಿಸುವ ಏರ್ಪಾಡು ಮಾಡುತ್ತಿದ್ದರು.

ಆದರೆ ಕಾಳವ್ವನ ಹಬ್ಬದ ನಿಜವಾದ ಅರ್ಥ ಬೇರೆಯೇ ಇದೆ. ಮಾಘ ಮಾಸದ ನಂತರ ರೈತರು ತಮ್ಮ ಧಾನ್ಯದವಸಗಳನ್ನು ಇನ್ನೂ ಹಗೇವು, ಮುಂತಾದವುಗಳಿಗೆ ಹಾಕಿರುವುದಿಲ್ಲ. ಏಕೆಂದರೆ ನೆಲದಲ್ಲಿ ಗಾಳಿ ಇಲ್ಲದ ಕಡೆ ಕೂಡಿ ಹಾಕುವುದರಿಂದ ಅವು ತಮ್ಮ ಮೊಳಕೆಯ ಶಕ್ತಿಯನ್ನು ಕಳೆದುಕೊಳ್ಳುತ್ತವೆಯಾದ್ದರಿಂದ ಬಿತ್ತಲು ಬರುವುದಿಲ್ಲ. ಕೆಲವರು ಹೆಚ್ಚಿನ ಧಾನ್ಯಗಳನ್ನು ಮಾರಿಯೂ ಬಿಡುತ್ತಿದ್ದರು. ಹೀಗೆ ಧಾನ್ಯಗಳು ರೈತರ ಕೈಬಿಟ್ಟು ಹೋಗುವುದಕ್ಕೆ ಮುಂಚೆ ಅವರು ತಮಗೆ ಮುಂದಿನ ವರ್ಷಕ್ಕೆ ಬೇಕಾಗುವಷ್ಟು ಬಿತ್ತನೆ ಬೀಜಗಳನ್ನು ಆರಿಸಿ ಇಡಬೇಕಾಗುತ್ತದೆ. ಅದೂ ಅಲ್ಲದೆ ಉತ್ತಮ ರೈತನೆನಿಸಿಕೊಳ್ಳುವವನು ತನಗೆ ಬೇಕಾದ ಬಿತ್ತನೆಯ ಬೀಜಗಳನ್ನು ತಾನೇ ಸೇಖರಿಸಿಟ್ಟಿರಬೇಕು. ಇಲ್ಲದಿದ್ದರೆ ರೈತನ ವರ್ಷದ ಮೊದಲ ಕಾರ್ಯವಾದ ಬಿತ್ತನೆಯಿಂದಲೇ ಅವನ ತೊಂದರೆಗಳು ಪ್ರಾರಂಭವಾಗುತ್ತವೆ. ಅದೂ ಅಲ್ಲದೆ ಅವರಿಗೆ ಆ ಬೀಜಗಳು ಬೇಕಾಗಬಹುದಾದ್ದರಿಂದ ಬಿತ್ತುವ ಸುಗ್ಗಿಯಲ್ಲಿ ಇನ್ನೊಬ್ಬರಿಂದ ಆ ಬೀಜಗಳು ದೊರೆಯದ ಸಂಭವವಿರುತ್ತದೆ. ಇಲ್ಲವೆ ಅವರಿವರಿಂದ ತಂದ ಬೆರಕೆ ಬೀಜಗಳನ್ನು ಬಿತ್ತಬೇಕಾಗುತ್ತಿತ್ತು. ಇಂತಹ ರೈತ ಉತ್ತಮ ರೈತ ಎನಿಸಲಾರ ಮತ್ತು ಇದು ಅವನಿಗೆ ಅವಮಾನಕರವಾದ ಸಂಗತಿ ಎನಿಸುತ್ತಿತ್ತು.

ಅನೇಕ ವೇಳೆ ರೈತರು ತಮಗೆ ಬೇಕಾಗುವಷ್ಟು ಬಿತ್ತನೆ ಬೀಜಗಳನ್ನು ಸೇಖರಿಸಿಟ್ಟಿದ್ದರೂ ಅವು ಉತ್ತಮವಾದವುಗಳೇ ಎಂಬುದು ತಿಳಿಯದಿದ್ದರೆ ಮುಂದೆ ಬಿತ್ತುವಾಗ ತೊಂದರೆಯಾಗುತ್ತದೆ. ಆದ್ದರಿಂದ ಕಾಳವ್ವನ ಹಬ್ಬವು ಬೀಜಗಳನ್ನು ಮೊಳಕೆಗೆ ಹಾಕಿ ಪರೀಕ್ಷಿಸುವಂತಹ ಒಂದು ಅವಕಾಶವನ್ನು ನೀಡುತ್ತದೆ. ಕಾಳವ್ವನಿಗೆ ವಿವಿಧ ಧಾನ್ಯಗಳ ಸಸಿಗಳ ಆರತಿಯೇ ಬೇಕೆಂಬ ಪದ್ಧತಿ ಇರುವುದರಿಂದ ರೈತರು ತಮ್ಮಲ್ಲಿಯ ಬಿತ್ತನೆ ಬೀಜಗಳನ್ನು ಮೊಳಕೆಗೆ ಹಾಕಬೇಕಾಗುತ್ತದೆ. ಹೀಗೆ ಮೊಳಕೆಗೆ ಹಾಕಿದ ಬೀಜಗಳು ಸರಿಯಾಗಿ ಹುಟ್ಟದಿದ್ದರೆ ತಮ್ಮಲ್ಲಿರುವ ಬಿತ್ತನೆ ಬೀಜಗಳು ಉತ್ತಮವಲ್ಲವೆಂಬ ಮುನ್ಸೂಚನೆಯಾಗುತ್ತದೆ. ಮತ್ತು ಉತ್ತಮವಾದವುಗಳನ್ನು ಪಡೆಯಲು ಅನುಕೂಲ ಮಾಡಿಕೊಡುತ್ತದೆ.

ತಮ್ಮಲ್ಲಿರುವ ಬಿತ್ತನೆಯ ಬೀಜಗಳು ಉತ್ತಮವಲ್ಲವೆಂದು ತಿಳಿದರೆ ಅಷ್ಟೇ ಸಾಲದು ಅವು ಯಾವ ಕುಟುಂಬದಲ್ಲಿ ದೊರೆಯುತ್ತವೆ ಎಂಬುದೂ ತಿಳಿಯಬೇಕಷ್ಟೆ? ಆದ್ದರಿಂದ ಅದಕ್ಕಾಗಿ "ಎಲ್ಲಾ ರೈತ ಕುಟುಂಬಗಳೂ ತಮ್ಮ ತಮ್ಮ ಆರತಿಗಳೊಡನೆ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಬರಬೇಕು" ಎಂಬ ಪದ್ಧತಿಯನ್ನೂ ಹಿರಿಯರು ಆಚರಣೆಗೆ ತಂದಿದ್ದಾರೆ. ಈ ಪದ್ಧತಿ ಇದ್ದರೂ ಅನೇಕ ಕುಟುಂಬಗಳು "ಆರತಿಯನ್ನು ಸರಿಯಾಗಿ ಬೆಳೆಸದೇ ಇರಬಹುದು" ಎಂದು ಉತ್ತಮವಾದ ಆರತಿಯನ್ನು ಕದಿಯುವ ಪದ್ಧತಿಯನ್ನು ಆಚರಣೆಗೆ ತಂದರು. ಆರತಿ ಕಳೆದುಕೊಳ್ಳುವುದು ಕುಟುಂಬಕ್ಕೆ ಗೌರವತರುವ ವಿಷಯವಾದ್ದರಿಂದ ಎಲ್ಲಾ ಕುಟುಂಬಗಳೂ ಹೆಚ್ಚಿನ ಆಸ್ಥೆಯಿಂದ ಇವುಗಳನ್ನು ಬೆಳೆಸುತ್ತಿದ್ದರು. ಅಲ್ಲದೆ ಅತೀ ಉತ್ತಮವಾದ ಆರತಿಯನ್ನು ಕದಿಯುವುದಕ್ಕೂ ಒಂದು ಅರ್ಥವಿದೆ. ಹಿಂದಿನ ಕಾಲದಲ್ಲಿ ಉತ್ತಮವಾದ ವಸ್ತುವನ್ನು ಉತ್ತಮವಾದುದ್ದೆಂದು ಪ್ರಚಾರಮಾಡಲು ಇಂದಿನಂತೆ ರೇಡಿಯೋ, ಸಿನಿಮಾ, ಪತ್ರಿಕೆ ಮುಂತಾದ ಆಧುನಿಕ ಸಲಕರಣೆಗಳು ಇರಲಿಲ್ಲ. ಆದ್ದರಿಂದ ಪೂರ್ವಜರು ತಮ್ಮದೇ ಆದ ರೀತಿಯಲ್ಲಿ ಉತ್ತಮವಾದ ಬಿತ್ತನೆಬೀಜಗಳ ಬಗ್ಗೆ, ಅವುಗಳನ್ನು ಹೊಂದಿರುವ ಕುಟುಂಬದ ಬಗ್ಗೆ ಪ್ರಚಾರ ಬರುವಂತೆ ಮಾಡಿದ್ದಾರೆ. ಇದೇ ಆರತಿ ಕದಿಯುವುದರ ಉದ್ದೇಶ. ಕದಿಯುವುದು ಪ್ರಚಾರಕ್ಕೇ ವಿನಹ, ವಿರಸ, ಕಲಹ ಮುಂತಾದವುಗಳಿಗಲ್ಲ. ಕುಟುಂಬದ ಫಲಶಕ್ತಿಯ ಸಂಕೇತವಾದ ಆರತಿಯನ್ನು ಕದ್ದರಲ್ಲಾ! ಎಂದು ಕಲಹಗಳು ಬಂದರೂ ಗ್ರಾಮದ ಹಿರಿಯರು ಇದರಿಂದ ಬರಬಹುದಾದ ಗೌರವ, ಹೆಮ್ಮೆಗಳನ್ನು ತಿಳಿಯಪಡಿಸಿ, ಅದನ್ನು ಪರಿಹಾರ ಮಾಡುತ್ತಿದ್ದರು. ಆದರೆ ಕದಿಯುವುದರ ಮುಖ್ಯ ಉದ್ದೇಶವಾದ ಪ್ರಚಾರವು ಸಿಕ್ಕು, ರೈತರು ಉತ್ತಮ ಬೀಜಗಳನ್ನು ಪಡೆಯಲು ಅನುಕೂಲವಾಗುತ್ತಿದ್ದಿತು.

ಆರತಿಯನ್ನು ಕದ್ದುದರಿಂದ ಬರಬಹುದಾದ ಕಲಹ ಮುಂತಾದವನ್ನು ಉಪಯುಕ್ತ ಕಾರ್ಯಕ್ಕೆ ಉಪಯೋಗಿಸಲಾಗಿದೆ. ಇಲ್ಲಿ ಆರತಿಯನ್ನು ಕದಿಯುವವರು ಅವಿವಾಹಿತನಿರಬೇಕು ಮತ್ತು ಆರತಿಯನ್ನು ಹಿಡಿದವಳು ಕನ್ನೆಯೇ ಇರಬೇಕೆಂಬ ನಿಯಮದ ಜೊತೆಗೆ ಆರತಿಯನ್ನು ಕದಿಯುವವರು ಬೇರೆ ಕುಲಕ್ಕೆ ಅಥವ ಗುಂಪಿಗೆ ಸೇರಿದ ಕನ್ನೆಯಿಂದ ಮಾತ್ರ ಕದಿಯಬೇಕೆಂಬ ನಿಯಮವೂ ಇದೆ. ಅಂದರೆ ಒಬ್ಬ ತರುಣ ಆರತಿಯನ್ನು ಕದ್ದನೆಂದರೆ ಮುಂದೆ ಬರಬಹುದಾದಂತಹ ಕಲಹವನ್ನು, ಆ ಕನ್ನೆಯನ್ನು ಕದ್ದವನು ವಿವಾಹವಾಗಿ ಕಲಹ ಪರಿಹಾರ ಮಾಡಬಹುದಾದ ಒಂದು ಅವಕಾಶವಾದರೂ ಗ್ರಾಮದ ಹಿರಿಯರಿಗೆ ಸಿಗುತ್ತಿತ್ತು.

ಆದರೆ ಇಂದು ಈ ಹಬ್ಬ ನಿಂತು ಹೋಗಿದೆ. ಹಿಂದೆ ಪ್ರಚಾರದಲ್ಲಿದ್ದ, ಆಚರಣೆಯಲ್ಲಿದ್ದ ಯಾವುದಾದರೊಂದು ವಿಚಾರವಾಗಲಿ, ಪದ್ಧತಿಯಾಗಲಿ ನಿಂತುಹೋಯಿತೆಂದರೆ ಬಹುಶಃ ಇದರ ಅವಶ್ಯಕತೆ ಸಮಾಜಕ್ಕೆ ಅಥವಾ ಆ ಗುಂಪಿಗೆ ಇಲ್ಲವೆಂದು ತಿಳಿಯುತ್ತದೆ. ಹೀಗೆ ಉಪಯೋಗವಿಲ್ಲದ್ದನ್ನು ಕೈಬಿಡುವುದು ಸಮಾಜಗಳ ಸಾಮಾನ್ಯ ಗುಣ. ಹಿಂದೆ ಉತ್ತಮ ಬೀಜಗಳಾವು. ಅವುಗಳು ಯಾವ ಯಾವ ಕುಟುಂಬದಲ್ಲಿ ದೊರೆಯುತ್ತವೆ ಎಂಬುದನ್ನು ತಿಳಿಯಲು ಕಾಳವ್ವನ ಹಬ್ಬವಲ್ಲದೆ ಬೇರಾವ ಮಾರ್ಗವೂ ಇರಲಿಲ್ಲ. ಇದೇ ರೀತಿ ಗ್ರಾಮದಲ್ಲಿ, ಸಂಪ್ರದಾಯಸ್ಥ ಜನರು ತಮ್ಮ ಕನ್ನೆಯರನ್ನು ವಿಶೇಷವಾಗಿ ಹೊರಗೆ ಕಳುಹಿಸುತ್ತಿದ್ದುದು ವಿರಳ. ಆದರೆ ಕಾಳವ್ವನ ಹಬ್ಬದ ದಿನ ಅವರು ಮದವೆ—ವಸ್ತ್ರಗಳನ್ನು ಧರಿಸಿ, ತಮ್ಮ ಕುಟುಂಬದ ಆರತಿಯನ್ನು ಹಿಡಿದು ದೇವಸ್ಥಾನಕ್ಕೆ ಬರುವ ಈ ಸಂದರ್ಭವು ಗ್ರಾಮದ ತರುಣರಿಗೆ ತಮಗೆ ಬೇಕಾದ ಬಾಳಸಂಗಾತಿಯನ್ನು ಆರಿಸಿಕೊಳ್ಳಲು ಉತ್ತಮವಾದ ಅವಕಾಶವನ್ನೇ ನೀಡುತ್ತಿದ್ದಿತು. ಅದೇ ಸಂದರ್ಭವನ್ನು ಉಪಯೋಗಿಸಿಕೊಂಡು ಅವರು ತಮ್ಮ ಬಯಕೆಯನ್ನು ಪ್ರತ್ಯೇಕವಾಗಿ ಮತ್ತು ಬಹಿರಂಗವಾಗಿ ತೋರ್ಪಡಿಸುತ್ತಿದ್ದರು. ಇವರ ಇಂಗಿತವನ್ನರಿತ ಹಿರಿಯರು ಅವರ ವಿವಾಹವನ್ನು ನೆರವೇರಿಸುತ್ತಿದ್ದರು.

ಇಂದು ಈ ಎಲ್ಲಾ ಆಚರಣೆಗಳ ಅವಶ್ಯಕತೆ ಇಲ್ಲ. ಉತ್ತಮವಾದ ಬಿತ್ತನೆಯ ಬೀಜಗಳು ಬೇಕಾದರೆ ಇವನ್ನು ಸಹಕಾರಿ ಸಂಘ ಸಂಸ್ಥೆಗಳಿಂದ, ಅಭಿವೃದ್ಧಿ ಕ್ಷೇತ್ರಗಳಿಂದ ಪಡೆಯಬಹುದು. ಇದೇ ರೀತಿ ಯಾವುದಾದರೊಂದು ಕನ್ಯೆಯನ್ನು ವಿವಾಹವಾಗಬೇಕೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಏಕೆಂದರೆ ಬರೀ ಜಾತಿಗಳ ಹೊಂದಾಣಿಕೆಯಾದರೆ ಮಾತ್ರ ಸಾಲದು. ಇನ್ನೂ ಅನೇಕ ವಿಷಯಗಳಾದ ವಿದ್ಯೆ, ಎರಡು ಮನೆತನಗಳ ಒಡಂಬಡಿಕೆ, ವರದಕ್ಷಿಣೆ, ಮುಂತಾದವು ಅಡ್ಡ ಬರುತ್ತವೆಯಾದ್ದರಿಂದ ವಿವಾಹವಾಗಬೇಕೆಂದಿರುವ ವಧು

ವರರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದೇ ಮುಂತಾದ ಕಾರಣಗಳಿಂದ ತನ್ನ ನಿಜಾಚರಣೆ (function) ಮತ್ತು ಉದ್ದೇಶಗಳನ್ನು ಕಳೆದುಕೊಂಡ ಕಾಳವ್ವನ ಹಬ್ಬವನ್ನು ಆಚರಿಸುವ ಒಂದು ಅವಶ್ಯಕತೆ ಗ್ರಾಮಸ್ಥರಿಗೆ ಬರಲಾರದು. ಈ ಅವಶ್ಯಕತೆ ಇಲ್ಲದಿದ್ದರೂ ಕೆಲವು ಗ್ರಾಮಗಳಲ್ಲಿ ಇಂದು ಕಾರಹಬ್ಬವನ್ನು ಆಚರಿಸಲಾಗುತ್ತಿದೆ. ಆದರೆ ಇದು ಆ ಗ್ರಾಮಗಳಲ್ಲಿ ಅನ್ಯೋನ್ಯತೆ ಇರುವವರೆಗೆ ಮಾತ್ರ ಸಾಧ್ಯ. ಮುಂದೆ ಯಾವುದಾದರೊಂದು ಕ್ಷುಲ್ಲಕ ಕಾರಣಕ್ಕೆ ವಿರಸ ಬಂದರೂ ಗ್ರಾಮ ಜೀವನ ಭಿನ್ನಭಿನ್ನವಾಗಿ ಈ ಹಬ್ಬವನ್ನು ಕೈಬಿಡಬಹುದು. ಆದರೆ ಹಿಂದೆ ಏನೇ ಭಿನ್ನತೆ ಇದ್ದರೂ ಹಬ್ಬಗಳು, ಜನರಲ್ಲಿದ್ದ ಮೂಢನಂಬಿಕೆ, ಮುಂತಾದವುಗಳು ಜನತೆಯನ್ನು ಆಗತ್ಯ ಬಿದ್ದಾಗ ಒಂದುಗೂಡಿಸುತ್ತಿದ್ದವು. ಇಂದು ಈ ಕ್ರಮ ತಪ್ಪಿ ಹೋಗಿರುವುದರಿಂದ ಜನತೆಯನ್ನು ಒಟ್ಟುಗೂಡಿಸುವ ಯಾವ ಸಾಧನವೂ ಇಲ್ಲದಾಗಿದ್ದು ಗ್ರಾಮ ಜೀವನ ಕಹಿಯಾಗುತ್ತಾ ಸಾಗಿದೆ.

ಸುಭದ್ರ ಹಾಗೂ ಸುಲಲಿತ ಗ್ರಾಮಜೀವನದ ಆಧಾರಗಳಾದ ಸಹಕಾರ, ಪರೋಪಕಾರ, ಸಹಜೀವನ ಮುಂತಾದವುಗಳು ಗ್ರಾಮಸ್ಥರಲ್ಲಿ ಇಲ್ಲದಾಗಿರುವುದರಿಂದ ಗ್ರಾಮೀಣ ಸಮಾಜದಲ್ಲಿನ ಸಾಮರಸ್ಯ ಕುಸಿದು ಹೋದಂತೆ ಕಾಣುವುದು ಸಹಜ. ಆದರೆ ಕಾಲಕಾಲಕ್ಕೆ ಬದಲಾಗುವುದು ಎಲ್ಲಾ ಸಮಾಜಗಳ ಧರ್ಮಗುಣ. ಹಳೆಯ ಸಂಪ್ರದಾಯಗಳ, ಮೌಲ್ಯಗಳ ಮಡಿಲಲ್ಲಿರುವವರು ಗ್ರಾಮೀಣ ಸಮಾಜವು ಅಧೋಗತಿಗೆ ಇಳಿದಿದೆ ಎಂದು ದುಃಖಿಸುವುದೂ ಸಹಜ. ಆದರೆ "ಪ್ರಯೋಜನ ಇಲ್ಲವೆಂದ ಮೇಲೂ ಪುನಃಪುನಃ ಹಬ್ಬಗಳ ಜಾತ್ರೆಗಳ ಜೀರ್ಣೋದ್ಧಾರ ಮಾಡಬೇಕು" ಎಂದು ಯತ್ನಿಸುವುದು ಪ್ರಚಾರ ಮಾಡುವುದು ಸೂಕ್ತವಲ್ಲ. ಆದರೆ ಇಂದು ಗ್ರಾಮ ಜೀವನದಲ್ಲಿ ಸಮರಸ, ಸಹಜೀವನ, ಸಹಕಾರ ಮುಂತಾದವುಗಳನ್ನು ಹಿಂದೆ ಹಬ್ಬಗಳು ತಂದಂತೆ ತರಲು ಮತ್ತಾವುದಾದರೂ ಆಧುನಿಕ ಚಟುವಟಿಕೆಯನ್ನು ಹುಡುಕಬೇಕು, ರೂಪಿಸಬೇಕು. ಇಲ್ಲದಿದ್ದರೆ ಗ್ರಾಮದಲ್ಲಿ ಸಹಜವಾಗಿ ಮೊದಲಿನಿಂದಲೂ ಇರುವ ಪಕ್ಷ ಪಂಗಡಗಳು, ಜಾತಿ ಪಂಗಡಗಳು, ದ್ವೇಷ ಅಸೂಯೆಗಳು ಹೆಚ್ಚುತ್ತಲೇ ಹೋಗಿ ಗ್ರಾಮ ಜೀವನದಲ್ಲಿ ಭಿನ್ನತೆ, ಅನಾಯಕತ್ವ, ಮತ್ತು ಕಲಹ ಬೆಳೆಯುತ್ತಾ ಹೋಗುತ್ತದೆ.

★ ಗುರುಮೂರ್ತಿ ಕೆ. ಗೌಡರ್

ಈ ಲೇಖನವನ್ನು ಬರೆಯುವಲ್ಲಿ ನೆರವಾದ ಸ್ನೇಹಿತ ಶ್ರೀ ಸೋಮಶೇಖರ ಇಮ್ರಾಪುರ ಇವರ ಸಹಾಯವನ್ನು ನೆನೆಯುತ್ತೇನೆ.

ಸಂಖ್ಯೆಗಳೊಡನೆ ಮಾನವನ ಸರಸ

ಸಂಖ್ಯೆಗಳೊಡನೆ ಮಾನವನ ಸರಸ ಮೂಲ ಮಾನವರಾದ ಆಡಾಮ ಮತ್ತು ಈವ್ಳರ ಪ್ರಣಯ ಸರಸದೊಂದಿಗೆ ಪ್ರಾರಂಭವಾಗಿರಬಹುದು, ಎಂದು ತರ್ಕಿಸಿದರೆ ಉತ್ಪ್ರೇಕ್ಷೆಯೆನಿಸಲಾರದು. ಏಕೆಂದರೆ ಇಂದಿನ ಸುಶಿಕ್ಷಿತ ಮನೆತನದ ಏಳು ವರ್ಷದ ಬಾಲಕ ಯಾವ ತರಹದ ವೈಚಾರಿಕ ತೊಂದರೆಗೊಳಗಾಗದೆ ಲೀಲಾಜಾಲವಾಗಿ ಎಣಿಸಲು ಶಕ್ಯನಾದಂತೆ ಮಾನವರು ಎಂದಿನಿಂದ ಹಾಗೂ ಎಲ್ಲಿ ಮೊದಲು ಎಣಿಸಲು ಕಲಿತರು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಸುಮಾರು ೧೨,೦೦೦ ವರುಷಗಳ ಪೂರ್ವದಲ್ಲಿ ಮಾನವನ ಇತಿಹಾಸದಲ್ಲಿ ಒಂದು ಮಹತ್ತರ ಬದಲಾವಣೆಯಾಯಿತು. ಕೇವಲ ಅನ್ನವನ್ನು ಆರಿಸಿ, ಶೇಖರಿಸುವ ಪ್ರವೃತ್ತಿಯಿಂದ ಮಾನವ ಅನ್ನವನ್ನು ಉತ್ಪಾದಿಸುವ ವೃತ್ತಿಯ ಕಡೆ ವಾಲಿದುದು ಕಂಡುಬರುತ್ತದೆ. ಈ ಬದಲಾವಣೆಯೊಂದಿಗೆ ಸಂಖ್ಯೆಗಳ ಉತ್ಪತ್ತಿಯೂ ಪ್ರಾರಂಭವಾಯಿತೆನ್ನಬಹುದು. ಮೊದಲು 'ಒಂದು' 'ಎರಡು' ಮತ್ತು 'ಹಲವು' ಎಂಬ ಕೇವಲ ಮೂರು ಸಂಖ್ಯಾಸೂಚಕ ಪದಗಳು ಪರಿಮಾಣಾತ್ಮಕ ಭೇದವನ್ನು ಸೂಚಿಸುವುದಕ್ಕಿಂತಲೂ ಹೆಚ್ಚಾಗಿ ಗುಣ-ಸಂಬಂಧಿ ಭೇದವನ್ನು ಸೂಚಿಸಲು ಬಳಕೆಯಲ್ಲಿ ಬಂದವು. ಬೇಸಾಯ, ದೈನಂದಿನ ವ್ಯವಹಾರ ಹಾಗು ವೃತ್ತಿಗಳು ಅಭಿವೃದ್ಧಿಯಾದಂತೆ ಸಂಖ್ಯೆಗಳ ಬಗೆಗಿನ ಕಲ್ಪನೆಗಳು ಹೆಚ್ಚು ನಿಖರವಾಗಿ ರೂಪುಗೊಳ್ಳತೊಡಗಿದವು. ಕೈಬೆರಳುಗಳ ಸಹಾಯದಿಂದ ಸಂಖ್ಯೆಗಳಿಗೆ ಒಂದು ವ್ಯವಸ್ಥಿತ ನಿರ್ದೇಶನ ಪದ್ಧತಿ ಮತ್ತು ಹೆಚ್ಚು ಮೊತ್ತದ ಸಂಖ್ಯೆಗಳನ್ನು ಒಟ್ಟಾರೆ ಕಂಡುಕೊಳ್ಳುವುದು ರೂಢಿಯಲ್ಲಿ ಬಂದವು. ಇದರಿಂದ ಮೊದಲು 'ಐದು' ನಂತರ 'ಹತ್ತು' ಸಂಖ್ಯೆಗಳನ್ನು ಆಧಾರವಾಗಿಟ್ಟುಕೊಂಡು ಸಂಕಲನದಿಂದ, ಕೆಲವು ಸಲ ವ್ಯವಕಲನದಿಂದ ಎಣಿಕೆಯನ್ನು ಪೂರ್ಣಗೊಳಿಸುವ ದಿಶೆಯಲ್ಲಿ ಪ್ರಗತಿಯಾಯಿತು. ಕೋಲುಗಳ ಮೇಲೆ ಗುರುತಿಸಿದ ಕಚ್ಚುಗಳಿಂದಾಗಲೀ, ದಾರದಲ್ಲಿ ತೊಡಕಿಸಿದ ಗಂಟುಗಳಿಂದಾಗಲಿ, ಇಲ್ಲವೆ ಸಿಂಪು ಅಥವಾ ಹರಳುಗಳ ಐದೈದರ ಗುಂಪುಗಳಿಂದಾಗಲೀ ಸಂಖ್ಯೆಗಳ ವಿಷಯಕ ದಾಖಲೆಗಳನ್ನು ಕಾಯ್ದಿರಿಸಲಾಗುತ್ತಿದ್ದಿತು. ಇಂತಹ ಪದ್ಧತಿಗಳು ಪ್ರಾಚೀನ ಇಜಿಪ್ತದಲ್ಲಿ ಮತ್ತು ಮೊಹೆಂಜೋದಾರೋವಿನ ಆರ್ಯರಿಗೂ ಪೂರ್ವದ ನಾಗರಿಕತೆಯಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಆಗಿನ ಒಂದು ಕುತೂಹಲದ ಸಂಗತಿಯೆಂದರೆ ದೊಡ್ಡ ಸಂಖ್ಯೆಗಳ ಬಗೆಗಿನ ವ್ಯಾಮೋಹ. ಈ ಬಗೆಯ ವ್ಯಾಮೋಹ ಬಹುಶಃ ಪಶುಸಂಗ್ರಹದ ವ್ಯಾಪ್ತಿ, ಹತವೈರಿಗಳ ಸಂಖ್ಯೆ ಇತ್ಯಾದಿಗಳನ್ನು ಉತ್ಪ್ರೇಕ್ಷಿಸಿ ಹೇಳುವ ಮನುಷ್ಯ ಸ್ವಭಾವಕ್ಕೆ ಅತಿಸಹಜವಾದ ಆಸೆ

ಯಿಂದ ಪ್ರಚೋದಿತವಾಗಿರಬಹುದು. ಕ್ರಿ ಪೂ. ೩೫೦೦ ರ ಕಾಲದ ಈಜಿಪ್ತ ದೇಶದ ರಾಜದಂಡವೊಂದರ ಮೇಲೆ ೧,೨೦,೦೦೦ ಯುದ್ಧ ಕೈದಿಗಳನ್ನು ಸೆರೆಹಿಡಿದುದರ ವೃತ್ತಾಂತದ ದಾಖಲೆಯಿದೆ. ವಾಲ್ಮೀಕಿ ರಾಮಾಯಣದಲ್ಲಿ ರಾವಣನ ಗುಪ್ತಚಾರನು ರಾಮನ ಸೈನ್ಯವಿಸ್ತಾರವನ್ನು ಬಣ್ಣಿಸುವ ಪ್ರಸಂಗವಿದೆ. 'ಶತಂ ಶತ ಸಹಸ್ರಾಣಾಮ್ ಕೋಟಿಮಾಹುರ್ಮನೀಷಿಣಃ' ಎಂದು ದಶಮಾಂಶ ಪದ್ಧತಿಯನ್ನು ವಿವರಿಸುತ್ತ ಆತನು ರಾಮನ ಸೈನ್ಯದ ಸಂಖ್ಯೆ $10^{10}+10^{14}+10^{20}+10^{24}+10^{30}+10^{34}+10^{40}+10^{44}+10^{52}+10^{57}+10^{62}+5$ ಇದೆಯೆಂದು ಹೇಳುತ್ತಾನೆ. ದಶಮಾಂಶಪದ್ಧತಿ ಮತ್ತು ಶೂನ್ಯ ಸಂಖ್ಯೆಯ ಕಲ್ಪನೆಗಳು ಗಣಿತಕ್ಕೆ ಪ್ರಾಚೀನ ಭಾರತದ ಅತ್ಯಮೂಲ್ಯ ಕೊಡುಗೆಗಳೆಂಬುದನ್ನು ಇಲ್ಲಿ ನೆನೆಯಬಹುದಾಗಿದೆ.

ಕಳೆದ ೨೫೦೦ ವರುಷಗಳ ಇತಿಹಾಸದಲ್ಲಿ ಸಂಖ್ಯೆಗಳ ಬಗೆಗೆ ವಿಶೇಷ ಆಸ್ಥೆ ತಳೆದವರಲ್ಲಿ ಪೈಥಾಗೋರಸನನ್ನು ಮೀರಿಸಿದವರು ಕಡಿಮೆ. ಕ್ರಿ. ಪೂ. ೫೦೦ ರ ಸುಮಾರಿಗೆ ಗ್ರೀಸ ದೇಶದಲ್ಲಿ ಪ್ರಜೆಯಾಗಿದ್ದ ಆತ ವಿಜ್ಞಾನಿಯೂ ಹಾಗು ರಾಜನೀತಿಜ್ಞನಾಗಿದ್ದನು, ಅವನು 'ಪ್ರತಿಯೊಂದೂ ಸಂಖ್ಯೆಯ ಪ್ರಭಾವಕ್ಕೊಳಪಟ್ಟಿದೆ' ಎಂಬ ತತ್ವವನ್ನು ಪ್ರತಿಪಾದಿಸುವವರಲ್ಲಿ ಮೊದಲಿಗ. ಈ ತತ್ವದಲ್ಲಿ ಶ್ರದ್ಧೆಯುಳ್ಳ ಪೈಥಾಗೋರಸನ ಅನುಯಾಯಿಗಳಿಗೆ 'ಪೈಥಾಗೋರೀಯರು' ಎನ್ನುತ್ತಾರೆ. ಇವರು ಕೇವಲ ಶುದ್ಧ ತರ್ಕದಿಂದ ಪ್ರೇಮವಿವಾಹಾದಿಗಳಿಂದ ಮೊದಲುಗೊಂಡು ಖಗೋಲಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳ ವರೆಗೆ ಎಲ್ಲವೂ ಸಂಖ್ಯೆಗಳ ಪ್ರಭಾವಕ್ಕೊಳಪಟ್ಟಿವೆ ಎಂದು ಸಿದ್ಧಮಾಡಲು ಪ್ರಯತ್ನಿಸಿದರು. ಪೈಥಾಗೋರೀಯರಿಗೆ ವಿಷಮ ಸಂಖ್ಯೆಗಳು ಗಂಡು ಮತ್ತು ಸಮ ಸಂಖ್ಯೆಗಳು ಹೆಣ್ಣು ಎಂಬ ಭಾವನೆಯಿದ್ದಿತು. ೧ ಕ್ಕೆ ಸಂಖ್ಯೆಯ ಪೂರ್ಣ ಮಾನ್ಯತೆ ದೊರಕಿರಲಿಲ್ಲ, ಹೀಗಾಗಿ ಅದು ಗಂಡು ಸಂಖ್ಯೆಯೆಂದಾಗಲಿ ಇಲ್ಲವೆ ಹೆಣ್ಣು ಸಂಖ್ಯೆಯೆಂದಾಗಲಿ ಗಣಿಸಲ್ಪಡಲಿಲ್ಲ. ಆದರೆ ಸರ್ವವ್ಯಾಪಿ ವಿಶ್ವಕರ್ತಾರನನ್ನೇ ೧ ಪ್ರತಿನಿಧಿಸುವುದು ಎಂದು ತಿಳಿದದ್ದರಿಂದ ಮೇಲೆ ಹೇಳಿದ ೧ ರ ಕೊರತೆ ಬಹಳಷ್ಟು ಮಟ್ಟಿಗೆ ತುಂಬಿ ಬಂದಂತಾಯಿತು. ವಿಭಿನ್ನ ಜಾತಿಯ ಸಂಖ್ಯೆಗಳ ವಿವಾಹ ಸಂಖ್ಯೆಗಳನ್ನು ಕೆಳಗಿನಂತೆ ನಿರ್ಧರಿಸಲಾಗುತ್ತಿತ್ತು. ಮೊದಲ ಹೆಣ್ಣು ಸಂಖ್ಯೆ ೨, ಹಾಗು ಮೊದಲ ಗಂಡು ಸಂಖ್ಯೆ ೩, ಇವೆರಡರ ಸಂಕಲನದಿಂದ ಬಂದ ಸಂಖ್ಯೆ ೫ ಮೊದಲ ಗಂಡು ವಿವಾಹದ ಸಂಖ್ಯೆ ಮತ್ತು ೩ × ೨ = ೬ ಮೊದಲ ಹೆಣ್ಣು ವಿವಾಹದ ಸಂಖ್ಯೆ. ೭ ಯಾವತ್ತೂ ಕನ್ಯಾವಸ್ಥೆಯನ್ನು ಪ್ರತಿನಿಧಿಸುವ ಸಂಖ್ಯೆ ಹಾಗು ೪ ನ್ಯಾಯವನ್ನು ಪ್ರತಿನಿಧಿಸುವ ಸಂಖ್ಯೆ. ಆದರೆ ನ್ಯಾಯವು ಗಂಡಸಿನಲ್ಲಿರಬಹುದಾದ ಒಳ್ಳೆಯ ಗುಣ. ಆದುದರಿಂದ ೭ = ೪ + ೩ ಸಮೀಕರಣವು ವಿವಾಹ ಸಂಖ್ಯೆಯನ್ನು ದೊರಕಿಸುವುದಕ್ಕೆ ಯೋಗ್ಯವಾಗಿಲ್ಲ. ನ್ಯಾಯವನ್ನು

ಪ್ರತಿನಿಧಿಸಲು ೪ನ್ನು ಆಯ್ದು ಕಾರಣವೆಂದರೆ ೪ = ೨ + ೨ = ೨ × ೨ ಸಮೀಕರಣಗಳು 'ಸದೃಶದಿಂದ ಸದೃಶ ಮರಳಿ ಬರುವುದು' ಅಥವಾ ಇನ್ನೂ ಹೆಚ್ಚು ಸ್ಪಷ್ಟ ಶಬ್ದಗಳಲ್ಲಿ 'ಮುಯ್ಯಿಗೆ ಮುಯ್ಯಿ' ಎಂಬ ನ್ಯಾಯದ ತಿರುಳನ್ನೆ ವ್ಯಕ್ತಪಡಿಸುತ್ತವೆ. ಇವು ಪೈಥಾಗೋರೀಯರು ಸಂಖ್ಯೆಗಳ ಬಗೆಗೆ ಕಲ್ಪಿಸಿಕೊಂಡಿದ್ದ ಕೆಲ ವಿಚಿತ್ರ ವಿಚಾರಗಳು. ಈ ತರಹದ ವಿಚಾರ ಸರಣಿಯನ್ನು ಅನುಸರಿಸಿದರೆ ನಾವು ಬಯಸಿದ ಏನನ್ನಾದರೂ ಸಿದ್ಧ ಮಾಡಬಹುದು, ಏಕೆಂದರೆ ಕಾರಣಪೂರ್ವಕ ಊಹಿಸಲು ಯಾವುದೇ ಅಡೆತಡೆಯುಂಟಾದಾಗ ಅದನ್ನು ನಿವಾರಿಲು ಒಂದು ಹೊಸ ಸ್ವತಃ ಪ್ರಮಾಣ (Postulate)ವನ್ನು ಬಂದ ಆತಂಕವನ್ನು ಅಲಕ್ಷಿಸಲು ಸಾಧ್ಯವಾಗುವ ರೀತಿಯಲ್ಲಿ ಕೊಡುವ ಯೋಚನೆ ಮಾಡಲಾಯಿತು. ಅಡೆತಡೆಗಳುಂಟಾದಾಗ ಪೈಥಾ ಗೋರೀಯವರು ಸ್ವತಃ ಪ್ರಮಾಣಗಳನ್ನು ತಿದ್ದುವ ಪ್ರವೃತ್ತಿಯನ್ನು ಬಹಳ ಕಟುವಾಗಿ ಖಂಡಿಸಬೇಕೆನಿಸಿದಾಗ ನಾವು ಇಂತಹ ಆಚರಣೆ ಇಂದಿನ ವಿಜ್ಞಾನದಲ್ಲಿಯೂ ಕೂಡ ರೂಢಿಯಲ್ಲಿರುವುದನ್ನು ನೆನೆಯಬೇಕು.

ಸಂಖ್ಯೆಗಳ ವಿಚಾರವಾಗಿ ಈ ವರೆಗೆ ವಿವರಿಸಿದ ಊಹಾ ಪ್ರೋಹದ ಸಂಗತಿಗಳ ಹೊರತಾಗಿ ಗಣಿತಶಾಸ್ತ್ರದ ದೃಷ್ಟಿಯಿಂದ ಮಹತ್ವಪೂರ್ಣ ಕೆಲ ವಿಚಾರಗಳೂ ಕೂಡ ಪೈಥಾಗೋರೀಯರಿಗೆ ಹೊಳೆದುದುಂಟು. ಉದಾಹರಣೆಗಾಗಿ ಪರಿಪೂರ್ಣ (Perfect) ಸಂಖ್ಯೆ, ಮೂಲಸಂಖ್ಯೆ (Prim number) ಮತ್ತು ಮೈತ್ರಿಯ ಸಂಖ್ಯೆಗಳು. ಪರಿಪೂರ್ಣ ಸಂಖೆಯು ಅದರ ಭಾಜಕಗಳ ಮೊತ್ತಕ್ಕೆ ಸರಿಯಾಗುತ್ತದೆ ೬ = ೧ × ೨ × ೩ ಯು ಪರಿಪೂರ್ಣ ಸಂಖ್ಯೆ. ೨೮, ೪೯೬ ಗಳು ಪರಿಪೂರ್ಣ ಸಂಖ್ಯೆಗಳ ಇತರ ಉದಾಹರಣೆಗಳು. ಕುತೂಹಲಿಗಳಿಗೆ ಪರಿಪೂರ್ಣ ಸಂಖ್ಯೆಗಳನ್ನು ಕಂಡು ಹಿಡಿಯುವುದು ಇಂದಿಗೂ ಆಸ್ಥೆ ಹುಟ್ಟಿಸುವ ವಿಷಯವಾಗಿದೆ ಅವುಗಳನ್ನು ಅರಸುವುದು ಕಷ್ಟಸಾಧ್ಯವಾದುದು. ಒಂಭತ್ತನೇ ಪರಿಪೂರ್ಣ ಸಂಖ್ಯೆಯೇ ೩೭ ಸ್ಥಾನಗಳನ್ನು ಹೊಂದಿದೆ. ಎರಡು ಸಂಖ್ಯೆ m, n ಗಳ ಪೈಕಿ ಒಂದರ ಭಾಜಕಗಳ ಮೊತ್ತ ಇನ್ನೊಂದು ಸಂಖ್ಯೆಯಾಗಿದ್ದರೆ ಅವು ಮೈತ್ರಿಯ ಸಂಖ್ಯೆಗಳು. ೨೨೦ ಮತ್ತು ೨೮೪ ಮೈತ್ರಿಯ ಸಂಖ್ಯೆಗಳು. ಮೈತ್ರಿಯ ಸಂಖ್ಯೆಗಳು ಹೊಂದಿರುವ ಸಂಬಂಧವನ್ನು ಪೈಥಾಗೋರೀಯರು ಸ್ನೇಹದ ಸಾರ ಮತ್ತು ಸಾಮರಸ್ಯದ ಅಂತರಾತ್ಮವೆಂದೇ ಬಗೆದಿದ್ದರು. ಅಭಾಗಲಬ್ಧಗಳ ಅಸ್ತಿತ್ವವನ್ನು ಕಂಡು ಹಿಡಿದುದು ಪೈಥಾಗೋರೀಯರ ಅತಿ ಮಹತ್ವದ ಸಂಶೋಧನೆಯೆನ್ನಬಹುದು. ಸಂಖ್ಯೆ m, nಗಳ ಭೌಮಿತಿಕ ಸರಾಸರಿಯು ಪೈಥಾಗೋರೀಯರಿಗೆ ಪ್ರಭುತ್ವದ ಸಂಕೇತವಾಗಿದ್ದರಿಂದ ಅವರು ಆ ಸರಾಸರಿಯನ್ನು ಕಂಡು ಹಿಡಿಯುವುದರಲ್ಲಿ ಆಸ್ಥೆ ತಳೆದಿದ್ದರು. ಈ ದಿಶೆಯಲ್ಲಿಯ ಪ್ರಯತ್ನದ ಅಂಗವಾಗಿ ಅವರು ಆಯತದ ಕರ್ಣ ಹಾಗೂ ಭುಜಗಳ ಪ್ರಮಾಣ

ವನ್ನು ಅಭ್ಯಸಿಸಿದರು. ಹಾಗು ಅದು ಆ ವರೆಗೆ ಅವರಿಗೆ ಗೊತ್ತಿದ್ದ ಸಂಖ್ಯೆಗಳಲ್ಲಿ ವಿವರಿಸಲು ಸಾಧ್ಯವಿಲ್ಲವೆಂದು ಕಂಡುಕೊಂಡರು.

ಪೈಥಾಗೊರೀಯರ ಸಂಖ್ಯೆಗಳ ಕುರಿತಾದ ಜ್ಞಾನ ಪ್ಲೇಟೋನ ತತ್ವಜ್ಞಾನದ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿತು. ಆತನ 'ರಿಪಬ್ಲಿಕ್' ಗ್ರಂಥದಲ್ಲಿ ಬರುವ ಸಂರಕ್ಷಕರು ಚತುಶ್ಶಾಸ್ತ್ರಗಳೆನಿಸಿದ "ಅಂಕಗಣಿತ, ಭೂಮಿತಿ, ಖಗೋಳ ವಿಜ್ಞಾನ ಹಾಗು ಸಂಗೀತ" ವಿಷಯಗಳನ್ನು ವಿಶ್ವದ ನಿಯಮಗಳನ್ನರಿಯಲು ಅಭ್ಯಾಸ ಮಾಡಲೇಬೇಕು. ಪ್ಲೇಟೋನ ಪ್ರಕಾರ ತತ್ವಜ್ಞಾನಿಯು ಸಂಖ್ಯೆಗಳ ಅಂತರ್ಯವನ್ನು ಕೇವಲ ಮನಸ್ಸಿನಿಂದ ಗ್ರಹಿಸುವ ವರೆಗೆ ಅವುಗಳನ್ನು ಕುರಿತು ಧ್ಯಾನ ಮಾಡಬೇಕು. ಇಂತಹ ಧ್ಯಾನದಿಂದ ಆತ್ಮದ ಸ್ವಾಸ್ಥ್ಯವುಂಟಾಗುತ್ತದೆ. ಏಕೆಂದರೆ ಸಂಖ್ಯೆಯು 'ಆಗುವುದರಿಂದ', 'ಆಗಿರುವುದಕ್ಕೆ' ಅಂದರೆ 'ಬದಲಾಗುವಿಕೆ' ಮತ್ತು 'ನಾಶ'ದಿಂದ ಶಾಶ್ವತತೆ' ಮತ್ತು 'ಅಮೃತತ್ವ'ದೆಡೆಗೆ ಒಯ್ಯುವ ನೇರವಾದ ಸಾಧನವಾಗಿದೆ.

ಸಂಖ್ಯೆಗಳ ಕುರಿತಾದ ಈ ಬಗೆಯ ದರ್ಶನಗಳು ಸಾಕಷ್ಟು ಪೂರ್ವದಲ್ಲಿಯೆ ಕಟು ವಿಮರ್ಶೆಗೊಳಗಾದುವು. ಅರಿಸ್ಟಾಟಲ (ಕ್ರಿ. ಪೂ. ೬೮೪–೩೨೨)ನು ಪೈಥಾಗೊರೀಯರ ತರಬೇತಿ ಹೆಚ್ಚಾಗಿ ಗಣಿತಶಾಸ್ತ್ರದಲ್ಲಿ ಇದ್ದುದರಿಂದ ಅವರು ಗಣಿತಶಾಸ್ತ್ರದ ಮೂಲತತ್ವಗಳು ಉಳಿದುದೆಲ್ಲದರ ಮೂಲತತ್ವಗಳಾಗಿವೆ ಎಂದು ಭಾವಿಸಿದ್ದರು. ಸಂಖ್ಯೆಯು ವಸ್ತುಗಳ ಮೂಲವಾಗಿದೆಯಲ್ಲದೆ ಅವುಗಳ ಭೌತಿಕ ಅಸ್ತಿತ್ವದ ಹಾಗು ಬದಲಾಗುವಿಕೆಯ ಕಾರಣವೂ ಆಗಿದೆಯೆಂದು ಅವರು ತಿಳಿದಿದ್ದರು....' ಎಂದು ತನ್ನ ಅಭಿಪ್ರಾಯ ಸೂಚಿಸಿದ್ದಾನೆ.

ಪೈಥಾಗೊರೀಯರಿಂದ ಸಂಸ್ಕರಿಸಲ್ಪಟ್ಟ ಅಂಕಗಣಿತದ ಅಭ್ಯಾಸವನ್ನು ಯುಕ್ಲಿಡ್‌ನು ವ್ಯವಸ್ಥಿತವಾಗಿ ಮುಂದುವರೆಸಿದನು. ಮೂಲಸಂಖ್ಯೆಗಳು ಅನಂತವಾಗಿವೆಯೆಂದು ಆತ ತೋರಿಸಿದನು. ಆದರೆ 'ಅನಂತ'ದ ಸ್ಪಷ್ಟವಾದ ಕಲ್ಪನೆ ಆರ್ಕಿಮಿಡಿಸನ 'ಸ್ಯಾಂಡ್ ರೆಕೊನರ್' ಎಂಬ ಗ್ರಂಥದಲ್ಲಿ ರೂಪುಗೊಂಡಿದೆ. ಈ ಗ್ರಂಥವು 'ಅನಂತ' ಮತ್ತು ಅತಿ ದೊಡ್ಡ ಸಂಖ್ಯೆ ಇವುಗಳಲ್ಲಿ ಭೇದ ಕಾಣದ ಸಿರಾಕ್ಯೂಜಿನ ದೊರೆ ಗೆಲೊನ್‌ನ್ನು ಸಂಬೋಧಿಸಿ ಬರೆದುದಾಗಿದೆ. ಆರ್ಕಿಮಿಡಿಸನು ಸಂಖ್ಯೆಗಳ ವಿಶೇಷ ಜ್ಞಾನವಿಲ್ಲದವರಿಗೆ ಅನಂತವೆನಿಸಬಹುದಾದ ಜಗತ್ತಿನ ಎಲ್ಲ ಮರಳು ಕಣಗಳ ಸಂಖ್ಯೆಯನ್ನು ಗಮನಿಸಲು ದೊರೆಗೆ ಹೇಳುತ್ತಾನೆ, ಹಾಗು ಈ ಸಂಖ್ಯೆ ಒಂದು ಹೆಸರಿಸಬಹುದಾದ ನಿರ್ದಿಷ್ಟ ಸಂಖ್ಯೆಯನ್ನು ಮೀರಲಾರದು ಎಂದು ತರ್ಕಬದ್ಧವಾಗಿ ಸಿದ್ಧ ಮಾಡುತ್ತಾನೆ. ಹೀಗೆ ಜಗತ್ತಿನ ಎಲ್ಲ ಮರಳು ಕಣಗಳ ಪರಿಮಾಣವನ್ನು ಒಂದು ಸಂಖ್ಯೆಯಿಂದ ವಿವರಿಸಬಹುದಾದರೆ, ಅದು ಅನಂತವಾಗಿರಲಾರದು ಎಂದು ಪ್ರತಿಪಾದಿಸುತ್ತಾನೆ.

ಗಣಿತಶಾಸ್ತ್ರದಲ್ಲಿ ಅನಂತಕ್ಕಿರುವ ಅರ್ಥಕ್ಕೆ ಅತಿ ಸಮೀಪವಾಗಿರುವ ರೀತಿಯಲ್ಲಿ ಕವಿಗಳು ಕೂಡ ಕೆಲವು ಸಂದರ್ಭಗಳಲ್ಲಿ ಅನಂತ ಶಬ್ದವನ್ನು ಉಪಯೋಗಿಸಿದುದುಂಟು. ಜೂಲಿಯಟಳು ರೋಮಿಯೋನಿಗೆ ತನ್ನ ಪ್ರೀತಿಯ ಬಗೆಗೆ 'The more I give to thee, the more I have' ಎಂದು ಹೇಳಿದಾಗ ಅನಂತಗಳ ವಿಶೇಷ ಗುಣಧರ್ಮಗಳನ್ನು ಉತ್ಪ್ರೇಕ್ಷಿಸಿ ಹೇಳಿದಂತಿದೆ. ಬ್ಲೇಕನ "To hold infinity in the palm of your hand and eternity in an hour" ಎಂಬ ವಾಕ್ಯವು ಹಸ್ತದಲ್ಲಿಯ ಆಯುಷ್ಯ ರೇಖೆಯಷ್ಟು ಚಿಕ್ಕದಾದ ರೇಖಾಖಂಡವು ಅನಂತವಾಗಿ ಉದ್ದವಿರುವ ರೇಖೆಯಲ್ಲಿರುವಷ್ಟು ಬಿಂದುಗಳನ್ನು ಹೊಂದಿರುತ್ತದೆ ಎಂಬ ಗಣಿತಶಾಸ್ತ್ರದಲ್ಲಿಯ ನಿಜಸ್ಥಿತಿಗೆ ಅನುಗುಣವಾಗಿದೆ.

೧೯ನೆಯ ಶತಮಾನದ ವರೆಗೆ ಅಭಾಗಲಬ್ಧಗಳ ಬಗೆಗೆ ಪ್ರೌಢ ತಿಳುವಳಿಕೆ ಬಂದಿರಲಿಲ್ಲ. ವಸ್ತುಸ್ಥಿತಿಯೇನೆಂದರೆ ಅಭಾಗಲಬ್ಧಗಳನ್ನು ಕಂಡುಹಿಡಿದ ಪೈಥಾಗೊರೀಯರಿಗೆ ಅವುಗಳ ಅಸ್ತಿತ್ವವೇ ಅಪನಿಂದೆಯನ್ನು ತರುವ ವಿಷಯವಾಗಿತ್ತು. ಅಭಾಗಲಬ್ಧಗಳು ಭೂಮಿತಿ ಹಾಗು ಸಂಖ್ಯೆಗಳ ನಡುವಿನ ಸಾಮರಸ್ಯವನ್ನೇ ಕದಡಿಬಿಟ್ಟವೆಂದು ಅವರಿಗೆ ಭಾವನೆಯಾಯಿತು. ಡೆಡೆಕಾಯಿಂಡನು ಅಭಾಗಲಬ್ಧಗಳ ಬಗೆಗೆ ಸಮರ್ಪಕವಾದ ತಿಳುವಳಿಕೆ ತಂದುಕೊಡುವ ರೀತಿಯನ್ನು ಕಂಡುಹಿಡಿದನು. p, qಗಳು ಪೂರ್ಣಾಂಕಗಳಾಗಿದ್ದಾಗ ಹಾಗು $q \neq 0$ ಇದ್ದಾಗ p/q ರೂಪದ ಸಂಖ್ಯೆಗೆ ಭಾಗಲಬ್ಧಗಳ ಸಹಾಯದಿಂದ ಅವುಗಳಲ್ಲಿ ಕಡಿತ(cut)ದ ವ್ಯಾಖ್ಯೆಯನ್ನು ಡೆಡೆಕಾಯಿಂಡನು ಕೊಟ್ಟನು. ಈ ಕಡಿತದ ಸಹಾಯದಿಂದ ಅವನು ಅಭಾಗಲಬ್ಧಗಳ ವ್ಯಾಖ್ಯೆಯನ್ನು ರೂಪಿಸಿದನು. ಎಲ್ಲ ಅಭಾಗಲಬ್ಧಗಳನ್ನು ಮತ್ತು ಎಲ್ಲ ಅಭಾಗಲಬ್ಧಗಳನ್ನು ಒಳಗೊಂಡ ಸಂಗ್ರಹಕ್ಕೆ ವಾಸ್ತವ ಸಂಖ್ಯೆಗಳ ಸಂಗ್ರಹ ಎಂದು ಕರಿಯುತ್ತಾರೆ.

ಸಂಖ್ಯೆಯೆಂದರೇನು ಎಂಬ ಪ್ರಶ್ನೆಯನ್ನು ಗಣಿತಜ್ಞರು ಆಗಾಗ್ಗೆ ಕೇಳುತ್ತಲೇ ಬಂದಿದ್ದಾರೆ. ಆದರೆ ಅದರ ಸರಿಯಾದ ಉತ್ತರ ದೊರಕಿದುದು ಇತ್ತೀಚೆಗೆ ಮಾತ್ರ. ಸಂಖ್ಯೆಯ ವ್ಯಾಖ್ಯೆಯನ್ನರಸುವಾಗ ನಾವು ವಿಚಾರಿಸುತ್ತಿರುವ ಕಲ್ಪನೆಯ ಬಗೆಗಿನ ವ್ಯಾಕರಣದ ವಿಷಯದಲ್ಲಿ ಜಾಗರೂಕರಾಗುವುದು ನಮ್ಮ ಮೊದಲು ಕರ್ತವ್ಯ. ಹಲವಾರು ತತ್ವಜ್ಞಾನಿಗಳು ಸಂಖ್ಯೆಯ ವ್ಯಾಖ್ಯೆಯನ್ನು ರೂಪಿಸುವ ತಮ್ಮ ಪ್ರಯತ್ನಗಳಲ್ಲಿ ಬಹುತ್ವದ ವ್ಯಾಖ್ಯೆಯನ್ನು ಕೊಡುವ ತೊಂದರೆ ತೆಗೆದುಕೊಂಡುದುದು ಕಂಡು ಬರುತ್ತದೆ ಆದರೆ 'ಬಹುತ್ವ'ವು ಸಂಖ್ಯೆಯಿಂದ ಭಿನ್ನವಾದ ಬೇರೆ ವಿಷಯವೆಂಬುದು ಸ್ಪಷ್ಟವಿದೆ ಗುಡಸರ ವಿಶೇಷ ಲಕ್ಷಣವುಳ್ಳದ್ದು ಸಂಖ್ಯೆಯಾಗಿರುತ್ತದೆ. ರಾಮ, ಲಕ್ಷ್ಮಣ ಹಾಗು ಸೀತೆಯರನ್ನು ಹೊಂದಿದ ತ್ರಯವು ಸಂಖ್ಯೆ ೩ ರಿಂದ ಭಿನ್ನವಾಗಿದೆ. ಸಂಖ್ಯೆ ೩, ಎಲ್ಲ ತ್ರಯಗಳಿಗೆ ಸಾಮಾನ್ಯವಾದ ಹಾಗು ಇತರ ಸಂಗ್ರಹಗಳು ತ್ರಯಗಳಿಂದ

ಬೇರೆ ಎಂಬುದನ್ನು ತೋರಿಸುವ ಗುಣಧರ್ಮವುಳ್ಳದ್ದು. ಇವೆಲ್ಲ ವಿಚಾರಗಳ ನ್ನೊಳಗೊಳ್ಳುವ ರೀತಿಯಲ್ಲಿ ಬಟ್ರ್ರಾಂಡ್ ರಸ್ಸೆಲ್ ಕೊಟ್ಟ ಸಂಖ್ಯೆಯ ವ್ಯಾಖ್ಯೆ ಕೆಳಗಿನಂತಿದೆ: ಒಂದು ಸಂಗ್ರಹಕ್ಕನುಗುಣವಾದ ಸಂಖ್ಯೆಯು ಆ ಸಂಗ್ರಹಕ್ಕೆ ಸಮಾನವಾಗಿರುವ ಎಲ್ಲ ಸಂಗ್ರಹಗಳ ಸಂಗ್ರಹವಾಗಿದೆ. ಇಲ್ಲಿ ಒಂದು ಸಂಗ್ರಹ ಇನ್ನೊಂದು ಸಂಗ್ರಹಕ್ಕೆ ಸಮಾನವಾದುದು ಎಂದರೆ, ಅವೆರಡರಲ್ಲಿ ಒಂದು ಸಹ ಗಾಮಿತ್ವವಿರುವುದು ಎಂದರ್ಥ. ಈ ಸಂಖ್ಯೆಯ ಮುಖ್ಯ ಪ್ರಯೋಜನ ವೇಂದರೆ ಇದರಿಂದ ಗಣನಾಂಕಗಳ ಬಗೆಗಿರುವ ಪೀನೋ ಅವರ ಸ್ವತಃ ಪ್ರಮಾಣಗಳನ್ನು ಪ್ರಮೇಯಗಳೆಂದು ಸಾಧಿಸಲು ಬರುತ್ತದೆ ಮತ್ತು ಈ ಸ್ವತಃ ಪ್ರಮಾಣಗಳ ಆಧಾರದಿಂದ ವಾಸ್ತವ ಸಂಖ್ಯೆಗಳ ಅಂಕಗಣಿತವನ್ನು ಸಮಗ್ರವಾಗಿ ರೂಪಿಸಬಹುದು. ಇದರಿಂದ ಸಂಖ್ಯೆಗಳು ಪರಂಪರಾಗತ (traditional) ಶುದ್ಧ ಗಣಿತಶಾಸ್ತ್ರದ ತಳಹದಿಯಾಗಿವೆ ಎಂಬುದು ಸ್ಪಷ್ಟವಾ ಗುತ್ತದೆ. ಹೀಗೆ 'ಎಲ್ಲವೂ ಸಂಖ್ಯೆಯಾಗಿದೆ' ಎಂಬ ಪೈಥಾಗೋರನ ಕನಸು ಕೆಲಮಟ್ಟಿಗಾದರೂ ನನಸಾಗಿದೆಯೆಂದು ಹೇಳಬಹುದು.

★ ಕೆ. ಎಸ್. ಅಮೂರ

ಸಕಲೇಶ ಮಾದರಸ

(೧)

ಸಕಲೇಶ–ಮಾದರಸನು ಬಸವಣ್ಣನವರ ಹಿರಿಯ ಸಮಕಾಲೀನನೆಂದು, ವೀರಶೈವ ಪುರಾಣಗಳ ಅಭ್ಯಾಸದಿಂದ ತಿಳಿದುಬರುತ್ತದೆ. ಅವನ ಹೆಸರನ್ನು ಇಲ್ಲವೆ ಅವನ ಚರಿತ್ರೆಗೆ ಸಂಬಂಧಪಟ್ಟ ಸಂಗತಿಗಳನ್ನು ಹೇಳುವ ಶಾಸನ ಇದೂ ವರೆಗೆ ದೊರೆತಂತೆ ಕಾಣುವುದಿಲ್ಲ. ಆದರೆ ಕೆಲವು ಜನ ವಚನಕಾರರು ತಮ್ಮ ವಚನಗಳಲ್ಲಿ ಅವನ ಹೆಸರನ್ನು ಉಲ್ಲೇಖಿಸಿದ್ದಾರೆ.

“ ಪ್ರಭುವಿನ ವಾದದಿಂದ ವೈರಾಗ್ಯ ಸಂಪತ್ತು ;
ಬಸವನ ವಾದದಿಂದ ಭಕ್ತಿಯ ಸಂಪತ್ತು ;
ಚನ್ನಬಸವನ ವಾದದಿಂದ ಶಿವ ಪ್ರಸಾದದ ಸಂಪತ್ತು ;
ಮಡಿವಾಳಯ್ಯನ ವಾದದಿಂದ ಜ್ಞಾನದ ಸಂಪತ್ತು ;
ಸಕಳೇಶನ ವಾದದಿಂದ ಶಾಂತಿಯ ಸಂಪತ್ತು ;
ಮೋಳಿಗೆಯ್ಯನ ವಾದದಿಂದ ದಾಸೋಹದ ಸಂಪತ್ತು ;
ನೀಲಮ್ಮನ ವಾದದಿಂದ ಲಿಂಗಪೂಜೆಯ ಸಂಪತ್ತು ;
ನಾಗಮ್ಮನ ವಾದದಿಂದ ಮಹತ್ವ ಸಂಪತ್ತು ;
ಇಮುಕಾರಣ ಕಿನ್ನರ ತ್ರಿಪುರಾಂತಕಲಿಂಗ ಸಾಕ್ಷಿಯಾಗಿ,
ಪ್ರಮಥರ ನುಡಿಯಲ್ಲಿ ಬೇಸರ ಬೀರದಿರು.”[೧]

ಈ ವಚನದ ಕರ್ತೃ ಯಾರೆಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಅಂಕಿತದ ಮೇಲಿಂದ ಕಿನ್ನರ ಬೊಮ್ಮಯ್ಯನವಿರಬೇಕೆಂದು ಹೇಳಬಹುದಾ ದರೂ ಅವನ ಅಂಕಿತ ‘ ಮಹಾಲಿಂಗ ತ್ರಿಪುರಾಂತಕ ’ ಅಥವಾ ‘ ಮಹಾಲಿಂಗ ತ್ರಿಪುರಾಂತಕದೇವ ’ ಎಂದಿದೆ. ‘ ತ್ರಿಪುರಾಂತಕ ಲಿಂಗದಲ್ಲಿ ಗಾವುದಿಯ ಮಾಚಯ್ಯ ’ ಇದು ಗಾವುದಿ ಮಾಚಯ್ಯನ ಅಂಕಿತವಾದರೆ, ‘ ಕಾಲಕರ್ಮ ವಿರಹಿತ ತ್ರಿಪುರಾಂತಕಲಿಂಗ ’ ಎಂಬುದು ಕೀಲಾರದ ಭೀಮಣ್ಣನ ಅಂಕಿತ ವಾಗಿದೆ. ಕೇವಲ ‘ ತ್ರಿಪುರಾಂತಕ ಲಿಂಗ ’ ಎಂಬ ಅಂಕಿತವಿರುವ ವಚನಕಾರನಾ ರೆಂಬುದೂ ತಿಳಿದಂತೆ ಕಾಣುವುದಿಲ್ಲ. ಆದುದರಿಂದಲೇ ಡಾ. ಎಲ್. ಬಸವರಾಜು ಅವರು ಶಿವದಾಸಗೀತಾಂಜಲಿಯ ಎಲ್ಲ ವಚನಾಂಕಿತಗಳು ಮತ್ತು ವಚನ ಕಾರರು ’ ಎಂಬ ಭಾಗದಲ್ಲಿ ಈ ಅಂಕಿತಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ.[೨]

---

೧. ವಚನಶಾಸ್ತ್ರಸಾರ. ಭಾಗ-೧ ; ಎರಡನೆಯ ಆವೃತ್ತಿ ೧೯೩೧. ಸಂ.—ಫಳಕಟ್ಟಿ.

೨. ‘ ಶಿವದಾಸ ಗೀತಾಂಜಲಿ ’ ಪುಟ-೩೧೯, ೨೦.

ಸಿದ್ಧರಾಮ ಶಿವಯೋಗಿಯ ಒಂದು ವಚನದಲ್ಲಿಯೂ, ಸಕಲೇಶ ಮಾದರಸನ ಉಲ್ಲೇಖ ಬರುತ್ತದೆ.

"ಅಲ್ಲಮನ ಲಕ್ಷ್ಯ ವೈರಾಗ್ಯದಲ್ಲಿ;
ಚೆನ್ನಬಸವನ ಲಕ್ಷ್ಯ ಕ್ರಿಯಾ ಜ್ಞಾನದಲ್ಲಿ;
ಬಸವನ ಲಕ್ಷ್ಯ ಭಕ್ತಿಯಲ್ಲಿ;
ಮಡಿವಾಳನ ಲಕ್ಷ್ಯ ಅಹಂಕಾರ ನಾಶದಲ್ಲಿ;
ಸಕಳೇಶಯ್ಯನ ಲಕ್ಷ್ಯ ಸಮತೆಯಲ್ಲಿ,
ಶಿವಯೋಗಿ ಸಿದ್ಧರಾಮನೆಂಬ ಬಾಲಕನ ಲಕ್ಷ್ಯ
ಲಿಂಗಪೂಜೆಯಲ್ಲಿ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನ"

(ಸಿದ್ಧರಾಮೇಶ್ವರನ ವಚನಗಳು. ಸಂ–ಹಳಕಟ್ಟಿ. ೧೯೩೨. ವಚನ–೬೨೯)

೨

ಸಕಲೇಶ ಮಾದರಸನು ಒಬ್ಬ ವಚನಕಾರ. ಕರ್ನಾಟಕ ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ ಅವರು, ಕವಿಚರಿತೆಯ ಪ್ರಥಮ ಸಂಪುಟದಲ್ಲಿ, ಇವನ ಅಂಕಿತವು 'ಸಕಲೇಶ್ವರದೇವ' ಎಂದು ತಿಳಿಸಿ, ಇವನ ವಚನಗಳ ಸಂಖ್ಯೆ ೧೧೩ ಎಂದು ಹೇಳಿದ್ದಾರೆ. ಹಾಗೆಯೆ ಅಡಿಟಿಪ್ಪಣಿಯಲ್ಲಿ "ನಮಗೆ ದೊರೆತ ಪ್ರತಿಯಲ್ಲಿ ಕೆಲವು ವಚನಕಾರರ ವಚನಗಳ ಸಂಖ್ಯೆಯನ್ನು ಕೊಟ್ಟಿದೆ" ಎಂದು ಸೂಚಿಸಿದ್ದಾರೆ. ಸಾಹಿತ್ಯ ಪರಿಷತ್ತಿನವರು ಪ್ರಕಟಿಸಿದ 'ಕರ್ನಾಟಕ ಕವಿಚರಿತೆ' ಪ್ರಥಮ ಸಂಪುಟ ಅನುಬಂಧ II ಪುಟ ೩೭ ರಲ್ಲಿ "ಸಕಲೇಶ ಮಾದರಸನ ವಚನಗಳ ಸಂಖ್ಯೆ ೧೧೩ ಎಂದು ಕವಿಚರಿತೆಕಾರರು ಸೂಚಿಸಿದ್ದಾರೆ. ಆದರೆ ಎಲ್ಲಿಯೂ ಆ ವಚನಗಳು ಒಟ್ಟಿಗೆ ಸಿಕ್ಕಿಲ್ಲ....ಆಂಧ್ರ ಸಾಹಿತ್ಯದಲ್ಲಿ ಸಕಲೇಶ ಮಾದರಸನಿಗಿರುವ ಪ್ರಾಮುಖ್ಯವನ್ನು ಕಂಡರೆ, ಆತನು ಆಂಧ್ರದಲ್ಲಿ ಸುತ್ತಾಡಿ ವೀರಶೈವ ಪ್ರಭಾವವನ್ನು ಮಾಡಿರಬೇಕೆಂದು ಕಾಣುತ್ತದೆ...." ಮುಂತಾಗಿ ತಿಳಿಸಿದ್ದಾರೆ.

ಸಕಳೇಶ ಮಾದರಸನ, ಎಂಬತ್ತೆಂಟು ವಚನಗಳನ್ನು, 'ವಚನಪಿತಾಮಹ' ಫ. ಗು. ಹಳಕಟ್ಟಿಯವರು, ಕ್ರಿ. ಶ. ೧೯೩೦ ರಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. "ಸಕಳೇಶ ಮಾದರಸನ ವಚನಗಳು" ಎಂಬ ಹೆಸರು ಹೊತ್ತ ಆ ಗ್ರಂಥ, ಶಿವಾನುಭವ ಗ್ರಂಥಮಾಲೆಯ ಇಪ್ಪತ್ತನೆಯ ಪುಷ್ಪ. ಅದರಲ್ಲಿ ಸೇರ್ಪಡೆಯಾಗದ ಸಕಳೇಶ ಮಾದರಸನ ಇನ್ನೂ ಕೆಲವು ವಚನಗಳು 'ವಚನ ಶಾಸ್ತ್ರಸಾರ' ಭಾಗ–೧, ೨, ಮತ್ತು ಮೂರರಲ್ಲಿ ಬಂದಿದೆ. ಈ ಎಲ್ಲ ವಚನಗಳಲ್ಲಿ 'ಸಕಳೇಶ್ವರದೇವ' 'ಸಕಳೇಶ್ವರ' ಎಂಬ ಅಂಕಿತಗಳೇ ಹೆಚ್ಚಾಗಿ

ಬಂದಿವೆ. 'ಸಕಳೇಶ್ವರಯ್ಯ' 'ಸಕಳೇಶ್ವರಲಿಂಗ' 'ಮಹಂತ ಸಕಳೇಶ್ವರ ದೇವ' ಮತ್ತು 'ಆರಾಧ್ಯ ಪ್ರಿಯಸಕಳೇಶ್ವರದೇವ' ಅಂಕಿತದ ಒಂದೆರಡು ವಚನಗಳೂ ಇವೆ.

ಡಾ. ಎಲ್. ಬಸವರಾಜು, ಅವರು ಸಂಪಾದಿಸಿರುವ, 'ಶಿವದಾಸ ಗೀತಾಂಜಲಿಯಲ್ಲಿ, 'ಶಿವಲಿಂಗದ ಮರನೆ' ಎಂಬ, ಸಕಳೇಶ ಮಾದರಸನ ಹಾಡೊಂದು ಸಮಾವೇಶವಾಗಿದೆ.[೩] ಇದರಿಂದ ಅವನು, ಇತರ ಕೆಲವು ವಚನ ಕಾರರಂತೆ, ವಚನಗಳ ಜೊತೆಗೆ ಹಾಡುಗಳನ್ನೂ ರಚಿಸಿರುವನೆಂದು ಹೇಳ- ಲಾಸ್ಪದವಿದೆ.

೩

ಸಕಲೇಶ ಮಾದರಸನ ವಚನಗಳಲ್ಲಿ, ಕೆಲವು ಜನ ಶಿವಶರಣರ ಮತ್ತು ಪುರಾತನರ ಹೆಸರುಗಳ, ಮತ್ತು ಅವರು ಮಾಡಿದ ಕಾರ್ಯಗಳ ಉಲ್ಲೇಖ ಬರುತ್ತದೆ. ಅದನ್ನು ಕೆಳಗಿನಂತೆ ಸಂಗ್ರಹಿಸಬಹುದು.

ಶಿವಯೋಗಿ ಸಿದ್ಧರಾಮನನ್ನು ಕುರಿತ, ಸಕಲೇಶಮಾದರಸನ ಎರಡು ವಚನಗಳು ಅತ್ಯಂತ ಮಹತ್ವದುವಾಗಿವೆ. ಅವುಗಳಲ್ಲಿ ಒಂದು ಹೀಗಿದೆ:—

"ಪುರುಷ ಮೃಗ ಬಂದು ನಿಂದಲ್ಲಿ ಜನ್ನ ಜಯವಾಗದೆ ಧರ್ಮಂಗೆ?
ಲಿಂಗಜಂಗಮ ಭಕ್ತಿ ಪ್ರಜ್ವಲಿಸದೆ ಸಿರಿಯಾಳಂಗೆ?
ಪ್ರಸಾದವ ಬಿಬ್ಬಿಬಾಚಯ್ಯ ಮಂಜೆಪುತ್ರ ಬಪ್ಪಲ್ಲಿ ಆಜೀಯದೆ
ನಿಂದಿಸಿದೊಡೆ,
ಹರಿದು ಹತ್ತದೇ ಉರಿಯ ನಾಲಿಗೆ ಗ್ರಾಮವ?
ಹರಗಿತ್ತ ನಿರೂಪವಿಡಿದಿದವರ್ಗವಲ್ಲಿ, ಮಾರಾರಿಯಾರಾಣರು ಬಂದು
ನಿಂದಲ್ಲಿ
ಅರ್ಘ್ಯಗೃಹಂಗಳುಳಿಯವೇಸದೊಬ್ಬಾತನಕರದಾಧರೆಯುರಿಯ ನಾಲಿ
ಗೆಯನೀಡಿ?
ಕಲ್ಯಾಣವನಾಳುವ ಬಿಜ್ಜಳನ (=ಬಿಜ್ಜಳನು?) ಮುಟ್ಟಿಸೆಂದೊಡೆ,
ಕೋಪಾಟೋಪವಂ ಬಿಟ್ಟು ಕಳೆದು ಸಾಮಾನ್ಯವಾಗನೆ?
ಶಿವನೊಲಿದ ಸಿದ್ಧರಿಗೆ, ಅಂಗದ ಮೇಲೆ ಲಿಂಗವಿಲ್ಲದವನು ಅಂಗಣವ
ಮೆಟ್ಟಲಾಗದೆಂದೊಡೆ,
ಉರಿಯು ಜ್ವಾಲೆಯು ಬಿಟ್ಟಡೆ ಪರಿಹರಿಸದೆ ಕೂಡಿಗೆಯ ತುದಿಯಲ್ಲಿ?
ಪರಮನೊಲಿದ ಶರಣರು ಸ್ವತಂತ್ರ ಮಹಿಮರು. ಅದೆಂತೆಂದೊಡೆ—

---

೩. ಶಿವದಾಸ ಗೀತಾಂಜಲಿ. ಪುಟ–೧೪೪. ಹಾಡು–೧೧೯.

ಅವರೆಂದಂತೆ ಅಹುದೆಂದಡೆ ಅಂಗದ ಮೇಲೆ **ಲಿಂಗಪ್ರತಿಷ್ಠೆ**
ಯಾಗದೇ ಶಿವಯೋಗಿ ಸಿದ್ಧರಾಮಯ್ಯಂಗೆ?
ಸಕಲದೂತ ದುರಿತಂಗಳು ಬಿಟ್ಟೋಡುತ್ತಿದ್ದವು ಸಕಳೇಶ್ವರದೇವಾ
ನಿಮುಶರಣನ

ದೇವತ್ವಕ್ಕಂಜಿ!"[೪]

ಈ ವಚನದಲ್ಲಿ ಬರುವ "ಅಂಗದ ಮೇಲೆ ಲಿಂಗಪ್ರತಿಷ್ಠೆಯಾಗದೆ ಶಿವಯೋಗಿ ಸಿದ್ಧರಾಮಯ್ಯಂಗೆ?" ಎಂಬ ಹೇಳಿಕೆ, ಸಿದ್ಧರಾಮನ ವೀರಶೈವತ್ವಕ್ಕೆ ಪ್ರಬಲ ಆಧಾರವಾಗಿದೆಯೆಂದು, ಆ ಬಗ್ಗೆ ಅತ್ಯಂತ ಸಂಶಯ ತಾಳಿದ ಪಂಡಿತರೂ ಒಪ್ಪಿಕೊಂಡಿದ್ದಾರೆ. ಬಿಜ್ಜಳನು ಕಲ್ಯಾಣದಲ್ಲಿ ಆಳುತ್ತಿದ್ದ ಉಲ್ಲೇಖವೂ ಈ ವಚನದಲ್ಲಿದೆ. ಸಕಲೇಶಮಾದರಸನ ಮತ್ತೊಂದು ವಚನದಲ್ಲಿ "ಸಿಡಿಲ ಸ್ವೀಕರಿಸನೆ ಶಿವಯೋಗಿ ಸಿದ್ಧರಾಮಯ್ಯನು?" ಎಂಬ ಮಾತು ಬರುತ್ತದೆ.[೫] ಇದು ಸಿದ್ಧರಾಮನು ತೋರಿದ ಒಂದು ಪವಾಡ. ರಾಘವಾಂಕನ 'ಸಿದ್ಧರಾಮಚಾರಿತ್ರ'ದಲ್ಲಿ ಈ ಪವಾಡದ ವರ್ಣನೆ ಬಂದಿದೆ.[೬] ಸಕಲೇಶ ಮಾದರಸನು ತನ್ನ ವಚನದಲ್ಲಿ ಇದನ್ನು ಉಲ್ಲೇಖಿಸಿರುವದರಿಂದ "ಇವೆಲ್ಲ ಕಥೆಗಳ ಕಂತೆ ಪವಾಡಗಳ ಪೂಜ ಎಂದು ನಂಬದಿರಬಹುದು"[೭] ಎಂಬ 'ಸಿದ್ಧರಾಮಚಾರಿತ್ರದ' ಸಂಪಾದಕರ ಮಾತು, ಈ ಪವಾಡದ ವಿಷಯದಲ್ಲಂತೂ ಸಮರ್ಪಕವಲ್ಲವೆನಿಸುತ್ತದೆ. "ಕಣ್ಣಮುಚ್ಚಿ ಕಮ್ಮರಿಯು ಹಾಯ್ದರೆಯೂ ಅಲ್ಲಿ ಪದವಿಯ ಕೊಡುವನು ನೀನೆ" ಎಂಬ ಮತ್ತೊಂದು ವಚನದಲ್ಲಿ ಬರುವ ಹೇಳಿಕೆಯೂ[೮] ಸಿದ್ಧರಾಮನಿಗೇ ಅನ್ವಯಿಸುವಂತೆ ತೋರುತ್ತದೆ. ಮೇಲಿನ ವಚನದಲ್ಲಿ ಬಿಬ್ಬಿಬಾಚಯ್ಯನು ಮೆರೆದ ಒಂದು ಪವಾಡದ ಉಲ್ಲೇಖವಲ್ಲದೆ ಸಿರಿಯಾಳಸೆಟ್ಟಿಯ ಹೆಸರೂ ಬಂದಿದೆ.

"ವಾಸವಸ್ತ್ರವನಿತ್ತ ಠಾವು ಲೇಸಾಯಿತ್ತು ತವನಿಧಿಯಠಾವು ಪೊಲ್ಲಹವಾಯಿತ್ತು;
ಸಿರಿಯಾಳ ಮಗನನಿತ್ತ ಠಾವು ಲೇಸಾಯಿತ್ತು ಮರಳಿ ಬೇಡಿದ ಠಾವು
ಹೊಲ್ಲಹವಾಯಿತ್ತು;
ಬಲ್ಲಾಳ ವಧುವನಿತ್ತ ಠಾವು ಲೇಸಾಯಿತ್ತು ಸ್ವಯಲಿಂಗವಾದ ಠಾವು
ಹೊಲ್ಲಹವಾಯಿತ್ತು;

೪ ಶಿವದಾಸ ಗೀತಾಂಜಲಿ ಪುಟ-೩೫೧. ಹಳಕಟ್ಟಿಯವರು ಸಂಪಾದಿಸಿದ, ಮಾದರಸನ ವಚನಗಳಲ್ಲಿಯೂ, ಈ ವಚನವಿದೆ. ಆದರೆ ಅದರಲ್ಲಿ "ಕಲ್ಯಾಣವನಾಳುವ ಬಿಜ್ಜಳನು ಮುಟ್ಟಿನೆಂದೊಡೆ....ಶಿವನೊಲಿದ ಸಿದ್ಧರಿಗೆ" ಎಂಬ ಭಾಗ ಬಿಟ್ಟುಹೋಗಿದೆ.

೫ ಸಕಲೇಶಮಾದರಸನ ವಚನಗಳು. ಸಂ-ಹಳಕಟ್ಟಿ. ವಚನ-೮೫.

೬. ಸಿದ್ಧರಾಮ ಚಾರಿತ್ರ ಸಂಧಿ-೭, ಪದ್ಯ ೩೮ ರಿಂದ ೪೩.

೭. ಸಿದ್ಧರಾಮ ಚಾರಿತ್ರ, ಮುನ್ನುಡಿ ಪುಟ ೫೦

೮. ಸ. ಮಾ. ವಚನಗಳು ಸಂ. ಹಳಕಟ್ಟಿ, ವಚನ ೩೦.

ಇವರೆಲ್ಲರೂ ಸಕಳೇಶ್ವರ ಲಿಂಗದಲ್ಲಿ ಅಪೇಕ್ಷಿತರಲ್ಲದೆ ನಿರಪೇಕ್ಷಿತರಾರೂ ಇಲ್ಲ.[೯] ಈ ವಚನದಲ್ಲಿ ಸಿರಿಯಾಳನ ಉಲ್ಲೇಖ ಮಾತ್ರ ಬಂದಿದ್ದು, ಅವನು ತನ್ನ ಮಗನನ್ನು ಶಿವಾರ್ಪಿತ ಮಾಡಿದುದು ಒಳ್ಳೆಯದಾದರೂ ಮರಳಿ ಪಡೆದುದು ಮಾತ್ರ ಹೊಲ್ಲಹವೆಂದು ಮಾದರಸನು ಸ್ಪಷ್ಟವಾಗಿ ಹೇಳಿದ್ದಾನೆ. ಅದೇ ರೀತಿ ದಾಸ ವಸ್ತ್ರವನಿತ್ತುದನ್ನೂ, ಬಲ್ಲಾಳನು ತನ್ನ ವಧುವಿತ್ತುದನ್ನು ಒಪ್ಪಿಕೊಂಡರೂ ಅದಕ್ಕೆ ಪ್ರತಿಯಾಗಿ ಪಡೆದುದನ್ನು ಒಪ್ಪುವುದಿಲ್ಲ. ಸಕಳೇಶ್ವರ ದೇವನಲ್ಲಿ ಇವರೆಲ್ಲ ಅಪೇಕ್ಷಿತರಲ್ಲದೆ ನಿರಪೇಕ್ಷಿತರಲ್ಲವೆಂದು ಆತನ ಅಭಿಪ್ರಾಯ.

ಬಸವಣ್ಣ, ಪ್ರಭುದೇವ ಮತ್ತು ಅಜಗಣ್ಣ ಈ ಮೂವರ ವೈಶಿಷ್ಟ್ಯವನ್ನು ಸೂಚಿಸುವ ಸಕಲೇಶಮಾದರಸನ ಒಂದು ವಚನ ಹೀಗಿದೆ:

"ಭಕ್ತನೆಂಬೆನು ಬಸವಣ್ಣನ;
ಶರಣನೆಂಬೆನು ಪ್ರಭುದೇವನ;
ಐಕ್ಯನೆಂಬೆನು ಅಜಗಣ್ಣನ;
ಹಿಂದೆ ಆದವರಿಲ್ಲ ಇನ್ನು ಮುಂದೆ ಆವರಿಲ್ಲ (= ಆಗುವರಿಲ್ಲ ?)
ಸಕಳೇಶ್ವರದೇವಾ ನಿಮ್ಮ ಶರಣರು ಮೂವರೆ"[೧೦]

"ಜಂಗಮ ಮನೆಗೆ ಬಂದಡೆ ಇಲ್ಲೆಂದು ಕಳುಹಿಸಿದರೆ ಅಲ್ಲಿ ಹೋಗದೆ ಬಸವರಾಜನಪ್ರಾಣ?" ಎಂಬ ಮಾತು ಮಾದರಸನ ಮತ್ತೊಂದು ವಚನದಲ್ಲಿ ಬಂದಿದೆ.[೧೧] ಇದು ಬಸವಣ್ಣನ ಜಂಗಮಪ್ರಾಣಿತ್ವವನ್ನು ಹೇಳುತ್ತದೆ. ಇದೇ ವಚನದಲ್ಲಿ, ಅನುಮಿಷನನ್ನು ಕುರಿತ "ಹಲವು ಕಾಲ ಲಿಂಗದ ಮೇಲಣ ನೋಟ ಭಾವ ತಪ್ಪಿ ತನು ಉರುಳಿ ಲಿಂಗವ ಬೆರಸನೆ ಅನುಮಿಷನು?" ಎಂಬ ಹೇಳಿಕೆಯೂ ಇದೆ. "ಸತ್ಯವುಳ್ಳರೆ ಸಾಗರವ ಹೊಕ್ಕ ಲಿಂಗ ಅಗ್ರದಿಂದ ಬಾರನೆ ಸಕಳೇಶ್ವರ ದೇವಾ ನಿಮ್ಮ ಶರಣರಿಗೆ" ಎಂಬ ಆತನ ಮತ್ತೊಂದು ವಚನದಲ್ಲಿ ಬರುವ ಮಾತು[೧೨] ಕೊಂಡಗುಳಿ ಕೇಶಿರಾಜನ ಜೀವನದಲ್ಲಿ ನಡೆದ ಒಂದು ಮಹತ್ವಪೂರ್ಣ ಪವಾಡದತ್ತ ಬೆರಳು ತೋರಿಸುತ್ತದೆ. "....ಲೆಕ್ಕಕೊಂಡ್ಯೆನೂರಿದ್ದಡೇತಕೆ ಬಾತೆ, ಮಾರಯ್ಯ? ಮಿಕ್ಕಕುಶಿವಿಗಳರೆ ವಚನ, ಹೊಲದ ಕುಕ್ಕೆ ತೆನೆಯಾದಂತೆ ಕಾಣಾ ಸಕಳೇಶ್ವರದೇವ"[೧೩] ಈ ವಚನದಲ್ಲಿ ಮಾರಯ್ಯನ ಹೆಸರು ಬಂದಿದೆ. ಬೇರೆ ಬೇರೆ ಕಾಯಕದ ಮಾರಯ್ಯ, ಹೆಸರಿನ ಹಲ-

---

೯. ವಚನಶಾಸ್ತ್ರಸಾರ ಭಾಗ–೨, ಪುಟ ೩೬೮.

೧೦ ಸ. ಮಾ. ವಚನಗಳು; ವಚನ ೭೮.

೧೧. ಸ. ಮಾ. ವಚನಗಳು, ವಚನ ೬೨.

೧೨. ಸಕಳೇಶ ಮಾದರಸನ ವಚನಗಳು, ವ–೮೭.

೧೩: ಅದೇ ವ–೮೮.

ವಾರು ಶರಣರಿದ್ದಾರೆ. ಅವರಲ್ಲಿ ಇದು ಯಾರಿಗೆ ಅನ್ವಯಿಸುತ್ತದೆಯೊ? ತಿಳಿಯು ಬೇಕಾದ ವಿಷಯು.

ಪುರಾತನರಲ್ಲಿ ಪ್ರಸಿದ್ಧನಾದ ನಂಬಿಯಣ್ಣನನ್ನು ಹೆಸರಿಸುವ, ಎರಡು ವಚನಗಳು ಸಕಲೇಶ ಮಾದರಸನಲ್ಲಿ ಸಿಕ್ಕುತ್ತವೆ.[೧೪] ಆದರೆ ಎರಡರಲ್ಲೂ ಬರುವ ವಿಷಯುವೂ ಒಂದೇ, ಭಾವವೂ ಒಂದೇ. ಒಂದು ವಚನ ಹೀಗಿದೆ :—

"ಲಿಂಗದ ಭಾವ ಹಿಂಗದ ನಂಬಿಗೆ ಅಂಗನೆಯುರ ಪೊಲೆ ಲಿಂಗವಾಯಿತ್ತು,
ಕಾಯುಸಂಸಾರ ಸುಖವು.
ಇದು ಕಾರಣ ಸಕಳೇಶ್ವರ ನಿಮ್ಮ ಶರಣರ ಕಾಮಿಗಳೆಂದೆನ್ನಬಹುದೆ ?"[೧೫]

ಹೀಗೆ, ಈಗ ದೊರೆತ ಸಕಲೇಶ ಮಾದರಸರ ವಚನಗಳಲ್ಲಿ, ನಂಬಿಯಣ್ಣ, ಸಿರಿಯಾಳ, ಸಿಂಧುಬಲ್ಲಾಳ, ಇತ್ಯಾದಿ ಪುರಾತನರ ಉಲ್ಲೇಖವೂ, ಅನುಮಿಷ, ಬಸವಣ್ಣ, ಬಿಬ್ಬಿ ಬಾಚಯ್ಯ, ಸಿದ್ಧರಾಮ, ಪ್ರಭುದೇವ ಅಜಗಣ್ಣ, ಮಾರಯ್ಯ, ಕೊಂಡಗುಳಿ ಕೇಶಿರಾಜ ಮತ್ತು ದೇವರ ದಾಸಿಮಯ್ಯ ಮೊದಲಾದ ಶಿವಶರಣರ ಹೆಸರುಗಳೂ ಬಂದಿವೆ. ಕೆಲವು ಶಿವಶರಣರ ಮತ್ತು ಪುರಾತನರ ಜೀವನದಲ್ಲಿ ನಡೆದಿರಬಹುದಾದ ಮಹತ್ವಪೂರ್ಣ ಘಟನೆಗಳನ್ನು ಮಾದರಸನು ತನ್ನ ವಚನಗಳಲ್ಲಿ ವಿವರಿಸಿದ್ದಾನೆ, ಅವೆಲ್ಲ ಆಯಾ ಶರಣರ ಜೀವನ ಚರಿತ್ರೆಯನ್ನು ಬರೆಯುಲು, ಸಹಾಯಕವಾಗಿರುವವಲ್ಲದೆ, ಕೆಲವು ಸಮಸ್ಯೆಗಳ ಕಗ್ಗಂಟನ್ನು ಬಿಡಿಸಲೂ ಸಮರ್ಥವಾಗಿದೆ.

(೪)

ಈಗ ಪ್ರಕಟವಾಗಿರುವ ಸಕಲೇಶ ಮಾದರಸನ ವಚನಗಳಲ್ಲಿ, ಸ್ವತಃ ಅವನ ಜೀವನಕ್ಕೆ ಸಂಬಂಧಪಟ್ಟ ವಿಷಯುಗಳಿವೆಯೆ? ಹುಡುಕಿದಾಗ ಒಂದೆರಡು ಎಳೆಗಳು ಮಾತ್ರ ಸಿಕ್ಕುತ್ತವೆ. "ಈರೇಳ್ನೂರು ವರುಷ ಮಜ್ಜನಕೆರೆದು ವೃಥಾ ಹೋಯಿತ್ತಲ್ಲಾ....... .... ಅಯ್ಯಾ ಎನ್ನಕಯ್ಯ ಕರಿದು ಬಿಳಿದಾಗದು, ಅಯ್ಯಾ ಎನ್ನ ತನುಮನಧನ ನಿಮ್ಮಲ್ಲಿ ಸ್ವಯುವಾಗದಾಗಿ ಒಂದುವ ಘಾಯುಕ್ಕೆ ಮಗುವು ಲಿಂಗದೊಳಗಾಯಿತ್ತು... ಎನಗಿನ್ನು ಸುಳುಹ ಹೇಳಾ ಸಕಳೇಶ್ವರಾ."[೧೬] ಈ ವಚನದಲ್ಲಿ ಸಕಲೇಶ ಮಾದರಸನು ತಾನು ಈರೇಳ್ನೂರು ವರ್ಷ ಬಾಳಿದುದನ್ನು ಸೂಚಿಸಿದಂತೆ ತೋರುತ್ತದೆ. "ಒಂದುವ ಘಾಯುಕ್ಕೆ ಮಗುವು ಲಿಂಗದೊಳಗಾ

೧೪. ಸಕಳೇಶ ಮಾದರಸನ ವಚನಗಳು ವ-೫೭ ಮತ್ತು ೬೪.
೧೫. ,, ವ-೫೭.
೧೬. ಸ. ಮಾ. ವಚನಗಳು. ಸಂ.-ಹಳಕಟ್ಟಿ. ವಚನ-೨೯.

ಯಿತ್ತು ” ಎಂಬ ಮಾತು, ಮಾದರಸನಲಿಂಗ ಪೂಜೆಗಾಗಿ ಬೇಕಾದ ಹೊನ್ನಿಗೆ, ಬಡಭಕ್ತನೊಬ್ಬನು ತನ್ನಮಗಳನ್ನು ಶ್ರೀಮಂತನೊಬ್ಬನಲ್ಲಿ ಒತ್ತೆಯಿಟ್ಟಾಗ, ಆ ಮಗು ಲಿಂಗದಲ್ಲಿ ಕಾಣಿಸಿಕೊಂಡ ಸಂಗತಿಯನ್ನು ನೆನಪಿಗೆ ತರುತ್ತದೆ.[೧೬A] ಮಾದರಸನ ಮತ್ತೊಂದು ವಚನ ಹೀಗಿದೆ :—

“ ಅಡಿವಿಗೆ ಹೋಗಿ ಏಪೇನು ? ಮನದ ರಜತಮಬಿಡದು
ಆಡಕಾವನೆ ತೋರಿ ಗಿಡವ ಕಡಿವನ ಬೈದೆ.
ಆಶ್ರಮವ ಕೆಡಿಸಿತ್ತಲ್ಲಾ !
ಸಕಳೇಶ್ವರದೇವಾ ನಿನ್ನ ಮಾಯೆ ಎತ್ತ ಹೋದರೆ ಬೆನ್ನ ಬಿಡದು.”[೧೭]

ಈ ವಚನದಲ್ಲಿ, ಶಿವಯೋಗಿ ಮಲ್ಲರಸನು, ಶ್ರೀಗಿರಿಯಲ್ಲಿ, ಸಕಲೇಶ ಮಾದರಸನನ್ನು ಪರೀಕ್ಷಿಸಲು, ಆಡುಕಾಯುವವನಾಗಿ ಬಂದ ಸನ್ನಿವೇಶದ ಸೂಚನೆಯಿದೆ. “ ಅಯ್ಯಾ ನಿಮ್ಮಲ್ಲಿ ಆಯುಷ ಬೇಡುವೆನೆ ? ಸಂಸಾರಕ್ಕಾನಂಜುವೆ ”[೧೮] ಎಂಬ ವಚನ, ಮಲ್ಲರಸನ ಪರೀಕ್ಷೆಯನಂತರ, ಆತನು ವರಕೇಳಿಕೊಳ್ಳೆಂದಾಗ, ಸಕಲೇಶ ಮಾದರಸನ ಮುಖದಿಂದ ಬಂದುದೆಂದು ಊಹಿಸಬಹುದು ಈ ವಚನಕ್ಕೆ ಸಂವಾದಿಯಾದ ಪದ್ಯಗಳು ಭೀಮ ಕವಿಯ ‘ ಬಸವ ಪುರಾಣ ’ ಮತ್ತು ಪದ್ಮಣಾಂಕನ ‘ ಪದ್ಮರಾಜ ಪುರಾಣ ’ಗಳೆರಡರಲ್ಲೂ ಇದೇ ಸಂದರ್ಭದಲ್ಲಿ ಬಂದುದನ್ನು ಕಾಣುತ್ತೇವೆ. ಆದರ ವಿವೇಚನೆ ಮುಂದೆ ಬರುತ್ತದೆ.

ಸಕಲೇಶಮಾದರಸನ ಎಲ್ಲ ವಚನಗಳು ಇನ್ನೂ ಉಪಲಬ್ಧವಾಗಿಲ್ಲ. ಅವೆಲ್ಲ ಬೆಳಕಿಗೆ ಬಂದಾಗ ಅವನ ಒಂದು ನಿಸ್ಸಂದಿಗ್ಧ ಜೀವನ ಚರಿತ್ರೆ ತಿಳಿದು ಬರಲು ಸಾಧ್ಯವಿದೆ. ಅಲ್ಲದೆ ಅವನ ವಚನಗಳನ್ನು ಪರಿಷ್ಕರಿಸಿ, ಶುದ್ಧರೂಪವೊಂದನ್ನು ಸಿದ್ಧಪಡಿಸುವ ಆವಶ್ಯಕತೆಯೂ ಇದೆ

(೫)

ಸಕಲೇಶ ಮಾದರಸನನ್ನು ಕುರಿತು, ಬೇರೆ ಬೇರೆ ವೀರಶೈವಪುರಾಣಗಳಲ್ಲಿ, ಕೆಲವೊಂದು ಸಂಗತಿಗಳು ತಿಳಿದುಬರುತ್ತವೆ ಕೆಲವು ಪ್ರಮುಖ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಬಂದಿರುವ ಆತನ ಕಥೆಯನ್ನು ಕೆಳಗೆ ಸಂಗ್ರಹಿಸಿದೆ.

(I) ಬಸವಣ್ಣನವರನ್ನು ಕುರಿತು ಮೊತ್ತಮೊದಲು ಪುರಾಣ ಹೇಳಿದ ಕವಿ ಪಾಲ್ಕುರಿಕೆಯ ಸೋಮನಾಥ.[೧೯] ಭೀಮಕವಿಯ (೧೩೬೯) ಕನ್ನಡ

೧೬A. ಕೋಳೂರು ಕೊಡಗೂಸಿಗೂ ಈ ಮಾತು ಅನ್ವಯಿಸಬಹುದು.
೧೭. ಸ. ಮಾ. ವಚನಗಳು ಸಂಪಾದಕ ಹಳಕಟ್ಟಿ „ ವಚನ-೩೪.
೧೮. ,, „ ವಚನ-೩೩
೧೯. ಬಸವ ಪುರಾಣ ಸಂಪಾದಕ ಡಾ. ಆರ್. ಸಿ. ಹಿರೇಮಠ ಪ್ರಸ್ತಾವನೆ ಪುಟ ೪.

ಬಸವಪುರಾಣ, ಪಾಲ್ಕುರಿಕೆ ಸೋಮನಾಥನ ತೆಲಗು ಬಸವಪುರಾಣದ ಪರಿವರ್ತನೆ. ಭೀಮಕವಿಯ ಈ ಬಸವಪುರಾಣದ, ಮೂರನೆಯ ಕಾಂಡದ, ೧೪ ಮತ್ತು ೧೯ನೆಯ ಸಂಧಿಗಳಲ್ಲಿ ಸಕಳೇಶ ಮಾದರಸನ ಕಥೆ ಸ್ವಲ್ಪ ವಿಸ್ತಾರವಾಗಿಯೇ ಬಂದಿದೆ.

"ಅರಸರಿಗೆ ಅರಸನುಂ," "ನಾದ ವಿದ್ಯಾಪಂಡಿತಂ ವೀಣಾದಿ ಸಕಳ ಕಳಾವಿದಂ" "ಉತ್ತಮ ಶಿವಾಚಾರ ಪ್ರವರ್ತಿ"[೨೦] ಯಾದ ಸಕಳೇಶ ಮಾದರಸನು, "........ಮಹಾಮಹಿಮೆಯಿಂದೊಪ್ಪುತಿಪ್ಪಭಿರಾಮಪುರ"[೨೧] ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಬಸವಪುರಾಣದ ಹಳೆಯ ಮುದ್ರಿತ ಪ್ರತಿಯಲ್ಲಿ "ಮಹಾಮಹಿಮೆಯಿಂದಂಬೆಯೆಂಬಭಿರಾಮಪುರ" ವೆಂದಿದೆ. ಆದುದರಿಂದ ಸಕಲೇಶ ಮಾದರಸನ ರಾಜಧಾನಿ 'ಅಂಬೆ' ಎಂದಿಟ್ಟುಕೊಳ್ಳಬಹುದು. "ಬತ್ತೀಸಾದಿ ರಾಗಂಗಳಿಗನಿತು ದಂಡಿಗೆಗಳಂ ರಚಿಸಿ," ಯಾವ ರಾಗವು ಸಕಳೇಶನಿಗೆ ಪ್ರಿಯವೋ, ಆ ರಾಗದ ವೀಣೆ ತೆಗೆದುಕೊಂಡು ಸ್ತುತಿಸುತ್ತಿದ್ದ.[೨೨] ಹೀಗೆ ಶಿವನಿಗೆ ಸಂಗೀತ ಸೇವೆಯನ್ನು ಸಲ್ಲಿಸುತ್ತ, ಜಂಗಮಾರ್ಚನೆಯಲ್ಲಿಯೂ ನಿರತನಾದ ಮಾದರಸನಿಗೆ, ಸಾಮ್ರಾಜ್ಯ ಭೋಗದಲ್ಲಿ ಸೊಗಸು ಕಾಣದಾಗುತ್ತದೆ. ಇಂಥ ಮನೋಸ್ಥಿತಿಯಲ್ಲಿದ್ದಾಗ, ಅವನು ಕೆಲವು ಜನ ಶಿವಗಣಂಗಳು ಬಂದು. ಮಲ್ಲರಸನೆಂಬ ದೊರೆಯು ರಾಜ್ಯ ಭೋಗವನ್ನು ತ್ಯಜಿಸಿ, ಶ್ರೀಪರ್ವತಕ್ಕೆ ಹೋಗಿ, ಅಲ್ಲಿಯ ಬಿಲ್ವವನದಲ್ಲಿ ನಿಶ್ಚಿಂತದ ಸಮಾಧಿಯಲ್ಲಿರುವನೆಂದೂ, ಅವನ ಶಿವತತ್ವಾನುಭವ ಅನುಪಮವಾದುದೆಂದೂ ನುತಿಸುವುದನ್ನು ಕೇಳುತ್ತಾನೆ. ಮಾದಿರಾಜನ ಮನಸ್ಸಿನಲ್ಲಿ ಆಗ ಆ ಶಿವಯೋಗಿ ಮಲ್ಲರಸನನ್ನು ಕಾಣುವ ಬಯಕೆ ತೀವ್ರವಾಗಿ, ರಾಜ್ಯಕೋಶಗಳನ್ನು ಬಿಟ್ಟು, ಶ್ರೀಶೈಲಕ್ಕೆ ಹೊರಡುತ್ತಾನೆ. ಅಲ್ಲಿಗೆ ಬಂದು, ಅದರ ಮಹಿಮೆಯನ್ನು ಹೊಗಳುತ್ತ,[೨೩] ಮಲ್ಲರಸನನ್ನು ಹುಡುಕುತ್ತ ತಿರುಗಾಡುತ್ತಾನೆ.

ಮಲ್ಲಿಕಾರ್ಜುನ ದೇಶಿಕೋತ್ತಮನು "ಮಾದಿರಾಜನ ಮನದ ಬಲುಹಂ ನೋಡಿದಪೆ" ನೆಂದು, "ಸುರುಚಿರೋನ್ನತ ವಿಪುಳ ತನುವನುಧರಿಸಿ ಧರೆಗಗನಕೆ

---

೨೦. ಇಂತಹ ವಿಶೇಷಣಗಳಿಂದ ಸಕಲೇಶಮಾದರಸನನ್ನು ಹೊಗಳಲು ಕವಿ ನೂರು ಪದ್ಯಗಳನ್ನು ಬರೆದಿದ್ದಾನೆ. ನೋಡು ಬಸವಪುರಾಣ. ಕಾಂಡ–೩, ಸಂಧಿ ೧೪, ಪದ್ಯ ೧–೩.

೨೧. ಬ. ಪು. ಕಾಂಡ ೩, ಸಂಧಿ ೧೪, ಪದ್ಯ ೪. ಸಂ. ಡಾ. ಆರ್. ಸಿ. ಹಿರೇಮಠ.

೨೨. ಮಾದರಸನು ಬಗೆಬಗೆಯ ರಾಗಗಳಿಂದ ಶಿವನನ್ನು ತೃಪ್ತಿಪಡಿಸುತ್ತಿದ್ದ ವರ್ಣನೆ, ಒಂಬತ್ತು ಪದ್ಯಗಳಲ್ಲಿ ಸವಿಸ್ತಾರವಾಗಿ ಬಂದಿದೆ. ನೋಡು ಬ. ಪು. ಕಾಂಡ ೩, ಸಂಧಿ ೧೪, ಪದ್ಯ ೬ ರಿಂದ ೧೯.

೨೩. ಶ್ರೀಶೈಲ ಮತ್ತು ಅದರ ಮಹಿಮೆಯ ವರ್ಣನೆ ಬ. ಪು, ದಲ್ಲಿ ಸುಮಾರು ೬೩ ಪದ್ಯಗಳಲ್ಲಿ ಬಂದಿದೆ. ನೋಡು ಕಾಂಡ ೩, ಸಂಧಿ ೧೪, ಪದ್ಯ ೨೩ ರಿಂದ ೮೫.

ಬೆಳೆದು" ಬಟ್ಟೆಯೊಳಗಡ್ಡಲಾಗಿ ನಿಲ್ಲುತ್ತಾನೆ. ಮಾದಿರಾಜನು ಅದನ್ನು ಕಂಡು, ಇದೇನು ವಿಭೂತಯಾಗಿರೆಯೋ? ಪರಮಯೋಗೀಂದ್ರನೋ? ಎಂದು ಶಂಕಿಸಿ ನೋಡುವೆನಿದನೆನುತ್ತ" ತಲೆಯ ಕಡೆಗೆ ಮೂರು ವರ್ಷ ನಡೆಯುತ್ತಾನೆ. ಆದರೂ ತಾನೆಲ್ಲಿರುವೆನೆಂಬುದೇ ತಿಳಿಯುವುದಿಲ್ಲ ಮೊದಲು ಪಾದಗಳಿಗೆ ನಮಸ್ಕರಿಸದೆ ಬಂದುದು ತಪ್ಪೆಂಬ ವಿಚಾರ ಮನಸ್ಸಿನಲ್ಲಿ ಹೊಳೆದು, ಪಾದದ ಕಡೆಗೆ ಮತ್ತೆ ಎಂಟು ವರ್ಷ ನಡೆಯುತ್ತಾನೆ. ನೆಲೆ ತಿಳಿಯದಿರಲು "ನಿಮ್ಮಯ ರೂಪದೋರದೆ ಕಾಡಲೇಕೆನ್ನ" ಎಂದು ಪ್ರಾರ್ಥಿಸುತ್ತಾನೆ. ಆಗ ಮಲ್ಲರಸನು "ನಿನ್ನೊಳು ಬಲ್ಲತನಮಂ ನೋಡಲಿಂದಿಂತಾದೆ" ಎಂದು ತನ್ನ ನಿಜರೂಪದೋರಿ, ಆಶ್ರಮಕ್ಕೆ ಕರೆದೊಯ್ಯುತ್ತಾನೆ. ಲಿಂಗಪೂಜೆ ಮಾಡಿಸಿ ಪ್ರಸಾದವನ್ನಿತ್ತು, "ಶಿವತತ್ವಾನುಭವ ಸುಖರಸದೊಳಾಡಿಸುತ... ... ... ಒಂದಿನಿಸು ಹೊತ್ತಿರಿಸಿಕೊಂಡಿರ್ದು," ಭೂಮಿಯಲ್ಲಿ ನೀನಿನ್ನು "ಕೆಲದುಕಾಲಂ ಬಳಸಬೇಹುದುದಲ್ಲದಿಲ್ಲಿರಲಳವಡದು ಹೋಗೆಂದು" ನುಡಿಯುತ್ತಾನೆ. ಮಾದರಸನು ಅದಕ್ಕೆ ಒಪ್ಪುವುದಿಲ್ಲ. ಆಗ ಮಲ್ಲರಸನು, ಮಾದರಸನಿಗೆ ಒಂದು ದೊಡ್ಡ ಜಾಲಿಯ ಮರದ ಕೆಳಗೆ ತಪ ಮಾಡಲು ಕುಳ್ಳಿರಿಸಿ. ತಾನೊಬ್ಬ ವಿಕಾರಿ ಕುರುಬನ ವೇಷ ತೊಟ್ಟು, ಕಂಕುಳಲ್ಲಿ ಆಡುಮರಿಯನ್ನು ಎತ್ತಿಕೊಂಡು, ಕೊಡಲಿ, ಗಡಿಗೆ, ಕೋಲುಗಳನ್ನು ಹಿಡಿದುಕೊಂಡು, ಸಿಳ್ಳುಹಾಕುತ್ತ, ನಾಯಿಯನ್ನು ಕರೆಯುತ್ತ, ಕುರಿಗಳನ್ನು ಕೂಗಿ ಕರೆಯುತ್ತ, ಬಂದು ಮಾದರಸನು ತಪಸ್ಸಿಗೆ ಕುಳಿತ ಜಾಲಿಯ ಮರವನ್ನೇ ಕಡಿಯಲು ತೊಡಗುತ್ತಾನೆ.[೨೪] ಅದನ್ನು ಕಂಡ ಮಾದರಸನು ಸಿಟ್ಟಿಗೆದ್ದು "ಪಾಪಿ ಕುರುಬಾ ಎಲವೊ ನಿನ್ನಂಸಾಟಿಸದೆ ಬಿಡೆ" ಎಂದು ಬಯ್ಯುತ್ತಾನೆ. ಆಗ ಕುರುಬ ವೇಷದ ಮಲ್ಲರಸನು, ಮಾದಿರಾಜನಲ್ಲಿದ್ದ ಕುಂದನ್ನು ಎತ್ತಿ ತೋರಿಸುತ್ತ ನಾನಾಬಗೆಯಲ್ಲಿ ಮೂದಲಿಸಿ ಕೊನೆಗೆ ತನ್ನ ನಿಜರೂಪದೋರುತ್ತಾನೆ[೨೫]

ಲಜ್ಜಿತನಾದ ಮಾದರಸನು, "....ಎನಗೆಲ್ಲಿಯದು ಸದ್ಭಕ್ತಿ....ಎಲ್ಲಿಯದು ನಿಶ್ಚಲಿತ ಶಾಂತತೆ. ಎಲ್ಲಿ ಹೊಕ್ಕಡೆ ತೊಲಗುವುದೆ ಶಕಳೇಶ ನೀ ಮಾಡಿದ ಮಹಾಮಾಯೆ"[೨೬] ಎಂದು ನುಡಿಯುತ್ತಾನೆ. ಪದ್ಯದಲ್ಲಿ ಶಕಲೇಸ ಮಾದರಸನ "ಅಡವಿಗೆ ಹೋಗಿ ಖವೆನು........ ಸಕಳೇಶ್ವರ ದೇವಾ ನಿನ್ನ ಮಾಯೆ ಎತ್ತ

---

೨೪. ಕುರುಬನ ವೇಷದ ಮಲ್ಲರಸನ ವರ್ಣನೆ ಬಹಳ ಸುಂದರವಾಗಿದೆ. ಬ. ಪು. ಕಾಂ-೩. ಸಂ.- ೧೯, ಪದ್ಯ- ೧೦-೧೪.

೨೫. ಇಬ್ಬರಲ್ಲಿ ನಡೆದ ವಾದವಿವಾದ ನಾಟಕೀಯವಾಗಿದೆ. ಬ ಪು. ಕಾಂ-೩, ಸಂಧಿ- ೧೯, ಪದ್ಯ- ೧೫-೨೪.

೨೬. ಬ. ಪು. ಕಾಂಡ- ೩, ಸಂಧಿ-೧೯, ಪದ್ಯ- ೨೫.

ಹೋದರೆ ಬೆನ್ನಬಿಡದು."[೨೭] ಎಂಬ ವಚನದ ಛಾಯೆಯನ್ನು ಕಾಣುತ್ತೇವೆ. ಮಾದರಸನು ಮುಂದುವರಿದು

" ಗತಿಮತಿಯುಂ ಚೈತನ್ಯಕರ್ಮ |
ಸ್ಥಿತಿಗಳುಳ್ಳನ್ನಬರ ತನ್ನೊಂ- |
ದತಿಶಯಕ್ರಿಯೆ ಎಹಗಹಗೆ ವರ್ತಿಸುವೆ ಮಾರ್ಗದಲಿ ||
ಕ್ಷಿತಿಯೊಳಾರಿಂಗಾದೊಡೆಯುಂ ಪಶು- |
ಪತಿಯ ಕರುಣವದೆಂತಹುದು ಕಾಂ- |
ಕ್ಷಿತದಿ ಕಸುಗಾಯಂ ಕೊಯಿದವಂಗುಹುದೆ ತನಿವಣ್ಣು ||"
" ಪರಮನಿಶ್ಚಲ ಭಕ್ತಿ ಸಕಳೇ |
ಶ್ವರನ ಕೃಪೆಯಿಂದಲ್ಲದುಹುದೇ |
................................"[೨೮]

ಎಂದು ನುಡಿಯುತ್ತಾನೆ. ಈ ಪದ್ಯಗಳು, ಸಕಲೇಶಮಾದರಸನ,—

" ಗತಿಮತಿ ಚೈತನ್ಯ ಶಬ್ದ ಉಳ್ಳನ್ನಕ್ಕ ಕ್ರಿಯಂತಂತೆನಡೆವುದು,
ಉರುವಣೆ ಬೇಡಕಂಡೆಯಾ ಮನವೆ.
ಎಲೆ ಮನವೆ ಕ್ರಿಯಂತಂತೆ ನಡೆವುದು,
ಹೂ ಮಿಡಿಯ ಹರಿದಡೆ ಹಣ್ಣಾಗಬಲ್ಲುದೆ?
ಲಿಂಗದಲ್ಲಿ ಮನ ಲೀಯವಾಗದನ್ನಕ್ಕ;
ದೇವಸಕಳೇಶ್ವರನೆಂತೊಲಿವ "[೨೯]

ಎಂಬ ವಚನದ ಪದ್ಯರೂಪವಾಗಿರುವುದನ್ನು ಮನಗಾಣಬಹುದು. ಹೀಗೆ ಪಶ್ಚಾತ್ತಾಪ ಬಡುತ್ತಿರುವ ಮಾದರಸನನ್ನು ಮಲ್ಲರಸನು ಸಮಾಧಾನಪಡಿಸುತ್ತ "ಕರ್ಮವಿದೂರ ನೀ, ದುಃಖಾವಹಮನುಡುಗುಡುಗು....ನೀವು ಮರ್ತ್ಯಕೆ ಹೋಗೆವೆಂದೊಡೆ ಈ ವಿಕಲ್ಪವ ನಾವು ಮಾಡಿದೆವು.....ಅಸಮನೇತ್ರನ ಬೆಸನದಿಂದಂ ಬಸವನೆಂಬ ಪ್ರಮಥನೊರ್ವಂ..ವಸುಮತಿಗೆ ಬಂದಿದ್ದಪನು;ನೀನೊಸೆದು ಆತನದು ತತ್ಸ್ವಾನುಭವಗೋಷ್ಠಿ ರಸಸುಧಾಶರಧಿಯೊಳೆಲಗೆ ಓಲಾಡಿಸುತ, ವರ ಶಿವಾಚಾರಾಬ್ಧಿ ವರ್ಧಿಸುತಿರೆ ಚರಿಸವೇಳ್ಕೆಳೆಯೊಳು."[೩೦] ಎಂದು ಅವನ ಮುಂದಿನ ಕರ್ತವ್ಯವನ್ನು ಸೂಚಿಸುತ್ತಾನೆ. ಅಲ್ಲದೆ, "ನಿರುತದಿಂದೈವತ್ತು ವರುಷಂಗಳಿಗೆ

---

೨೭. ಸ. ಮಾ. ವ. ವಚನ- ೩೪.
೨೮. ಬ. ಪು. ಕಾಂಡ- ೩, ಸಂಧಿ- ೧೯, ಪದ್ಯ- ೨೬, ೨೭.
೨೯. ಸ. ಮಾ. ವ. ಸಂ–ಹಳಕಟ್ಟಿ. ವಚನ–೫೬
೩೦. ಬ. ಪು. ಕಾಂ–೩, ಸಂ–೧೯, ಪದ್ಯ ೨೮–೩೦

ನಿನಗಿಂತುಬರವಿದೇಳ್ನೂರ್ ವತ್ಸರಂಗಳು ಚರಿಸಿದವು ಬಳಿಕಿನ್ನು ನಾವೇ ತರಿಸಿ ಕೊಂಬೆವು ನಿನ್ನನಾವೈವತ್ತು ವರುಷಕ್ಕೆ" ಎಂಬ ಆಶ್ವಾಸನೆಯನ್ನು ಕೊಡುತ್ತಾನೆ. ಆ ಮೇಲೆ ನಿನ್ನ ಬಯಕೆ ಏನು ಹೇಳು? ಪೂರೈಸಿ ಕೊಡುತ್ತೇವೆಂದಾಗ ಮಾದರಸನು ಕೈಮುಗಿದು—

"ಶ್ರೀಯನರ್ಥಿಪೆನೆಂದೊಡನ್ಯ—
ಸ್ತ್ರೀಯದಾಯುವದೆಂಬೆನೇ ಬಲು
ವಾಯೆಗಾಗರಮಮರ ಭೋಗವದೆಂಬೊಡ ಧ್ರುವವು
ಆಯತದ ಕೈವಲ್ಯವೆಂಬೆನೆ
ಕಾಯಜಾರಿಯ ಪದವಿಯದು ತಾ-
ನೀಯನುವ ನಾನೊಲ್ಲೆ ನೊಲ್ಲೆನು ನೀವೆ ಒಲಿದಿರಿದ."

ಎಂದು ನುಡಿಯುತ್ತಾನೆ. ಈ ಪದ್ಯವು, ಸಕಲೇಶ ಮಾದರಸನ-

"ಅಯ್ಯಾನಿಮ್ಮಲ್ಲಿ ಆಯುವ ಬೇಡುವೆನೆ? ಸಂಸ್ಕಾರಕ್ಕಂಜುವೆ;
ಅಯ್ಯಾ ನಿಮ್ಮಲ್ಲಿ ಶ್ರೀಯ ಬೇಡುವೆನೆ? ಪರಾಂಗನೆಯ ಪಾಪ;
ಅಯ್ಯಾ ನಿಮ್ಮಲ್ಲಿ ಮುಕ್ತಿಯ ಬೇಡುವೆನೆ? ಅದು ನಿಮ್ಮ ಪದವಿ;
ಸಕಳೇಶ್ವರದೇವಾ ನಾನೇನುವನು ಒಲ್ಲೆ
ನಿಮ್ಮ ಶ್ರೀಪಾದ ಸೇವೆಯೇ ಸಾಕು"[೩೧]

ಎಂಬ ವಚನದ ಪದ್ಯರೂಪವಾಗಿರುವುದನ್ನು ಕಾಣುತ್ತೇವೆ.

ಹೀಗೆ ಭೀಮಕವಿಯು ಸಕಲೇಶ ಮಾದರಸನ ವಚನಗಳನ್ನು, ಅವನ ಚರಿತ್ರ ನಿರೂಪಣೆಯ ಸಂದರ್ಭದಲ್ಲಿ ಉಪಯೋಗಿಸಿಕೊಂಡಿರುವುದು ನಮ್ಮ ಅವಗಾಹನೆಗೆ ಬರುತ್ತದೆ. ಶಿವಯೋಗಿ ಮಲ್ಲರಸನ ಇಚ್ಛೆಯ ಮೇರೆಗೆ, ಸಕಲೇಶಮಾದರಸು ಕಲ್ಯಾಣಕ್ಕೆ ಬರುತ್ತಾನೆ. ಬಸವಣ್ಣನು ಮಾದಿರಾಜನ ರೂಪವನ್ನು ಸಂಗಮೇಶ್ವರನಲ್ಲಿ ಕಂಡು, ಎದ್ದು ಬಂದು ನಮಸ್ಕರಿಸಿ ಕರೆದೊಯ್ಯುತ್ತಾನೆ. ಮಾದರಸನು ಬಸವಣ್ಣನಿಂದ "ಅನಾರತಮುಮರ್ಚಿಸಿಕೊಳುತ್ತುಂ" ಕಲ್ಯಾಣದಲ್ಲಿ ಸುಖವಾಗಿರುತ್ತಾನೆ. ಮುಂದೆ ನಾಲ್ವತ್ತಾರನೆಯ ಸಂಧಿಯಲ್ಲಿ, ಶಿವಯೋಗ ಮುದ್ರೆಯಲ್ಲಿ ಸಮಾಧಿಯನ್ನೈದಿದ ತನ್ನ ಶಿಷ್ಯ ಚಿಕ್ಕಮಾದಣ್ಣನಿಗೆ, ಮಗು ಬಾಲಲಿಂಗನ ಪ್ರಾರ್ಥನೆಯ ಮೇರೆಗೆ ಮಾದರಸನು ಜೀವದಾನ ಮಾಡಿದ ಪ್ರಸಂಗ ಬರುತ್ತದೆ. ಶೈವ ದೀಕ್ಷಾಚಾರ್ಯರಲ್ಲಿ ಮಾದರಸನ ಹೆಸರಿದೆ (ಸಂ. ೫೭. ಪ–೧) ಕೂಡಲಸಂಗಮದಲ್ಲಿ ಬಸವನ ಲಿಂಗೈಕ್ಯವಾದ ಮೇಲೆ. ಲಿಂಗಭಕ್ತರಿಗೆ,

---

೩೧. ಸ. ಮಾ. ವಚನಗಳು. ವಚನ-೩೩

ಜಂಗಮ ಪ್ರತತಿಗೆ ಕೈಮುಗಿದು ಶ್ರೀಗಿರಿಗೆ ಗಮನಿಸಿದ ಉಲ್ಲೇಖವಿದೆ, (ಸಂ-೬೧, ಪ-೭೩).

(II) ಪದ್ಮಣಾಂಕ(೧೩೮೫)ನ ಪದ್ಮರಾಜಪುರಾಣದ, ಎರಡನೆಯ ಸಂಧಿಯಲ್ಲಿ ಸಕಲೇಶಮಾದರಸನ ಕಥೆ ೩೧ ಪದ್ಯಗಳಲ್ಲಿ ನಿರೂಪಣೆಗೊಂಡಿದೆ. ಪದ್ಮಣಾಂಕನು ತನ್ನ ವಂಶಾವಳಿಯನ್ನು ಶಿವಯೋಗಿ ಮಲ್ಲರಸನಿಂದ ಆರಂಭಿಸಿದ್ದಾನೆ. ಮಲ್ಲರಸನು ಕಲ್ಲುಕುರಿಕೆಯದೊರೆ. ಮುಂದೆ ಅವನು ರಾಜ್ಯಭೋಗವನೊಲ್ಲದೆ, ಮಾಯಾರಚನೆಯನ್ನು ವರ್ಜಿಸಿ, ವೈರಾಗ್ಯದಿಂದ ಪರಮಶಿವ-ಯೋಗಿಯಾಗಿ, ಜನರೆಲ್ಲರನ್ನು ಲಿಂಗೈಕ್ಯರನ್ನಾಗಿ ಮಾಡಿ ಶ್ರೀಶೈಲಕ್ಕೆ ಹೋಗುತ್ತಾನೆ. ಅಲ್ಲಿ ಮಲ್ಲಿನಾಥನ ಅನುಗ್ರಹಕ್ಕೆ ಪಾತ್ರನಾಗಿ. ಯತಕುಲಕ್ಕಾ-ರಾಧ್ಯನಾಗಿ, ಬಿಲ್ವವನದಲ್ಲಿ, ಶಿವಯೋಗಸುಖಸುಧಾಂಬೋಧಿಯಲ್ಲಿ ಓಲಾಡುತ್ತಿರುತ್ತಾನೆ.''೩೨

ಆ ಮಲ್ಲರಸನ ಮಗನೇ ಸಕಲೇಶ ಮಾದರಸ. ಅವನ ಜನನಕ್ಕೆ ಕವಿ ಪದ್ಮಣಾಂಕನು ಒಂದು ಹಿನ್ನೆಲೆಯನ್ನು ಕೊಟ್ಟಿದ್ದಾನೆ, ಅದು ಹೀಗಿದೆ :—

ಸಹನೇಶ ಗಗನೇಶರು ಕೈಲಾಸದ ರುದ್ರಗಣಂಗಳು, ಒಂದು ಸಲ ಗಗನೇ-ಶನು, "ಚಿದ್ವಿಲಾಸಾಮೋದದಿಂ ಕ್ರಿಯಾ ನಿಷ್ಠರಂ ನೋಡಿ" ಕಿಂಚಿತ್ ಪ್ರಹಸಿತಾಸ್ಯನಾಗುತ್ತಾನೆ ಆದನ್ನು ಕಂಡ ಸಹನೇಶನು, ಮಿತ್ರನ ಮೇಲೆ ಸಿಟ್ಟಾಗಿ," ಎಲೆ ಚಿತ್ ಕ್ರಿಯಾದ್ವಯದೊಳ್ ಅಹಹ ನೀಂ ಚಿದ್ವಿಶ್ರಮಣನಾಗಿ ಸತ್‌ಕ್ರಿಯಾ ನಿರಸನಂಗೆಯ್ದ.. ವರ ಚಿದನ್ವಿತನಾದೊಡಂ ನಿಷ್ಕ್ರಿಯೆಯುಂ ಈಶ ಶರಣರೊಪ್ಪರ್," ಆದುದರಿಂದ ನೀನು ಭೂಲೋಕದಲ್ಲಿ ಹುಟ್ಟಿ, "ಹುಟ್ಟಿದಲ್ಲಿ ಎರಡೇಳ್ನೂರು ಬರಿಸಮುಂ ಮಹಿತ ಕ್ರಿಯಾಜ್ಞಾನವಿಹಿತ ವೃತ್ತಿಯೊಳೆ ನಿರ್ವಹಿಸಿ ತದ್ಯುಗಮಂ ಪ್ರತಿಷ್ಠಿಸು. ಆ ಸುಪ್ರತಿಷ್ಠೆಯೆ ಎಮ್ಮ ಶರಣಮಾರ್ಗಂ....ನಿನ-ಗಿದು ಜಗದ್ಧಿತ ಕಾರ್ಯಂ" ಎಂದು ಆಜ್ಞಾಪಿಸುತ್ತಾನೆ೩೩ ಗಗನೇಶನು, ಆದನ್ನು ಒಪ್ಪಿ, ಕಲ್ಲುಕುರಿಕೆಯ ಮಲ್ಲರಸನಿಗೆ ಮಗನಾಗಿ ಮಾದರಸನೆಂಬ ಹೆಸರಿನಿಂದ ಹುಟ್ಟುತ್ತಾನೆ.

ಮಲ್ಲರಸನು ವೈರಾಗ್ಯ ಹೊಂದಿ, ಶ್ರೀಶೈಲಕ್ಕೆ ಹೊರಟುಹೋಗುತ್ತಾನೆ. ಮಾದರಸನು ದೊಡ್ಡವನಾದ ಮೇಲೆ ತಾನೇ ದೊರೆಯಾಗಿ. ಶಿವಭಕ್ತಿಯನ್ನು ಪ್ರತಿಷ್ಠಿಸುತ್ತ ಅಧಿಕ ಪ್ರತಾಪದಿಂದ ಕೆಲವು ದಿವಸ ರಾಜ್ಯಭಾರಗೈಯ್ಯುತ್ತಾನೆ. ಒಂದುದಿವಸ ತನ್ನ ತಂದೆಯು, ಸಕಲ ಸುಖೋಪಭೋಗಗಳಲ್ಲಿ ಅನಾಸಕ್ತನಾಗಿ ಶ್ರೀಶೈಲಕ್ಕೆ ಹೋದ ಸಮಾಚಾರವನ್ನು ಕೇಳಿ, ತಾನೂ ಸಾಮ್ರಾಜ್ಯಭೋಗವನ್ನು

೩೨. ಪದ್ಮರಾಜಪುರಾಣ. ಸಂ. ಆರ್. ಸಿ. ಹಿರೇಮಠ. ಸಂಧಿ-೨, ಪದ್ಯ ೪-೮.

೩೩. ಆದೇ. ,, ಸಂಧಿ-೨, ಪದ್ಯ ೯-೧೧.

ಪರಿಹರಿಸಿ ಅಲ್ಲಿಗೆ ಹೋಗಲು ನಿರ್ಧರಿಸುತ್ತಾನೆ. ಆಗ ಅವನ ಹೆಂಡತಿ, ಮಗ ಮಾಯಿದೇವ, ಸೊಸೆ ಮಂಗಳಾದೇವಿ, ಮತ್ತು ಕೆಲವು ಜನ ಭಕ್ತರು ತಾವೂ ಜೊತೆಯಲ್ಲಿ ಬರುವುದಾಗಿ ಹಟ ಹಿಡಿಯುತ್ತಾರೆ. ಮಾದರಸನು "ಮಾರಾರಿ ಅಂ ಬಿಟ್ಟೊಡಂ ನಿನ್ನ ಮಾಯೆ ಬಿಡದು" ಎನ್ನುತ್ತ, ಅವರೆಲ್ಲರೊಡಗೂಡಿ ಶ್ರೀಶೈಲಕ್ಕೆ ಹೊರಟು, ಹಾದಿಯಲ್ಲಿ 'ಅಂಬೆ' ಎಂಬ ಪಟ್ಟಣಕ್ಕೆ ಬರುತ್ತಾನೆ. ಅಲ್ಲಿಯ ಭಕ್ತರು, ಸಕಲೇಶ ಮಾದರಸನಿಗೆ, ಶ್ರೀಶೈಲಕ್ಕೆ ಹೋಗದೆ ತಮ್ಮಲ್ಲೇ ಉಳಿಯು ವಂತೆ ಒತ್ತಾಯಪೂರ್ವಕ ಪ್ರಾರ್ಥಿಸುತ್ತಾರೆ. ಆಗ ಮಾದರಸನು ಎಲ್ಲ ಸಕಲೇಶ್ವರನ ಇಚ್ಛೆಯೆಂದು ಅಂಬೆಯಲ್ಲಿಯೇ ಉಳಿಯುತ್ತಾನೆ.[೩೪]

ಮಾದರಸನ ಲಿಂಗಪೂಜೆಯು, ತನ್ನ ಮನೆಯಲ್ಲಿ ನಡೆಯಬೇಕೆಂದು ಬಯಸುವ ಭಕ್ತನು ಹನ್ನೆರಡು ಹೊನ್ನುಗಳನ್ನು ಒದಗಿಸಬೇಕಾಗುತ್ತಿತ್ತು. ಮೂವತ್ತೆರಡು ಮೀಡೆಗಳಲ್ಲಿ "ಪನ್ನಗಧರನಿಗೆ ಇಷ್ಟವಾದುದು ಉಳಿದೊಡೆ" ಅದನ್ನೇ ತೆಗೆದುಕೊಂಡು, ಶಿವನು ತಲೆದೂಗುವಂತೆ ಮಾದರಸನು ಪೂಜಿಸು ತ್ತಿದ್ದನು. ದಿನಗಳು ಕಳೆದಂತೆ ಶಿಷ್ಯರ ಸಂಖ್ಯೆ ಬೆಳೆಯುತ್ತ ಹೋಗುತ್ತದೆ. ಒಂದು ದಿನ ಒಂದು ವಿಚಿತ್ರ ಘಟನೆ ನಡೆಯುತ್ತದೆ. ಆ ಊರಿನ ಬಡಭಕ್ತ ನೊಬ್ಬನಿಗೆ ತನ್ನ ಗುರು ಮಾದರಸ ದೇಶಿಕನ ಆರಾಧನೆ ಮಾಡಿಸುವ ಬಯಕೆ ಪ್ರಬಲವಾಗುತ್ತದೆ. ಆದರೆ ಅದಕ್ಕೆ ಬೇಕಾದ ಹನ್ನೆರಡು ಹೊನ್ನು ಅವನಲ್ಲಿ ರುವುದಿಲ್ಲ. ಆ ಹೊನ್ನುಗಳನ್ನು ದೊರಕಿಸಲು ಅವನು ತನ್ನ ಮುದ್ದು ಮಗ ಳನ್ನೇ ಶ್ರೀಮಂತನೊಬ್ಬನಲ್ಲಿ ಒತ್ತೆಯಿಡುತ್ತಾನೆ. ಪೂಜಾನಿರತರಾದ ಸಕಲೇಶ ಮಾದರಸರ ಲಿಂಗದಲ್ಲಿ; ಒತ್ತೆಬಿದ್ದ ಆ ಹೆಣ್ಣುಮಗಳು, ಶ್ರೀಮಂತನ ಮನೆ ಯಲ್ಲಿ ಪಡುತ್ತಿರುವ ಹಿಂಸೆಯ ದೃಶ್ಯ ಕಾಣಿಸಿಕೊಳ್ಳುತ್ತದೆ. ಪೂಜೆಯ ಹಣ ಕ್ಕಾಗಿ ತನ್ನ ಮಗಳನ್ನು ಒತ್ತೆಯಿಟ್ಟ ಸಮಾಚಾರ ಆಮೇಲೆ ಬಡಭಕ್ತನಿಂದ ತಿಳಿದು "ಭಕ್ತಂಗೀ ಈ ವಿಪತ್ತು ಎಮ್ಮ ಕತದಿಂ ಆಯ್ತು" ಎಂದು ಚಿಂತಿಸಿ, ಆ ಭಕ್ತನ ಮಗಳನ್ನು ಒತ್ತೆ ಬಿಡಿಸಿ, ಉದ್ಧರಿಸುತ್ತಾನೆ.[೩೫]

ಆಮೇಲೆ ತನ್ನ ಮಗ ಮಾಯಿದೇವನನ್ನು ಕರೆದು, "ನೀನಿರು, ನಿನ್ನ ಗರ್ಭದೊಳ್ ಜನಿಸುವಂ ತರಣೀಂದುಧರಸಮಾನಂ ಕಾರಣಿಕನೊರ್ವಂ" ಎಂದು ಭವಿಷ್ಯ ನುಡಿದು, ಹೆಂಡತಿ, ಮಗನಾದಮಾಯಿದೇವ, ಮತ್ತು ಸೊಸೆಯನ್ನು ಅಲ್ಲಿಯೇ ಇರಿಸಿ, ತಾನು ಪರ್ವತಕ್ಕೆ ಹೊರಡುತ್ತಾನೆ. ಈ ಮಾಯಿದೇವನ ಮಗನೇ ಕೆರೆಯ ಪದ್ಮರಸ.

---

೩೪. ಪದ್ಮರಾಜ ಪುರಾಣ, ಸಂಧಿ, ೨ ಪದ್ಯ ೧೨—೧೪

೩೫. ಪದ್ಮರಾಜ ಪುರಾಣ, ಸಂಧಿ, ೨ ಪದ್ಯ ೧೫—೧೯

ತನ್ನನ್ನು ಕಾಣಲು ಬಂದ ಮಾದರಸನನ್ನು ಪರೀಕ್ಷಿಸಲು, ಮಲ್ಲಿಕಾರ್ಜುನ ಯತೀಂದ್ರರು, ಅವನು ಹೋಗುವ ಹಾದಿಗೆ ಅಡ್ಡಲಾಗಿ ಭಸ್ಮಾದ್ರಿಯಂತೆ ಮಲಗಿ ಬಿಡುತ್ತಾನೆ. ಮುಡಿಯದೆಸೆಗೆ ಮೂರು ವರ್ಷ ತಿರುಗಾಡಿ ಏನನ್ನೂ ಕಾಣದೆ, ಅಡಿಯತ್ತ ಎಂಟು ವರ್ಷ ನಡೆದರೂ ಪಾದ ದರ್ಶನವೇ ಆಗುವುದಿಲ್ಲ. ಕೊನೆಗೆ ಮಾದರಸನು ಭಕ್ತಿಯಿಂದ ಪ್ರಾರ್ಥಿಸಲು ಮಲ್ಲರಸನು ಆ ಭೀಕರಾಕೃತಯನುಳಿದು ಮುನ್ನಿನ ಚೆನ್ನರೂಹ ದೋರಿ ತನ್ನ ಆಶ್ರಮಕ್ಕೆ ಕರೆದೊಯ್ಯುತ್ತಾನೆ. ಕೆಲಸಮಯ ಶಿವಾನುಭವದಲ್ಲಿದ್ದು ತದನಂತರ, "ಮಗನೆ ನಿನಗೆ ಇನ್ನುಂ ಧರಣಿಯೊಳೈವತ್ತು ಬರಿಸದ ವರ್ತನಂ ನೆರೆವುದು, ಅದನು ಎಮ್ಮ ಬಸವಾದಿಗಳ್ ಭಕ್ತಿಯುಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರ್ ಅವರೊಡನೆ ಕಳೆ" ಎಂದು ನುಡಿಯುತ್ತಾನೆ. ಮಾದರಸನು ಅದಕ್ಕೆ ಒಪ್ಪದಿರಲು, ಅವನನ್ನು ಕರೆತಂದು ಒಂದು ಜಾಲಿಯ ಗಿಡದ ಕೆಳಗೆ ತಪಸ್ಸಿಗೆ ಕುಳಿತುಕೊಳ್ಳುವಂತೆ ಹೇಳುತ್ತಾನೆ. ಮರುದಿವಸ ಮಲ್ಲರಸನು ಗೋಪಾಕೃತಿಯಲ್ಲಿ ಬಂದು ಮಾದರಸನು ಸಿಟ್ಟಿಗೇಳುವಂತೆ ವರ್ತಿಸುತ್ತಾನೆ. ತನ್ನನ್ನು ಸಿಟ್ಟಿಗೆಬ್ಬಿಸಿದವನು ಮಲ್ಲರಸನೆಂದು, ಮಾದರಸನಿಗೆ ತಿಳಿದಾಗ ಅವನಿಗೆ ನಾಚಿಕೆಯೂ, ಪಶ್ಚಾತ್ತಾಪವೂ ಆಗುತ್ತದೆ. ಮಲ್ಲರಸನು ಶಾಂತಿ ದಾಂತಿಯ ಅನುವನ್ನು ಅವನಿಗೆ ಬೋಧಿಸಿ "ಇಂದಿಂಗೆ ಸಾವಿರದ ನಾನೂರು ಬರಿಸಕ್ಕೆ ಕುಂದಾದುದೈವತ್ತು ಬರಿಸಂ ಅದು ನೆರೆಯೆ ನಿನ್ನಂ ದಿವ್ಯಸಹಜ ಸಮ್ಯಕ್ ಸಂವಿತ್ ಅಮಲ ಸಂಯೋಗ ಸೌಖ್ಯದೊಳ್ ಬಂದಿಪೆಂ ಕಂದ; ಬೇಡಿಷ್ಟವೇನ್?" ಎಂದು ಕೇಳಲು ಸಕಲೇಶ ಮಾದರಸನು "ಪರ ಸ್ತ್ರೀ ಲಕ್ಷ್ಮಿ ಹೆಂದದಾಯುಮೆ ಮಾಯೆಗೀಡು, ಸುರಪದವು ಅಚರಂ, ಕೈಲಾಸಂ ಇಂದುಧರ ಪದವಿ. ಅಂತರಿಂದ ಅವಂ ಎರೆಯೆಂ, ಎನ್ನ ಮನವಂ ಹರಣದ ಎರೆಯನೆ ನೀನೇ ಬಲ್ಲೆ." ಎಂದು ಗೀತವಾಡುತ್ತ ನಮಸ್ಕರಿಸುತ್ತಾನೆ. ಮಲ್ಲರಸನು ಅವನನ್ನು ಕಲ್ಯಾಣದ ಬಸವನ ಮುಂದೆ ಇಳುಹುತ್ತಾನೆ. ತನ್ನ ಕಂದ ಸಂಗಮನಾಥನಲ್ಲಿ ಬಸವಣ್ಣನು ಮಾದರಸನನ್ನು ಕಂಡು, ದಂಡ ಪ್ರಣಾಮಗೈದು ಸತ್ಕರಿಸಿ ಕರೆತಂದು ಅವರೊಡನೆ ಶಿವಾನುಭವ ಗೋಷ್ಠಿಯಲ್ಲಿರುತ್ತಾನೆ[೩೭]. ಮೇಲೆ ಉದ್ಧರಿಸಿದ, ಮಾದರಸನು ಹಾಡಿದ ಗೀತ, ಹಳಕಟ್ಟಿಯವರು ಸಂಪಾದಿಸಿದ ಗ್ರಂಥದಲ್ಲಿ ಬರುವ ಸಕಲೇಶಮಾದರಸನ "ಅಯ್ಯಾ ನಿಮ್ಮಲ್ಲಿ ಆಯುವ ಬೇಡುವೆನೆ?" ಎಂಬ ೪೩ ನೆಯ ವಚನಕ್ಕೆ ಸಂವಾದಿಯಾಗಿರುವದನ್ನು ಗಮನಿಸಬೇಕು.

---

೩೬. ಪ. ಪು. ಸಂಧಿ-೨, ಪದ್ಯ-೨೦.

೩೭. ಪ. ಪು. ಸಂಧಿ-೨. ಪದ್ಯ ೨೧-೨೫.

ಕಲ್ಯಾಣದಲ್ಲಿದ್ದಾಗ ಸಕಲೇಶ ಮಾದರಸನು ಚಿಕ್ಕಮಾದಣ್ಣನೆಂಬ ತನ್ನ ಶಿಷ್ಯನಿಗೆ ಅವನ ಮುಗ್ಧ ಮಗನ ಬೇಡಿಕೆಯ ಮೇರೆಗೆ ಅಸುವೀಯುತ್ತಾನೆ. ಆ ಮೇಲೆ "ಬಸವಾದಿ ಅಸಂಖ್ಯಾತರು ವಿನುತ ಮುಕ್ತಿಗೆ ಸಲಿಸಿ ಐವತ್ತು ಬರಿಸಂ ಅಂದಿನ ದಿನಕ್ಕಾಗೆ," ಕಲ್ಯಾಣವನ್ನು ಬಿಟ್ಟು ಪರ್ವತಕ್ಕೆ ಹೊರಡುತ್ತಾನೆ. ಹಾದಿಯಲ್ಲಿ ಗೊಪೆಯ ಶಿವದೇವನೆಂಬ ವೀರವ್ರತಯ ಪಟ್ಟಣ ಬರುತ್ತದೆ. ಸೀಮಾಲಂಘನ ವ್ರತದ ಆ ಶಿವದೇವನು ತನ್ನ ಮನೆಯಲ್ಲಿಯ ಗೋಪೆಯೊಂದನ್ನು ತೋಡಿಕೊಂಡು, "ತನ್ನ ಅನುವಿಂಗೆ ಕೊರತೆಬರೆ ಅಸುಗಳೆವೆಂ" ಎಂಬ ನಿಷ್ಠೆಯಿಂದ ಸಕಲೇಶ ಮಾದರಸರ ಪಾದಪದ್ಮಗಳನ್ನೇ ನೆನೆಯುತ್ತಿರುತ್ತಾನೆ. ಮಾದರಸರು ಬಂದ ಕೂಡಲೆ ಹರ್ಷಚಿತ್ತನಾದ ಅವನು ಅವರಿಗೆ ನಮುಸ್ಕರಿಸಿ "ಬಸವಾದ್ಯರ ಐಕ್ಯಮಂಕೇಳ್ದು ಎನಗೆ ಗುರುದರ್ಶನಂ ಪ್ರಾಣದಂತೆ ಒದವಿತ್ತು. ಇದೇ ಕಾಲಂ" ಎನ್ನುತ್ತ ಪ್ರಾಣಲಿಂಗದಲ್ಲಿ ಅಡಗಿಬಿಡುತ್ತಾನೆ.[೩೮]

ಶಿವದೇವನನ್ನು ಮುಕ್ತಿಗೆ ಸಲಿಸಿ, ಸಕಲೇಶ ಮಾದರಸನು, "ಗುರೋರಾಜ್ಞಾ ನ ಲಂಘಯೇತ್" ಎಂಬ ಶ್ರುತಿವಾಕ್ಯದಲ್ಲಿ ನಂಬಿಕೆಯಿಟ್ಟು, ಗುರುವಾಜ್ಞೆಯನ್ನು ಮೀರದ 'ಮಹಲಿಂಗರಾಮನವೀರ'ನೆಂಬ ಶಿಷ್ಯನ ಊರನ್ನು ಸೇರಿ ಅವನ ಮನೆಗೆ ಬರುತ್ತಾನೆ. ಗುರುವನ್ನು ಕಂಡಕೂಡಲೆ ಅವನು ಭಕ್ತಿಪೂರ್ವಕ ನಮುಸ್ಕರಿಸಿ "ಗುರುವೆ ಎನಗೆ ಮರ್ತ್ಯದಲ್ಲಿ ಇನ್ನಿರ್ಪುದಾಗದು" ಎಂದು ಬೇಡಿಕೊಳ್ಳುತ್ತಾನೆ. ಮಾದರಸನು ಶಿವಮಂತ್ರವನ್ನು ನೆನೆಯುತ್ತ ಶಿಷ್ಯನ ತಲೆಯ ಮೇಲೆ ಕೈಯಿಡಲು ಅವನು ಲಿಂಗೈಕ್ಯನಾಗುತ್ತಾನೆ.[೩೯]

ಅಲ್ಲಿಂದ ಮಾದರಸರು ಶ್ರೀಶೈಲಕ್ಕೆ ಹೋಗಿ, ಶಿವಯೋಗಿ ಮಲ್ಲರಸನನ್ನು ಕಂಡು, "ಅಮೃತವ ಮೃತದೊಳ್ ಅಂಬುವ್ರೋಳ್ ಬೆರಸಿದಂತೆ" ಶಿವಲಿಂಗದಲ್ಲಿ ಅಮಳೈಕ್ಯನಾಗುತ್ತಾನೆ.[೪೦]

ಸಕಳೇಶ ಮಾದರಸನ ಚರಿತ್ರೆಯನ್ನು ಮೊತ್ತಮೊದಲು ಸ್ವಲ್ಪ ವಿಸ್ತಾರವಾಗಿ ಬರೆದವನು ಭೀಮಕವಿ. ಅವನಿಂದ ಇಪ್ಪತ್ತು ಅಥವಾ ಮೂವತ್ತು ವರ್ಷಗಳ ಅನಂತರ ಬರೆದವನು ಪದ್ಮಣಾಂಕ. ಆದರೂ ಕಥೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಭೀಮಕವಿಯ ಪ್ರಕಾರ ಸಕಲೇಶ ಮಾದರಸ ಅಂಬೆಪುರದ ಅಧಿಪತಿಯಾಗಿದ್ದರೆ, ಪದ್ಮಣಾಂಕನ ಪ್ರಕಾರ ಕಲ್ಲುಕುರಿಕೆಯ ಅಧಿಪತಿ. ಆದರೆ ಶ್ರೀಶೈಲಕ್ಕೆ ಹೊರಟಾಗ ಅಂಬೆಯ ಭಕ್ತರ ಇಚ್ಛೆಯ ಮೇರೆಗೆ ಮಾದರಸನು, ಆ ಊರಲ್ಲಿ ನಿಂತಂತೆ ಅವನು ಹೇಳಿದ್ದಾನೆ. ಭೀಮಕವಿಯು ಸಕಲೇಶ ಮಾದರಸನ ತಂದೆಯ ಹೆಸರನ್ನಾಗಲಿ, ಅವನ ಮಗ ಮತ್ತು ಸೊಸೆಯ ಹೆಸರನ್ನಾಗಲಿ

೩೮. ಪದ್ಮರಾಜಪುರಾಣ ಸಂ-೨. ಪದ್ಯ ೨೬-೨೮.
೩೯. ,, ,, ,, ೨೯-೩೦.
೪೦. ,, ,, ,, ೩೧.

ಹೇಳಿಲ್ಲ. ಪದ್ಮಣಾಂಕನು; ಸಕಲೇಶ ಮಾದರಸನು ಮಲ್ಲರಸನ ಮಗನೆಂದೂ, ಅವನ ಹೆಂಡತಿಯ ಹೆಸರು ಮಂಗಳದೇವಿಯೆಂದೂ, ಮಗನ ಹೆಸರು ಮಾಯಿದೇವನೆಂದೂ ತಿಳಿಸಿದ್ದಾನೆ. ಭೀಮಕವಿಯ ಹೇಳಿಕೆಯಂತೆ ಮಾದರಸನ ಒಟ್ಟು ವಯಸ್ಸು ಏಳುನೂರು ವರ್ಷವಾದರೆ, ಪದ್ಮಣಾಂಕನ ಪ್ರಕಾರ ಅದು ಹದಿನಾಲ್ಕುನೂರು ವರ್ಷ.

ಭೀಮಕವಿಯ ಬಸವಪುರಾಣದಲ್ಲಿ ಬರೆದ ಕೆಲವು ಹೆಚ್ಚಿನ ಸಂಗತಿಗಳು ಪದ್ಮಣಾಂಕನ ಪದ್ಮರಾಜಪುರಾಣದಲ್ಲಿ ಸಕಲೇಶ ಮಾದರಸನ ಬಗೆಗೆ ಬಂದಿವೆ. ಅವು ಇಂತಿವೆ :

i) ಸತ್ಕ್ರಿಯಾನಿರಸನಂಗೈದ ತಪ್ಪಿಗಾಗಿ, ಕೈಲಾಸದ ರುದ್ರಗಣದಲ್ಲಿ ಒಬ್ಬನಾದ ಗಗನೇಶನು, ಸಹನೇಶನ ಸೂಚನೆಯ ಮೇರೆಗೆ ಭೂಲೋಕದಲ್ಲಿ ಸಕಲೇಶಮಾದರಸನಾಗಿ ಹುಟ್ಟುತ್ತಾನೆ.

ii) ಸಕಲೇಶಮಾದರಸನು ಶ್ರೀಶೈಲಕ್ಕೆ ಹೊರಟಾಗ ಅವನ ಜೊತೆ, ಹೆಂಡತಿ, ಮಗ ಮತ್ತು ಸೊಸೆ ತಾವೂ ಹೊರಡುತ್ತಾರೆ.

iii) ಅಂಬೆಯಲ್ಲಿ, ತನ್ನ ಪೂಜೆಗೆ ಬೇಕಾದ ಹನ್ನೆರಡು ಹೊನ್ನಿಗಾಗಿ, ಒತ್ತೆಬಿದ್ದ, ಬಡ ಭಕ್ತನ ಮಗಳೊಬ್ಬಳನ್ನು ಮಾದರಸನು ಬಿಡಿಸಿ ಉದ್ಧರಿಸುತ್ತಾನೆ.

iv) ತನ್ನ ಮಗ, ಮಾಯಿದೇವನಿಗೆ, ಕಾರಣಿಕನಾಗಬಲ್ಲ ಮಗನನ್ನು ಪಡೆಯುವನೆಂಬ ಭವಿಷ್ಯ ನುಡಿದು, ಅಂಬೆಯಲ್ಲಿರುವಂತೆ ತಿಳಿಸಿ ಮಾದರಸನು ಶ್ರೀಶೈಲಕ್ಕೆ ಹೋಗುತ್ತಾನೆ. ಆ ಮಾಯಿ ದೇವನ ಮಗನೇ ಕೆರೆಯ ಪದ್ಮರಸ.

v) ಬಸವಾದಿಗಳ ಲಿಂಗೈಕ್ಯಾನಂತರ, ಶ್ರೀಶೈಲಕ್ಕೆ ಹೊರಟ ಮಾದರಸನು, ಗೊಪೆಯ ಶಿವದೇವನಪುರಕ್ಕೆ ಹೋಗಿ ಅವನನ್ನು ಮುಕ್ತಿಗೆ ಸಲಿಸುತ್ತಾನೆ.

vi) ಮುಂದೆ ಮಹಲಿಂಗರಾಮನ ವೀರನೆಂಬ ಶಿಷ್ಯನ ಊರಿಗೆ ಹೋಗಿ ಅವನನ್ನು ಶಿವೈಕ್ಯನನ್ನಾಗಿಸುತ್ತಾನೆ.

vii) ಶ್ರೀಶೈಲಕ್ಕೆ ಹೋಗಿ ಶಿವಯೋಗಿ ಮಲ್ಲರಸನನ್ನು ಕಂಡು, ಅಮೃತ ನೀರಲ್ಲಿ ನೀರು ಬೆರೆದಂತೆ ಲಿಂಗದಲ್ಲಿ ಸಮರಸನಾಗುತ್ತಾನೆ.

ಭೀಮಕವಿಯ, ಬಸವ ಪುರಾಣದಲ್ಲಿ ಈ ಕೊನೆಯ ಸನ್ನಿವೇಶದ ವಿವರಣೆ ಇಲ್ಲವಾದರೂ ಸಕಲೇಶ ಮಾದರಸನು, ಕೂಡಲಸಂಗಮದಲ್ಲಿ ಬಸವನ ಐಕ್ಯವಾದ

ಕೂಡಲೆ, ಸಕಲ ಲಿಂಗಭಕ್ತರಿಗೆ ಜಂಗಮ ಪ್ರತತಿಗ ಕೈಮುಗಿದು "ಶ್ರೀಗಿರಿಗೆ ಗಮನಿಸಿದ" ಎಂದು ಹೇಳಿದೆ. (ಸಂಧಿ-೬೧, ಪದ್ಯ-೭೩) ಆದುದರಿಂದ ಮಾದರಸನು ಕೊನೆಗೆ ಶ್ರೀಶೈಲಕ್ಕೆ ಬಂದನೆಂದು ತಿಳಿದುಬರುತ್ತದೆ.

ಇವೆರಡೂ ಕೃತಿಗಳಲ್ಲಿ ಸಾಮಾನ್ಯವಾದ ಕೆಲವು ಅಂಶಗಳೂ ಇವೆ.—

i) ಸಕಲೇಶ ಮಾದರಸನು ನಾದವಿದ್ಯಾಪಂಡಿತನಾಗಿ ಮೂವತ್ತೆರಡು ವೀಣೆಗಳನ್ನಿಟ್ಟುಕೊಂಡು, ಶಿವನಿಗಿಷ್ಟವಾದ ರಾಗಗಳನ್ನು ನುಡಿಸುತ್ತಿದ್ದುದು,

ii) ಮಲ್ಲರಸನ ವಿರಕ್ತಿ ಮತ್ತು ಯೋಗಸಿದ್ಧಿಗಳ ಪ್ರಸಿದ್ಧಿಯನ್ನು ಕೇಳಿ ಶ್ರೀಶೈಲಕ್ಕೆ ಸಕಲೇಶ ಮಾದರಸನು, ರಾಜ್ಯಕೋಶಗಳನ್ನು ತೊರೆದು ಹೊರಟುದು.

iii) ಮಲ್ಲರಸನು ಭಸ್ಮಾದ್ರಿಯಂತೆ ಧರೆಗಗನಕೆ ಬೆಳೆದು ಮಾದರಸನನ್ನು ಪರೀಕ್ಷಿಸಿದುದು.

iv) ಕಲ್ಯಾಣಕ್ಕೆ ಹೋಗಲು ಮಾದರಸನು ಒಪ್ಪದಿದ್ದಾಗ, ಕುರಿಕಾಯುವವನಾಗಿ ಮಲ್ಲರಸನು ಮತ್ತೊಮ್ಮೆ ಪರೀಕ್ಷೆ ನಡೆಸಿದುದು.

v) ಮಲ್ಲರಸನ ಅಪ್ಪಣೆಯ ಮೇರೆಗೆ, ತನ್ನ ಉಳಿದ ಐವತ್ತು ವರ್ಷ ಆಯುಷ್ಯವನ್ನು ಕಲ್ಯಾಣದಲ್ಲಿ ಕಳೆಯಲು ಹೋದುದು,

vi) ಬಸವನ ಜೊತೆ ಕಲ್ಯಾಣದಲ್ಲಿ ಶಿವಗೋಷ್ಠಿಯಲ್ಲಿದ್ದುದು,

vii) ಅಲ್ಲಿಯೆ, ಶಿವಯೋಗ ನಿದ್ರೆಯಲ್ಲಿ ಸಮಾಧಿಯನ್ನೈದಿದ. ತನ್ನ ಶಿಷ್ಯ ಚಿಕ್ಕಮಾದಣ್ಣನಿಗೆ, ಮಾದರಸನು, ಮುಗ್ಧ ಬಾಲಲಿಂಗನ ಬಯಕೆಯ ಮೇರೆಗೆ ಜೀವಪ್ರದಾನ ಮಾಡಿದುದು.

ಭೀಮಕವಿಯು, ಬರೆದಿರುವುದು ಬಸವನ ಚರಿತ್ರೆ. ಆದುದರಿಂದ ಅವನು ಸಕಲೇಶ ಮಾದರಸನ ಕಥೆಯನ್ನು ಅವನು ಕಲ್ಯಾಣಕ್ಕೆ ಬಂದು ಅಲ್ಲಿ ಬಸವಣ್ಣನಿಂದ ಪೂಜೆಗೊಳ್ಳುತ್ತ, ಪವಾಡವನ್ನು ಮೆರೆದ ಪ್ರಸಂಗದವರೆಗೆ ಮಾತ್ರ ಹೇಳುವ ಉದ್ದೇಶವಿಟ್ಟುಕೊಂಡವನೆಂದೂ, ಕಲ್ಯಾಣವನ್ನು ಬಿಟ್ಟಮೇಲಿನ ಸಕಲೇಶ ಮಾದರಸನ ಚರಿತ್ರೆ ಅವನಿಗೆ ಅಮುಖ್ಯವೆಂದಿಟ್ಟುಕೊಂಡರೂ, ಅಂಬೆಯಲ್ಲಿ ನಡೆದ ಬಡಭಕ್ತನ ಮಂಗಳ ಪ್ರಸಂಗವನ್ನು ಅವನೇಕೆ ಬಿಟ್ಟನೆಂಬ ಸಮಸ್ಯೆ ಉಳಿದೇ ಉಳಿಯುತ್ತದೆ. ಬಸವಪುರಾಣದಲ್ಲಿ ಸಕಳೇಶಮಾದರಸನ ಕಥೆಯನ್ನು ನಿರೂಪಿಸುವ ಪದ್ಯಗಳಲ್ಲಿ ಕೆಲವು, ಆತನ ವಚನಗಳಿಗೆ ಸಂವಾದಿಯಾಗಿವೆ ಎಂಬುದನ್ನು ಹಿಂದೆ ನೋಡಿದ್ದೇವೆ. ಆದುದರಿಂದ ಅವನ ಹೇಳಿಕೆಗಳು ವಿಶ್ವಾಸಾರ್ಹವೆಂದು ಹೇಳಬಹುದು.

ಇನ್ನು ಕೆಲವು ವೀರಶೈವ ಪುರಾಣಗಳಲ್ಲಿ, ಸಕಲೇಶ ಮಾದರಸನ ವಿಷಯ ಪ್ರಾಸಂಗಿಕವಾಗಿ ಬಂದಿದೆ. ಅವೆಲ್ಲವುಗಳಿಗೆ ಮೇಲೆ ಹೇಳಿದ ಎರಡು ಕೃತಿಗಳೇ ಆಧಾರವೆನ್ನಬಹುದು. ಲಕ್ಕಣ್ಣದಂಡೇಶ (೧೪೨೮) ಶಿವತತ್ವ ಚಿಂತಾಮಣಿಯಲ್ಲಿ, ಬಡಭಕ್ತನ ಮಗಳ ಪ್ರಸಂಗ ಬಂದಿದೆ. ಆದರೆ ಬಡಭಕ್ತನಿದ್ದ ಆ-ಪುರವು ಜೈನಪುರವೆಂದೂ, ಹೆಣ್ಣು ಮಗುವನ್ನು ಒತ್ತೆಯಿಟ್ಟುಕೊಂಡವನು ಜೈನನೆಂದೂ ಕವಿಯು ಹೇಳಿಕೆ.[೪೧]

ವೀರಶೈವಾಮೃತ ಮಹಾಪುರಾಣದಲ್ಲಿ, ಗುಬ್ಬಿಯ ಮಲ್ಲಣಾರ್ಯ (೧೫೩೦)ನು, ಪಾಲ್ಕುರಿಕೆಯ ಸೋಮನಾಥನ ಬಸವ ಪುರಾಣವನ್ನನುಸರಿಸಿಯೆ, ಬಸವನ ಮತ್ತು ಶರಣರ ಕಥೆಗಳನ್ನು ಹೇಳಿರುವುದಾಗಿ ತಿಳಿಸಿದ್ದಾನೆ,[೪೨] ವೀರಶೈವಾಮೃತ ಮಹಾಪುರಾಣದ ಎಂಟನೆಯ ಕಾಂಡದ ಬೇರೆ ಬೇರೆ ಸಂಧಿಗಳಲ್ಲಿ ಮಾದರಸನ ಉಲ್ಲೇಖ ಬರುತ್ತದೆ. ಗಗನೇಶನು ಸಕಲೇಶ ಮಾದರಸನಾಗಿ ಹುಟ್ಟಿದುದು, ಅಂಬೆಯಲ್ಲಿ ಬಡಭಕ್ತನಮಗಳನ್ನು ಉದ್ಧರಿಸಿದುದು, ಶ್ರೀಶೈಲಕ್ಕೆ ಹೋದುದು, ಗುರು, ಕುರುಬನ ವೇಷದಲ್ಲಿ ಅವನನ್ನು ಪರೀಕ್ಷಿಸಿದುದು, ಆಮೇಲೆ ಕಲ್ಯಾಣಕ್ಕೆ ಬಂದುದು ಇತ್ಯಾದಿ ವಿಷಯಗಳೆಲ್ಲ ಒಂದು ಪದ್ಯದಲ್ಲಿ ಬಂದಿವೆ. ಆದರೆ ಅದೇ ಪದ್ಯದಲ್ಲಿ ಸಕಳೇಶ ಮಾದರಸನು ಹುಟ್ಟಿದ ಊರು ಐವಾಳೆ (ಐವೊಳೆ?) ಎಂದಿರುವುದು ಬಹಳ ಗಮನಾರ್ಹವಾಗಿದೆ.[೪೩] ಭೀಮಕವಿಗೂ, ಮಲ್ಲಣಾರ್ಯನಿಗೂ, ಪಾಲ್ಕುರಿಕೆ ಸೋಮನಾಥನ ಕೃತಿಯೇ ಆಧಾರವಾಗಿದ್ದರೂ ಅಂಬೆಯಲ್ಲಿ ನಡೆದ ಬಡಭಕ್ತನ ಪ್ರಸಂಗ ಬಸವಪುರಾಣದಲ್ಲಿ ಬಂದಿಲ್ಲ. ಪ್ರಾಯಃ ಕವಿಯು ಅದನ್ನು ಬಿಟ್ಟಿರಬೇಕು ಚಿಕ್ಕಮಾದಣ್ಣನಿಗೆ ಪ್ರಾಣದಾನಮಾಡಿದ ಕಥೆಯೂ ವೀರಶೈವಾಮೃತ ಮಹಾಪುರಾಣದಲ್ಲಿ ಬಂದಿದೆ[೪೪] ಮಲ್ಲಣಾರ್ಯನ ಪ್ರಕಾರ ಸಕಲೇಶ ಮಾದರಸನ ಜೀವಿತಾವಧಿ ೧೪೦೦ ವರ್ಷ[೪೫] ಜಂಗಮನ ದೆಸೆಯಿಂದ ಹೋದ ಬಸವನಪ್ರಾಣ ತಿರುಗಿ ಬಂದಾಗ ನೆರೆದ ಗಣಪತಿಯಲ್ಲಿ ಸಕಲೇಶ ಮಾದರಸನ ಹೆಸರು ಮೊದಲು ಬಂದಿದೆ.[೪೬] ಬಸವಣ್ಣನು, ಮೀಮಾಂಸಕನೊಬ್ಬನನ್ನು ತೃಣ ಪುರುಷನಿಂದ ಸೋಲಿಸಿ, ಅವನಿಗೆ ದೀಕ್ಷೆಕೊಡುವ ಸಂದರ್ಭದಲ್ಲಿ ಅಸಂಖ್ಯಾತ ಗಣರ ಕಥೆಗಳು ಬಂದಿವೆ. ಅವುಗಳಲ್ಲಿ "ಈಶನ ಪೂಜೆಯಲ್ಲಿ ನೆರೆದಾಕಾರಣಿಕಶಿವದೇವ"

---

೪೧. ಶಿವತತ್ವ ಚಿಂತಾಮಣಿ. ಸಂಧಿ-೩೭. ಪದ್ಯ ೧೯೭-೧೯೯.

೪೨. ವೀರಶೈವಾಮೃತ ಮಹಾ ಪುರಾಣ. ಕಾಂಡ-೮ ಸಂಧಿ-೧, ಪದ್ಯ-೬

೪೩. ವೀರಶೈವಾಮೃತ ಮಹಾ ಪುರಾಣ. ಕಾಂಡ-೮, ಸಂಧಿ-೨, ಪದ್ಯ-೩೦

೪೪. ವೀರಶೈವಾಮೃತ ಮಹಾ ಪುರಾಣ. ಕಾಂಡ-೮, ಸಂಧಿ-೫, ಪದ್ಯ-೫೮

೪೫ ವೀರಶೈವಾಮೃತ ಮಹಾ ಪುರಾಣ. ಕಾಂಡ-೮, ಸಂಧಿ-೬, ಪದ್ಯ-೮

೪೬. ವೀರಶೈವಾಮೃತ ಮಹಾ ಪುರಾಣ. ಕಾಂಡ-೮' ಸಂಧಿ-೫. ಪದ್ಯ-೨೨

ಎಂಬ ಒಂದು ಹೇಳಿಕೆ ಬಂದಿದೆ[೪೬] ಇದರಲ್ಲಿ ಬಂದಿರುವ ಶಿವದೇವನು ಗೊಪೆಯ ಶಿವದೇವನೆ? ಸ್ಪಷ್ಟವಾಗುವುದಿಲ್ಲ. ಏಕಂದರೆ ಇಲ್ಲಿ ಸಕಲೇಶ ಮಾದರಸನ ಉಲ್ಲೇಖ ಬರುವದಿಲ್ಲ.

ನಂಜುಂಡದೇವ(೧೫೫೦)ನ ಭೈರವೇಶ್ವರ ಕಾವ್ಯದಲ್ಲಿ, ಭೈರವೇಶ್ವರನು "ನಾರದ....ಸಕಳೇಶ.. ಕಿನ್ನರನ ಓರಂತೆ ಉಮಾರಮಣನಿಗೆ ವಲ್ಲಕೀರವಗಳ ಕೇಳಿಸಿದನು" ಎಂದಿದೆ.[೪೮] ಮತ್ತೊಂದು ಪದ್ಯದಲ್ಲಿ, "ಅಸುವಿತ್ತ ಸಕಳೇಶ ಶಿಶುವಿಂದ ಚಿಕ್ಕಮಾದಣ್ಣಗೆ" ಎಂಬ ಮಾತು ಬರುತ್ತದೆ.[೪೯]

ವಿರೂಪಾಕ್ಷಪಂಡಿತ(೧೫೮೪)ನ ಚೆನ್ನಬಸವಪುರಾಣದಲ್ಲಿ, ಚೆನ್ನಬಸವನು ಬಸವಣ್ಣನಿಗೆ ತಮ್ಮನ್ನು ಕಾಣಲುಬಂದ ಶಿವಶರಣಸಂಕುಲದ ಪರಿಚಯಮಾಡಿ ಕೊಡುವಾಗ "ಶ್ರೀಶೈಲದಿಂ ಶಿವಯೋಗಿಮಲ್ಲರಸನಾಜ್ಞೆಯಿಂದಿಲ್ಲಿಗೊಲಿದಯ್ತಂ ದನು ಲೀಲೆಯಿಂ ಸಕಳೇಶ ಮಾದರಸನೀತನೇ"[೫೦] ಎಂದು ನುಡಿಯುತ್ತಾನೆ. ಮುಂದೆ ಸಿದ್ಧರಾಮನಿಗೆ ವೀರಶೈವಶರಣರ ಕಥೆಗಳನ್ನು ಹೇಳುವಾಗ ಚೆನ್ನಬಸವನು; ಸಕಲೇಶ ಮಾದರಸನು ಚಿಕ್ಕಮಾದಣ್ಣನಿಗೆ ಅಸುವಿತ್ತ ಪವಾಡವನ್ನು ತಿಳಿಸುತ್ತಾನೆ.[೫೧]

ಪಾಲ್ಕುರಿಕೆ ಸೋಮೇಶ್ವರ ಪುರಾಣದಲ್ಲಿಯೂ, ಸಕಲೇಶಮಾದರಸನು, ಅಂಬೆಯಲ್ಲಿ ಬಡಭಕ್ತನ ಮಗಳನ್ನು ಉದ್ಧರಿಸಿ, ಶ್ರೀಶೈಲಕ್ಕೆ ಹೋಗಿ, ಶಿವಯೋಗ ಮಲ್ಲರಸನನ್ನು ಕಂಡು, ಕಲ್ಯಾಣಕ್ಕೆ ಬಂದ ವಿಷಯಗಳು ಬರುತ್ತವೆ.[೫೨]

ಸಿದ್ಧನಂಜೇಶ(೧೬೫೦)ನ ರಾಘವಾಂಕಚರಿತೆಯ ಪ್ರಕಾರ ಸಕಳೇಶ ಮಾದರಸನ ಆಯುಷ್ಯ ಮೂನೂರು ವರ್ಷ. ವೀಣೆಯಿಂಚರದಿಂದ ಶಿವನನ್ನು ಸಂತಸಪಡಿಸುತ್ತ ಲಿಂಗಾರ್ಚನಾವಿಧಿಗೆ ಸೆರೆಯಾದ ಮಗಳನ್ನು ಬಿಡಿಸಿ, ಸಿರಿಗಿರಿಗೆ ಹೋಗಿ, ಮಲ್ಲರಸನನ್ನು ಕಂಡು, ಅಲ್ಲಿಂದ ಕಲ್ಯಾಣಕ್ಕೆ ಹೋಗಿ, ಚಿಕ್ಕಮಾದಣ್ಣನನ್ನು ಬದುಕಿಸಿ, ಈಶ್ವರನಲ್ಲಿ ಐಕ್ಯನಾಗುತ್ತಾನೆ.[೫೩] ಪದ್ಮರಸನು ಸಕಲೇಶ ಮಾದರಸನ ಜ್ಯೇಷ್ಠನಂದನನೆಂದು, ಇವನು ಹೇಳಿರುವುದು ವಿಚಿತ್ರವಾಗಿದೆ.[೫೪]

---

೪೬. ವೀರಶೈವಾಮೃತ ಮಹಾ ಪುರಾಣ. ಕಾಂಡ-೮. ಸಂಧಿ-೪, ಪದ್ಯ-೩೯

೪೮. ೪೯. ಭೈರವೇಶ್ವರ ಕಾವ್ಯ. ಸಂಧಿ-೪, ಪದ್ಯ-೯೯ ಮತ್ತು ೧೪೭.

೫೦. ಚೆ ಬ.ಪು. ಕಾಂಡ-೧, ಸಂಧಿ-೬, ಪ್ರಾಣಲಿಂಗಿ ಸಂಧಿ, ಪದ್ಯ-೫೬.

೫೧. ಅದೇ. ಕಾಂಡ-೫. ಸಂಧಿ-೪, ವೀರಶೈವ ಶರಣರ ಕಥೆ. ಸಂಧಿ-೫೭, ಪದ್ಯ-೪೩.

೫೨. ಪಾಲ್ಕುರಿಕೆ ಸೋಮೇಶ್ವರಪುರಾಣ. ಸಂಧಿ-೪, ಪದ್ಯ-೪೫-೪೭.

೫೩. ರಾಘವಾಂಕಚರಿತೆ. ಸಂಧಿ-೧೧. ಪದ್ಯ-೨ ಮತ್ತು ಸಂ-೧೭,ಪದ್ಯ-೩೬.

೫೪. ಅದೇ. ಸಂಧಿ-೧೯, ಪದ್ಯ-೭೬, ೭೭.

ಕುಮಾರಪದ್ಮರಸ 'ಸಾನಂದಚರಿತೆ'ಯ ಕೊನೆಗೆ ಶಿವನ ಓಲಗದಲ್ಲಿದ್ದ ಪುರಾತನರ ಮತ್ತು ಶಿವಶರಣರ ಹೆಸರುಗಳು ಉಲ್ಲೇಖವಿದ್ದು ಅದರಲ್ಲಿ ಸಕಳೇಶ ಮಾದರಸನ ಹೆಸರೂ ಇದೆ.[೫೫]

ಇಲ್ಲಿಯವರೆಗೆ ಹೇಳಿದ ಕೃತಿಗಳಲ್ಲಲ್ಲದೆ, ಇನ್ನೂ ಹಲವಾರು ವೀರಶೈವ ಕೃತಿಗಳಲ್ಲಿ ಸಕಲೇಶ ಮಾದರಸನ ವಿಷಯ ಪ್ರಾಸಂಗಿಕವಾಗಿ ಬರುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರಮುಖ ವೀರಶೈವಪುರಾಣಗಳಲ್ಲಿ, ಸಕಲೇಶಮಾದರಸನು ಮಲ್ಲರಸನ ಆದೇಶದ ಮೇರೆಗೆ ಕಲ್ಯಾಣಕ್ಕೆ ಬಂದು, ಬಸವನೊಡನೆ ಶಿವಗೋಷ್ಠಿಯಲ್ಲಿದ್ದನೆಂಬ ವಿಷಯದಲ್ಲಿ ಒಮ್ಮತವಿದೆ. ಆದರೆ ಶೂನ್ಯಸಂಪಾದನೆಯಲ್ಲಿ, ಬೇರೆ ಬೇರೆ ಶರಣರ 'ಸಂಪಾದನೆ'ಗಳು ಬಂದಂತೆ 'ಸಕಲೇಶಮಾದರಸ ಸಂಪಾದನೆ' ಬರದಿರುವದನ್ನು ಗಮನಿಸಬೇಕು.

ಸಕಲೇಶಮಾದರಸನನ್ನು ಕುರಿತ ಸ್ವತಂತ್ರಕೃತಿ ಇದೂವರೆಗೆ ಒಂದೂ ಪ್ರಕಟವಾಗಿಲ್ಲ. "ಸಕಲೇಶಮಾದಿರಾಜರ ಚಾರಿತ್ರ"ವೆಂಬ ಕೋರಿಕಾಗದದ ಪ್ರತಿಯೊಂದು ಸಿಕ್ಕಿದೆ. ಅದರಲ್ಲಿ ಬರುವ ಕಥೆ ಮತ್ತು ಅದರ ವಿಮರ್ಶೆಯನ್ನು ಇನ್ನೊಂದು ಲೇಖನದಲ್ಲಿ ಬರೆಯುವೆ. ಕರ್ನಾಟಕ ವಿಶ್ವವಿದ್ಯಾಲಯದ ವಚನ ವಾಙ್ಮಯ ಸಂಶೋಧನಾ ಇಲಾಖೆಯ ಅಪ್ರಕಟಿತ ವೀರಶೈವಕೃತಿಗಳ ಪಟ್ಟಿಯಲ್ಲಿ "ಸಕಳೇಶಮಾದರಸರ ರಗಳೆ" ಎಂಬುದೊಂದಿದೆ. ಅದರ ಕರ್ತೃ ಶಂಕರದೇವ. ಅದೂ ಮಾದರಸನನ್ನು ಕುರಿತು ಒಂದು ಸ್ವತಂತ್ರ ಕೃತಿ.

★ ಬಿ. ವ್ಹಿ. ಮಲ್ಲಾಪೂರ

೫೫. ಸಾನಂದಚರಿತೆ. ಸಂಧಿ-೯.

ಶಾಸನ ಛಂದಸ್ಸು

" ಗದ್ಯವೇ ತನಗೆ ಗದ್ದಿಗೆಯಾಗೆ । ವೃತ್ತವೇ ತನಗೆ ಕಟಕುಚ ಪ್ರದೇಶವಾಗೆ ।
ಮಾಳಾವೃತ್ತವೇ ತನಗೆ ಮುಕುಟ ಮಣ್ಡಳವಾಗೆ । ಅಂಕಿತೆಯು ತನಗೆ ಸುಲಲಿತಕುಂತಳವಾಗೆ ।
ಛಂದದೆ ತನಗಂಡವೆನಿಪ ಲಲಾಟ ಪಟ್ಟವಾಗೆ । ರಾಗಂಗಳ ಸುಳಿವುಗಳೆ ತನಗೆ
ಕುರುಳೋಳಿಗಳಾಗೆ ।
ರಾಗಂಗಳ ಕೊಂಕುಗಳೆ ತನಗೆ ಕಡುವುರ್ಬುಗಳಾಗೆ । ನಾಟಿಯೆ ತನಗೆ ನೋಟವಾಗೆ ।
ಪಂಜಳವೆ ತನಗೆ ರಂಜಿಸುವಧರೋಷ್ಠವಾಗೆ । ಪದರಚನೆಯೇ ತನಗೆ ಮೃದು ಪವನವಾಗೆ ।
ಅಂಬುವೆ ತನಗೆ ಕಂಬುಗ್ರೀವವಾಗೆ । ಪೂರ್ಣ್ಣರಾಗವೆ ತನಗೆ ಕರ್ಣ್ಣಾಭರಣವಾಗೆ
ದೌವಾಳವೇ ತನಗೆ ನೇವಾಳವಾಗೆ । ಅಕ್ಕರವೆ ತನಗೆ ಅರೆವಾಣಿಯಾಗೆ
ತಿವದಿಯೆ ತನಗೆ ತೆಳುವಸಿಱಾಗೆ । ದೋಹಳಸೆ ತನಗೆ ಬಾಹಾಬಲವಾಗೆ
ಚವುಪದಿಯೆ ತನಗೆ ಮು [ರ] ಜವಾಗೆ । ಸಾಮುತವೆ ತನಗೆ ಖಿರಿದಸರಲ್ಗಳಾಗೆ
ರಾಗಂಗಳಣುಗುಗಸಿತವೆ ತನಗೆ ಸೆಳ್ಕುಗುರ್ಗ್ಗಳಾಗೆ । "... ....||[೧]

ಕೊಲ್ಹಾಪುರದ ಒಂದು ಶಾಸನ, ಸಂಗೀತ ಮತ್ತು ಛಂದೋರೂಪಕದಲ್ಲಿ ಸಾಲಂಕೃತ ಸರಸ್ವತಿಯನ್ನು ವರ್ಣಿಸಿದ ರೀತಿಯಿದು. ಛಂದೋಭಿಮಾನಿಗಳಾದ ಇಂಥ ಶಾಸನಕವಿಗಳಿಂದ ವಿವಿಧಜಾತಿಯ ಪದ್ಯಗಳು ಶಾಸನಗಳಲ್ಲಿ ನಿಕ್ಷಿಪ್ತಗೊಂಡಿವೆ.

ಕರ್ನಾಟಕದಲ್ಲಿ ಲಭಿಸುವ ಅನ್ಯಭಾಷೆಯ ಶಾಸಗಳನ್ನು ಬಿಟ್ಟು, ಒಂದೊಂದಕ್ಕೆ ಸರಾಸರಿ ೪ ಇಲ್ಲವೆ ೫ ಪದ್ಯಗಳನ್ನು ಹಿಡಿವರೆ ಶಾಸನಸ್ಥ ಕನ್ನಡ ಪದ್ಯ ಸಂಖ್ಯೆ ಸುಮಾರು ಒಂದು ಲಕ್ಷ ಎಂದು ತಿಳಿದುಬರುತ್ತವೆ. ಶಾಸನ ಪ್ರಪಂಚಕ್ಕೆ ಸಂಬಂಧಪಟ್ಟ ಅಕ್ಷಯ ಅಭ್ಯಾಸಗಳಲ್ಲಿ ಈ ಪದ್ಯಭಾಂಡಾರದ ಛಂದೋವಿವೇಚನೆಯೂ ಒಂದು.

ಗದ್ಯ ಚಂಪೂ ನಾಟಕ ಮತ್ತು ವಚನಗಳನ್ನು ಬಿಟ್ಟರೆ ಸಾಮಾನ್ಯವಾಗಿ ನಮ್ಮ ಸಾಹಿತ್ಯ ಪ್ರಕಾರಗಳೆಂದರೆ ಛಂದೋಪ್ರಕಾರಗಳೇ. ಕನ್ನಡ ಸಾಹಿತ್ಯ ಅಕ್ಷರ ಛಂದಸ್ಸು, ಮಾತ್ರಾಛಂದಸ್ಸು, ಅಂಶ ಛಂದಸ್ಸುಗಳಿಗೆ ಸಂಬಂಧಿಸಿದ ಬೇರೆ ಬೇರೆ ವೃತ್ತಗಳಲ್ಲಿ ತನ್ನ ಸಾಹಿತ್ಯಪ್ರಕಾರವನ್ನು ಬದಲಿಸುತ್ತ ಬಂದರೂ ಗದ್ಯ ಇಲ್ಲವೆ ಬಿಡಿ ಪದ್ಯಮಯವಾಗಿದ್ದ ಕನ್ನಡ ಶಾಸನಗಳು, ಒಂಬತ್ತನೆಯ ಶತಮಾನದಲ್ಲಿ ಚಂಪೂ ಪ್ರಕಾರಕ್ಕೆ ತಿರುಗಿ ಕೊನೆಯುವರೆಗೆ ಆ ದಾರಿಯಲ್ಲಿಯೇ ಮುನ್ನಡೆದವು. ಹೀಗಾಗಿ ಗದ್ಯ-ವೃತ್ತ-ಕಂದಗಳ ವಿಪುಲ ಮಿಶ್ರಣ, ರಗಳೆ-ತ್ರಿಪದಿ-ಅಕ್ಕರ-ವಿಷಮವೃತ್ತಗಳ ವಿರಳ ಮಿಶ್ರಣವೆನಿಸಿದ ಚಂಪುವಿನ ಮಾದರಿ

---

೧. Northern Karnatak and Kolhapur Inscriptions—K. G. Kundanagar

ಶಾಸನಗಳಲ್ಲಿ ಯಾವ ಕಾಲಕ್ಕೂ ನೆಲೆ ನಿಂತಿದೆ. ಈ ಮಿಶ್ರಣವನ್ನು ಛಂದೋ ದೃಷ್ಟಿಯಿಂದ ಅಭ್ಯಸಿಸಲು ತೊಡಗುವಲ್ಲಿ ಕೆಳಗಣ ತೊಡಕುಗಳನ್ನು ಎದುರಿಸ ಬೇಕಾಗುತ್ತದೆ.

ಶಾಸನಗಳಲ್ಲಿ ಬಳಸಲಾದ ಉತ್ಪಲಮಾಲೆ–ಉ, ಕಂದ–ಕಂ ಎಂಬಂಥ ವಿಶಿಷ್ಟ ಸೂಚನೆಗಳು, ಪದ್ಯಗಳನ್ನು ಗುರುತಿಸಲು ನೆರವಾಗುತ್ತವೆ ಆದರೆ ವೃತ್ತ–ವೃ (ವ್ರಿತ್ತ–ವ್ರಿ) ಎಂಬ ಸಾಮಾನ್ಯ ಸೂಚನೆ ಮತ್ತು ಮೇಲೆ ಒಂದು ವೃತ್ತದ ಹೆಸರು ಹೇಳುತ್ತ ಕೆಳಗೆ ಅನೇಕ ಬಗೆಯ ವೃತ್ತಗಳನ್ನು ಬರೆಯುವ ಕ್ರಮಗಳು ಪದ್ಯವನ್ನು ಬೇರಳಿಟ್ಟು ಗುರುತಿಸುವಲ್ಲಿ ಅಡ್ಡಿ ನೀಡುತ್ತವೆ. ಇನ್ನು ಶಾಸನ ಫಲಕದ ಪರಿಮಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಸ್ತಪ್ರತಿಗಳಲ್ಲಿ ಯಂತೆ ಪದ್ಯಗಳನ್ನು ಗದ್ಯದಂತೆ ಸಾಲುಗಟ್ಟಿ ಬರೆಯುವರೇನೋ ನಿಜ. ಆದರೆ ಹಸ್ತಪ್ರತಿಯಲ್ಲಿಯಂತೆ ಪದ್ಯದ ಕೊನೆಗೆ ದಂಡ ಮತ್ತು ಅಂಕಿಗಳನ್ನು ಹಾಕುವುದು ಹೋಗಲಿ, ದಂಡವನ್ನು ಕೂಡ ಹಾಕುವುದಿಲ್ಲ. ಇಂಥ ಪ್ರಸಂಗ ಗಳಲ್ಲಿಯಂತೂ ಪದ್ಯಗಳನ್ನು ಬೇರಳಿಟ್ಟು ಗುರುತಿಸುವುದು ಕಷ್ಟ ಸಾಧ್ಯವೆಂದೇ ಹೇಳಬೇಕು. ಆಗ ಲಯವನ್ನವಲಂಬಿಸುವುದೊಂದೇ ಮಾರ್ಗ. ವಸ್ತುಸ್ಥಿತಿ ಹೀಗಿರುವಾಗ ಶಾಸನಗಳ ಬರವಣಿಗೆಯಲ್ಲಿ ದೋಷ, ಪಾಠದಲ್ಲಿ ಸವಕಳಿ, ಗಾತ್ರ ದಲ್ಲಿ ನಷ್ಟತೆಗಳು ತಲೆದೋರಿದರಂತೂ ಪದ್ಯಗಳನ್ನು ಪುನರ್ರಚಿಸುವುದು, ತನ್ಮೂಲಕ ಛಂದಸ್ಸನ್ನು ಗುರುತಿಸುವುದು ಇನ್ನೂ ಜಟಿಲವಾಗಿ ಬಿಡುತ್ತದೆ. ಈ ಎಲ್ಲ ಎಡರುಗಳನ್ನು ಅರ್ಥ ಮಾಡಿಕೊಂಡು, ಶಾಸನ ಪ್ರಪಂಚದ ಛಂದೋ ಅಭ್ಯಾಸಕ್ಕೆ ತೊಡಗಬೇಕಾಗುತ್ತದೆ ಇಷ್ಟು ಹಿನ್ನೆಲೆಯೊಂದಿಗೆ ಛಂದೋವಲ ಯಕ್ಕೆ ಸಂಬಂಧಿಸಿದ ವೃತ್ತ, ಪ್ರಾಸ, ಯತಿ ಮೊದಲಾದ ಅಂಶಗಳನ್ನು ಶಾಸನ ಗಳಲ್ಲಿ ಅವಲೋಕಿಸಬಹುದು.

ವರ್ಣವೃತ್ತ

ಗದ್ಯ ಮತ್ತು ಬಿಡಿ ಪದ್ಯರೂಪದ ಕೆಲವು ಶಾಸನಗಳನ್ನು ಬಿಟ್ಟರೆ, ಕನ್ನ ಡದ ಎಲ್ಲ ಶಾಸನಗಳು ಚಂಪುವಿನ ಚೌಕಟ್ಟನ್ನು ಯಾವ ಕಾಲಕ್ಕೂ ಬಿಡಲಿಲ್ಲ. ಹೀಗಾಗಿ ವರ್ಣವೃತ್ತಗಳಿಗೆ, ಚಂಪೂ ಕಾವ್ಯಗಳಲ್ಲಿ ಲಭಿಸಿದ ಸ್ಥಾನ ಶಾಸನ ಗಳಲ್ಲಿಯೂ ಸಿಕ್ಕಿತು. ಈ ವರ್ಣವೃತ್ತಗಳು ಸಮ, ಅರ್ಧಸಮ, ಮತ್ತು ವಿಷಮವೆಂದು ಮೂರು ತೆರನಾಗಿವೆ. ಇವುಗಳಲ್ಲಿ ಚಂಪೂ ಕಾವ್ಯಗಳಲ್ಲಿಯಂತೆ ಶಾಸನಗಳಲ್ಲಿಯೂ ಸಮವೃತ್ತ ಸಮುದಾಯದ ಖ್ಯಾತ ಕರ್ಣಾಟಕಗಳ ಬಳಕೆ ಹೇರಳ. ದ್ರುತವಿಳಂಬಿತ, ಹರಿಣಿ, ಮತ್ತಕೋಕಿಲ, ಪೃಥ್ವಿ, ವಸಂತತಿಲಕ ಮೊದಲಾದವುಗಳ ಬಳಕೆ ವಿರಳ.

ತುಮಕೂರು ಜಿಲ್ಲೆಯ ಹೆಗ್ಗೆರೆ ಶಾಸನದಲ್ಲಿ ಚಂಪಕಮಾಲೆಯನ್ನು "ಚಿತ್ರಲತೆ'[೧]ಯೆಂದೂ, ಗುಲ್ಬರ್ಗಾ ಜಿಲ್ಲೆಯ ಸೇಡಂ ಶಾಸನದಲ್ಲಿ ಉತ್ಪಲಮಾಲೆಯನ್ನು 'ಕಾಮಲತಿಕಾವೃತ್ತ[೨]'ವೆಂದೂ, ಇದೇ ಗುಲ್ಬರ್ಗಾ ಜಿಲ್ಲೆಯ ಐವೂರ ಶಾಸನದಲ್ಲಿ 'ಮಾಲಿನಿವೃತ್ತ'ವನ್ನು ಅದರ ಛಂದಸ್ಸಿನ ಹೆಸರಾದ 'ಅತಿಶಕ್ವರಿ ವೃತ್ತ'[೩] ಎಂದೂ ಕರೆದರೆ, ಹೇಮಚಂದ್ರನು ಹೇಳುವ 'ನೃತ್ತಲಲಿತ' ಅಥವಾ ಜಯಕೀರ್ತಿ ಹೇಳುವ 'ವೃತ್ತಲಲಿತ'ವನ್ನು ಬೆಳತೂರು ಶಾಸನ 'ಲಲಿತವೃತ್ತ' ಎಂದು ಕರೆದಿದೆ. ಶಾಸನಗಳು ಬಳಸಿದ ಈ ವಿಭಿನ್ನ ಹೆಸರುಗಳು ಗಮನಾರ್ಹವಾಗಿವೆ.

ವರ್ಣಛಂದಸ್ಸಿನ ಕೆಲವು ವೃತ್ತಗಳು, ಮಾತ್ರಾಛಂದಸ್ಸಿನಲ್ಲಿಯೂ ನಟಿಸುತ್ತವೆ. ಇದಕ್ಕೆ ಕವಿಯ ಕೌಶಲ ಕೂಡಿದರೆ ಇಂಥ ಒಂದು ವೃತ್ತ ಹಲವು ಬಂಧಗಳಲ್ಲಿ ಮೈದೋರುತ್ತದೆ. ಮೇಲೆ ಹೇಳಿದ ಬೆಳತೂರ ಶಾಸನದಲ್ಲಿ ಈ ಬಗೆಯ ಒಂದು 'ಲಲಿತವೃತ್ತ'[೪] ಹೀಗಿದೆ.

ಶ್ರೀರಮಣಿ ಗೌರಿ ಸಚಿ ಧಾರಿಣಿಯ ಪುತ್ರಿ ರತಿ ಭೂರಮಣಿಯಂದದ ಸ್ವರೂಪವಳುವ್ರೊಳ್ಪಾ
ದಾರೆ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ ಧೃತಶಕ್ತಿಯನೆ ಸಂದೀ
ವೀರನಿಧಿಯಂ ಜಲದವಾರಿನಿಧಿಯುಂ ಗುಣದಚಾರುನಿಧಿಯುಂ ನೆಗಳ್ದೀಕಲೆಯುನಿಂತೀ
ನಾರಿ ಜನರನ್ನಮನದಾರೆ ಮುಜಿವರ್ ಸಕಳಧಾರಿಣಿಯೊಳಿಂತು ಪರಕಾಂತೆದೊರೆಯಾದಳ್

೩೦ ಅಕ್ಷರಗಳನ್ನೊಳಗೊಂಡ ಇದರ ಅಕ್ಷರಗಣ ಯೋಜನೆ ಭಜಸನ, ಭಜಸನ, ಭಜಸನ, ಭಯ. ಇನ್ನು '—∪∪∪' ಈ ರೀತಿಯ ೫ ಮಾತ್ರಾಗಣದಲ್ಲಿ ಕ್ರಮವಾಗಿ ಮುಂದುವರಿವ ಇದು ಮಾತ್ರಾಗಣ ಯೋಜಿತವಾಗಿರುವುದೂ ಒಂದು ವೈಶಿಷ್ಟ್ಯವೆನ್ನಬೇಕು. ಇದನ್ನು ಮಾತ್ರಾಗಣ ದೃಷ್ಟಿಯಿಂದ ಪ್ರಾಸಯುಕ್ತವಾದ ೮ ಪಾದಗಳನ್ನಾಗಿ ಮುರಿದಿಡಬಹುದು,

ಶ್ರೀರಮಣಿ ಗೌರಿ ಸಚಿ ಧಾರಣಿಯಪುತ್ರಿರತಿ |
ಭೂರಮಣಿಯಂದದ ಸರೂಪವಟಿವೊಳ್ಪಾ |
ದಾರೆ ಜಯಧಾರೆ ಜಸಧಾರೆ ನಯಧಾರೆ ಭಯ |
ಹಾರೆ ಪತಿಭಕ್ತೆ ಧೃತಶಕ್ತಿಯೆನೆ ಸಂದೀ |

---

೧. E. C. XII ಚಿಕ್ಕನಾಯಕನಹಳ್ಳಿ ೨೧– ಹೆಗ್ಗೆರೆ ಗ್ರಾಮ. ಕ್ರಿ. ಶ. ೧೧೬೦.

೨. Jainism South India and some Jain Epigraphs Page 269 dated 1094.

೩. E. C. XII. ಗುಲ್ಬರ್ಗಾ– ಐವೂರ ಗ್ರಾಮ ೧೦೯೦.

೪. E· C. ಹೆಗ್ಗಡದೇವನಕೋಟೆ ೧೮–೧೦೫೭.

ವೀರನಿಧಿಯುಂ ಚಲದವಾರಿನಿಧಿಯುಂ ಗುಣದ |
ಚಾರುನಿಧಿಯುಂ ನೆಗಳ್ದೇಕಲೆಯು ನಿಂತೀ |
ನಾರಿಜನರನ್ನವುನದಾರೊ ಮಜಿವರ್ ಸಕಳ |
ಧಾರಿಣಿಯೊಳಿಂತು ವರಕಾಂತೆ ದೊರೆಯಾದಳ್ |

ಇಲ್ಲಿ ವಿಷಮ ಪಾದಗಳಿಗೆ ೫ ಮಾತ್ರೆಯ ೪ ಗಣ, ಸಮಪಾದಗಳಿಗೆ ೫ ಮಾತ್ರೆಯ ೩ ಗಣ ಮತ್ತು ೪ ಮಾತ್ರೆಯ ೧ ಗಣ ಹೊರಡುತ್ತವೆ. ಇನ್ನು ಇದರಿಂದ ಎರಡು ಕುಸುಮ ಷಟ್ಪದಿಗಳನ್ನು ಹೊರಡಿಸಬಹುದು.

ಭೂರಮಣಿ ಗೌರಿ ಸಚಿ |
ಧಾರಿಣಿಯಪುತ್ರಿ ರತಿ |
ಭೂರಮಣಿಯುಂದದ ಸರೂಪವಟಿವೊಳ್ಪಾ |
ದಾರೆ ಜಯಧಾರೆ ಜಸ |
ದಾರೆ ನಯಧಾರೆ ಭಯ |
ಹಾರೆ ಪತಿಭಕ್ತೆ ಧೃತಶಕ್ತೆಯೆನೆ ಸಂದೀ |

ವೀರನಿಧಿಯುಂ ಚಲದ |
ವಾರಿನಿಧಿಯುಂ ಗುಣದ |
ಚಾರುನಿಧಿಯುಂ ನೆಗಳ್ದೇಕಲೆಯುನಿಂತೀ |
ನಾರಿಜನರನ್ನವುನೆ |
ದಾರೊ ಮಜಿವರ್ ಸಕಳ |
ಧಾರಿಣಿಯೊಳಿಂತು ವರಕಾಂತೆ ದೊರೆಯಾದಳ್ |

ಇವು ಎರಡು ಕುಸುಮ ಷಟ್ಪದಿಗಳಾಗಿದ್ದರೂ, ದೀರ್ಘ ಚರಣಗಳ ಕೊನೆಗೆ ಒಂದು ಗುರು ಹೆಚ್ಚು ಇರುವುದನ್ನು ಗಮನಿಸಬೇಕು. ಗದಾಯುದ್ಧ ಮತ್ತು ಪಂಪರಾಮಾಯಣಗಳಲ್ಲಿ ಒಂದೊಂದರಂತೆ ಬಂದ ಈ ಅಪರೂಪ ವೃತ್ತವನ್ನು ಶಾಸನಕವಿ ಇಲ್ಲಿ ಬಳಸಿರುವನು.

ಕೆಲವು ಸಲ ಅಕ್ಷವೃತ್ತಗಳನ್ನು ನಾಲ್ಕು ಚರಣಗಳಿಗೆ ನಿಲ್ಲಿಸದೆ ಐದು ಚರಣಗಳ ವರೆಗೂ ಬೆಳೆಸಿದ ಉದಾಹರಣೆಗಳು ಶಾಸನಗಳಲ್ಲಿ ಸಿಗುತ್ತವೆ.

ಧಾರವಾಡ ಜಿಲ್ಲೆಯ ಮುಳುಗುಂದ ಶಾಸನ—

ಮುನಿಗಳೊಳಾ ಮಹಾಮುನಿ ಧ್ರುವೇಶ್ವರ ಪಂಡಿತರೀ ಜಗತ್ತ್ರಯಂ |
ಪೊಗಳೆ ತಪಃಪ್ರಭಾವನಿಧಿ—UU—ದೊರೆ ಪದ್ಮಸಂಭವಂ |

೫. ರನ್ನನ ಲಲಿತವೃತ್ತ (ಜಯಂತಿ-1963 ಮಾರ್ಚ) ಮೀವುಂಡಿ ಮಲ್ಲಾರಿ.
೬. B.K.I. I.- ಗದಗ 97-ಮುಳಗುಂದ 1067.

ನೊರೆ ಮುನಿಯಾ ವಶಿಷ್ಠ ಮುನಿಪಂ ಸಮನಾಪನಗಸ್ತ್ಯಸುತ್ರಮಂ |
ಸರಿಯೆನೆ ಬಣ್ಣಿಸಲ್ ತ್ರಿಭುವನಂ ಪೊಗಳುತ್ತಿರೆಯಾ ಮುನೀಶನು |
ತ್ತಮನಿರೆ ಪೂಜ್ಯವಾಗಿ ನಗರೇಶ್ವರದೀಮಾಣವೊಪ್ಪು ತೋರುಗುಂ |

ಪ್ರಾಸವನ್ನು ಕಾಯ್ದುಕೊಳ್ಳದ ಈ ಪದ್ಯ, ವೃತ್ತನಾಮದ ಸೂಚನೆಯಿಲ್ಲದೆ ಬರೆಯಲ್ಪಟ್ಟಿದೆ. ‘ಚಂಪಕಮಾಲೆ’ಯಾಗಿರುವ ಇದು ಐದು ಪಾದಗಳ ವೃತ್ತವಾಗಿದೆ.

ಚಿತ್ರದುರ್ಗ ಜಿಲ್ಲೆಯ ಗಂಗನರಸಿ ಗ್ರಾಮದ ಶಾಸನ[೭]—

ಎಸಕದ ಸೋಮವಂಶಜದೊಳಾರ್ ದೊರೆ ತನ್ನೊಳೆನಿಪ್ಪುದೊಂದು ಸಾ |
ಹಸದ ಸಿಮಿರ್ಕೆ ವರ್ಧಿಸುವ ರಾಜ್ಯದಮರ್ಕೆ ಸುಪ್ರಪಂಚಮಂ |
ಪಸರಿಪ ತೋಳ್ಕೆ ವೈರಿಗಳ ರಾಜ್ಯದ ಸಾರ್ಕೆ ಕಡುರ್ಕಿನಿಂ ಪಿಗು |
ಳ್ದಿಸುವರ ಮೀಸೆಯುಂ ಸುಡುವ ತೇಜದಳುರ್ಕೆ ಧರಿತ್ರಿಯೊಳ್ ವಿರಾ |
ಜಿಸುತಿರಲುತ್ತರೋತ್ತರಮಿಳಾಸ್ತುತಿವೆತ್ತುದು ವೀರಪಾಂಡ್ಯನಾ |

ವನಧಿಪರೀತ ಭೂತಳದೊಳೆಂದುದನೊಲ್ಲದ ರಾಜರಿಲ್ಲ ತ |
ನ್ನನೆ ಶರಣೆಂದು ಜೀವಿಸದ ಭೂಭುಜರಿಲ್ಲ ಸಮಸ್ತ ವಸ್ತು ವಾ |
ಹನಮಂ ನಾನ ಕಾಂಚನಮನಿತ್ತಿರಮುದ್ಧತರಿಲ್ಲ ಜೀಯೆನು |
ತ್ತನುದಿನಮೆಯ್ದೆ ಬಿಟ್ಟವೊಲಗಯ್ಯದ ಬಪ್ಪಗರಿಲ್ಲ ನೋಳ್ಪೊಡೇ |
ನನುಪಮಮಾಯ್ತೊ ರಾಜ್ಯವಿಭವಂ ಜಗದೊಳ್ ಜಗದೇಕಮಲ್ಲನಾ |

ಈ ಶಾಸನದಲ್ಲಿ ಪಂಚಪಾದ ವೃತ್ತಗಳು ಎರಡು ಇವೆ. ವೃತ್ತನಾಮ ಸೂಚನೆಯಿಲ್ಲದಿದ್ದರೂ ‘ಚಂಪಕಮಾಲೆ’ ಯೆಂದು ತಿಳಿದು ಬರುತ್ತದೆ.

ತುಮಕೂರ ಜಿಲ್ಲೆಯ ಕರಡಾಳು ಗ್ರಾಮದ ಶಾಸನ[೮]—

ಏಱೆ ವಿಮಾನಮಂ ಬರೆ ಸುರಾಂಗನೆಯರ್ ನಳತೋಳ ಸುಣ್ಣಿಗರ್ |
ತೋಱೆವಿನಂ ಮಹೋತ್ಸವದೆ ಸೇಸೆಯನಿಕ್ಕಿ ಸುರಾಸಕಸ್ಥನಂ |
ಮೀಱಿ ಘನಾಘನ ಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ |
ಬೀಱೆ ವಿಲಾಸದಿಂ ಪಿಡಿದು ಚಾಮರಮಿಕ್ಕಿ ನಮಂತು ಪೊಕ್ಕಳಾ |
ನೀಱೆ ಮಹಾನುಭಾವೆ ಸತಿ ಹಮ್ಮಿಲದೇವಿ ಸುರೇಂದ್ರಲೋಕಮಂ |

ಶಾಸನದಲ್ಲಿ ವೃತ್ತನಾಮದ ಸೂಚನೆಯಿಲ್ಲ. ಇದು ಪಂಚಪಾದಗಳನ್ನೊಳಗೊಂಡ ಉತ್ಪಲಮಾಲೆ.

---

೭. E. C. XI ಚಿತ್ರದುರ್ಗ ದಾವಣಗೇರಿ ೮೫ ಗಂಗನರಸಿಗ್ರಾಮ ೧೧೪೩.

೮. E. C. XII ತುಮಕೂರ–ತಿಪಟೂರ ೯೩ ಕರಡಾಳು ೧೧೭೪.

ವಿಜಾಪುರ ಜಿಲ್ಲೆಯ ತೇರದಾಳ ಶಾಸನ[೯]—

ಸಮುದಾರಿಕ್ಷಿತಿಭೃತ್ಸದಂಬಕದೊಳತ್ಯಾಭೀಳವಜ್ರಾಗ್ನಿ ತೇ |
ಜಮನುನ್ಮತ್ತ ಮಹೀಶ ವಂಶವನದೊಳ್ ದುರ್ವಾರ ದಾವಾಗ್ನಿ ತೇ |
ಜಮನನ್ಯೋರ್ವಿಪಸೈನ್ಯ ಸಾಗರದೊಳುದ್ಯದ್ವಾಡ ಭೋಗ್ರಾಗ್ನಿತೇ
ಜಮನೋರಂತಿರೆ ತೋಱಿ ವಿಶ್ವಧರೆಗಿಂತೀಗಂಡ ಪೆಂಡಾರನ
ಶ್ರಮದಿಂದಂ ಮೆಱೆವಂನಿಜಪ್ರಬಳ ಬಾಹು ತೇಜಮಂ |

ಶಾಸನದಲ್ಲಿ ವೃತ್ತನಾಮವನ್ನು ಸೂಚಿಸದಿದ್ದರೂ, ಇದು ಐದು ಪಾದಗಳ ಮತ್ತೇಭವಿಕ್ರೀಡಿತವೆಂದು ತಿಳಿದುಬರುತ್ತದೆ.

ಧಾರವಾಡ ಜಿಲ್ಲೆಯ ಕರಿಗುದರಿ ಶಾಸನ[೧೦]—

ಹಿಮವನ್ತ ಸ್ಫಟಿಕಶ್ಶಿಲಾತಳದ ಶುಂಭಸ್ತಂಭದೊಳ್ ಕಟ್ಟಿದಂ |
ಸಮದೇಭಂಗಳನಶ್ವಮೇಧಮೆನಿಪೀ ಯಜ್ಞಂಗಳಂ ಮಾಡಿದಂ|
ಕ್ರಮದಿಂದಂ ಪದಿನೆಂಟನಾ ದ್ವಿಜರುಮಂ ತಾನಂದಹಿಚ್ಛತ್ರದಿಂ|
ದಮೆ ತನ್ದೆಯ್ದಿ ಸಕುನ್ತಳಾವನಿಯೊಳಂ ಸಂಸ್ಥಾಪ್ಯಮಂ ಮಾಡಿ ವಿ|
ಕ್ರಮಮುಂ ತಾಳ್ದಿ ಮಯೂರವರ್ಮ್ಮನೆಸೆದಂ ವಿಶ್ವಂಭರಾಭಾರದೊಳ್ |

ಇದು ಐದು ಚರಣಗಳ ಮತ್ತೇಭವಿಕ್ರೀಡಿತ ವೃತ್ತವಾಗಿದ್ದು, ಶಾಸನ ಮಾತ್ರ ಪದ್ಯನಾಮದ ಬಗ್ಗೆ ಮೌನ ತಾಳಿದೆ.

ಹೀಗೆ ಶಾಸನಗಳಲ್ಲಿ ಮೂರು ಚಂಪಕ, ಎರಡು ಮತ್ತೇಭವಿಕ್ರೀಡಿತ ಒಂದು ಉತ್ಪಲಗಳು ಪಂಚಪದಿಯ ರೂಪದಲ್ಲಿ ಸಿಗುತ್ತವೆ. ಇವು ಕ್ರಿ. ಶ. ೧೦೭೨ ರಿಂದ ೧೧೭೪ರ ವರೆಗಣ ಕಾಲಾವಧಿಯಲ್ಲಿ ಹುಟ್ಟಿದುದನ್ನು ಗಮನಿಸಬೇಕು.

ಈ ಸಮವೃತ್ತಗಳನ್ನು ಬಿಟ್ಟರೆ ಮಿಕ್ಕ ಅರ್ಧಸಮ ಮತ್ತು ವಿಷಮ ವೃತ್ತಗಳಲ್ಲಿ, ಶಾಸನಗಳು ಬಳಸಿಕೊಂಡುದು ವಿಷಮ ವೃತ್ತಗಳನ್ನು. ನಾಲ್ಕೂ ಚರಣಗಳು ಅಸಮವಿರುವುದು ಇದರ ವೈಶಿಷ್ಟ್ಯ.

ಭಯಮಂ ವಿದ್ವಿಷ್ಟ ಸೈನ್ಯಕ್ಕಭಯಮುನತಿ ಭೀತರ್ಗೆ ಬೆಳ್ಪರ್ಥಮಂ ಬೇ|
ಳ್ಪಯಶೋ ವಿಸ್ತಾರಮುರ್ವೀಪ ತತಿಗೆ ರತಿ ಸಮ್ಮೋಹಮಂ ಕಾನ್ತೆಯರ್ಗಿತ್ತು
ಸೌಜನ್ಯ ಸದ್ಮ |

೯. I. A. XIV ವಿಜಾಪುರ ೧೫. ತೇರದಾಳ ೧೧೨೩.
೧೦. I. A. X. ಧಾರವಾಡ-ಹಾನಗಲ್-ಕರಿಗುದರಿ ೧೧೦೮.

ತ್ರಿಯನಾಳ್ದೊಪ್ಪಿದ ವಯ್ಜರಸನ ತನಯಂ ಕ್ಷತ್ರವಂಶೇಂದು ವಾಸಂ |
ದಿಯ ಬರ್ಮ್ಮಂ ಕೀರ್ತಿ ಧರ್ಮ್ಮಂ ಪವನತಿ ಜನತಾವರ್ಮ್ಮನುದ್ದಾಮ ಶರ್ಮ್ಮ ||

ಈ ವೃತ್ತ ಅಲಿಕನಾಳು ಶಾಸನದಲ್ಲಿ' ವಿಷಮವೃತ್ತ '[೧೧] ವೆಂದೂ, ಆಸಂದಿಯ ಒಂದು ಶಾಸನದಲ್ಲಿ ' ವಿಶಮವೃತ್ತ '[೧೨] ವೆಂದೂ, ಇನ್ನೊಂದರಲ್ಲಿ ' ವಿಶಮ '[೧೩] ಎಂದೂ ಬರುತ್ತದೆ. ಅಂದರೆ ಒಂದೇ ವೃತ್ತ ಮೂರು ಶಾಸನಗಳಲ್ಲಿ ಪುನರಾವರ್ತನಗೊಂಡಿದೆ.

ಮಾತ್ರಾವೃತ್ತ

ಕಂದ : ಪ್ರಾಕೃತ ಛಂದಸ್ಸಿಗೆ ಸಂಬಂಧಪಟ್ಟ ಮಾತ್ರಾವೃತ್ತಗಳು ಬಹು ಕಾಲದ ಹಿಂದೆಯೇ ಕನ್ನಡವನ್ನು ಪ್ರವೇಶಿಸಿವೆ. ಇವುಗಳಲ್ಲಿ ಪ್ರಮುಖವಾದುದು ಕಂದ. ಕನ್ನಡ ಕಾವ್ಯಪ್ರಪಂಚದಲ್ಲಿ ಪುನಃ ಪುನಃ ಕಾಣಸಿಗುವ ಇದು ಶಾಸನಗಳಲ್ಲಿಯೂ ಅಧಿಕ ಎಡೆಪಡೆದಿದೆ. ಕಂದಕ್ಕೆ ಮೂಲವಾದುದು ಆರ್ಯೆ. ಪೂರ್ವಾರ್ಧಕ್ಕೆ ೩೦, ಉತ್ತರಾರ್ಧಕ್ಕೆ ೩೦ ಹೀಗೆ ೬೦ ಮಾತ್ರೆಗಳ ಇದು ಪೂರ್ವಾರ್ಧ ಮತ್ತು ಉತ್ತರಾರ್ಧಗಳ ಕೊನೆಗೆ ಒಂದೊಂದು ಗುರುವನ್ನು ಮೈಗೂಡಿಸಿಕೊಂಡು ೬೪ ಮಾತ್ರೆಯ ಕಂದವಾಗುತ್ತದೆ. ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರದ ತಾಲೂಕಿನ ಬಳ್ಳಿಗಾವಿ ಶಾಸನ[೧]ದಲ್ಲಿ ಬರುವ

ಸ್ವಸ್ತಿ ಛಲಮರ್ತ್ತಿಗಂಡ ಪ
ರನೃಪ ಜೀವಾಪಹರಣಕರಯಮದಂಡ* ||
ಸದ್ಗುಣ ರತ್ನಕರಂಡಕ
ವಿಜನ ಶಿಷ್ಟೇಷ್ಟವನಜ ವನ ಮಾರ್ತ್ತಂಡ* ||

ಎಂಬ ಕಂದವನ್ನು ' ಆರಿಯೆ ' ಎಂದು ಕರೆದುದು ಆರ್ಯೆ ಮತ್ತು ಕಂದಗಳ ಜನ್ಯ-ಜನಕ ಸಂಬಂಧದ ಸಂಕೇತವೆನಿಸಿದೆ. ಮೇಲಾಗಿ ಈ ಕಂದ ಪ್ರಾಸರಹಿತವಾದುದನ್ನು ಗಮನಿಸಬೇಕು.

" ಕನ್ದ " ಎಂಬ ಹೆಸರಿನಿಂದ " ಜನನೇನನೆಲಿ ಪೇಳ್ವಿನಣ್ಣ ಸನ್ಮಾನದಾನಿಯ ಗುಣವ್ರತಂಗಳಂ ದಾನಶಕ್ತಿ ಅಭಿಮಾನಶಕ್ತಿ ವಿಜ್ಞಾನಶಕ್ತಿ ಸಲೆಗೋಪಣನ್ವಿಯ"

---

೧೧. E. C. VIII. ಶಿವಮೊಗ್ಗ–ಚೆನ್ನಗಿರಿ ೬೪ ಅಲಿಕನಾಳು ೧೨೧೪.
೧೨. E. C. VI. ಕಡೂರ–ಕಡೂರ ೧೫೬ ಆಸಂದಿಗ್ರಾಮ ೧೧೯೬.
೧೩. E. C. VI. ಕಡೂರ–ಕಡೂರ ೧೫೭ ಆಸಂದಿಗ್ರಾಮ ೧೧೯೧.
೧. E. C. VII. ಶಿವಮೊಗ್ಗಾ–ಶಿಕಾರಿಪುರ ೧೨೩ ಬಳ್ಳಿಗಾವಿ ೧೧೫೯.
* ದಂಡಂ, ಮಾರ್ತಂಡಂ ಎಂದು ಬೇಕು.

ಎಂಬ ಪದ್ಯವೊಂದು ಸಿಗುತ್ತದೆ. ಶ್ರವಣಬೆಳ್ಗೊಳದಲ್ಲಿ ಶಾಸನಕಾರ ಹೇಳಿರುವಂತೆ ಇದು ಕಂದವಲ್ಲ ೧೧ನೆಯ ತ್ರಿಷ್ಟುಪ್ಪು ಛಂದಸ್ಸಿನ 'ರಥೋದ್ಧತ' ಎಂಬ ವೃತ್ತವಾಗಿದೆ. ಒಟ್ಟಿನಲ್ಲಿ ಕನ್ನಡ ಚಂಪೂ ಸಾಹಿತ್ಯದ ಮುಕ್ಕಾಲು ಪಾಲು ಭಾಗವನ್ನು ಆಕ್ರಮಿಸಿದಂತೆ, ಶಾಸನ ಸಾಹಿತ್ಯ ಪ್ರಪಂಚವನ್ನೂ ಆಕ್ರಮಿಸಿದೆ ಈ ಕಂದ.

ರಗಳೆ : ಪ್ರಾಕೃತದ 'ಪಜ್ಝಟಿಕೆ'ಯಿಂದ ಕನ್ನಡದ ರಗಳೆ ರೂಪಗೊಂಡಿದೆ ಎಂಬುದು ಈಗ ಎಲ್ಲ ವಿದ್ವಾಂಸರೂ ಒಪ್ಪಿಕೊಂಡ ಮಾತಾಗಿದೆ. ಹರಿಹರ, ತ್ರಿಭುವನತಾತ, ಶಂಕರದೇವ ಮೊದಲಾದವರನ್ನು ಬಿಟ್ಟರೆ, ಇದು ಕ್ವಚಿತ್ತಾಗಿ ಚಂಪೂ ಕಾವ್ಯಗಳಲ್ಲಿ ಕಂಡುಬರುವಂತೆ ಶಾಸನಗಳಲ್ಲಿಯೂ ಕೇವಲ ೫ ಸಲ ಕಂಡುಬಂದಿದೆ.

ಬಳ್ಳಾರಿ ಜಿಲ್ಲೆಯ ಕೋಗಳಿ ಶಾಸನ–೨

"ಶ್ರೀಮದರುಹಚ್ಚರಣ ಸರಸಿರುಹ ಭೃಂಗನಂ
ಭೂಮಿ ಕೀರ್ತಿಸೆ ನೆಗಳ್ದ ಗುಣಗಣೋತ್ತುಂಗನಂ"

ಎಂದು ಪ್ರಾರಂಭವಾಗಿ

"ಕೇವಳಮೆ ನೆಗಳ್ದಿಂಪ್ರಕೀರ್ತಿ ನೃಪಪೂಜಿತಂ
ಕೇವಳಮೆ ಸಕಳಗುಣಗಣ ಯಶೋರಾಜಿತಂ"

ಎಂದು ಮುಕ್ತಾಯಗೊಳ್ಳುತ್ತದೆ. ಇದು ೪೨ ಪಾದಗಳ ರಗಳೆ. (ಶಾಸನ ಸಂಪಾದಕರು 'ದೇಸಿಯಗಣ ಕುಮುದವನ ಸರಚ್ಚಂದ್ರನಂ' ಪಾದದ ತರುವಾಯದ 'ಭಾಸುರ ಗುಣಾಢ್ಯನಂ ಕೋಕಳಿಪುರೀನ್ದ್ರನಂ' ಎಂಬ ಪಾದವನ್ನು ಮರೆತುಬಿಟ್ಟು ೪೧ ಪಾದಗಳನ್ನು ಮಾತ್ರ ಪ್ರಕಟಿಸಿದ್ದಾರೆ). ಶಾಸನದಲ್ಲಿ ಇದನ್ನು 'ತೋಮರ ರಗಳೆ'ಯೆಂದು ಕರೆಯಲಾಗಿದೆ. ನಿಯತವಾದ ಲಲಿತ, ಮಂದಾನಿಲ, ಉತ್ಸಾಹಗಳ ಜೊತೆಗೆ ಪಂಪನಲ್ಲಿ 'ಮಟ್ಟರಗಳೆ', ಪೊನ್ನನಲ್ಲಿ 'ತ್ವರಿತರಗಳೆ', ಶಾಂತಿನಾಥನಲ್ಲಿ 'ಪದ್ಧಳಿ', ದುರ್ಗಸಿಂಹನಲ್ಲಿ 'ಪದ್ಧಳಿ' ಚಾಂಡರಸನಲ್ಲಿ 'ಪಡ್ಡಳಿ', ನಾಗವರ್ಮನಲ್ಲಿ 'ಪದ್ಧತಿಕೆ', ಎಂಬ ಹೆಸರುಗಳು ಕಂಡು ಬರುತ್ತಿದ್ದರೂ 'ತೋಮರ ರಗಳೆ' ಎಂಬ ಉಲ್ಲೇಖ ಮಾತ್ರ ಎಲ್ಲಿಯೂ ಸಿಗುವುದಿಲ್ಲ. 'ತೋಮರ' ಎಂಬ ಪದಕ್ಕೆ ೫ ಎಂಬ ಸಂಕೇತ ವಿರುವುದರಿಂದ ೫ ಮಾತ್ರೆಯ ಗಣದಲ್ಲಿ ಮುಂದುವರಿಯುವ ಲಲಿತರಗಳೆಯನ್ನು ಇಲ್ಲಿ 'ತೋಮರರಗಳೆ' ಎಂದು ಕರೆದಂತೆ ತೋರುತ್ತದೆ. ಈ ಶಾಸನ ದಂಡಗಳನ್ನು ಬಳಸಿದ್ದರೂ ಅವುಗಳಲ್ಲಿ ಒಂದು ವ್ಯವಸ್ಥೆ ಕಂಡುಬರುವುದಿಲ್ಲ. ಆದಿ ಮತ್ತು

೨. S.I.I. IX-i ಬಳ್ಳಾರಿ–ಬಳ್ಳಾರಿ ೧೧–ಕೋಗಳಿ ಕ್ರಿ. ಶ. ೧೦೫೫.

ಅಂತ್ಯ ಪ್ರಾಸಗಳನ್ನು ಇಲ್ಲಿ ತಪ್ಪದೇ ಪಾಲಿಸಲಾಗಿದೆ. ಇದರ ಕಾಲ ಕ್ರಿ. ಶ. ೧೦೫೫.

ಬಳ್ಳಾರಿ ಜಿಲ್ಲೆಯ ಕುರುಗೋಡ ಶಾಸನ-೩

"ಸ್ವಸ್ತಿ ಗವಜೀಶ ಪದಪದ್ಮ ಷಟ್ಚರಣರುಂ
ವಿಸ್ತೀರ್ಣ ವಸ್ತುಗುಣ ವಿನಿಹಿತಾಚರಣರುಂ"

ಎಂದು ಆರಂಭವಾಗಿ

"ಕುಱುಗೋಡ ತಳದೊಳಗೆ ತಳರದಯ್ನೂರ್ವರುಂ
ನೆಱೆ ನೋೞ್ಪಡವರೊಳಗೆ ಪಗೆಗಂಜದೋರ್ವರುಂ"

ಎಂದು ಮುಕ್ತಾಯವಾಗುತ್ತದೆ. ರಗಳೆ ಎಂದು ಕರೆಯಲಾದ ೧೪ ಚರಣಗಳ ಈ ಬಂಧ 'ಲಲಿತರಗಳೆ'ಯಾಗಿದೆ. ಪಾದ ಪಿಂಗಡಣೆಗೆ ಬಳಸಿದ ಖಂಡಗಳಲ್ಲಿ ಒಂದು ಕ್ರಮವಿಲ್ಲ. ಈ ರಗಳೆಯಲ್ಲಿಯೂ ಆದಿ ಮತ್ತು ಅಂತ್ಯ ಪ್ರಾಸಗಳನ್ನು ತಪ್ಪದೇ ಪಾಲಿಸಲಾಗಿದೆ. ಇದರ ಕಾಲ ಕ್ರಿ.ಶ. ೧೧೭೬.

ಬಳ್ಳಾರಿಜಿಲ್ಲೆಯ ಇದೇ ಕುರುಗೋಡಗ್ರಾಮದ ಇನ್ನೊಂದು ಶಾಸನ-೪

"ಶ್ರೀಮದಾರ್ಯನಾಮಪುರ ಮುಖ್ಯಭೂತರೆನಿ
ಪಯ್ನೂರ್ವರಿಂದೊದವಿದನ್ವಯಾಯಾತರುಂ"

ಎಂದು ಆರಂಭವಾಗಿ

"ಅಭಿನವ ದ್ವಾರಾವತೀ ಪುರಮೆನಿಸಿರ್ಪ
ಕುಱುಗೋಡ ಪಟ್ಟಣ ಸ್ವಾಮಿಗಳ್ಗಾಡಿಟ್ಟು"

ಎಂದು ಮುಕ್ತಾಯವಾಗುತ್ತದೆ, ದಕ್ಷಿಣ ಭಾರತದ ಶಾಸನ ಸಂಪುಟದಲ್ಲಿ ಇಪ್ಪತ್ತುವರೆ ಪಾದಗಳ ಪಾಠ ಅಚ್ಚಾಗಿದ್ದು, ಮಿಕ್ಕ ಒಂದೂವರೆ ಪಾದವನ್ನು ಶಾಸನ ಸಂಪಾದಕರು ಇಲ್ಲವೆ ನಿರ್ಮಾತೃಗಳು ಮರೆತಿರಬೇಕು. ಶಾಸನದಲ್ಲಿ 'ರಗಳೆ' ಎಂದು ಕರೆಯಿಸಿಕೊಂಡ ಇದು 'ಲಲಿತರಗಳೆ'ಯಾಗಿದೆ. ಖಂಡಗಳನ್ನು ಬಳಸಿದ್ದರೂ ಅವುಗಳಲ್ಲಿ ಒಂದು ಕ್ರಮವಿಲ್ಲ. ಅಂತ್ಯಪ್ರಾಸವನ್ನು ಕಾಯ್ದುಕೊಂಡ ಇದು ಆದಿಪ್ರಾಸದ ಕಡೆಗೆ ವಿಶೇಷ ಗಮನವನ್ನು ಕೊಟ್ಟಿಲ್ಲ.

---

೩. S,I.I. IX-i ಬಳ್ಳಾರಿ-ಬಳ್ಳಾರಿ. 296-ಕುರುಗೋಡ 1176 A.D.
೪. S.I.I. IX-i ಬಳ್ಳಾರಿ-ಬಳ್ಳಾರಿ 297-ಕುರುಗೋಡ 1177 A.D.

ಇದೇ ಕುರಗೋಡಗ್ರಾಮದ ಇದೇ ಶಾಸನದ ಇನ್ನೊಂದು ರಗಳೆ—

"ಉದ್ವೃತ್ತಮಂಡಲಿಕ ತಾರಕ ಷಡಾನನಂ
ವಿದ್ವಿಡ್ಬಳ ಧ್ವಂಸ ಸಬಳ ಪಂಚಾನನಂ"

ಎಂದು ಆರಂಭವಾಗಿ

"ಕಲಿದೇವ ದಿಬ್ಯಪದಪಂಕಜಾರಾಧಕಂ
ಬಲವದರಿ ಭೂಪಾಳಕುಳ ಸೈನ್ಯಸಾಧಕಂ"

ಎಂದು ಮುಕ್ತಾಯವಾಗುತ್ತದೆ. ಶಾಸನದಲ್ಲಿ ಹೆಸರು ಹೇಳದಿದ್ದರೂ ಇದು 'ಲಲಿತರಗಳೆ'ಯೆಂದು ತಿಳಿದುಬರುತ್ತದೆ. ಎಂಟು ಪಾದಗಳ ಈ ರಗಳೆಯಲ್ಲಿ ದಂಡವನ್ನು ಸರಿಯಾಗಿ ಬಳಸಿಲ್ಲ. ಆದ್ಯಂತ್ಯ ಪ್ರಾಸಗಳನ್ನು ಕಾಯ್ದುಕೊಳ್ಳಲಾಗಿದೆ. ಇದರ ಕಾಲ ಕ್ರಿ.ಶ. ೧೧೭೭.

ಆಂಧ್ರ ಪ್ರದೇಶದ ಕೋರಮಿಲ್ಲಿ ಶಾಸನ—[೫]

"ತಸ್ಮೈ ಸಮಸ್ತ ಜನತಾ ವಿಶೇಷಗುಣಾಯ
ರೈಸುತರ್ಪಿತ ಮಹೀದೇವ ದೇವಗಣಾಯ"

ಎಂದು ಪ್ರಾರಂಭವಾಗುವ ಈ ಸಂಸ್ಕೃತ ತಾಮ್ರಶಾಸನವನ್ನು ಮೊದಲು ಪ್ರಕಟಿಸಿದ 'ಫ್ಲೀಟ' ಅವರು "Ths passage is gadya of rhythemical aliterative prose"ಎಂದು ಹೇಳಿದರು. ಆದರೆ ಇದು 'ಲಲಿತರಗಳೆ'ಯೆಂದು ಸೂಚಿಸಿದವರು ಡಾ|| ಪಿ. ಬಿ. ದೇಸಾಯಿ ಅವರು. ಸಂಸ್ಕೃತ ಭಾಷೆಯಲ್ಲಿ ಬರೆದ ಏಕೈಕರಗಳೆಯಾದ ಇದರ ಕರ್ತೃ ಭೀಮನಭಟ್ಟ. ಕಾಲ ಕ್ರಿ. ಶ. ೧೦೨೨,

ಹೀಗೆ ಕೋಗಳಿಯಲ್ಲಿ ೧. ಕುರಗೋಡದಲ್ಲಿ ೩. ಆಂಧ್ರ ಪ್ರದೇಶದ ಕೋರಮಿಲ್ಲಿಯಲ್ಲಿ ೧ ಅಂದರೆ ಒಟ್ಟು ೫ ರಗಳೆಗಳು ಈ ವರೆಗೆ ಶಾಸನದಲ್ಲಿ ಸಿಕ್ಕಿವೆ. ಇವೆಲ್ಲ ಲಲಿತರಗಳೆಗಳು. ಕೋರಮಿಲ್ಲಿ ಶಾಸನವನ್ನು ಬಿಟ್ಟರೆ ಮಿಕ್ಕ ೪ ರಗಳೆಗಳು ಕೋಗಳಿ, ಕುರಗೋಡ ಶಾಸನಗಳಲ್ಲಿ ಸಿಗುವುದರಿಂದ, ಇದು ಆ ಪ್ರದೇಶದ ಅಂದರೆ ಮಹಾಕವಿ ಹರಿಹರನ ಪ್ರದೇಶದ ಜನಪ್ರಿಯ ಬಂಧವಾಗಿತ್ತೆಂದು ಹೇಳಬಹುದು.

೧೦೨೨ ರಿಂದ ೧೧೭೭ ರ ವರೆಗಣ ಕಾಲದಲ್ಲಿ ಅಂದರೆ ಸುಮಾರು ೧೫೦ ವರ್ಷಗಳ ಅವಧಿಯಲ್ಲಿ ಈ ೫ ರಗಳೆಗಳು ದೊರೆಯುತ್ತಿದ್ದು ಮುಂದಿನ ಶಾಸನಗಳಲ್ಲಿ ಕಾಣಸಿಗುವುದಿಲ್ಲ.

---

೫. I. A. XIV Page 54. 55 ಕೋರಮಿಲ್ಲಿ ತಾಮ್ರಶಾಸನ ೧೦೨೨.

ಷಟ್ಪದಿ: ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆರು ನೂರು ವರ್ಷಗಳಷ್ಟು ದೀರ್ಘ ಕಾಲ ಬದುಕುಮಾಡಿದ ಏಕೈಕಬಂಧವೆಂದರೆ ಮಾತ್ರಾಷಟ್ಪದಿ. ಕನ್ನಡ ಸಾಹಿತ್ಯದ ಬಹುಭಾಗವನ್ನು ವ್ಯಾಪಿಸಿದ ಈ ಬಂಧ, ಶಾಸನಗಳಲ್ಲಿ ಎಡೆ ಪಡೆಯದುದು ತೀರ ವಿಸ್ಮಯ. ಹೀಗಿದ್ದರೂ ವಿಜಾಪುರ ಜಿಲ್ಲೆಯ ಯಾಳವಾರ ಶಾಸನದಲ್ಲಿ[೧] ಗದ್ಯದಂತೆ ಬರೆದ

> ....ಹರನ ಗಿರಿಜಾ
> ವರನ ಕರುಣಾಕರನ ದುರಿತಾಂತರನ ಗಂಗಾಧರನ
> ಫಣಿಯ ಕುಂಡಲನ ಹರನುಸಿಖರನ ನಿಲಗಣ
> ನಿಗಮಸ್ವರೂಪನೆ ನೀಲಕಂಠಾಭರಣ ಭಸ್ಮ [ದಿ] ಧೂಳ
> ತಾಂಗನ ಚಿತ್ರ ಕಾಮನ ಚಿಂನ್ಮಯಾನಂಬರನ ನೊಲವಿ
> ....ರ [ಪಾಲಿಸಿರ ಭೂಷಿದನೆ] ಭುಜದ ಗೌರಿಯ ಬಾಲನಂ
> ಪ್ರಿಯ ಅರ್ಕಪ್ರವೀಣೆಯ [ಹುರಸಿಮಿ] ಯೊಳು............

ಎಂಬ ಭಾಗದ ಲಯವನ್ನವಲಂಬಿಸಿ, ಇಲ್ಲಿ ಒಂದೂವರೆ ಷಟ್ಪದಿಯೆಂದು ನಾನು ಬೇರೆಡೆ ಚರ್ಚಿಸಿದ್ದೇನೆ.[೨] ಇದುವರೆಗೆ ಶಾಸನ ಪ್ರಪಂಚದಲ್ಲಿ ಉಲ್ಲೇಖಿತವಾದ ಮಾತ್ರಾಗಣ ಘಟಿತ ಏಕೈಕ ಷಟ್ಪದಿ ಇದಾದರೂ, ಒಂದೂವರೆ ಷಟ್ಪದಿ ಇದ್ದುದು ಕುತೂಹಲಪೂರ್ಣ ವಿಷಯ. ಇದರ ಕಾಲ ೧೫೫೭.

ದ್ವಿಪದಿ: ದಾಸಸಾಹಿತ್ಯ, ಯಕ್ಷಗಾನಗಳನ್ನು ಬಿಟ್ಟರೆ ಕನ್ನಡ ಕೃತಿಗಳಲ್ಲಿ ದ್ವಿಪದಿ ಕಂಡುಬರುವುದು ವಿರಳ. ಶಾಸನ ಪ್ರಪಂಚದಲ್ಲಿ ಇದು ಎಡೆ ಪಡೆದಿಲ್ಲ. ಆದರೆ ಬಾದಾಮಿಯ ಕಪ್ಪೆಯರಭಟ್ಟನ ಶಾಸನ[೩]ದ ತಲೆಯ ಮೇಲಿರುವ

> "ಕಪ್ಪೆ ಅರಭಟ್ಟನ್ ಶಿಷ್ಟ ಜನ ಪ್ರಿಯನ್
> ಕಷ್ಟ ಜನ ವರ್ಜಿತನ್ ಕಲಿಯುಗ ವಿಪರೀತನ್"

ಎಂಬ ಸಾಲುಗಳಲ್ಲಿ ಕಂಡುಬರುವ ಅಂತ್ಯಪ್ರಾಸ ಮತ್ತು ಶಿಷ್ಟ-ಕಷ್ಟ ಎಂಬ ಒಳಪ್ರಾಸಗಳನ್ನು ಗಮನಿಸಿ ಶ್ರೀ ಎ. ಎನ್. ನರಸಿಂಹಯ್ಯನವರು ಇದನ್ನು ಪದ್ಯವೆಂದರೆ, ಎರಡು ಪಾದಗಳನ್ನು ಗಮನಿಸಿ ಶ್ರೀ ಆರ್. ಎಸ್. ಪಂಚಮುಖಿ ಹಾಗು ಟಿ. ಕೇಶವಭಟ್ಟರು ದ್ವಿಪದಿ ಎನ್ನುತ್ತಾರೆ. ಆದರೆ ಇದು " ಶ್ರೀ ಪಾಂಡ್ಯ

---

೧. S, I. I. XV. ವಿಜಾಪುರ ಬಾಗೇವಾಡಿ 691 ಯಾಳವಾರ ಗ್ರಾಮ 1557 AD.

೨. ಕನ್ನಡ ನುಡಿ. ಸಂ. 30—1967—ಶಾಸನದಲ್ಲಿ ಛಾವಿನಿ.

೩. E. I X. Page 61. ವಿಜಾಪುರ—ಬದಾಮಿ 700.

ವಿಲ್ಲರಸರಾ ಮಗನ್ ದೇವು, ಸಾಧುಪ್ರಿಯನ್ ಅಸಾಧು ವರ್ಜಿತನ್" "ಪ್ರಿಯ ಚೆಲ್ವ ಚೆಲ್ವ ಸಂಪನ್ನಂ ಖಲಜನ ವರ್ಜಿತನ್" ಎಂಬಂತಹ ವಿಶೇಷಣಮಾಲೆಯಾಗಿರಬಹುದೇ ಹೊರತು ವಿದ್ವಾಂಸರು ಹೇಳುವಂತೆ ದ್ವಿಪದಿಯಾಗಿರಲಿಕ್ಕಿಲ್ಲ.

ಅಂಶವೃತ್ತಗಳು

ಅಂಶಛಂದಸ್ಸು ಕನ್ನಡಛಂದಸ್ಸಿನ ಹೊಕ್ಕಳ ಹುರಿ. ಕನ್ನಡಿಗರ ಸುಖ-ದುಃಖಗಳ ಸುಳಿ ಬಿಚ್ಚಿದುದು, ಕೋಪ-ತಾಪಗಳ ಕಿಡಿ ಕೆದರಿದುದು ಈ ಬಂಧಗಳಲ್ಲಿ. ಪಂಪ ಪೂರ್ವಯುಗದಲ್ಲಿ ಗ್ರಂಥಸ್ಥವಾಗಿರಬಹುದಾದ ಈಜಾತಿಯ ಬಂಧಗಳಲ್ಲಿ, ಕೆಲವು ಪಂಪ ಪೊನ್ನರ ಕಾವ್ಯಗಳಲ್ಲಿ ಕ್ವಚಿತ್ ಮಿಂಚಿ, ಶರಣರ ಮೂಲಕ ಮತ್ತೆ ಕಾವ್ಯಕ್ಕೆ ಮಾಧ್ಯಮವಾಗತೊಡಗಿದವು. ನಾಗವರ್ಮನ ಎಣಿಕೆಯ ಪ್ರಕಾರ ಇವುಗಳ ಸಂಖ್ಯೆ ೧೧. ಜಯಕೀರ್ತಿಯ ಛಂದೋನುಶಾಸನ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ, ಶಾರ್ಙ್ಗದೇವನ 'ಸಂಗೀತ-ರತ್ನಾಕರ'ಗಳಲ್ಲಿ ವಿವೇಚಿಸಲ್ಪಟ್ಟ ಈ ಕೆಲವು ವೃತ್ತಗಳು ಶಾಸನಲೋಕದಲ್ಲಿ ಹೀಗೆ ಎಡೆಪಡೆದಿವೆ.

ತ್ರಿಪದಿ : ಕರ್ನಾಟಕ ವಿಷಯಜಾತಿ ಸಮುದಾಯದಲ್ಲಿ ತ್ರಿಪದಿ ಕನ್ನಡದ ಅಚ್ಚ ಮುತ್ತೈದೆ. ಕನ್ನಡಿಗರ ನಾಲಗೆಯ ಮೇಲೆ ಯಾವ ಕಾಲಕ್ಕೂ ಜೀವಂತವಾಗಿರುವ ಇದು ಸಾರ್ವಭೌಮತ್ವವನ್ನು ಪಡೆದುದು ಸರ್ವಜ್ಞನಲ್ಲಿ. ಜೋಗಿ-ಮಾರಾ ಗುಹೆಯ ಪ್ರಾಕೃತ ಶಾಸನದಲ್ಲಿ ಬರುವ

> "ಶುತನುಕಾನಾಮ ದೇವದಾಶಿಕ್ಕೀ
> ತಂ ಕಾಮಯಿತ್ಥ ಬಾಲಾನಶೇಯೇ
> ದೇವ ದಿನ್ನೇ ನಾಮ ಲೂಪದಖ್ಖೇ'

ಎಂದು ೩ ಪಾದಗಳಲ್ಲಿ ಬರೆಯಲಾದ ಈ ಪದ್ಯವನ್ನು ಕುರಿತು, ಪ್ರತಿಪಾದದಲ್ಲಿ ೧೭ ಮಾತ್ರೆಗಳಿರುವ ಇದು 'ತ್ರಿಪದಿ' ಯೆಂದು ಡಾ. ಲೂಡರ್ಸ್ ಹೇಳುತ್ತಾರೆ. ಡಾ. ಎ, ವೆಂಕಟಸುಬ್ಬಯ್ಯನವರು ಇನ್ನೂ ಮುಂದೆ ಹೋಗಿ ೬ ಮತ್ತು ೧೧ ನೆಯ ಸ್ಥಾನಗಳಲ್ಲಿ ಬ್ರಹ್ಮಗಣ ಬರುವುದರಿಂದ ಇದು ಅಂಶಗಣ ಘಟಿತ "ತ್ರಿಪದಿ" ಎಂದು ಸಾಧಿಸುತ್ತಾರೆ.[೧] ಈ ಉಭಯ ವಿದ್ವಾಂಸರ ಮತಗಳು ಯಾವ ನೆಲೆ-ಯನ್ನೂ ಮುಟ್ಟಿಲ್ಲ. ಇದನ್ನು ಬಿಟ್ಟರೆ ತ್ರಿಪದಿಗಳು ಕಂಡು ಬರುವುದು ೧೨ ಶಾಸನಗಳಲ್ಲಿ. ಆಗಾಗ ಪಂಡಿತರು ಗುರುತಿಸಿದ್ದ, ಹಾಗೂ ಹೊಸದಾಗಿ ತಾವು

---

೧. ಸಾ. ಪ. ಪ. XX. ಕರ್ನಾಟಕ ವಿಷಯಜಾತಿ ಛಂದಸ್ಸು— ಎ. ವೆಂಕಟಸುಬ್ಬಯ್ಯ.

ಗುರುತಿಸಿದ ಹೀಗೆ ಒಟ್ಟು ೨೮ ತ್ರಿಪದಿಗಳನ್ನು ಯಾದಿಗೊಳಿಸಿದ್ದಾರೆ ಡಾ. ಚಿದಾನಂದಮೂರ್ತಿಗಳು. "ಕವಿರಾಜ ಮಾರ್ಗ ಪರಿಸರದ ಕನ್ನಡಸಾಹಿತ್ಯ" ಎಂಬ ನನ್ನ ಪ್ರಬಂಧದಲ್ಲಿ ಇನ್ನೂ ಐದು ತ್ರಿಪದಿಗಳು ಗುರುತಿಸಲ್ಪಟ್ಟು ಈ ಸಂಖ್ಯೆ ೩೩ ಕ್ಕೆ ಏರಿದೆ. ಈಗ ಮತ್ತೂ ಒಂದು ದೊರೆತು ಆ ಸಂಖ್ಯೆ ೩೪ ನ್ನು ಮುಟ್ಟಿದೆ. ಒಟ್ಟು ೧೨ ಶಾಸನಗಳಲ್ಲಿ ಸಿಗುವ ಈ ೩೪ ತ್ರಿಪದಿಗಳ ಕಾಲಕ್ರಮ ವಿವರಣೆ ಕೆಳಗಿನಂತಿದೆ.

೧	ಬಾದಾಮಿ (I. A. X.-P. 61)	೩	೭೦೦
೨	ಹುಮ್ಮಚ (E. C. VIII ಶಿವಮೊಗ್ಗಾ–ನಗರ ೬೨)	೫	೮೦೦
೩	ಸೊರಬ (E. C. VIII ಶಿವಮೊಗ್ಗಾ–ಸೊರಬ ೨೨)	೫	೮೦೦
೪	ಹೇಮಾವತಿ (S. I. I. IX–i ಚಿತ್ರದುರ್ಗ–ಮಡಕಶಿರಾ–೩೧)	೫	೯೬೭
೫	ಸವಡಿ (B. K. I.–i ಧಾರವಾಡ–ರೋಣ ೪೨)	೨	೯೭೦
೬	ಹೂಲಿ (E. I. XVIII ಬೆಳಗಾಂವ–ಸೌದತ್ತಿ)	೧	೯೮೫
೭	ಚಿತ್ತವಳ್ಳಿ (E.C.VI. ಕಡೂರ-ಚಿಕ್ಕಮಗಳೂರ ೯೪)	೪	೧೦೬೦
೮	ಬಳ್ಳಿಗಾವಿ (E.C.VII-ಶಿವಮೊಗ್ಗಾ-ಶಿಕಾರಿಪುರ ೧೨೯)	೪	೧೦೭೧
೯	ಹುಮ್ಮಚ (E. C. VIII ಶಿವಮೊಗ್ಗಾ-ನಗರ ೩೫)	೧	೧೦೭೭
೧೦	ನೀಲಗುಂದ (S. I. I. IX–i ಬಳ್ಳಾರಿ-ಹರಪನಹಳ್ಳಿ ೧೪೧)	೨	೧೦೭೯
೧೧	ತಾಳಗುಂದ (E. C. VII. ಶಿವಮೊಗ್ಗಾ-ಶಿಕಾರಿಪುರ ೧೮೫)	೧	೧೦೮೫
೧೨	ಬೆಳ್ಳೂರ (E- C. IV.–ii ಮೈಸೂರ-ನಾಗಮಂಗಲ ೪೭)	೧	೧೦೯೯

ಈ ತ್ರಿಪದಿಗಳನ್ನು ಹೀಗೆ ಅಭ್ಯಸಿಸಬಹುದು.

೧. ಹೂಲಿ, ಹುಮ್ಮಚ (ನಗರ ೩೫), ಬೆಳ್ಳೂರ, ತಾಳಗುಂದ, ಶಾಸನಗಳಲ್ಲಿ ಒಂದೊಂದರಂತೆ; ಸವಡಿ, ನೀಲಗುಂದ ಶಾಸನಗಳಲ್ಲಿ ಎರಡೆರಡರಂತೆ; ಬಾದಾಮಿ ಶಾಸನದಲ್ಲಿ ಮೂರರಂತೆ; ಬಳ್ಳಿಗಾವಿ, ಚಿತ್ತವಳ್ಳಿ ಶಾಸನಗಳಲ್ಲಿ ನಾಲ್ಕರಂತೆ; ಹುಮ್ಮಚ (ನಗರ ೬೨), ಹೇಮಾವತಿ, ಸೊರಬ ಶಾಸನಗಳಲ್ಲಿ ಐದರಂತೆ ಹೀಗೆ ಶಾಸನಗಳಲ್ಲಿ ಒಂದರಿಂದ ಐದರ ವರೆಗೆ ತ್ರಿಪದಿಗಳು ಕಂಡು ಬರುತ್ತವೆ.

೨. ಎಲ್ಲ ತ್ರಿಗಪದಿಗಳನ್ನು ಗದ್ಯದಂತೆ ಬರೆಯಲಾಗಿದೆ.

೩. ಬಳ್ಳಿಗಾವಿ, ತಾಳಗುಂದ, ಹುಮ್ಮಚ (ನಗರ ೩೫), ಹುಮ್ಮಚ (ನಗರ ೬೨), ಬೆಳ್ಳೂರ, ಚಿತ್ತವಳ್ಳಿ, ನೀಲಗುಂದ, ನಾಗಮಂಗಲ, ಶಾಸನಗಳಲ್ಲಿ ಪದ್ಯಗಳನ್ನು ವಿಂಗಡಿಸುವ ಗೆರೆಗಳಿವೆ. ಮಿಕ್ಕವುಗಳಲ್ಲಿ ಪದ್ಯ ವಿಂಗಡಿಸುವ ಗೆರೆಗಳಿಲ್ಲ.

೪. ಪಾದ ವಿಂಗಡಿಸುವ ಗೆರೆಗಳು ಯಾವುದರಲ್ಲಿಯೂ ಇಲ್ಲ.

೫. ತಾಳಗುಂದ ಮತ್ತು ಬಳ್ಳಿಗಾವಿ ಶಾಸನಗಳಲ್ಲಿ 'ತ್ರಿಪದಿ' ಎಂದೂ, ನೀಲಗುಂದ ಶಾಸನದಲ್ಲಿ 'ತ್ರಿಪದಿ' ಎಂದೂ, ಬೇಳೂರ ಶಾಸನದಲ್ಲಿ 'ತ್ರಪದಿ' ಎಂದೂ, ಹುಮ್ಮಚ ಶಾಸನದಲ್ಲಿ 'ತ್ರಿ' ಎಂದೂ ಸೂಚಿಸಲಾಗಿದೆ.

ಅಂಗನಷ್ಟತೆ, ಅಶುದ್ಧ ಬರವಣಿಗೆಯಿಂದಾಗಿ ಕೆಲವು ತ್ರಿಪದಿಗಳ ಛಂದಸ್ಸಿನ ಬಗೆಗೆ ಖಚಿತ ಹೇಳಿಕೆ ನೀಡಲು ಸಾಧ್ಯವಿಲ್ಲದಾಗಿದೆ. ಜಾತಿ ಛಂದಸ್ಸಿನಲ್ಲಿ ಗಣ-ವ್ಯತ್ಯಾಸಕ್ಕೆ ಅವಕಾಶವಿರುವುದರಿಂದ ಕೆಲವು ತ್ರಿಪದಿಗಳಲ್ಲಿ ಗಣ ಪಲ್ಲಟ ಕಂಡು ಬರುತ್ತದೆ. ಇಂಥ ಪ್ರಸಂಗಗಳಲ್ಲಿ ದೋಷವನ್ನು ಗುಣವೆಂದು ಹೇಳಬಹುದಾದರೂ ಯಾವ ಕಾಲಕ್ಕೂ ವ್ಯತ್ಯಾಸಗೊಳ್ಳಬಾರದ ೬ ಮತ್ತು ೧೦ನೆಯ ಸ್ಥಾನಗಳಲ್ಲಿಯ ಬ್ರಹ್ಮಗಣಕ್ಕೆ ಕೆಲವು ಸಲ ಚ್ಯುತಿಬಂದು, ತ್ರಿಪದಿಯ ಹೊಕ್ಕಳ ಹುರಿಗೇ ಧಕ್ಕೆ ಬಂದಿದ್ದರೆ, ಇನ್ನು ಕೆಲವು ಸಲ "ᴗ–" ವಿನಿಂದ ಗಣ ಪ್ರಾರಂಭವಾಗಿ, ಅಂಶಛಂದಸ್ಸಿನ ಮೂಲತತ್ತ್ವವೇ ಮುರಿದುಬಿದ್ದಿದೆ.

ಬಾದಾಮಿಯ ತಟ್ಟಿಕೋಟೆಯ ಬಳಿಯಲ್ಲಿರುವ ಕಪ್ಪೆ ಅರಭಟ್ಟನ ಶಾಸನಕ್ಕೆ ಸಮಾನವಾದ ಕೆಲವು ಭಾಗ ಸಮೀಪದ "ಸಿಡಿಲ್ಪಡಿ" ಎಂಬಲ್ಲಿಯೂ ದೊರಕುತ್ತದೆ. ಹೂಲಿ ಶಾಸನದಲ್ಲಿ ಬರುವ ತ್ರಿಪದಿಯನ್ನು ಸಂಪಾದಕರಾದ ಡಾ. ಬಾರ್ನೆಟ್ ಅವರು ದ್ವಿಪದಿ ಎಂದು ಊಹಿಸಿದ್ದರು. ಹುಮ್ಮಚ (ನಗರ ೬೨) ಶಾಸನ ಸಂಪೂರ್ಣ ತ್ರಿಪದಿಯಲ್ಲಿದೆ. ಒಂದು ಶ್ಲೋಕ ಮತ್ತು ಎರಡು ಸಾಲುಗಳ ಗದ್ಯ ಇವುಗಳನ್ನು ಬಿಟ್ಟರೆ ಬಾದಾಮಿ ಶಾಸನ ಸಂಪೂರ್ಣ ತ್ರಿಪದಿ ರೂಪದಲ್ಲಿದೆ. ಬಳ್ಳಿಗಾವಿ (ಶಿಕಾರಿಪುರ ೧೨೯) ಶಾಸನ ಕಂದ, ವೃತ್ತ, ತ್ರಿಪದಿ. ಅಕ್ಕರ, ತ್ರಿಪದಿಗಳ ವಿಶಿಷ್ಟ ಮಿಶ್ರಣವಾಗಿದೆ.

ಇಲ್ಲಿ ದೇಶೀಪದ ಅಧಿಕವಾಗಿರುವ, ಲಕ್ಷಣಕ್ಕೆ ಅನುಕೂಲವಾಗಿರುವ ಕೆಲವು ತ್ರಿಪದಿಗಳು ಮಧುರವಾಗಿವೆ. ಸಂಸ್ಕೃತ ಪದ ಅಧಿಕವಾಗಿರುವ, ಲಕ್ಷಣವನ್ನು ಉಲ್ಲಂಘಿಸಿಕೊಂಡಿರುವ ಕೆಲವು ತ್ರಿಪದಿಗಳು ತಮ್ಮ ಮುಗ್ಧತೆಯನ್ನು ಹಾಳುಮಾಡಿಕೊಂಡಿವೆ. ಕ್ರಿ. ಶ. ೭೦೦ ರಿಂದ ೧೧೫೯ರ ಕಾಲದಲ್ಲಿ ಈ ಒಟ್ಟು ೩೪ ತ್ರಿಪದಿಗಳು ಲಭ್ಯವಾಗಿದ್ದು, ಮುಂದಣ ಶಾಸನಗಳಲ್ಲಿ ಕಾಣದಿರುವುದು ಸೋಜಿಗದ ಸಂಗತಿ.

ಪಿರಿಯಕ್ಕರ: ಕನ್ನಡ ಶಾಸನಗಳಲ್ಲಿ ತ್ರಿಪದಿಯ ತರುವಾಯ ವಿಶೇಷ ಬಳಕೆಗೊಂಡ ವಿಷಯ ಜಾತಿ ಅಕ್ಕರ. ಈ ಅಕ್ಕರ ಪಂಚಕದಲ್ಲಿ ದೀರ್ಘ ಸಾಲುಗಳನ್ನೊಳಗೊಂಡಿರುವ "ಪಿರಿಯಕ್ಕರ" ಹೆಸರಿಗೆ ಸಾರ್ಥಕವಾದ ಬಂಧ. ಈಗ ತಿಳಿದ ಮಟ್ಟಿಗೆ ಒಟ್ಟು ಹದಿಮೂರು ಶಾಸನಗಳಲ್ಲಿ ಹನ್ನೆರಡು ಪಿರಿಯಕ್ಕರಗಳಿದ್ದು, ಇವುಗಳಲ್ಲಿ ಕೆಲವು ಪುನರುಕ್ತಗೊಂಡು ಇವುಗಳ ಒಟ್ಟು ಸಂಖ್ಯೆ ೨೦ಕ್ಕೆ ಏರಿದೆ. ಅದರ ವಿವರಣೆ ಹೀಗಿದೆ:

೧	ಶ್ರವಣಬೆಳ್ಗೊಳ (E. C. II 133)	೧	೯೮೨
೨	ಶಿರೂರ (B. K. I–i ಧಾರವಾಡ–75)	೧	೧೦೪೨
೩	ನರಗುಂದ (K. I–V. ಧಾರವಾಡ 11)	೧	೧೦೪೫
೪	ಬೆಳತೂರ (E. C. IV–ii ಮೈಸೂರ-ಹೆಗ್ಗಡದೇವನಕೋಟೆ-18)	೩	೧೦೫೭
೫	ಬಳ್ಳಿಗಾವಿ (E. C. VII–ಶಿವಮೊಗ್ಗ-ಶಿಕಾರಿಪುರ ೧೨೯)	೧	೧೦೬೧.
೬	ಹುಮ್ಮಚ (E. C. VIII ಶಿವಮೊಗ್ಗ–ನಗರ ೩೫)	೧	೧೦೭೭.
೭	ಮುನಿರಾಬಾದ (A. P. G. A. S. III ರಾಯಚೂರ 13)	೧	೧೦೮೮.
೮	ಶ್ರವಣಬೆಳ್ಗೊಳ (E. C. II 73)	೨	೧೧೧೮.
೯	ಶ್ರವಣಬೆಳ್ಗೊಳ (E. C. II–125)	೨	೧೧೧೮
೧೦	ಶ್ರವಣಬೆಳ್ಗೊಳ (E. C. II–251)	೨	೧೧೦೮.
೧೧	ಶ್ರವಣಬೆಳ್ಗೊಳ (E. C. II 143)	೧	೧೧೩೧.
೧೨	ಶ್ರವಣಬೆಳ್ಗೊಳ (E. C. II–240)	೨	೧೧೭೫.
೧೩	ಶ್ರವಣಬೆಳ್ಗೊಳ (E. C. II–397)	೨	೧೧೭೯.

೧. ಈ ೧೩ ಶಾಸನಗಳಲ್ಲಿ ೭ ಶಾಸನಗಳು ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿವೆ. ಈ ಏಳರಲ್ಲಿ ಪಿರಿಯಕ್ಕರ ೧೨. ಈ ೧೨ ಅಕ್ಕರಗಳಲ್ಲಿ ೨ ಶಾಸನಗಳಲ್ಲಿಯ (೧೩೩, ೧೪೩) ಎರಡು ಅಕ್ಕರಗಳೂ, ಮತ್ತು ೫ ಶಾಸನಗಳಲ್ಲಿ ಪುನರುಕ್ತಗೊಂಡ "ಆದಿಯಾಗಿಪ್ಪೆರ್ದಾರ್ಯತ ಸಮಯಕ್ಕೆ" ಮತ್ತು "ಗಂಗವಾಡಿಯ ಬಸದಿಗಳೆನಿತೊಳವನಿತಂ ತಾನೆಯ್ದೆ ಪೊಸಯಿಸಿದಂ" ಎಂಬ ಈ ಎರಡು ಅಕ್ಕರಗಳೂ ಸಮಾವೇಶಗೊಳ್ಳುತ್ತವೆ.

೨. ಮುನಿರಾಬಾದ, ಶ್ರವಣಬೆಳ್ಗೊಳ ೧೩೩, ೧೪೩, ಬಳ್ಳಿಗಾವಿ, ಶಿರೂರ, ಹುಮ್ಮಚ ನರಗುಂದ ಶಾಸನಗಳಲ್ಲಿ ಒಂದೊಂದರಂತೆ, ಶ್ರವಣಬೆಳ್ಗೊಳ ೭೩, ೧೨೫, ೨೪೦, ೨೫೧, ೩೯೭ರ ಶಾಸನಗಳಲ್ಲಿ ಎರಡೆರಡರಂತೆ, ಬೆಳತೂರ ಶಾಸನದಲ್ಲಿ ೩ರಂತೆ ಒಟ್ಟು ೨೦ ಅಕ್ಕರಗಳು ದೊರೆಯುತ್ತವೆ.

೩. ಎಲ್ಲ ಪದ್ಯಗಳನ್ನೂ ಗದ್ಯದಂತೆ ಬರೆಯಲಾಗಿದೆ.

೪. ಮುನಿರಾಬಾದ, ಶ್ರವಣಬೆಳ್ಗೊಳ ೧೩೩, ೨೪೦, ೨೫೧, ಬೆಳತೂರ, ಹುಮ್ಮಚ, ಬಳಗಾವಿ, ನರಗುಂದ, ಶಾಸನದಲ್ಲಿ ಪದ್ಯಗಳನ್ನು ಮಾತ್ರ ಪ್ರತ್ಯೇಕಿಸುವ ಗೆರೆಗಳಿವೆ.

೫. ಶ್ರವಣಬೆಳ್ಗೊಳ ೭೩, ೧೨೫, ೩೯೭ ಈ ಶಾಸನಗಳಲ್ಲಿ ಪದ್ಯ ಮತ್ತು ಪಾದಗಳನ್ನು ವಿಂಗಡಿಸುವ ಗೆರೆಗಳಿವೆ.

೬. ಈ ೨೦ರಲ್ಲಿ ಯಾವುದಕ್ಕೂ ‘ಪಿರಿಯಕ್ಕರ’ ಎಂದು ಹೆಸರಿಸದೆ ‘ಬೆಳತೂರ’ ಶಾಸನದಲ್ಲಿ ‘ಅಕ್ಕರಂ’ ಎಂದೂ, ಶ್ರವಣಬೆಳ್ಗೊಳ ೧೪೩, ೭೩, ೧೨೫, ೨೪೦, ೨೫೧, ಹುಮ್ಮಚ, ಬಳ್ಳಿಗಾವಿ, ಮುನಿರಾಬಾದ, ನರಗುಂದ ಶಾಸನಗಳಲ್ಲಿ ‘ಅಕ್ಕರ’ ಎಂದೂ ಕರೆದಿದ್ದಾರೆ.

ಈ ‘ಅಕ್ಕರ’ಗಳು ಕ್ರಿ.ಶ. ೯೮೨ ರಿಂದ ಕ್ರಿ.ಶ. ೧೧೭೯ರ ಕಾಲಾವಧಿಯ ಶಾಸನಗಳಲ್ಲಿ ಕಾಣಿಸಿಕೊಂಡಿದ್ದು ಮುಂದಿನ ಶಾಸನಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.*

ಮೂಲಷಟ್ಪದಿ : ಜಾತಿ ಛಂದಸ್ಸಿಗೆ ಸಂಬಂಧಪಟ್ಟ ತ್ರಿಪದಿ, ಪಿರಿಯಕ್ಕರಗಳ ತರುವಾಯ ಗೋಚರಿಸುವ ವೃತ್ತವೆಂದರೆ ‘ಷಟ್ಪದ’ ಅಥವಾ ‘ಮೂಲ ಷಟ್ಪದಿ.’ ನಾಗವರ್ಮ, ಜಯಕೀರ್ತಿ, ಸೋಮೇಶ್ವರರು ಹೇಳಿದ ಲಕ್ಷಣಕ್ಕನುಗುಣವಾಗಿ ‘ಮದನತಿಲಕ’ದಲ್ಲಿ ೩, ‘ಸುಕುಮಾರ ಚರಿತೆ’ಯಲ್ಲಿ ೧, ‘ಮಾನಸೋಲ್ಲಾಸ’ದಲ್ಲಿ ೧ ಹೀಗೆ ೩ ಕಾವ್ಯಗಳಲ್ಲಿ ೫ ಷಟ್ಪದಿಗಳು ಕಂಡುಬಂದರೆ ೪ ಶಾಸನಗಳಲ್ಲಿ ೬ ಷಟ್ಪದಿಗಳು ಕಂಡುಬರುತ್ತವೆ. ಅವು—

೧	ಭೀಮಸಮುದ್ರ (E.C.XI ಚಿತ್ರದುರ್ಗ 47)	೧	೧೦೬೭
೨	ಚಡಚಣ (S.I.I.XX. ವಿಜಾಪುರ–ಇಂಡಿ 133)	೩	೧೦೬೭
೩	ಅಮ್ಮಿನಭಾವಿ (B.K.I.–ii ಧಾರವಾಡ)	೧	೧೦೭೧
೪	ಗಂಗಾಪುರ (A.P.K.I. Page 28. Mn. No. 52)	೧	೧೧೪೧

ಇವುಗಳಲ್ಲಿ ಡಾ. ಪಿ. ಬಿ. ದೇಸಾಯಿಯವರು ಅಮ್ಮಿನಭಾವಿ[2] ಶಾಸನಸ್ಥ ಷಟ್ಪದಿಯನ್ನು ‘ಅಪೂರ್ವಷಟ್ಪದಿ’ ಎಂಬ ಹೆಸರಿನಲ್ಲಿ ಬೆಳಕಿಗೆ ತಂದರು. ಇದು ಅಪೂರ್ವ ಷಟ್ಪದಿಯಲ್ಲ, ಅಂಶಗಣಾನ್ವಿತವಾದ ಮೂಲ ಷಟ್ಪದಿಯೆಂದು ಮೊಟ್ಟಮೊದಲು ಹೇಳಿದವರು ಬೆಟಗೇರಿ ಕೃಷ್ಣಶರ್ಮರು.[3] ತರುವಾಯ ಹೇಳಿದವರು ಶ್ರೀ ತೀ. ನಂ. ಶ್ರೀಯವರು.[4] ಆಮೇಲೆ ಭೀಮಸಮುದ್ರ, ಚಡಚಣ ಶಾಸನಗಳಲ್ಲಿಯ ಮೂಲ ಷಟ್ಪದಿಯನ್ನು ಶ್ರೀ ಡಿ.ಎಲ್.ಎನ್ ಅವರೂ[5]

---

* ಇವುಗಳಲ್ಲಿ ಕೆಲವು ‘ಪಿರಿಯಕ್ಕರಗಳನ್ನು ಹುಡುಕಿಕೊಟ್ಟವರು ೧೯೭೦-೭೧ ನೆಯ ವರ್ಷದ ನನ್ನ ವಿದ್ಯಾರ್ಥಿಗಳು. ಅವರ ನೆರವನ್ನು ನೆನೆಯುತ್ತೇನೆ.

೨. ಕ. ನುಡಿ ೧೫–೨

೩. ಜಯಂತಿ ೧೯೫೨ ಜುಲೈ.

೪. ಕ. ನುಡಿ ೧೫–೩

೫. ಪ್ರ. ಕ. ೪೯–೧

ಗಂಗಾಪುರ ಶಾಸನದ ಷಟ್ಪದಿಯನ್ನು ಡಾ. ಚಿದಾನಂದಮೂರ್ತಿ[೬] ಯವರೂ ಹುಡುಕಿ ಹೇಳಿದರು.

೧. ಅಮ್ಮಿನಭಾವಿಯ ಶಾಸನದಲ್ಲಿ ಮಾತ್ರ 'ಷಟ್ಪದ' ಎಂಬ ಸೂಚನೆಯಿದ್ದು ಮಿಕ್ಕವುಗಳಲ್ಲಿ ಈ ಸೂಚನೆಯಿಲ್ಲ.

೨. ಭೀಮಸಮುದ್ರ, ಚಡಚಣ, ಗಂಗಾಪುರ ಶಾಸನಗಳಲ್ಲಿ ಮಾತ್ರ ಪದ್ಯಗಳನ್ನು ಪ್ರತ್ಯೇಕಿಸುವ ಗೆರೆಗಳಿವೆ.

೩. ಯಾವುದರಲ್ಲಿಯೂ ಪಾದ ವಿಂಗಡಿಸುವ ಗೆರೆಗಳಿಲ್ಲ. ೧೦೬೭ ರಿಂದ ೧೧೪೧ರ ವರೆಗಿನ ಶಾಸನಗಳಲ್ಲಿ ೬ ಮೂಲ ಷಟ್ಪದಿಗಳು ದೊರೆತಿದ್ದು ಮುಂದಿನ ಶಾಸನ ಸಾಹಿತ್ಯಪ್ರಪಂಚದಲ್ಲಿ ಸುಳಿಹುದೋರುವುದಿಲ್ಲ

ಉತ್ಸಾಹ : ಜಾತಿ ಛಂದಸ್ಸಿಗೆ ಸೇರಿದ ವೃತ್ತಗಳಲ್ಲಿ ೭ ಬ್ರಹ್ಮ ೧ ಗುರುವಿನಿಂದ ಕೂಡಿದ ಉತ್ಸಾಹವೂ ಒಂದು. ೩ ಮಾತ್ರೆಯ ೭ ಗಣ ಹಾಗೂ ೧ ಗುರುವಿನಿಂದ ಕೂಡಿದ ಇದು ಮಾತ್ರಾವೃತ್ತವೂ ಹೌದು. ಹೀಗೆ ಇಬ್ಬಗೆಯಲ್ಲಿ ನಟಿಸಿ ತೋರುವ ಇಂಥದೊಂದು ವೃತ್ತ ಕೇರಳದ ಕಾಸರಗೋಡ ತಾಲೂಕಿನ ತಾಳಂಗೆರೆ[೭] ಗ್ರಾಮದ ಶಾಸನದಲ್ಲಿ ಹೀಗೆ ಬರುತ್ತದೆ.

"ಊರ ಕಡೆಯ ತೆಱೆಯ ತಡಿಯ ಕಱಿಯ ಕಲ್ಲ ಮೇಱಿನಿಂಪ |
ತ್ತೂರ ಪೊಲಿಯುರಿಪ್ಪ ಕೇರಿಯಾಪಲು ನೀರ ಭೂಮಿಯಂ |
ಸಾರ ಭೂರು ಮಂಗಳೋಳಿಯೊಳಗೆ ನೆಱೆದ ಕೆಱೆಯನಂ |
ಧೋರುಹಾಕ್ಷಿ ತನ್ನ ಧನದಿನೊಪ್ಪೆ ಮಾಡಿಸಿಬ್ಬುದಂ"

ಈ ವರ್ಣವೃತ್ತ–ಮಾತ್ರಾವೃತ್ತ–ಅಂಶವೃತ್ತಗಳ ಜೊತೆ ಸಂಸ್ಕೃತ ಭಾಷೆಯಲ್ಲಿ ಬರೆಯಲಾದ ಚೂರ್ಣ (?) ಗ್ರಂಥ ಮತ್ತು ಶ್ಲೋಕಗಳೂ, ಕನ್ನಡ ಭಾಷೆಯಲ್ಲಿ ಬರೆಯಲಾದ 'ಅಬ್ಯಾಡಿವಳಿ' ಹೆಸರಿನ ಒಂದು ಪದ್ಯವೂ ಶಾಸನದಲ್ಲಿ ಇದ್ದುದನ್ನು ಗಮನಿಸಬೇಕು.

ಇವಲ್ಲದೆ ಹಲವು ಶಾಸನಗಳಲ್ಲಿ ಕವಿತ್ವದ ಕಸರತ್ತಿನ ಪ್ರತೀಕವಾದ ಚಿತ್ರಬಂಧಗಳು ಗೋಚರಿಸುತ್ತವೆ. ಉದಾಹರಣೆಗಾಗಿ ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ ಶಾಂತೀಶ್ವರ ಬಸದಿಯ ನೈಋತ್ಯ–ವಾಯವ್ಯ, ಈಶಾನ್ಯ ದಿಕ್ಕಿನ ಕಂಬಗಳ ಮೇಲೆ ಇಂಥ ಚಿತ್ರಬಂಧಗಳನ್ನು ನೋಡಬಹುದು.[೮]

---

೬. ಪ್ರ. ಕ. ೫೦-೩

೭. EI-XXIX. p. 203

೮. Ec. VII.

" ಈ ಶ್ಲೋಕವನ್ನು ಚಕ್ರಬಂಧದಲ್ಲಿ ಓದಿಕೊಂಬುದು. ಕರ್ಣಿಕಾಮಧ್ಯ ಅಕ್ಷರದ ವಳಿಯುವ ಮೊದಲುಗೊಂಡು ನಾಲ್ಕನೆಯ ವಳಿಯುದಲ್ಲಿ ' ಜಿನಸ್ತುತಿ ರಿಯುಂ 'ಯುಂಭ ಪ್ರಬಂಧದ ನಾಮವನೋದಿಕೊಂಬುದು. ಯೆಂಟನೆಯ ವಳಿಯುದಲ್ಲಿ " ಸೂರಿ ವಿರಾಚಿತಾ " ಎಂದು ಕವಿನಾಮವನೋದಿಕೊಂಬುದು. ಯೀಪ್ರಕಾರದಲೆ ನಾಲ್ಕು ಚಕ್ರವನೂ ಓದಿಕೊಂಬುದು " ಎಂಬ ವಿವರಣೆ, ಈ ಸೂರಿ ಕವಿಯ ಪ್ರಗಲ್ಭತೆಯನ್ನು ಪ್ರತಿಬಿಂಬಿಸುತ್ತದೆ. ಸಾಲದುದಕ್ಕೆ ಇಲ್ಲಿ ಅನುಲೋಮ, ಪ್ರತಿಲೋಮ ಶ್ಲೋಕ, ಗತ ಪ್ರತ್ಯಾಗತ ಶ್ಲೋಕಗಳನ್ನು ಚಿತ್ರಸಹಿತ ಬಿಡಿಸಲಾಗಿದೆ. ಶಾಸಗಳಲ್ಲಿ ನಿಕ್ಷಿಪ್ತವಾಗಿರುವ ಇಂತಹ ಹಲವಾರು ಚಕ್ರಬಂಧಗಳು ಶಾಸನ ಕವಿಗಳ ಛಂದೋಪರಿಣತಿಗೆ ಸಾಕ್ಷಿ ನುಡಿಯುತ್ತವೆ.

ಈ ವಿವಿಧ ವೃತ್ತಗಳಲ್ಲದೆ ಛಂದಸ್ಸಿನ ದೃಷ್ಟಿಯಿಂದ ಗಮನಿಸಬೇಕಾದ ಇನ್ನೂ ಕೆಲವು ಅಂಶಗಳು ಶಾಸನಗಳಲ್ಲಿ ಮೈದೋರಿವೆ. ಅಕ್ಷರವೃತ್ತದ ಪ್ರತಿಯೊಂದು ಪಾದದ ಕೊನೆ ಮತ್ತು ದೀರ್ಘ ಪಾದಗಳ ಕೊನೆಯಲ್ಲಿ ಗುರು ಅವಶ್ಯ ಬರಬೇಕು. ಎಷ್ಟೋ ಶಾಸನಗಳು ಈ ಮಾತನ್ನು ಕಿವಿಯಲ್ಲಿ ಹಾಕಿಕೊಂಡಿಲ್ಲ. ವ್ಯಂಜನಾಂತ ಪದಗಳನ್ನೆಲ್ಲ ಸ್ವರಾಂತವಾಗಿ ಬರೆದಿವೆ. ಇಂಥವುಗಳನ್ನು ವ್ಯಂಜನಾಂತಗಳೆಂದು ಭಾವಿಸಿಕೊಳ್ಳದೇ ಹೋದರೆ ವೃತ್ತದ ಸ್ವರೂಪವೇ ಅರಿತಕ್ಕೆ ಬರುವುದಿಲ್ಲ.

ಅಂಶವೃತ್ತಗಳಲ್ಲಿ ಗಣದ ಸ್ಥಿತಿಸ್ಥಾಪಕತ್ವ ನಿಯಮದಂತೆ ಆಗಾಗ ಬ್ರಹ್ಮ ವಿಷ್ಣು-ರುದ್ರಗಳು ಸ್ಥಾನಪಲ್ಲಟಗೊಂಡಿವೆ. ' ◡— ' ಹೀಗೆ ಪ್ರಾರಂಭವಾಗುವ ಅಂಶಗಣಗಳೂ ಅಲ್ಲಲ್ಲಿ ಬಂದಿವೆ.

ಅದಿಪ್ರಾಸ ಕನ್ನಡ ಪದ್ಯಗಳ ಮಾಂಗಲ್ಯ. ನಮ್ಮ ಕಾವ್ಯಗಳು ತಪ್ಪದೇ ಪಾಲಿಸುತ್ತ ಬಂದ ಇದನ್ನು ಶಾಸನಗಳು ಅನೇಕ ಸಲ ಹರಿದುಹಾಕಿವೆ. ರ-ಲ, ಡ-ರ, ಣ-ಳ, ನ-ಗ, ರ-ಮ, ಸ್ತ-ನ, ದ್ಗ-ಜ, ಇತ್ಯಾದಿ ಪ್ರಾಸಜೋಡಣೆಗಳು ಇದಕ್ಕೆ ಉದಾಹರಣೆ. ಇಷ್ಟೇ ಏಕೆ ? ಕನ್ನಡಿಗರಿಗೆ ಮನೆಮಾತಾಗಿರುವ ' ಸಾಧುಗೆ ಸಾಧು ' ಎಂಬ ಶಾಸನೋಪಲಬ್ಧ ಪ್ರಥಮ ತ್ರಿಪದಿಯಲ್ಲಿ, ಪ್ರಾಸ ಪ್ರಾಣನೀಗಿರುವುದನ್ನು ಲಕ್ಷಿಸಬೇಕು. ವಸ್ತುಸ್ಥಿತಿ ಹೀಗಿದ್ದರೂ ಕೆಲವು ಶಾಸನಗಳು ಸಂಸ್ಕೃತ ಪದ್ಯಗಳಿಗೆ ಅದಿಪ್ರಾಸವನ್ನು ಜೋಡಿಸಿವೆ. ಇದು ಅದಿಪ್ರಾಸದ ಪ್ರೀತಿಯ ದ್ಯೋತಕವೆನ್ನಬಹುದು.

ಪದ್ಯದ ಪ್ರತಿಯೊಂದು ಪಾದದಲ್ಲಿಯೂ ಪ್ರಾಸಸ್ಥಾನದ ಹಿಂದೆ ಗುರು (–) ಇಲ್ಲವೆ ಲಘು (◡) ಬರಬೇಕೆಂದು ಕನ್ನಡ ಛಂದಸ್ಸಿನ ಕಟ್ಟಳೆ. ಆದರೆ ಒಮ್ಮೆ ಗುರು, ಒಮ್ಮೆ ಲಘು ಬಂದು ಆಗಾಗ ಇದಕ್ಕೆ ಚ್ಯುತಿ ಬಂದಿದೆ.

ಧಾತು ಮತ್ತು ಪ್ರಕೃತಿಗಳನ್ನು ಸೀಳಿ ಯತಿ ಬರಬಾರದೆಂದು ಸಂಸ್ಕೃತ ಛಂದಸ್ಸಿನ ನಿಯಮ. ಆದರೆ ಇಂಥ ಯತಿ ವಿಲಂಘನೆ ಕನ್ನಡದ ವೈಶಿಷ್ಟ್ಯ.

ಪ್ರತಿಯೊಂದು ಪಾದದ ಅಂತ್ಯದಲ್ಲಿ ಯತಿಯುಳ್ಳ, ಈ ಅಕ್ಷರವೃತ್ತಗಳು ಕನ್ನಡಕ್ಕೆ ಬಂದಾಗ ಪ್ರತಿಯೊಂದು ಪಾದದ ಆದಿಯಲ್ಲಿ ಪ್ರಾಸವನ್ನೂ ಪಾಲಿಸಬೇಕಾಯಿತು. ಈಗ ಪಾದದ ಕೊನೆಯ ಯತಿಯೊಂದಿಗೆ ಪಾದದ ಆದಿಯ ಪ್ರಾಸವನ್ನು ಪಾಲಿಸುವುದು ಕಠಿಣವಾಯಿತು. ಇಂಥ ಪ್ರಸಂಗದಲ್ಲಿ ಕನ್ನಡಿಗರು "ನಿಜಿಸಿ ಖಂಡ ಪ್ರಾಸ ಮಂ ಯತಿಯುಂ ಮಿಕ್ಕರ್". ಅಂದರೆ ತಮ್ಮ ಪ್ರಾಣಪದಕವಾದ ಪ್ರಾಸವನ್ನು ಇಟ್ಟುಕೊಂಡು ಯತಿಯನ್ನು ಕೈಬಿಡಲು ಪ್ರಾರಂಭಿಸಿದರು. ಮೊದಮೊದಲು ಪಾದಾಂತ್ಯದಲ್ಲಿ ಪ್ರಾರಂಭವಾದ ಈ ಕ್ರಿಯೆ ಬರಬರುತ್ತ ಪಾದ ಮಧ್ಯದಲ್ಲಿಯೂ ಪ್ರವೇಶಿಸಿತು. ಈ ಯತಿವಿಲಂಘನೆಯ ಪ್ರಥಮ ಪ್ರಸ್ತಾಪ ಈಗ ತಿಳಿದ ಮಟ್ಟಿಗೆ ಕವಿರಾಜ ಮಾರ್ಗದಲ್ಲಿ ಬರುತ್ತಿದ್ದರೂ ೭ನೆಯ ಶತಮಾನದ ಶಾಸನ ಪದ್ಯಗಳಲ್ಲಿ ಇದಕ್ಕೆ ಉದಾಹರಣೆಗಳು ಸಿಗುವುದರಿಂದ ಈ 'ಯತಿ' ಭಂಗ ಕನಿಷ್ಠ ಪಕ್ಷ ಅಷ್ಟು ಪ್ರಾಚೀನವೆನ್ನಬಹುದಾಗಿದೆ.

೧. "ಪರಮಾರ್ಥಂ ಮೆಚ್ಚೆ ನಾಸೀ ಧರಣಿಯುಳಿರವಾಸೆನ್ನು ಸನ್ಯಸನಂಗೆ—
ಯ್ಯುದ್ದರು ಸತ್ವನನ್ದಿಸೇನ ಪ್ರವರಮುನಿವರನ್ದೇವಲೋಕಕ್ಕೆ ಸನ್ದಾನ್" ೯

೨. "ಚಪಲಿಲ್ಲಾ ನವಿಲೂರ ಸಂಘದ ಮಹಾ ಸನ್ನಾಮತೀರನ್ತಿಯಾರ್" ೧೦

೩. "ಅವರುಂ ಸಾಧಿಸಿ ಸ್ವರ್ಗಲೋಕ ಸುಖಕ್ತ್ರಂ [illegible] ವಾಫಿನಾರ್" ೧೧

ಪ್ರಕೃತಿಗಳನ್ನು ಭಗ್ನಗೊಳಿಸಿ ಯತಿ ಕಾಲೂರಿ ನಿಂತುದನ್ನು ಇಲ್ಲಿ ಲಕ್ಷಿಸಬೇಕು. ಕವಿರಾಜಮಾರ್ಗ ಪೂರ್ವದ ಕನ್ನಡಸಾಹಿತ್ಯ ಕಳೆದುಹೋದ ಈ ಪ್ರಸಂಗದಲ್ಲಿ ಇವು ಯತಿ ವಿಲಂಘನ ಪ್ರಕ್ರಿಯೆಯ ಪ್ರಾಚೀನತೆಯನ್ನು ತಿಳಿಸಿಕೊಡುವ ಅಳಿದುಳಿದ ಉದಾಹರಣೆಗಳಾಗಿವೆ.

★ ಎಂ. ಎಂ. ಕಲಬುರ್ಗಿ

---

೯. Ec. II, No. 88

೧೦. Bc. II. No. 98.

೧೧. Ec. II. No. 106

ಬಿಸಿನೀರಿನ ಬುಗ್ಗೆಗಳು

ಪೀಠಿಕೆ: ಭೂಮಿಯಲ್ಲಿ ಇಂದು ಕಾಣುತ್ತಿರುವ ವಿವಿಧ ರೂಪದ ಶಾಖ ಗಳಿಗೆ ಸೂರ್ಯನೇ ಕಾರಣ. ಸೂರ್ಯನ ಉಷ್ಣತೆಯಿಂದ ನೆಲದ ಮೇಲೆ ಅನೇಕ ಬದಲಾವಣೆಗಳಾಗುತ್ತವೆ. ಅದರಂತೆ ಭೂಗರ್ಭದೊಳಗೂ ವಿಶೇಷ ಬದಲಾವಣೆ ಯಾಗುತ್ತಿರುವುದನ್ನು ಕಾಣುತ್ತೇವೆ. ಭೂಮಿಯು ಒಂದು ಕಾಲದಲ್ಲಿ ಕಾದು ಕೆಂಪಾಗಿದ್ದ ಗೋಲಾಕಾರದ ವಸ್ತುವಾಗಿತ್ತೆಂಬುದು ಎಲ್ಲರಿಗೂ ಗೊತ್ತಿದೆ. ಆ ಕಾವು ಯುಗಮಾನದಲ್ಲಿ ಕಡಿಮೆಯಾಗುತ್ತ ತಣಿದು ಬಂದುದರ ಫಲವಾಗಿ ಅದರ ಹೊರಮೈ ಗಟ್ಟಿಯಾಯಿತಾದರೂ ಅದರ ಕೆಳಗಣ ಭಾಗವು ಇನ್ನೂ ಹೆಚ್ಚು ಶಾಖದಿಂದ ಕೂಡಿದೆ. ಭೂಮಿಯ ಒಳಗೆ ಹೆಚ್ಚು ಆಳ ಹೋದಂತೆ ಉಷ್ಣತೆಯು ಹೆಚ್ಚಾಗುತ್ತ ಹೋಗುತ್ತದೆ. ಸುಮಾರು ೧೦ ಮೈಲು ಆಳದಲ್ಲಿ ನೆಲದ ಮೇಲಣ ಸಾಮಾನ್ಯ ಪದಾರ್ಥಗಳು ಕರಗುವಷ್ಟು ತೀಕ್ಷ್ಣವಾದ ಉಷ್ಣತೆ ಯಿರಬೇಕೆಂದು ಗ್ರಹಿಸಲಾಗಿದೆ. ಭೂಗರ್ಭದೊಳಗಣ ವಸ್ತುಗಳು ಅಲ್ಲಿಯ ಶಾಖ ಮತ್ತು ಒತ್ತಡಗಳಿಂದಾಗಿ ಸಾಂದ್ರವಾದ ದ್ರವಗಳಾಗಿಯೇ ಉಳಿದಿರು ವುದು ಇಂದಿಗೂ ತಿಳಿದು ಬರುತ್ತದೆ. ಭೂಮಿಯು ಹೊರಮೈಯಲ್ಲಿ ಅಲ್ಲಲ್ಲಿ ಬಿರುಕುಗಳುಂಟಾಗಿ ಅವುಗಳ ಮೂಲಕ ಒಳಗಣ ಶಾಖವು ಹೊರಬರಲು ಸಾಧ್ಯವಾಗುತ್ತದೆ. ಜ್ವಾಲಾಮುಖಿಗಳಾಗಲಿ ಇಲ್ಲವೆ ಬಿಸಿನೀರಿನ ಬುಗ್ಗೆ (ಗೈಸರು) ಗಳಾಗಲಿ ಇಂತಹ ವಿದ್ಯಮಾನಗಳಿಗೆ ಉದಾಹರಣೆಗಳಾಗಿವೆ. ಇಂಥ ಬಿರುಕುಗಳ ಮೂಲಕ ಒಮ್ಮೊಮ್ಮೆ ಸಾಗರದ ನೀರು ಜಿನುಗಿ ಕೆಳಗೆ ಸರಿದು, ಕೆಳಗಿರುವ ಶಾಖದಿಂದ ಕಾದು ಮೇಲೆ ಉಕ್ಕಲೂ ಬಹುದು. ಭೂಮಿಯ ಒಳಗೆ ತುಂಬಿರುವ ಲಾವಾರಸ (Magma) ಗಳಂತಹ ಶಿಲಾದ್ರವಗಳು ಒಳಗಿರುವ ಒತ್ತಡದಿಂದಾಗಿ ಸಂದುಗಳ ಮೂಲಕ ಮೇಲಕ್ಕೆ ಉಕ್ಕಿ ಬರುತ್ತವೆ. ಹೀಗೆ ಗೈಸರುಗಳ ಅಭ್ಯಾಸವು ಸಾಮಾನ್ಯವಾಗಿ ಭೂಗರ್ಭಶಾಸ್ತ್ರ (Geology) ಕ್ಕೆ ಸಂಬಂಧಿಸಿದ್ದರೂ ಭೂರಚನಾಶಾಸ್ತ್ರ (Geomorphology) ದ ವಿಶೇಷ ಅಧ್ಯ ಯನಕ್ಕೆ ಅವಶ್ಯವಾಗಿದೆ.

ಬಿಸಿನೀರಿನ ಬುಗ್ಗೆಗಳ ಹುಟ್ಟು : ಇತ್ತೀಚಿನ ಭೂಗರ್ಭಶಾಸ್ತ್ರದ ನಿಯ- ಮದ ಪ್ರಕಾರ ಭೂಮಿಯ ಅಂತರ್ಭಾಗದಲ್ಲುಂಟಾಗುವ ಅನೇಕ ಬದಲಾವಣೆ ಯಿಂದ ಹಾಗೂ ಶಿಲೆಗಳಲ್ಲಿ ಅಡಕವಾಗಿರುವ ಛೇದ್ಯಗುಣದಿಂದ ಭೂಮಿಯ ಮೇಲೆ ಬಿದ್ದ ಮಳೆಯ ನೀರು ಬಿರುಕುಗಳ ಮೂಲಕ ಕೆಳಗಿಳಿದು ಸಂಗ್ರಹ ವಾಗುವದು. ಇಂಥ ನೀರಿನ ಮಟ್ಟವು ಬಹಳ ಆಳವಾಗಿಯೂ ಸ್ಥಾನಿಕ ವಾಗಿಯೂ ಇದ್ದು ಒಮ್ಮೊಮ್ಮೆ ಮಹತ್ವದ ಪಾತ್ರ ವಹಿಸುತ್ತದೆ. ಭೂಮಿಯು


ಒಳಭಾಗದಲ್ಲಿ ಸಂಗ್ರಹವಾದ ನೀರು ವಿಶಾಲ ಪ್ರದೇಶವನ್ನು ಆವರಿಸಿ ಶಾಶ್ವತ ನೀರಿನ ಮಟ್ಟವನ್ನು ಕಾಯ್ದುಕೊಳ್ಳುವದು. ಆದರೆ ಭೂಮಿಯ ಅಂತರ್ಗತ ಬದಲಾವಣೆಯಿಂದಾಗಿ ಭೂಕಂಪ ಜ್ವಾಲಾಮುಖಿಗಳ ಕಾರ್ಯ ಮೇಲಿಂದ-ಮೇಲೆ ನಡೆಯುವುದರಿಂದ (ಕೆಲವು ಪ್ರದೇಶಗಳಲ್ಲಿ ಮಾತ್ರ) ಒಳಗಣ ಶಾಖದಿಂದ ಕಾದ ನೀರು ಬುಗ್ಗೆ (ಕಾರಂಜಿ) ಯೋಪಾದಿಯಲ್ಲಿ ಹೊರಬರಲಾರಂಭಿಸುತ್ತದೆ. ಹೀಗೆ ಹೊರಬಂದ ನೀರು ಉಷ್ಣೋದಕದ ಬುಗ್ಗೆ (ಗೈಸರು) ಗಳಾಗಿ ಭೂಪೃಷ್ಠದ ಮೇಲೆ ನೂರಿನ್ನೂರು ಫೂಟು ಎತ್ತರ ಪುಟಿದು ಅಗಾಧ ಶಕ್ತಿಯನ್ನೇ ನಿರ್ಮಿಸಿವೆ. ಕೆಲವು ಕಡೆ ಈ ಕಾರ್ಯ ಪದೇ-ಪದೇ ನಡೆಯುತ್ತಿದ್ದು ವಿಶೇಷವಾಗಿ ಆಯಿಸ್‌ಲಂಡದಲ್ಲಿ ಅವು ಸಾಮಾನ್ಯವಾಗಿವೆ. ಯು. ಎಸ್. ಎ. ದ "ನ್ಯಾಶನಲ್ ಪಾರ್ಕ್" ದಲ್ಲಿರುವ ಗೈಸರವು ಮನೋಹರವಾದ ದೃಶ್ಯವನ್ನೇ ಬೀರಿದೆ. ಅಲ್ಲದೆ ನ್ಯೂಜಿಲ್ಯಾಂಡ, ಯುಗೋಸ್ಲಾವಿಯ, ಜರ್ಮನಿಗಳಲ್ಲಿಯೂ ಇವುಗಳ ದೃಶ್ಯ ಕಂಡು ಬರುತ್ತದೆ. ಇತ್ತೀಚೆಗೆ, ಭಾರತದಲ್ಲಿಯೂ ಹಲವು ಬಿಸಿನೀರಿನ ಬುಗ್ಗೆಗಳು ಬೆಳಕಿಗೆ ಬಂದಿವೆ.

ಹೀಗೆ ಹೊರಚಿಮ್ಮಿದ ನೀರು ಒಂದೇ ಸಮನೆ ಇಲ್ಲವೆ ನಡುವೆ ಬಿಟ್ಟು-ಬಿಟ್ಟು ಚಿಮ್ಮುತ್ತಿರುವುದನ್ನು ಕಾಣುತ್ತೇವೆ. ಹೊರಬಂದ ನೀರು ಬಿಸಿ ಇಲ್ಲವೆ ತಂಪು; ಕಠಿಣ ಇಲ್ಲವೆ ಮೃದುವಾಗಿ ಕಂಡು ಬರುತ್ತದೆ. ಬುಗ್ಗೆಗಳಿಂದ ಹೊರಬಂದ ನೀರು ಅದು ಹುಟ್ಟಿಬಂದ ಅಂತರ್ಜಲದ ಪಾತಳಿ, ಭೂಪೃಷ್ಠದ ಆಕಾರ, ಮತ್ತು ಶಿಲೆಯ ರಚನೆಯನ್ನು ಅವಲಂಬಿಸಿದೆ.

ಚಿತ್ರ–೧. A : ಚಿತ್ರ A ದರಲ್ಲಿ ಬುಗ್ಗೆಗಳ ಉಗಮವನ್ನು ತಿಳಿಯಬಹುದು. ಅವು ಕೊಳ್ಳಗಳ ಮಗ್ಗುಲಲ್ಲಿ ಹುಟ್ಟುವವು. ಅವುಗಳ ನೀರಿನ ಮಟ್ಟವು ಸಾಮಾನ್ಯ ನೀರಿನ ಮಟ್ಟಕ್ಕಿಂತಲೂ ಕೆಳಗಿರುವುದನ್ನು ಕಾಣಬಹುದು. ಇಂಥ ಬುಗ್ಗೆಗಳ ಉಗಮವು ಹಿಮಧಾರೆಗಳಿರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದು, ವಿಶಾಲ ಪಾತ್ರವಿರುವ ನದಿಗಳು ಇವುಗಳ ಉಗಮಸ್ಥಾನ. ಅಲ್ಲಿ ಸಣ್ಣ ಝರಿ ಇಲ್ಲವೆ ಹಳ್ಳ (Brook) ಗಳೋಪಾದಿಯಲ್ಲಿ ಹರಿಯಲಾರಂಭಿಸುವವು. ದೀರ್ಘ ಬೇಸಗೆಯ ನಂತರ ಇಂಥ ಬುಗ್ಗೆಗಳ ನೀರಿನ ಮಟ್ಟವು ಕಡಿಮೆಯಾಗಿ ಪುನಃ ಮಳೆಗಾಲ ಆರಂಭವಾಗುವವರೆಗೆ ನಿಂತು ಹೋಗುತ್ತದೆ.

ಚಿತ್ರ– B : ಇದರಲ್ಲಿ ಬುಗ್ಗೆಗಳ ಸ್ಥಾನ ಕಂಡುಬರುತ್ತಿದ್ದು ಭೂಮಿಯ ಅಂತರಾಳದಲ್ಲಿ ಸಚ್ಛಿದ್ರ ಶಿಲೆಗಳಗುಂಟ ಕಂಡು ಬರುವ ಚಲನವಲನವನ್ನು ಬಿಂಬಿಸುತ್ತದೆ. ಜಿಗುಟು ಮಣ್ಣಿನಿಂದುಂಟಾದ ಉಸುಕು, ಉಸುಕಿನಕಲ್ಲು ಇಲ್ಲವೆ ಸಚ್ಛಿದ್ರ ಸುಣ್ಣದ ಕಲ್ಲುಗಳಲ್ಲಿ ಸಾಕಷ್ಟು ಬುಗ್ಗೆಗಳಿರುವುದನ್ನು ಕಾಣಬಹುದು. ಇವೆಲ್ಲವೂ ಒಂದೇ ಪಾತಳಿಯ ಮೇಲೆ ಕಾಣುತ್ತವೆ.

ಚಿತ್ರ- C : ಇದರಲ್ಲಿ ನೀರು ಸಚ್ಛಿದ್ರ ಶಿಲಾಪ್ರದೇಶದಿಂದ ಒಂದೆಡೆಗೆ ಕೂಡಿ ತನ್ನೆಲ್ಲ ಶಕ್ತಿಯನ್ನು ಬುಗ್ಗೆಗಳಲ್ಲಿ ಸಂಗ್ರಹಿಸುವುದನ್ನು ಕಾಣಬಹುದು.



ಚಿತ್ರ ೧.

ಮೇಲಿನ ಚಿತ್ರಗಳಲ್ಲಿ ಬಿಸಿನೀರಿನ ಬುಗ್ಗೆಗಳುಂಟಾಗಲು ಬೇಕಾಗುವ ಭೂರಚನೆ ತೋರಿಸಿದ್ದು, ಬುಗ್ಗೆಗಳುದಯಿಸಬಹುದಾದ ಸ್ಥಾನಗಳನ್ನು ತೋರಿಸಲಾಗಿದೆ.

ಕೆಲವೆಡೆಗಳಲ್ಲಿ ಈ ನೀರು ಅತೀ ಆಳದಿಂದ ಬರುತ್ತದೆ. ಇದಕ್ಕೆ ಕಾರಣವೆಂದರೆ, ಅಗ್ನಿಶಿಲೆಗಳಲ್ಲಿ ಕಂಡುಬರುವ ಬಿರುಕುಗಳು ಹಾಗೂ ಭೇದ್ಯಗುಣವು ಅಲ್ಲಿಂದ ಬರುವ ನೀರು ಕಾದು ಬಿಸಿನೀರಿನ ಬುಗ್ಗೆ (ಉಷ್ಣೋದಕ) ಗಳಾಗಿ ಹೊರ-ಹೊಮ್ಮುತ್ತವೆ. ಈ ನೀರು ಭೂಮಿಯ ಅಂತರಾಳದಿಂದ ಒಮ್ಮೆಲೆ ಹೊರ-ಬಂದು ಪುಟಿದು ಎಷ್ಟೋ ಫೂಟು ಎತ್ತರ ಹಾರುವುದರಿಂದ ಅವುಗಳಿಗೆ ಬಿಸಿನೀರಿನ ಬುಗ್ಗೆಗಳೆಂದು ಇಲ್ಲವೆ ಗೈಸರುಗಳೆಂದು ಕರೆದರು.

ಅನೇಕ ಗೈಸರುಗಳನ್ನು ಎರಡು ಗುಂಪುಗಳಲ್ಲಿ ವಿಭಾಗಿಸಬಹುದು. (i) ತೆರೆದ ಕೊಳಗಳಿಂದ ಹೊರಚಿಮ್ಮುವ ಗೈಸರುಗಳು, ಮತ್ತು (ii) ಸೀರಾದ ಕೊಳವೆಯಲ್ಲಿ ಹೊರಬಂದು ಚಿಮ್ಮುವ ಗೈಸರುಗಳು, ಇವುಗಳಲ್ಲಿ ಮೊದಲನೆಯದು "ಕೊಳಗಳ" (Pools ಪ್ರಕಾರದಲ್ಲಿ, ಎರಡನೆಯದು "ನಾಝುಲ್" (Nozzle) ಪ್ರಕಾರದಲ್ಲಿ ಬರುತ್ತವೆ. ಮೊದಲನೆಯದರಲ್ಲಿ ಸಾಕಷ್ಟು ಉಗಿ ಮತ್ತು ಬಿಸಿನೀರು ಹೊರಚಿಮ್ಮುತ್ತಿದ್ದು ಎರಡನೆಯದರಲ್ಲಿ ಉಗಿಯಾಗಿ ಇಲ್ಲವೆ ಬಿಸಿನೀರಾಗಿ ಕಡಿಮೆ ಪ್ರಮಾಣದಲ್ಲಿ ಹೊರಬರುತ್ತದೆ. ಕೆಲವು ಬಿಸಿನೀರಿನ ಬುಗ್ಗೆಗಳು ಒಂದೇ ಸಮನೆ ಹರಿಯುತ್ತಿರುವುದನ್ನು ಕಾಣುತ್ತೇವೆ. ಉದಾ: "ಓಲ್ಡ್ ಫೇಥ್‌ಫುಲ್ ಗೈಸರ"ವು ೬೪ ನಿಮಿಷಗಳಿಗೊಮ್ಮೆ ಹರಿಯುತ್ತದೆ. ಅನೇಕ ಬುಗ್ಗೆಗಳು ಅನಿಯಮಿತವಾಗಿ ಹೊರಬರುತ್ತಿದ್ದು ಎರಡು ಬುಗ್ಗೆಗಳ ನಡುವಿನ ಅಂತರವು ಕೆಲವು ತಾಸುಗಳಿಂದ ಕೆಲವು ದಿವಸಗಳವರೆಗೂ ಕಂಡುಬರುವವು. ಉದಾ: ಎಕ್ಸೆಲ್ಸಿರ್ ಬಿಸಿನೀರಿನ ಬುಗ್ಗೆಯು. ಈ ಬುಗ್ಗೆಗಳು ಉಗಿಯನ್ನು ೧೦೦ ರಿಂದ ೩೦೦ ಫೂಟು ಎತ್ತರದವರೆಗೆ ಚಿಮ್ಮುತ್ತಿದ್ದರೂ ಇವುಗಳ ಕಾಲದಲ್ಲಿ ಹೆಚ್ಚಾಗಿ ಅನಿಯಮಿತತೆ ಕಂಡುಬರುತ್ತದೆ. ಕೆಲವು ದೊಡ್ಡ-ದೊಡ್ಡ ಗೈಸರುಗಳು ಭೂಮಿಯಿಂದ ಮೇಲ್ಗಡೆಗೆ ಬರುವಾಗ ಸಾಕಷ್ಟು ಸಪ್ಪಳ ಮಾಡುತ್ತ ಕೂಗು, ಚೀರಾಟ ಹಾಗು ಸಿಳ್ಳು ಹೊಡೆಯುತ್ತಿರುವಂತೆ ಭಾಸವಾಗುತ್ತದೆ. ಇದಕ್ಕೆ ತಕ್ಕ ಉದಾಹರಣೆಯೆಂದರೆ:— ಯು. ಎಸ್. ಎ ದ ಯೆಲೊಸ್ಟೋನ್ ಪಾರ್ಕ ದಲ್ಲಿರುವ ಬಿಸಿನೀರಿನ ಬುಗ್ಗೆಯು. ಹೀಗೆ ಹಲವು ಕಡೆಗಳಲ್ಲಿ ಕಂಡುಬರುವ ಗೈಸರುಗಳ ಉಗಮಕ್ಕೆ ಅನೇಕ ಕಾರಣಗಳು ಕಂಡುಬರುತ್ತಿದ್ದು ಕೆಲವು ಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ:

ನೀರಿನ ಸಂಗ್ರಹ: ಮಳೆಯಿಂದ ಭೂಮಿಯ ಮೇಲೆ ಬಿದ್ದ ನೀರು ಸಾಕಷ್ಟು ಪ್ರಮಾಣದಲ್ಲಿ ಭೂಮಿಯ ಒಳಗಡೆ ಸೇರುವುದು. ೧೯೩೪ ರಲ್ಲಿ ಯೆಲೊಸ್ಟೋನ್ ಮೊದಲಾದ ಬುಗ್ಗೆಗಳು ಸಾಮಾನ್ಯವಾದುದಕ್ಕಿಂತ ಹೆಚ್ಚು ನೀರನ್ನು ಹೊರಚೆಲ್ಲಿದವು. ಇದಕ್ಕೆ ಕಾರಣವೆಂದರೆ— ಅಲ್ಲಿಯ ಭೂಪೃಷ್ಠದ ಮೇಲೆ ಬಿದ್ದ ನೀರಿನ ಬಹುಭಾಗವು ಭೂಮಿಯ ಒಳಸೇರಿತು. ೧೯೩೫ ರಲ್ಲಿ ಈ ಗೈಸರದಲ್ಲಿ ಎರಡು ಕೊಳವೆಗಳನ್ನು ತೋಡಿದರು. ಅದರಲ್ಲಿ ಒಂದನ್ನು ೨೬೫ ಫೂಟು ಆಳದ ನಾರಿಸ್ ಬೇಸಿನ್‌ದಲ್ಲಿ ತೆಗೆದಾಗ ಅದರ ಉಷ್ಣತೆಯು ೪೧೦° ಫೆ. ಎಂದು ತಿಳಿಯಿತು. ಇನ್ನೊಂದನ್ನು ಮೇಲ್ಭಾಗ (Upper Geyser Basin) ದಲ್ಲಿ ಸುಮಾರು ೪೦೬ ಫೂಟು ಆಳದಲ್ಲಿ ತೆಗೆದು ಅದರ ಉಷ್ಣತೆಯು ೩೬೦° ಫೆ. ಎಂದು ತಿಳಿಯಲಾಯಿತು. ಇದಕ್ಕೆ ಕಾರಣವೆಂದರೆ ತಳದಲ್ಲಿರುವ ಲಾವಾರಸದ ಅತ್ಯುಷ್ಣತೆಯು; ಈ ಉಷ್ಣತೆಯಿಂದಾಗಿ ನೀರು ಕಾದು ಸಂದುಗಳ

ಮುಖಾಂತರ ಹೊರಬಂದು ಭೂಮಿಯ ಮೇಲೆ ಬುಗ್ಗೆಯೋಪಾದಿಯಲ್ಲಿ ಗೋಚರವಾಗುತ್ತದೆ.

ನೀರು ಮತ್ತು ಉಷ್ಣತೆಯಲ್ಲಿ ಕಂಡುಬರುವ ಸಮಾಸತೆಯು: ಉಷ್ಣತೆಯು ಭೂಮಿಯ ಪಾತಳಿಯ ಮೇಲಿಂದ ಭೂಗರ್ಭದೊಳಗೆ ಹರಿದು ಸಂಗ್ರಹವಾಗುವ ನೀರಿನ ಪ್ರಮಾಣವನ್ನು ಮತ್ತು ಅದು ಹೋಗಿ ಸಂಗ್ರಹವಾಗುವ ಆಳವನ್ನು ಅವಲಂಬಿಸಿರುತ್ತದೆ. ಹೆಚ್ಚು ಆಳದಲ್ಲಿ ಸಂಗ್ರಹವಾದ ನೀರು ಹೆಚ್ಚು ಉಷ್ಣವಾಗಿರುತ್ತದೆ, ಇಂಥ ಪ್ರದೇಶಗಳಲ್ಲಿಂದ ಏಳುವ ನೀರಿನ ಧಾರೆಯು ಬಿಸಿನೀರಿನ ಬುಗ್ಗೆಗಳಾಗಿದ್ದು ಒಂದೇಸವನೆ ಪುಟಿಯುತ್ತಿರುತ್ತವೆ. ಆದರೆ ನಡುವೆ ಬಿಟ್ಟು-ಬಿಟ್ಟು ಮೇಲೇರುವ ಬುಗ್ಗೆಗಳು ಹೆಚ್ಚು ಆಳದಿಂದ ಬರುವದಿಲ್ಲವಾದುದರಿಂದ ಅವುಗಳ ನೀರು ಉಷ್ಣವಾಗಿರುವುದೂ ಕಡಿಮೆ. ಅಲ್ಲದೆ ಅವುಗಳ ತಳದಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹವಾಗಿರುವುದೂ ಇಲ್ಲ.

ಗೈಸರುಗಳ ನಳಿಕೆ ಮತ್ತು ನೀರಿನ ಸಂಗ್ರಾಹಕ ಸ್ಥಳ: ಗೈಸರುಗಳಲ್ಲಿ ಕೇವಲ ಮೇಲಿನ ಕೊಳವೆಯು ಕಾಣುತ್ತಿರುತ್ತದೆ. ಇದು ಆಕಾರ ಮತ್ತು ಆಳದಲ್ಲಿ ಅಸ್ಪಷ್ಟವಾಗಿರುತ್ತದೆ. ಗುಹೆಗಳೋಪಾದಿಯಲ್ಲಿರುವ ಅನೇಕ ಸೀಳು ದಾರಿಗಳು ಇದಕ್ಕೆ ಬಂದು ಕೂಡುತ್ತವೆ. ಇವುಗಳ ಮುಖಾಂತರ ನೀರು ಕೆಳಗಿಳಿದು ಅಗ್ನಿಜನ್ಯ ಶಿಲಾ-ಪದರುಗಳನ್ನು ತಲುಪಿ ಕಾಯಲಾರಂಭಿಸುವುದು (ಚಿತ್ರ-೨) ಇವು ನೀರಿನ ಸಂಗ್ರಾಹಕ ಸ್ಥಳಗಳಾಗಿದ್ದು "ಯೆಲೊಸ್ಟೋನ್" ಪಾರ್ಕದಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಅವು ಭೂಮಿಯ ಒಳಗೆ ಸುಮಾರು ೪೦೦ ಫೂಟಿನವರೆಗೆ ಹಬ್ಬಿಕೊಂಡಿವೆ.

ಬಿಸಿನೀರಿನ ಬುಗ್ಗೆಗಳು ತಡೆ–ತಡೆದು ಬರಲು ಕಾರಣಗಳು: ಬಿಸಿನೀರು ಒಂದೇ ಸವನೆ ಭೂಮಿಯೊಳಗಿಂದ ಚಿಮ್ಮುವುದಕ್ಕಾಗಲಿ ಇಲ್ಲವೆ ತಡೆತಡೆದು ಬರುವುದಕ್ಕಾಗಲಿ ಕಾರಣವುಂಟು. ಭೂಮಿಯ ಮೇಲ್ಭಾಗದಿಂದ ಅಗ್ನಿಶಿಲೆಯ ವರೆಗಿರುವ ನೀರಿನ ಧಾರೆಯು ಎಲ್ಲ ಕಡೆಗೂ ಒಂದೇ ರೀತಿಯಾಗಿ ಅಲ್ಲಿ ಸಂಗ್ರಹವಾಗುವ ನೀರು ಕಡಿಮೆಯಾಗಿದ್ದರೆ, ಕೇವಲ ಕುದಿಯುವ ನೀರು ಇಲ್ಲವೆ ಉಗಿಯು ಕಂಡುಬರುತ್ತಿತ್ತು. ಆದರೆ ಇದು ಹಾಗಿರದೆ, ಬುಗ್ಗೆಗಳು ಹರಿದು ಹೊರಬರಲಿ ಸಾಕಷ್ಟು ನೀರಿನ ಸಂಗ್ರಹ, ಉಷ್ಣತೆ ಭೂಗರ್ಭದಲ್ಲಿರಬೇಕಾದುದು ಸ್ವಾಭಾವಿಕವು. ಇಲ್ಲಿ, ನಾವು, ನಡುವೆ ಬಿಟ್ಟು-ಬಿಟ್ಟು ಹರಿಯುವ ಬುಗ್ಗೆಗಳನ್ನೂ ಕಾಣುವುದರಿಂದ ಅವುಗಳಿಗೆ ಕೆಳಗಿನ ಕಾರಣಗಳನ್ನು ಸಂಗ್ರಹಿಸ ಬಹುದು.

(i) ಭೂಪೃಷ್ಠದ ಮೇಲಿನ ನೀರು ಕೆಳಗೆ ಅಗ್ನಿಶಿಲೆಗಳ ಹತ್ತರ ಹೋಗಿ

ಸಂಗ್ರಹವಾಗುತ್ತಲೆ ಕಾದು ಉಗಿಯಾಗಲಾರಂಭಿಸುವುದು. ಈ ಉಗಿಯೇ ಮೇಲೇರಿ ನೀರನ್ನು ಮೆಲಕ್ಕೆ ಒತ್ತಲು ಪ್ರಯತ್ನಿಸುವದು.



ಚಿತ್ರ ೨

ಬಿಸಿನೀರಿನ ಬುಗ್ಗೆ (ಗೈಸರು) ಗಳುಂಟಾಗುವ ಕಾರಣ ತೋರಿಸಲಾಗಿದೆ.

(ii) ನೀರು ಮೇಲೇರಹತ್ತುವುದರಿಂದ ಒತ್ತಡವು ಕಡಿಮೆಯಾಗಿ ಕೆಳಗಿನ ನೀರು ಹೆಚ್ಚು ಉಗಿಯಾಗಲಾರಂಭಿಸುವದು.

(iii) ಮೇಲಿನ ಎರಡೂ ಕಾರಣಗಳಿಂದಾಗಿ ಕೊಳವೆಯೊಳಗಿರುವ ನೀರು ಅಂತರ್ಜಲದ ಪಾತಳಿಯನ್ನು ಮುಟ್ಟಿ ಸಾಕಷ್ಟು ಸಂಗ್ರಹವಾಗದೇ ಮಧ್ಯಂತರ ದಲ್ಲಿಯೆ ತನ್ನ ಕಾರ್ಯ ಪ್ರಾರಂಭಿಸುವದು. ಇದರಿಂದಾಗಿ ಸಾಕಷ್ಟು ಕಾದ ನೀರು ಕೊನೆಗೆ ಕುದಿಯುವ ಬಿಂದುವನ್ನು ಮುಟ್ಟುತ್ತದೆ. ಆಗ ಅಲ್ಲಿ ಕುದಿಯುವ ನೀರಿನ ಗುಳ್ಳೆಗಳಾಗಿ ಕೆಳಗಿನಿಂದ ಮೇಲಕ್ಕೊತ್ತಲ್ಪಟ್ಟು ಕೊಳವೆ ಯಲ್ಲಿಯ ಒತ್ತಡವನ್ನು ಮತ್ತಷ್ಟು ಕಡಿಮೆ ಮಾಡುತ್ತದೆ.

(iv) ಹೀಗೆ ಕೊಳವೆಯಲ್ಲಿ ಹಬ್ಬಿದ ಉಗಿಯು ಹೊರಬರಲಾರಂಭಿಸಿ ಅದರಲ್ಲಿರುವ ನೀರಿನ ಸಂಗಡ ಭೂಮಿಯ ಮೇಲೆ ಪುಟಿಯಲಾರಂಭಿಸುವದು.

ಆದರೆ, ಇದು ಒಂದೇ ಸವನೆ ನಡೆಯದೆ ಮಧ್ಯಂತರದಲ್ಲಿ ಬಿಟ್ಟು ಬಿಟ್ಟು ಪ್ರಾರಂಭವಾಗುತ್ತದೆ.

ಬಿಸಿನೀರಿನ ಬುಗ್ಗೆಗಳಿಂದಾಗುವ ಸಂಗ್ರಹಣೆ ಮತ್ತು ಭೂರಚನೆ: ಬಿಸಿನೀರಿನಿಂದ ಕೂಡಿದ ಗೈಸರುಗಳಿಂದಾಗಿ ಸಿಲಿಕಾ Silica) ಅಂದರೆ ಗೈಸರೈಟ್ (Geyserite) ವು ಒಳಗೂ ಹೊರಗೂ ಕೂಡಿಯೇ ಸಂಗ್ರಹವಾಗುತ್ತದೆ. ಬುಗ್ಗೆಗಳ ಮಗ್ಗಲಲ್ಲಿ ಸಂಗ್ರಹವಾಗುವ ಸಿಲಿಕಾ ಸಂಗ್ರಹಣೆಗೆ "ಸಿಲಿಸಿಯುಸ್ ಸಿಂಟಸ್" (Silicious Sinter) ಎನ್ನುವರು. "ಆಲ್ಗಿಯು" (Algae) ಎನ್ನುವ ಪ್ರಾಣಿಯೂ ಬಿಸಿನೀರಿನಲ್ಲಿ ಕಂಡುಬರುತ್ತದೆ. ಅಲ್ಲದೆ ಈ ಸಿಲಿಕಾ ಸಂಗ್ರಹಣೆಯಲ್ಲಿ ಅನೇಕ ಬಣ್ಣಗಳಿಂದ ಕೂಡಿದ ಸುಂದರವಾದ ದೃಶ್ಯವು ತೋರಬರುತ್ತದೆ. ಜಗತ್ತಿನ ಎಲ್ಲ ಗೈಸರುಗಳಲ್ಲಿ ಸಂಗ್ರಹವಾಗುವ ಸಿಲಿಕಾ ಪ್ರಮಾಣವು ಯು. ಎಸ್. ಎ. "ಮ್ಯಾಮಥ್ ಉಷ್ಣ ಬುಗ್ಗೆ" (Mammoth Hot Spring) ಯಲ್ಲಿ ಸಂಗ್ರಹವಾಗುವ ಕ್ಯಾಲ್ಸಿಯಂ ಕಾರ್ಬೋನೇಟ್ (Calcium Carbonate) ಕ್ಕಿಂತಲೂ ಕಡಿಮೆಯಾಗಿದೆ. ಹೀಗಾಗಿ ಸಿಲಿಕಾದ ಅಲ್ಪ-ಸ್ವಲ್ಪ ಸಂಗ್ರಹಣೆಯು ಅಲ್ಲಲ್ಲಿ ತೋರಿಬರುತ್ತದೆ. ಈ ಸಂಗ್ರಹಣೆಯಿರುವ ಭೂಪ್ರದೇಶವು ಬಂಡೆಗಳೋಪಾದಿಯಲ್ಲಿ ಕೆಲವು ಕಡೆಗೆ ಇಳಿಜಾರಾಗಿ (Steppe like topography) ಪಾವಟಿಗೆಗಳಂತೆ ಇನ್ನು ಕೆಲವೆಡೆ ಭೂಮಿಯು ಅಸ್ತವ್ಯಸ್ತವಾಗಿ ಹಬ್ಬಿದ ಪಾತಳಿಯಂತೆ ಹಾಗೂ ಹಲವಾರು ಕಡೆಗೆ ಗುಹೆಗಳ ರಚನೆಯಾದದ್ದು ಕಂಡು ಬರುತ್ತದೆ. ಒಟ್ಟಾರೆ ಗೈಸರುಗಳಿರುವ ಪ್ರದೇಶವು ನಾನಾ ಬಗೆಯ ಭೂರಚನೆಯಿಂದ ಕೂಡಿದ್ದು ವಿವಿಧ ಮಣ್ಣಿನ ತರಗಳಿಂದೊಡಗೂಡಿ ದಿನ್ನೆ, ಕೊಳ್ಳ, ಕಂದರಗಳಿಂದ ಸುಂದರವಾಗಿರುತ್ತದೆ.

ಆಯಿಸ್‌ಲ್ಯಾಂಡಿನಲ್ಲಿ ಕಂಡು ಬರುವ ದೊಡ್ಡ ಪ್ರಮಾಣದ ಉಷ್ಣೋದಕಗಳಲ್ಲಿ ನೀರು ಇಕ್ಕಟ್ಟಾದ ಕೊಳವೆಯ ಮುಖಾಂತರ ಹೊರಬಂದು ಕೊನೆಗೆ ಬಸಿಯ ಆಕಾರದ ಕೊಳವೆಯ ಮುಖಾಂತರ ಹೊರಚಿಮ್ಮುತ್ತಿರುತ್ತದೆ. ಈ ಬುಗ್ಗೆಗಳ ನೀರು ಜೋರಿನಿಂದ ಪುಟಿದು, ಮೇಲೆ ಬರದಿದ್ದಾಗ ಕೊಳವೆಯ ಮೆಲ್ಭಾಗದಲ್ಲಿದ್ದ ತಗ್ಗಿನಲ್ಲಿ ಸಂಗ್ರಹವಾಗುವದು. ಆಗ ಈ ನೀರಿನ ಉಷ್ಣತೆಯು ೧೭೦° ಫೆ. ದಿಂದ ೧೯೦° ಫೆ. ವರೆಗೆ ಇರುತ್ತದೆ. ಆದರೆ ಕೊಳವೆಯ ಕೆಳಗೆ (ಭೂಗರ್ಭದೊಳಗೆ) ಸುಮಾರು ೧೦೦ ಫೂಟು ಆಳದಲ್ಲಿ ಉಷ್ಣತೆಯು ೨೬೦° ಫೆ. ಇರುವದು ತೋರಿಬರುತ್ತದೆ. ಹೀಗಿರುವಾಗ ಕೊಳವೆಯ ಕೆಳಗೆ ಹಾಗೂ ಮೇಲ್ಭಾಗದಲ್ಲಿರುವ ನೀರು ಆಗಾಗ ಮೇಲಕ್ಕೆ ಚಿಮ್ಮಲ್ಪಟ್ಟು ಅದರೊಳಗಿರುವ ಉಗಿಯು ಮೋಡಗಳಲ್ಲಿ ಬೆರತು ಹೋಗುತ್ತದೆ. ಆಯಿಸ್‌ಲ್ಯಾಂಡಿನಲ್ಲಿ ಕಂಡುಬರುವ ಸಾವಿರಾರು ಬುಗ್ಗೆಗಳು ಈ ಮಾದರಿಯವಾಗಿವೆ. (ಚಿತ್ರ–೩)

ನ್ಯೂಜಿಲ್ಯಾಂಡ, ಯುಗೊಸ್ಲಾವಿಯು, ಯು. ಎಸ್. ಎ., ಪ. ಜರ್ಮನಿಗಳಲ್ಲಿಯೂ ಇವುಗಳ ಸಂಖ್ಯೆ ಸಾಕಷ್ಟಿದ್ದು ಅವು ಅಲ್ಲಿಯ ಮಹಾಸಾಗರ ಇಲ್ಲವೆ



ಚಿತ್ರ ೩.

Thermal Springs in Iceland dots indicate the important centres and groups of Springs.

ದೊಡ್ಡ-ದೊಡ್ಡ ಜಲಾಶಯಗಳ ದಂಡೆಗುಂಟ ಹಬ್ಬಿರುವುದನ್ನು ಕಾಣುತ್ತೇವೆ. ಅಗ್ನಿ ಪರ್ವತದ ಮುಖದಿಂದ ಮೊಟ್ಟಮೊದಲು ಹೊರಹೊಮ್ಮುವ ವಸ್ತು ನೀರಾವಿಯಾಗಿರುವುದರಿಂದ ಈ ಬುಗ್ಗೆಗಳು ಸಮುದ್ರ ಮೊದಲಾದ ದೊಡ್ಡ ಜಲಾಶಯಗಳ ಸಮೀಪದಲ್ಲಿರುವುದಕ್ಕೆ ಕಾರಣವೆಂದು ತಿಳಿದು ಬರುತ್ತದೆ.

ಭಾರತದಲ್ಲಿ ಬಿಸಿನೀರಿನ ಬುಗ್ಗೆಗಳ ಉದಾಹರಣೆಗಳು : ಭಾರತದಲ್ಲಿ ಮಹತ್ವವಾದ ಬಿಸಿನೀರಿನ ಬುಗ್ಗೆಗಳು ಕಂಡು ಬರುವದಿಲ್ಲ. ಒಂದೆರಡು ಅಲ್ಲಲ್ಲಿ ಉತ್ಪತ್ತಿಯಾಗಿದ್ದರೂ ಅವು ಬೆಳಕಿಗೆ ಬಂದಿರುವುದಿಲ್ಲ ಏಕೆಂದರೆ ಇನ್ನುಳಿದ ದೇಶಗಳಲ್ಲಿಯಂತೆ ಅವುಗಳ ಮೇಲೆ ಹೆಚ್ಚಿನ ಅಭ್ಯಾಸ ಪ್ರಾರಂಭವಾಗಿಲ್ಲವೆಂದೇ ಹೇಳಬಹುದು. ಇತ್ತೀಚೆಗೆ ಬೆಳಕಿಗೆ ಬಂದ ಹಲವು ಬುಗ್ಗೆಗಳು ಮಹತ್ವದ ಪಾತ್ರವಹಿಸಿವೆ. ಉದಾಹರಣೆಗಾಗಿ, ಬಿಹಾರ ರಾಜ್ಯದ ಮೊಂಘೀರದಲ್ಲಿರುವ ಸೀತಾಕುಂಡ ಪಾಟ್ನಾದ ಹತ್ತರವಿರುವ ರಾಜಘೀರು ಪಶ್ಚಿಮ ಬಂಗಾಲದ ಬೀರಭೂಮ ಜಿಲ್ಲೆಯಲ್ಲಿರುವ ವಕ್ರೇಶ್ವರಿ; ಮುಂಬಯಿ ಹತ್ತರವಿರುವ ಲಸುದಾ ಮತ್ತು ವಜ್ರಬಾಯಿ (ಈಗ ಅದಕ್ಕೆ ವಜ್ರೇಶ್ವರಿ ಎಂಬ ಹೆಸರು ವಾಡಿಕೆಯಾಗಿದೆ); ಪಂಜಾಬದ ಕುಲು ಪ್ರದೇಶದಲ್ಲಿರುವ ಮಣಿಕರ್ಣ ಹಾಗೂ ಕಾಂಗ್ರಾ

ದಲ್ಲಿಯ ಜ್ವಾಲಾಮುಖಿ; ಅಲ್ಲದೆ ಜಮ್ಮು-ಕಾಶ್ಮೀರದ ಪೂಂಚ ಪ್ರದೇಶದಲ್ಲಿರುವ ತಾತಾಪಾನಿ ಮೊದಲಾದವು ಪ್ರಮುಖವಾಗಿವೆ.

ಭಾರತದಲ್ಲಿ ಬಿಸಿನೀರಿನ ಬುಗ್ಗೆಗಳಿಂದ ಹೊರಹೊಮ್ಮುವ ವಸ್ತುಗಳು ಹಾಗೂ ಆ ವಸ್ತುಗಳಿಂದ ನಿರ್ಮಾಣವಾಗುವ ಭೂರಚನೆ ವಿಶಿಷ್ಟವಾಗಿಯೇ ಕಂಡುಬರುತ್ತವೆ. ಈ ಬುಗ್ಗೆಗಳಿಂದ ಹೊರಹೊಮ್ಮುವ ಬಿಸಿನೀರಿನ ಸಂಗಡ ಅನೇಕ ವಸ್ತುಗಳು ಮಿಶ್ರಣಗೊಂಡು ಬರುತ್ತವೆ ಈ ನೀರಿನೊಂದಿಗೆ ಹೊರ ಬರುವ ಪದಾರ್ಥಗಳು ಭೂಮಿಯ ಮೇಲೆ ಬಂದೊಡನೆ ವಾಯುರೂಪ ಹೊಂದಿ ಆರಿಹೋಗುತ್ತವೆ. ಆ ಪದಾರ್ಥಗಳು ನೀರಿನೊಳಗೆ ಕರಗುವ (Solvents) ಉತ್ತಮ ವಸ್ತುಗಳಾಗಿವೆ. ನೀರು ಹೊರಬರುವಾಗ ಅಲ್ಲಿಯ ಕಲ್ಲುಗಳಲ್ಲಿರುವ ಮಿಶ್ರಣದಾಯಕ ವಸ್ತುಗಳನ್ನೊಳಗೊಂಡು ಬಂದು ಭೂಮಿಯ ಮೇಲೆ ಅಲ್ಲಲ್ಲಿ ಕಂಡು ಬರುವ ಸಂದುಗಳಲ್ಲಿ ಸಂಗ್ರಹವಾಗುತ್ತವೆ. ಬಿಸಿನೀರಿನ ಜೊತೆಗೆ ಸೇರಿಕೊಂಡ ಅಂಗಾರಾಮ್ಲವಾಯು (Carbondioxide)ವು ಸುಣ್ಣದ ಅಂಶ (Carbonate or lime Stone) ವನ್ನು ಮಾತ್ರ ಹೀರಿಕೊಳ್ಳು ವುದು. ಇಂಥ ನೀರು ಭೂಮಿಯ ಮೇಲೆ ಸುಣ್ಣದ ಅಂಶ (Calcium Carbonate) ವಿರುವ ವಸ್ತುವನ್ನು ಮಾತ್ರ ಬಿಡುವುದರಿಂದ ಭೂಮಿಯ ಮೇಲೆ ಬುಗುರಿ ಇಲ್ಲವೆ ಶಂಕುವಿನಾಕಾರಾದ (Cone like structure) ಅಥವಾ ಹೊರ ಪೊರೆಯುಳ್ಳ ಉಬ್ಬು ಭಾಗ (Encrustation)ವು ತಯಾರಾಗುವದು. ಸುಣ್ಣದ ಅಂಶದಿಂದ ನಿರ್ಮಿತವಾದ ಈ ರಚನೆಗೆ "ಟುಫಾ" ಅಥವಾ "ಟ್ರಾವರ್ಟಿನ" (Tufa or Travertine) ಎನ್ನುವರು. ನೀರು ತನ್ನ ಮಿಶ್ರಣದೊಂದಿಗೆ ಕ್ಷಾರ ಯುತ ವಸ್ತುವನ್ನೊಳಗೊಂಡಿದ್ದರೆ ಅದು ಸಿಲಿಕಾ (Silica)ದ ಅಂಶವನ್ನು ತೆಗೆದುಕೊಂಡು ಭೂಭಾಗದ ಮೇಲೆ ಬಿಡುವದು. ಇಂಥ ಒಟ್ಟುವಿಕೆಗೆ ಸಿಲಿಕಾ ಲವಣದ ವಸ್ತುಗಳ (Silicious substances) ಒಟ್ಟುವಿಕೆಯೆನ್ನುವರು. ಉದಾ ಹರಣೆಗಾಗಿ. ಬಿಳಿಗಾರ (Borax,) ಪಟಗ (Alum,) ಗಂಧಕ (Sulphur) ಮತ್ತು ಶಂಖಪಾಷಾಣ ಅಥವಾ ಅರದಾಳ (Arsenic) ಇವೆಲ್ಲ ವಸ್ತುಗಳ ಮಿಶ್ರಣವು ಸಹ ನೀರಿನಲ್ಲಿ ಕರಗಿದ್ದು ಕಂಡು ಬರುತ್ತದೆ. ಮೇಲಿನ ಎಲ್ಲ ಮಿಶ್ರಣವನ್ನೊಳ ಗೊಂಡು ಹೊರಬರುವ ಬಿಸಿನೀರು ರೋಗ ನಿರ್ಮೂಲನ ಕಾರ್ಯದ ಮಹ ತ್ವದ ಪಾತ್ರ ವಹಿಸಿವೆ.

ಇತ್ತೀಚೆಗೆ ಈ ಬುಗ್ಗೆಗಳು ಪ್ರೇಕ್ಷಣೀಯ ಸ್ಥಳಗಳಾಗಿ ಭಾರತದ ಪ್ರವಾ- ಸೋದ್ಧಿಮೆ (Tourist industry) ಯ ಹಿರಿಮೆಯನ್ನು ಹೆಚ್ಚಿಸಿವೆ. ಇದಕ್ಕೆ ಕಾರಣವೇನಂದರೆ— ಈ ಬಿಸಿನೀರಿನಲ್ಲಿ ಕಂಡುಬರುವ ರೋಗನಿರ್ಮೂಲನಾ ಗುಣ ಹಾಗೂ ಅವು ಎಸಗಿದ ಸೌಂದರ್ಯವು ಇವುಗಳ ವೀಕ್ಷಣೆಗಾಗಿ ಸಾವಿರಾರು ಜನರು ದೂರ-ದೂರ ಪ್ರದೇಶಗಳಿಂದ ಬರುತ್ತಾರೆ. ಈ ಸ್ಥಳಗಳಲ್ಲಿ ಸ್ನಾನ

ಮಾಡಿ ಮನದಣಿಯೆ ಸೃಷ್ಟಿಯ ಸೊಬಗನ್ನು ಸವಿದು ಮರಳಿ ಬರುವ ಪ್ರವಾಸಿಕರನ್ನು ಎಷ್ಟೋ ಸಂಖ್ಯೆಯಲ್ಲಿ ಕಾಣುತ್ತೇವೆ ಇಂಥ ಉದಾಹರಣೆ ಮುಂಬಯಿ ಹತ್ತರವಿರುವ ವಜ್ರೇಶ್ವರಿ ಬಿಸಿನೀರಿನ ಬುಗ್ಗೆಯು ಮಹತ್ವದ್ದಾಗಿದೆ. ಇದು ಮುಂಬಯಿ ಪಟ್ಟಣದಿಂದ ಸುಮಾರು ೪೦ ಮೈಲು ದೂರದಲ್ಲಿದ್ದು ವಜ್ರೇಶ್ವರಿ ಎಂಬ ಅದೇ ಹೆಸರಿನ ದೇವಸ್ಥಾನದಿಂದ ಒಂದು ಮೈಲು ಅಂತರದಲ್ಲಿದೆ. ಅಲ್ಲಿ ಬೇರೆ-ಬೇರೆ ಸ್ಥಳಗಳಲ್ಲಿ ೨೧ ಬುಗ್ಗೆಗಳಿದ್ದು ಅವು ೨-೩ ಸಾಲುಗಳಲ್ಲಿ ಹಬ್ಬಿರುವುದನ್ನು ಕಾಣುತ್ತೇವೆ. ಈ ಬುಗ್ಗೆಗಳಿಂದ ಹೊರಹೊಮ್ಮುವ ನೀರಿನಲ್ಲಿ ಗಂಧಕ (Sulphur) ವು ಕೂಡಿದ್ದು, ಅದರಲ್ಲಿರುವ ಔಷಧೀಯ ಗುಣವು ಸಂಧಿವಾತ ಚರ್ಮರೋಗಗಳ ನಿವಾರಣೆಗೆ ಹೆಚ್ಚು ಸಹಾಯವಾಗಿದೆ. ಹೀಗೆ ಖರ್ಚಿನದಲ್ಲದ ಹಾಗೂ ಸಹಜವಾಗಿ ದೊರಕುವ ನಿಸರ್ಗ ಚಿಕಿತ್ಸೆ ಹೊಂದಲು ಸಾವಿರಾರು ಜನರು ಪ್ರತಿನಿತ್ಯ ಸಾಲು-ಸಾಲಾಗಿ ಹೋಗುತ್ತಿರುವ ದೃಶ್ಯ ಆಶ್ಚರ್ಯವನ್ನುಂಟು ಮಾಡುವದು. ಅದರಂತೆ ಪಾಟ್ನಾದ ಹತ್ತರ ರಾಜಘೀರದಲ್ಲಿರುವ ಬುಗ್ಗೆಯೂ ಪ್ರವಾಸಿಕರ ಕೇಂದ್ರವಾಗಿದೆ. ಹೀಗಾಗಿ ಭಾರತದಲ್ಲಿ ಬಿಸಿನೀರಿನ ಬುಗ್ಗೆಗಳು ಇತ್ತೀಚಿಗೆ ಬೆಳಕಿಗೆ ಬರಹತ್ತಿದ್ದು ಅವುಗಳ ಮಹತ್ವವನ್ನು ಇನ್ನೂ ಅರಿಯಬೇಕಾಗಿದೆ.

ಬಿಸಿನೀರಿನ ಬುಗ್ಗೆಗಳ ಉಪಯೋಗ :


೧) ಬಿಸಿನೀರಿನ ಬುಗ್ಗೆಗಳಿರುವ ಸುತ್ತಮುತ್ತಲಿನ ಪ್ರದೇಶದ ಜನರು ಅವುಗಳ ನೀರನ್ನು ತಮ್ಮ ದಿನಬಳಕೆಯ ಕೆಲಸಕ್ಕೆ ಉಪಯೋಗಿಸುತ್ತಾರೆ.

೨) ನೀರಿನ ಉಗಿಯನ್ನು ಕೆಲವು ಕಡೆಗೆ ಅಡುಗೆ ಮಾಡುವುದಕ್ಕೆ ಉಪಯೋಗಿಸುವದುಂಟು.

೩) ಇನ್ನು ಕೆಲವು ಕಡೆಗೆ ಈ ಬುಗ್ಗೆಗಳು ತಮ್ಮಿಷ್ಟ ಬಂದ ರೀತಿಯಲ್ಲಿ ಪುಟಿದು ಹೊರಬರುವ ಬಿಸಿನೀರು ಇಲ್ಲವೆ ಉಗಿಯ ಕಾರಂಜಿಗಳಾಗಿವೆ. ಇವುಗಳನ್ನು ಕೇವಲ ನೋಡಿ ಸಂತೋಷ ಹೊಂದಬಹುದು.

೪) ಈ ಬುಗ್ಗೆಗಳು ಕಂಡುಬರುವ ಅನೇಕ ಸ್ಥಳಗಳು ಪ್ರವಾಸೋದ್ಯಮ (Tourist Industry) ಯ ಪ್ರಮುಖ ಸ್ಥಾನಗಳಾಗಿವೆ.

ಯು. ಎಸ್. ಎ. ಯಲ್ಲಿ ಸುಮಾರು ೬೦-೬೫ ಬುಗ್ಗೆಗಳು ಕಂಡುಬರುತ್ತಿದ್ದು ಅವುಗಳ ನೀರು ದೊಡ್ಡ ಪ್ರಮಾಣದಲ್ಲಿ ಮೇಲೆ ಬರುತ್ತದೆ. (ಚಿತ್ರ-೪) ಅಲ್ಲಿರುವ ಪ್ರತಿಯೊಂದು ಉಷ್ಣೋದಕವು ಸುಮಾರು ಅರ್ಧ ಮಿಲಿಯನ್ ಜನಸಂಖ್ಯೆಯ ನೀರಿನ ಕೊರತೆಯನ್ನು ನಿವಾರಿಸುತ್ತದೆ. ಈ ಬುಗ್ಗೆಗಳು ಯು. ಎಸ್.ಎ.ದಲ್ಲಿ ಸುಮಾರು ನಾಲ್ಕು ಪ್ರದೇಶಗಳಲ್ಲಿ ಹಬ್ಬಿರುವದನ್ನು ಕಾಣುತ್ತೇವೆ.



ಚಿತ್ರ ೪.

Map showing the distribution in the United States of the 65 Springs having minimum Daily Discharge of 64,600,000 gallons. Each of these springs would supply the daily needs of 6,50,000 people.

(ಅ) ಉತ್ತರ ಫ್ಲೋರಿಡಾದ ಕಾರ್ಸ್ಟ್ ಪ್ರದೇಶ (Karst Region)

(ಬ) ದಕ್ಷಿಣ ಮಿಸೊರಿಯು, ಓಜರ್ಾರ್ಕ ಮತ್ತು ಅಲ್ಲಿರುವ ಲಾವಾಭೂಮಿ.

(ಕ) ಇಡಾಹೊದ ಸ್ನೇಕ್ ನದಿಯು ಕೊಳ್ಳ, ಮತ್ತು

(ಡ) ಪಶ್ಚಿಮ ಓರೆಗಾನ್ ಹಾಗೂ ಉತ್ತರ ಕ್ಯಾಲಿಫೋರ್ನಿಯ ಪ್ರದೇಶ ಗಳು.

ಈ ಉಷ್ಣೋದಕಗಳನ್ನು ಅಮೇರಿಕೆಯ ಮೂಲ ನಿವಾಸಿಗಳು ಮತ್ತು ಪಟ್ಟಣ ವಾಸಿಗಳು ತಮ್ಮ ಪ್ರತಿನಿತ್ಯದ ಬಳಕೆಗೋಸುಗ ಉಪಯೋಗಿಸುತ್ತಾರೆ. ಅಲ್ಲಿ ಈ ಗೈಸರುಗಳು ಕೊಳ್ಳಗಳ ಇಳಿಜಾರುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಈಗಲೂ ಅಲ್ಲಿಯ ಒಕ್ಕಲಿಗರಿಗೆ ಇವುಗಳ ನೀರು ಬಹಳ ಉಪಯೋಗವಾಗಿದೆ. ಇತ್ತೀಚೆಗೆ ಅನೇಕ ಬಾವಿಗಳನ್ನು ತೋಡಿ ನೀರನ್ನು ಬಳಸಿಕೊಳ್ಳಹತ್ತಿದ್ದಾರೆ. ಉಷ್ಣತೆ ಮತ್ತು ಔಷಧೀಯ ಮಹತ್ವ ಹೊಂದಿದ ಕೆಲವು ಉಷ್ಣೋದಕಗಳು ನಾಡಿನ ಅನೇಕ ಜನರು ವಾಸಿಸುವ ಕೇಂದ್ರಗಳಾಗಿ ಮಾರ್ಪಟ್ಟಿವೆ. ಅಮೇರಿಕ ಮತ್ತು ಯುರೋಪದಲ್ಲಿ ಇಂಥ ಸ್ಥಳಗಳು ಆರೋಗ್ಯಧಾಮ (Health Resorts) ಗಳಾಗಿ ಪಟ್ಟಣಗಳ ಅಭಿವೃದ್ಧಿಗೆ ಸಹಾಯವಾಗಿವೆ.

ನ್ಯೂಜಿಲ್ಯಾಂಡ ಹಾಗೂ ಐಸ್‌ಲ್ಯಾಂಡಗಳಲ್ಲಿರುವ ಬಿಸಿನೀರಿನ ಬುಗ್ಗೆಗಳ ನೀರು ಅಷ್ಟೊಂದು ಜೋರಿನಿಂದ ಮೇಲೆ ಪುಟಿಯುವದಿಲ್ಲ. ಆದರೆ ಸಾಕಷ್ಟು ಪ್ರಮಾಣದಲ್ಲಿ ಬಿಸಿತು ತಂಪು ಹವೆಯನ್ನು ಹೋಗಲಾಡಿಸುತ್ತವೆ. ಇಂಥ ಉಗಿಯನ್ನು ಹೊರಚೆಮ್ಮುವ ಗೈಸರುಗಳನ್ನು ಶಕ್ತಿಯನ್ನಾಗಿ ಉಪಯೋಗಿಸಬಹುದೆಂಬ ಕಲ್ಪನೆಯು ವಿಜ್ಞಾನಿಗಳಿಗೆ ಇತ್ತೀಚೆಗೆ ಹೊಳೆಯುಹತ್ತಿದೆ. ಐಸ್‌ಲ್ಯಾಂಡದಂಥ ದೇಶಗಳಲ್ಲಿ ಚಳಿಗಾಲದಲ್ಲಿ ಹವೆಯು ಅತೀ ತಂಪಾಗಿರುವುದರಿಂದ ಕಲ್ಲಿದ್ದಲು ಮೊದಲಾದ ವಸ್ತುಗಳನ್ನು ಉರಿಸಿ ಮನೆಗಳನ್ನು ಬೆಚ್ಚಗಿರಿಸಿಕೊಳ್ಳಬೇಕಾಗುತ್ತದೆ. ಕಾರಣ, ಕಣ್ಣೆದುರಿಗಿರುವ ಬಿಸಿನೀರಿನ ಬುಗ್ಗೆಗಳನ್ನೇಕೆ ಉಪಯೋಗಿಸಬಾರದೆಂಬ ವಿಚಾರ ಈಗ ಮನಸದಟ್ಟಾಗಹತ್ತಿದೆ. ಇನ್ನೊಂದು ಹೊಸವಿಚಾರವೆಂದರೆ— ಇಂಥ ಬುಗ್ಗೆಗಳು ನಾವು ತಿಳಿದಂತೆ ಬಿಸಿನೀರಿನ ಕೊಳಗಳಲ್ಲ; ಭೂಮಿಯ ಗರ್ಭದೊಳಗಿಂದ ಉಕ್ಕಿಬರುವ ನೀರೆಂದ ಮೇಲೆ ಭೂಮಿಯ ಒಳ-ಸ್ತರಗಳಲ್ಲಿ ಸೇರಿದ ಅನೇಕ ಲವಣಗಳು ಅದರಲ್ಲಿ ಕರಗಿಕೊಂಡಿರುತ್ತವೆ. ಜ್ವಾಲಾಮುಖಿ ಚಟುವಟಿಕೆಗಳಿರುವ ಎಷ್ಟೋ ಸ್ಥಳಗಳಲ್ಲಿ ಗಂಧಕವೂ, ಗಂಧಕದ ಆಮ್ಲವೂ ಇರುವುದುಂಟು. ಹಿಂದೆ ಹೇಳಿದಂತೆ ಕೆಲವು ಬುಗ್ಗೆಗಳಿಗೆ ಗಂಧಕದ ವಾಸನೆಯಿರುವುದೂ ತೋರಿಬರುತ್ತದೆ. ಇದೇ ಕಾರಣದಿಂದಾಗಿ ಜ್ವಾಲಾ-ಮುಖಿಯು ಲಾವಾದ್ರವವನ್ನು ಹೊರಗೆ ಎಸೆಯಲ್ಪಡುತ್ತದೆ. ಅದೇ ನೀರು ತಗ್ಗಾದ ಪ್ರದೇಶಗಳಲ್ಲಿ ಸಂಗ್ರಹವಾಗಿ ಕಲಕಿದ ರಾಡಿಯಾಗುತ್ತದೆ. ಇಂಥ ಕೊಳಗಳಿಂದ ಜನರಿಗೆ ಯಾವ ಲಾಭವೂ ತಟ್ಟುವದಿಲ್ಲ. ಈ ಬಗೆಯ ಬುಗ್ಗೆಗಳು ಇಟಲಿಯ ಟಸ್ಕನಿ (Tuscany) ಎಂಬ ಪ್ರಾಂತದಲ್ಲಿ ಕಂಡು ಬರುತ್ತವೆ.

ಇಟಲಿಯ ಟಸ್ಕನಿ ಪ್ರಾಂತವು ಪಶ್ಚಿಮ ಕರಾವಳಿಯ ತೀರದಲ್ಲಿ ಬಹು ಬಡವಾದ ಮಣ್ಣಿನಿಂದ ಕೂಡಿದ ನಾಡು. ಅಲ್ಲಿಯ ಬುಗ್ಗೆಗಳ ನೀರು ಹೊರಗೆಬಂದಾಗ ಕಲಕಿದ ರಾಡಿಯಂತಾಗಿರುತ್ತದೆ. ಈ ಬುಗ್ಗೆಗಳ ಆಮಾಂತರ ಹೆಚ್ಚು ಹೆಚ್ಚಾಗಿ ತೋರಿ ಬರುತ್ತಿದ್ದು ಅವುಗಳನ್ನು ಕುರಿತು ಅನೇಕರು ಸಂಶೋಧನೆ ನಡೆಸಿದ್ದಾರೆ. ಅದೇ ದೇಶದ ಒಬ್ಬ ವೈದ್ಯ ಡಾ. ಗಿಯೋವಾಗಿ ಟಾರ್ಗಿಯೊನಿ ಟಜಿಟಿ ಎಂಬವನು ಆ ದೇಶದ ಭೂಸ್ತರವನ್ನು ಪರಿಶೀಲಿಸಿ ಅದರ ವರ್ಣನೆಯನ್ನು ಕ್ರಿ. ಶ. ೧೭೭೮ ರಲ್ಲಿ ಪ್ರಕಟಪಡಿಸಿದನು. ಆ ವರ್ಣನೆಯು ಹಾಫರ್ ಎಂಬ ಜರ್ಮನಿಯ ಇನ್ನೊಬ್ಬ ವೈದ್ಯನನ್ನು ಆಕರ್ಷಿಸಿ, ಅವನು ಕುತೂಹಲದಿಂದ ಆ ಸ್ಥಳಕ್ಕೆ ಬಂದು ಅಲ್ಲಿದ್ದ ದೊಡ್ಡ ಬಿಸಿನೀರಿನ ಬುಗ್ಗೆಯನ್ನು ಪರಿಶೀಲಿಸಿದನು. ಆಗ ಅದರಲ್ಲಿ ನೀರು ಕೆಸರಾಗಿ ಮಣ್ಣಿನ ಜೊತೆಗೆ ಕೂಡಿದ್ದು ಕಂಡುಬಂದಿತು. ಅಲ್ಲದೆ, ಅದರಲ್ಲಿ ಬೋರಿಕ್ ದ್ರಾವಣ ಕರಗಿದ್ದನ್ನೂ ಕಂಡು ಕೊಂಡನು. ಕ್ರಿ. ಶ. ೧೭೦೦ರಲ್ಲಿ ಡಚ್ ವಿಜ್ಞಾನಿಯೊಬ್ಬನು ಈ ದ್ರಾವಣವನ್ನು ಪ್ರತ್ಯೇಕಿಸಿ ಅದೊಂದು ಔಷಧವೆಂದು ಪರಿಗಣಿಸಿದನು.

ಬೋರಿಕ್ ದ್ರಾವಣದ ತಯಾರಿಕೆ : ಬಿಸಿನೀರಿನ ಬುಗ್ಗೆಗಳಿಂದ ಹೊರ ಹೊಮ್ಮುವ ಉಗಿಯನ್ನು ಇಟ್ಟಿಗೆಯ ದೊಡ್ಡ ದೊಡ್ಡ ಗೂಡುಗಳನ್ನು ಕಟ್ಟಿ ಸಂಗ್ರಹಿಸುತ್ತಿದ್ದರು. ಲಾರ್ಡರೆಲ್ಲೊ ಸಂಸ್ಥೆಯ ಫ್ರಾನ್ಸಿಸ್ಕೊ ಎಂಬಾತನು ಈ ಉಗಿಯನ್ನು ಯಂತ್ರಶಕ್ತಿಗಾಗಿ ಉಪಯೋಗಿಸಬಹುದೆಂಬುದನ್ನು ಕಂಡು ಹಿಡಿದನು. ಕ್ರಿ. ಶ. ೧೮೯೪ರಲ್ಲಿ ಡಾ. ರೆಯಿನೊ (Raynaut) ಎಂಬುವನು ಅಂಥ ಉಗಿಯಿಂದ ಯಂತ್ರಶಕ್ತಿಯನ್ನು ಸಂಪಾದಿಸಲು ಪ್ರಥಮ ಪ್ರಯತ್ನ ಮಾಡಿದನು. ಮೊದಲನೆಯ ಮಹಾಯುದ್ಧದ ನಂತರ ಪ್ರಪಂಚದಲ್ಲಿ ಎಣ್ಣೆಗಾಗಿ ನೆಲವನ್ನು ಕೊರೆಯುವ ಬೈರಿಗೆಗಳು ನಿರ್ಮಾಣಗೊಂಡವು. ಈ ಬೈರಿಗೆಗಳನ್ನು ಆಳವಾದ ಉಗಿಭಾವಿಗಳನ್ನು ಕೊರೆಯಲಿಕ್ಕೆ ಉಪಯೋಗಿಸ ತೊಡಗಿದರು. ಎರಡನೆಯ ಮಹಾಯುದ್ಧ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಲಾರ್ಡರೆಲ್ಲೊ ಪ್ರದೇಶದಲ್ಲಿ ಇಂಥ ಸುಮಾರು ೧೪೦ ಬಾವಿಗಳನ್ನು ಕೊರೆದು ಅವುಗಳಿಂದ ಪ್ರತಿ ತಾಸಿಗೆ ೭,೦೦೦ ಟನ್ ಪರಿಮಾಣದ ಉಗಿಯನ್ನು ಸಂಪಾದಿಸುತ್ತಿದ್ದರು. ಈ ಉದಾಹರಣೆಗಳನ್ನು ಕಂಡ ಇಟಲಿ, ಜಾವಾ, ನ್ಯೂಜಿಲ್ಯಾಂಡ ದೇಶದ ಜನರು ಈ ಉಗಿಯ ಉಪಯೋಗವನ್ನು ತಾವೂ ಮಾಡಿಕೊಳ್ಳಲಾರಂಭಿಸಿದರು. ಆದರೆ, ಯು.ಎಸ್.ಎ. ದಲ್ಲಿ ಇದರ ಲಾಭವನ್ನು ಹೆಚ್ಚಾಗಿ ಪಡೆಯಲಿಲ್ಲ. ಏಕೆಂದರೆ ಅಲ್ಲಿ ಧಾರಾಳವಾಗಿ ದೊರೆಯುವ ಜಲಶಕ್ತಿ, ಕಲ್ಲಿದ್ದಲು, ಪೆಟ್ರೊಲಿಯಂಗಳಿಂದಾಗಿ ಇದರ ಕಡೆಗೆ ಹೆಚ್ಚಾಗಿ ಲಕ್ಷ್ಯ ಪೂರೈಸಿಲ್ಲ. ಹೀಗೆ ಬಿಸಿನೀರಿನ ಬುಗ್ಗೆಗಳು ಭೂರಚನಾ ಶಾಸ್ತ್ರದ ಮಹತ್ವದ ಅಂಶಗಳಾಗಿ ಪರಿಣಮಿಸಿವೆ.

ಗ್ರಂಥಋಣ

ಕನ್ನಡ ಗ್ರಂಥಗಳು :

1. ವಿಜ್ಞಾನ ಪ್ರಪಂಚ,
—ಶಿವರಾಮ ಕಾರಂತ, ಪು.—೪೨೪

2. ಭೂಮಿಶಾಸ್ತ್ರ
—ಎನ್. ನಾರಾಯಣರಾವ್. ಪು.—೧೧೨

ಇಂಗ್ಲೀಷ ಗ್ರಂಥಗಳು :

1. Elements of Geography: Physical and Cultural,
—*Vernor C. Finch & Glenn. T Trewartha,*
pp. 401–404.

2. Physical Geography,
—*P. Lake*, pp. 384.

3. Principles of Physical Geography,
—*A. Dasgupta & A. N. Kapoor*, pp. 237, 239-40.

4. The Physical basis of Geography,
—*Miller*, pp. 75.

5. Principles of Physical Geography,
—*F. J. Monkhouse*, pp. 62-63.

6. Introduction to Physical Geology,
– *A. K. Dutta*, pp. 197.

7. Geomorphology,
—*Vonengeln*, pp. 610-611.

8. Introduction to Geology,
—*E. B. Branson & W. A. Tarr*,
pp. 31-33 and 145-147.

9. Ground work of Modern Geography,
—*Albert Wilmore*, pp. 35.

10. Text book of Geomorphology,
—*Worcester*, pp. 452-459.

★ ಜಿ. ವ್ಹಿ. ತೊಗರಿ

ಹಳತು - ಹೊಸತು

ಎತ್ತಲಾರದ ಹತ್ತು ಮೊಳ ಸೀರೆಯನು ಮೈತುಂಬ ಸುತ್ತಿ
ಕಪ್ಪು ಹೊಲಗಳ ಮಧ್ಯೆ ಹರಿವ ಹೊಳೆಯಂತೆ
ಹೊಳೆವ ಬೈತಲೆ ಕೂಡ ಕಾಣದಂತೆ
ಹಾದು ಹೋದರೆ ಮೂಗಿಗೆ ಹೊಡೆವ ವಾಸನೆಯ,
ಸೆರಗಿನಡಿಯ ತುರುಬಿನಲಿ ಸಿಕ್ಕು ಬಾಡಿ—
ವಿಲಿವಿಲಿ ಒದ್ದಾಡಿ ಕೆಂಬಣ್ಣಕ್ಕೆ ತಿರುಗಿದ ಕೇದಗಿ.
ಕಣದಗಲ ಕುಂಕುಮವ ಹಣೆಯಲ್ಲಿ ಹೊತ್ತು
ಹೊಳ್ಳೆ ಹರಿವ ಭಾರದ, ಜೋಕಾಲಿಯಾಡುವ ನತ್ತು
ಕಾಮನ ಬಿಲ್ಲಿನ ಮಿಂಚು ಪಟ್ಟೆ, ಕಮಲದ ಬೆಂಡೋಲೆ ಕಿವಿಯಲ್ಲಿಟ್ಟು
ಕುಪ್ಪಸದಡಿಯ ಕುಚಗಳ ಮೇಲೆ ಎದೆಭಾರ ಒಡವೆಗಳಿದ್ದರೂನು
ಬೆಣ್ಣೆಯಂತಹ ಗಲ್ಲಗಳ ಎಣ್ಣೆಬಸಿಯುವ ಮುಖವು
ಕಂಡ ಕಂಡವರಿಗೆ ಕಾಣದಂತೆ ತುಂಬು ಸೆರಗನು ಹೊತ್ತು
ಕೇಳಿದರೆ ಕಿವಿನಿಮಿರುವ ಕಾಜಿನ ಬಳೆಗಳನು ನುಡಿಸುತ್ತ
ಕಾಲ್ಬೆರಳ ಉಗುರು ಕಾಣಿಸದ ಸೀರೆಯಂಚು ನೆಲಗುಡಿಸುತ್ತ, ನವವ
ಪುರಾಣಕಾವ್ಯದ ಪರಿ ಹಳತು !

ಎಣ್ಣೆಕಾಣದ, ಹುಡಿಯುಡರಿದ ಬಾಬ್‌ಕಟ್ಟು
ಅಲ್ಲಲ್ಲಿ ಹಲ್ಲುಕಿರಿದ ಮೆಕ್ಕಿತೆನೆಯ ಜುಟ್ಟು.
ಕಣ್ಣಿಗೆ ಬೀಳುವ ಕೂದಲ ಹಿಡಿದು ಕಟ್ಟಿದ ಟೇಪು
ಆಸ್ಪತ್ರೆಯಲಿ ಗಾಯಾಳುವಿಗೆ ಹಾಕಿದ ಬ್ಯಾಂಡೇಜು.
ಪಾವಡರ್ ಮೆತ್ತಿದ ಮುಖದಲ್ಲಿ ಲಿಪ್‌ಸ್ಟಿಕ್ ಹಚ್ಚಿದ ತುಟಿ
ಬೂಸು ಗಟ್ಟಿದ ರೊಟ್ಟಿಯಲಿಟ್ಟ ಹಣ್ಣು ಮೆಣಸಿನಕಾಯಿ.
ಆಳುವ ಗಂಡ ಸತ್ತ ಮುಂಡೆಯೆಂದು ಅನ್ನದಿರಿ
ಭಣಗುಟ್ಟುವ ಕೈ, ಹಣೆ, ಕಿವಿ, ಮೂಗನು ನೋಡಿ.

ಅರೆಬ್ಲೌಜಿನ ಡೇರೆಯಲಿ ಪುಟಿಚೆಂಡುಗಳ ಹತ್ತಿಕ್ಕಿ
ಮಿನಿಸ್ಕರ್ಟ್ ತೊಟ್ಟು ಬಿಳುಪು ತೊಡೆಗಳ ಹೊಳಪಿಸುತ್ತ
ಕಂಡವರ ಕಣ್ಣುಗಳನು ಕುಕ್ಕಿಸುತ್ತ , ಮದವೇರಿಸುತ್ತ
ತುಂಬು ನಿತಂಬಗಳ ಮುಸೆದಾಟಕೆ ತಕ್ಕ ಹೆಜ್ಜೆಯು ತಾಳ ಹಾಕುತ್ತ
ಹೈಹೀಲ್ಡ್ ಶೂಜಿನ ಮೇಲೆ ಸರ್ಕಸ್ ಮಾಡುತ್ತ
ಮುಂಗಾಲ್ ಪುಟಿಗೆ ಕೊಟ್ಟು ಮುಂಜೋಲಿಯಲಿ ಸಾಗುವ
ನನ್ನ ಕಾವ್ಯದ ಬಗೆ ಹೊಸತು !

★ ಸಂಗಮೇಶ ಹಂದಿಗಿ

ಬಬಲಾದಿ ಸ್ವಾಮಿಗಳ ‘ ಮುಂಡಿಗೆ ಪದ ’

ಕೃಷ್ಣದಂಡ್ಯಽಲಿ ಬಬಲಾದ್ಯಾರ ಪತ್ತ್ಯಽಹೋದಾರೊಽ ಗಂಗಾಧರ
ಮರ್ತ್ಯದೊಳಗ ಮಾಯನಾದನ್ಯಽ ಸ್ವಾಮಿ ಅಪಸೋರಾಽಽಽ
ಜಂಗಮರೊಳಗ ಜಗದಭರಿತ ಲಿಂಗದೊಳಗ ಐಕ್ಯನಾದ
ಸಂಗಮನಾಥನ ಸಾಕ್ಷಿದಿಂದ ಸ್ವಾಮಿಹರಹರ ॥ ಪ ॥

ಕಡಗಿನ ಕಾಲ ಬಡವರಮ್ಯಾಲ ಬಾಳಮಾಯಾ ಇದ್ದಾರಣ್ಣಾ
ಹಮ್ಮದಮ್ಮ ಇದ್ದಿದ್ದಿಲ್ಲೊ ಬ್ರಹ್ಮದೇವರಿಗೆಽಽಽ
ಮೂರುಲೋಕದ ಮುಂಡಿ ಪಚ್ಚಾದಾರಿಗ್ಹೇಳಿ ಹೋದರಣ್ಣಾ
ಊರುಗೀರಿಗಿ ಹೋಗಿದ್ದಾನೇನೊ ಗಂಗಾಧರಽಽಽ
ಕಟದಕಂತಿ ದಿಟದ ದೇವರ ಮಟದೊಳಗ ಕಾಣುದಿಲ್ಲ
ಕಾಳಗೋದ್ಹಾಂಗಾದಿತಪ್ಪ ಸೂರ್ಯಚಂದಿರಽಽ
ಉತ್ತರದೇಶದ ಉರಿಯ ಒಳಗ ಗೊತ್ತುಮಾಡಿ ಪೇಳ್ಯಾರಣ್ಣಾ
ಮುಂದ ಬರುವ ನೀಲಗುದರಿ ಮ್ಯಾಲ ಸಾರವರಽಽ
ಮುಂದಾಗುವ ಭವಿಷ್ಯಕಾಲ ಹಿಂದ್ಹೇಳುವಂತ ಬಹಾದ್ದೂರ—
ಒಳಹೊರಗ ಎಲ್ಲ ತಿಳಿದವರ
ಕೇಜರಿ ಬುಜೇರಿ ಶಂಬಿಷಣ್ಮುಖ ಮುದ್ರಿಧರ ಕೆಂಪುಗೊರಳವರಽ
ಮಳಿಬೆಳಿ ಬೇಡಿ ಮಾನೂರ ಪಾದ ಹಿಡಿದಾರ ತಾಕುಮುವಂಥ ಅಧಿಕಾರ
ಲೆಕ್ಕವಿಲ್ಲದ ಬಗತರ ಬಂದು ದುಃಖಮಾಡಿ ಅಳತಾರಣ್ಣಾ
ಸಿಕ್ಕನೇನೊ ಶಿವನಮಗ ಮಾತಾಡು ದೇವರ
ಕೃಷ್ಣದಂಡ್ಯಽಲಿ......... ॥ ೧ ॥

ನರಕಂತಿ ತೊಟ್ಟಾರಣ್ಣಾ ಪಿರಿಯಭಾವ ತಿಳಿಯುಗುಡವ
ಬಗತಿಮಾಡುವಲ್ಲಿ ಬಸವರಾಜ ಇದ್ದಾಂಗ
ಅನ್ನಹಾಕುವಲ್ಲಿ ಪುಣ್ಯಪುರುಷವಾನ ಇದ್ದರಣ್ಣಾ
ಅಂಗಿಅರವಿ ಧೋತರ ಕೊಡುತಿದ್ದ ಬರಿಮೈಲಿದ್ದಾಂವಗ
ಧರಮರಾಜನ್ಹಾಂಗ ಪಾರಉಪಕಾರ ಮಾಡಿ ಹೋದರಣ್ಣಾ
ಪರಮೇಸುರ ಅನಿಸಿಗೊಂಡು ಧರಿಗಿ ಬಂದಾಗಽ
ಪಾರಿವಾಳ ಪಕ್ಷಿಗೋಳು ಬಿಳಿಮೊಲ ಸಾಕ್ಯಾರಣ್ಣಾ
ಅಂಜರದ ಹಣ್ಣು ಮೇಸತಾರೊ ಗಿಳ್ಯಽರಾಮಗ
ಹಿಂಡಿನ್ಯಾನ ಚಿಗರಿಹಾಂಗ ಪುಂಡೆಲ್ಲಿ ಅಗಲಿಹೋದ
ಗುಂಡಗಿಂಡ ಬಡದಿತ್ತೇನೊ ಗುಡ್ಡದವಾರ್ಯಾಗ

ಮುಲ್ಕಿರಾಜ ಇದ್ದಾಂಗಿದ್ದ ಬಲಿಯನ್ಯಾರೊಗೆದರಣ್ಣಾ
ನೆಲಿಯು ಮುರಿದಾಂಗಾದಿತಪ್ಪ ನೀರಹೊಳಿಯ್ಯಾಗ
ಎಂದಿಂದಿಗಾಗದಂತ ಮಂಡಲದರುವಾ ಮಾಶೇಷ ಭುಜಂಗ ಮರೆವಾ
ಧಡಿಯುಧೋತರ ಮಡಿಯು ಉಂಗುರ ಕೊಡಿಯು ಮ್ಯಾಲ ಒಡಿದಾರಣ್ಣಾ
ಅಬತಾಗಿರಿಮ್ಯಾಲ ಚೌರಹಾರತಿದ್ದುರಿ

ಕೃಷ್ಣದಂಡೀಲಿ......... ॥ ೨ ॥

ತಮುದಷ್ಟಿಯುವರು ಬಂದಾರಣ್ಣಾ ತಮ್ಮ ಮದುವಿ ಕಾರ್ಯಕ್ಕಾಗಿ
ಮೂರುದಿವಸ ಕುಂತಾರಣ್ಣಾ ಎಲ್ಲಿ ಬಿಡದಾಂಗ
ಚಂದರಗಿರಿ ದಂಕಾರೆಪ್ಪ ಮುಟ್ಟಿಸಪ್ಪಗ ಶರಣ ಮಾಡಿ
ನಂಣ ಮುಂಗತಿ ಅಗ್ಯಾರೇನೊ ಗದ್ದಿಗಿ ಮನ್ಯಾಗ
ಚನಬಸಪ್ಪಗ ಹೇಳತಾರ ಮಠದ ಕಡಿಗಿ ಬಾಳ ಜ್ವಾಕಿ
ಶಿವರುದ್ರಪ್ಪ ಹೋಗ್ಯಾನೇನೊ ಕೊಪ್ಪದೂರಿಗಿ
ಮಠಬಿಟ್ಟು ನಡೆದರೊ ಮಾದೇವ ತಮ್ಮ ಸಡಗರ ಯಾರಿಗಿಲ್ಲೊ ಹ್ಯಾಸರ
ಚೈತ್ರಮಾಸ ಬ್ಯಾಸಿಗಿ ಬಿಸಿಲ ಉರಿದ ಉಗ್ರ ಚಕದ್ಯಾಗ ಕುಂತಾರೊ ದರದರ
ದೊಳಿದಾಟ ಚಕಡಿಹೊಡೆದಾರೊ ಅವಸ್ಸರದಸರ ಮುಂದೆ—
ಹೋಗ್ಯೈತ್ರಿ ಉಮೇದಾರ
ಜಮಖಂಡಿ ಊರಿಗೊಳ್ಳೋರಣ್ಣಾ ತೀರ್ಥಕಾಯಿ ತರಸ್ಯಾರ ಐದಾರ್ಸ—
ತಂದಕೊಡತಾರ ಬಗತರsss
ಜಮಖಂಡ್ಯಾಗ ದಾಳಮಂದಿ ಬಗತರಿಗ್ಗೋಳಿ ದೊಂಬಾರಣ್ಣಾ
ನಮುದು ನಿಮುದು ಇದ ಅಪ್ಪಾ ಘಟ್ಟಿಕರಾರsss

ಕೃಷ್ಣದಂಡೀಲಿ...... ॥ ೩ ॥

ಮರುದಿನ ಹರ್‍ಯಾಗೆದ್ದು ಅವಸರ ಮಾಡಿ ಹೋದಾರಣ್ಣಾ ಕಮದಾಳೂರಿಗಿ
ಲಗ್ನದ ಗಂಟ ಮೋರ್ತನೋಡಿ ಗುಗ್ಗುಳ ತಗಿಸ್ಯಾರ ಜೋಡಿಗಿ ಜೋಡಿ
ಕರಡಿ ಡೊಳ್ಳ ಗರದಿ ಧ್ವನ್ಯಾದ್ಯಾರಪ್ಪ ಹೊರಗ ದೈಲಾಗ
ಗಂಗೈನವರ ಹೇಳತಾರ ಗುಗ್ಗುಳ ಮುಂದಕ ಸಾಗಲಂಥ
ನಾನು ಇಲ್ಲೆ ಕೂಡ್ರತಿನೊ ಗಿಡದ ನೆರಳಾಗ
ಬನ್ನಟ್ಟಿ ಅಗಸರ ಕಾಡ್ಯಾ ಬಂದ ನಿಂತೊ ಅವರ ಬದಿಲಿ
ಚಂದ ಚಂದ ಮಾಡಿದಾನೊ ಬಂದ ಗಳಿಗ್ಯಾಗ
ಅಮಲಿನೊಳಗ ತಮಲ ಬಂದು ಚಿನ್ನ ಭಿನ್ನ ಹಾರಿತಣ್ಣಾ
ಕಣ್ಣು ತೆರದು ಕೈಲಾಸದಿಂದ ಇಳಿದು ಬಂದವರು
ಒಮ್ಮಿದೊಮ್ಮೆಲೆ ದಿವಟಗಾರಿ ದಿಕ್ಕತಪ್ಪಿ ಹೌಹಾರಿ

ದೆವ್ವ ಬಡಿದಾಂಗಾಯಿತೊ ಆವಾಗss
ಗುರಿಹೊಡಿ ಗುಂಡ ಜಡಿದಾಂಗ ಹಾರಿತ್ರೊ ಹಲ್ಲಣ
ಒಮ್ಮಿದೊಮ್ಮಿಲೆ ಆತೊ ಮರಣ
ಎಂತ ಸಮಾಧಾನ ಸಾಗರದ ಹೊಳಿಯಂಥ ಗುಣ ಮರತಾರೊ—
ಗಂಗಾಧರನ
ಉಂಡ ಊಟ ಕಂಡಕನಸ ಮುಂಡಗ ಹೇಳುವಂತವ ನೀನೆ
ನಿಂದೆ ಕುಂದೆ ಆಡಾಂವಲ್ಲೊ ಯಾರಿಗೆಂದೆಂದು
ಕೃಷ್ಣದಂಡ್ಯಲಿ……… ॥ ೪ ॥

ಸಡಗರದ ದೇವರ ಇದ್ದಾರಣ್ಣ ಅಡವಿಪಾಲ ಆದರಣ್ಣ
ಎಂಥ ಬ್ರಹ್ಮ ಬರೆದಿದ್ದಾರೊ ಇದ ಕಾಯಮಾ
ಸೆಟ್ಟಿಯ ಬರೆದ ಬರಹಗೋಳು ಕಥೆಯು ಇದು ತಿಳಿಯುವದಿಲ್ಲ
ಇಂದು ಬಂದು ಒದಗಲಿಲ್ಲೊ ಕೇವಲ ಪರಮಾತ್ಮ
ತಂದಾರಣ್ಣ ಬಬಲಾದ್ಯೂರಿಗಿ ತಂದಿ ಷಣ್ಮುಖದೇವರ ಬದಿಲೆ
ಚಂದರಗಿರಿ ಹೊಂದಿತೀರುವ ಕಂದ ಸಿದ್ಧರಾಮು
ಮಂದಿ ಮಕ್ಕಳು ಕೂಡ್ಯಾರಣ್ಣ ಬಂಧು ಬಳಗ ಕೂಡಿಕೊಂಡು
ಚಂದದಿಂದ ಮಾಡ್ಯಾರವರು ಮಣ್ಣಿನ ಸಂಗ್ರಾಮು
ಮಾಯಿನ ತೊಳಲ ಮಂಟಪ ಕಟ್ಟಿ ಹೂವಿನ ಹಚ್ಚಡ ಹೊಚ್ಯಾರಣ್ಣ
ಕೈಲಾಸದಿಂದ ಇಳಿದು ಬಂದು ಸೂರ್ಯ ಚಂದಿರ
ಗುರುವಿನ ಮುಂದ ಗುಗ್ಗಳ ತಗಿಸಿ ಕರಪುದಾರತಿ ಬೆಳಗ್ಯಾರಣ್ಣ
ಏನ ತಂಪ ಉರುತಾವರಿ ಜ್ಯೋತಿ ಸಯ್ಯನ
ಮುಂದ ತಗಸ್ಯಾರೂ ಎಟ್ಟ ಊದಿನ ತಲವ ಭವಲೋಕಾತ್ರಿ ಒಲವ
ಗಂಡಮೆಟ್ಟಿ ಮುಂಡ ಬಬಲಾದಿ ಸಿದ್ಧರದರವ
ಮೇಕ ಮುಂಗಲಿ ಕಟ್ಟಿ ತಾ ಮೆರೆವ
ಪ್ರಾಣಲಿಂಗ ಪೋದಮ್ಯಾಲ ಬಾಣಬಡಿದು ಬಯಲಾಯ್ತೊ ತೋರಿಸಿ
ಹೋದಾರೊ ತಮ್ಮ ಪಸ್ತ,
ಕೃಷ್ಣದಂಡ್ಯಲಿ……… ॥ ೫ ॥

★ ಜಿ. ಎಂ. ಭೈರೊಡಗಿ

‘ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ’

(ಒಂದು ಸಮಾಲೋಚನೆ)

‘ಬಿಸಿಲು ಹೂ’ ಅರಳಿಸಿ ಕನ್ನಡ ಕಾವ್ಯಲೋಕದಲ್ಲಿ ಕಾಲಿರಿಸಿದ ಸೋಮಶೇಖರ ಇಮ್ರಾಪೂರ ಅವರು ‘ಬೆಳದಿಂಗಳು’ ಹರಡಿಸಿ ತುಂಬ ಪ್ರಸಿದ್ಧಿಯನ್ನು ಪಡೆದರು. ಅವರ ಕೆಲವು ಭಾವಗೀತೆಗಳು ಶಾಲೆ, ಕಾಲೇಜುಗಳ ಸಾಂಸ್ಕೃತಿಕ ಉತ್ಸವಗಳಲ್ಲಿ ಸುಶ್ರಾವ್ಯವಾಗಿ ಹಾಡಲ್ಪಟ್ಟು ರಸಿಕರನ್ನು ರಂಜಿಸಿವೆ. ಈ ರಂಜಕತೆಯೇ ಅವರಿಗೆ ಪ್ರೋತ್ಸಾಹವನ್ನಿತ್ತು ‘ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ’ ಕವನ ಸಂಗ್ರಹದ ಪ್ರಕಟನೆಗೆ ದಾರಿ ಮಾಡಿಕೊಟ್ಟಂತೆ ತೋರುತ್ತದೆ. ಯಾಕೆಂದರೆ ಇಂದಿನ ಕವಿ ಮನೋಧರ್ಮ ಜನರಂಜಿಸುವದಾಗಿರದೆ ವರ್ತಮಾನ ಜೀವನದ ಸಂಕೀರ್ಣ ಭಾವಗಳನ್ನು ಸಂಕೇತ-ಪ್ರತೀಕ-ಪ್ರತಿಮೆಗಳ ಮೂಲಕ ಅಭಿವ್ಯಕ್ತಗೊಳಿಸಿ ನಮ್ರತನವನ್ನು ಬಯಲಿಗಿಡುವುದಾಗಿದೆ. ಈ ಮಾತಿಗೆ ಇಮ್ರಾಪೂರವರೂ ಹೊರತಾಗಲಾರರು. ಅವರ ‘ಬೆಳದಿಂಗಳು’ ಸಂಗ್ರಹದಲ್ಲಿಯೇ ಈ ಮನೋಧರ್ಮ ಕಿಡಿಯಾಗಿ ಹೊತ್ತುತ್ತಿದ್ದು, ಈಚೆಗೆ ಪ್ರತ್ಯೇಕ ‘ಜೆಂಕಿ’ ಯಾಗಿ ಸ್ಫೋಟಗೊಂಡಿದೆ ವಸ್ತುಸ್ಥಿತಿ ಹೀಗಿದ್ದರೂ ಇಮ್ರಾಪೂರ ಅವರು ಪ್ರೇಮಗೀತಗಳ ಸಂಗ್ರಹದ ಪ್ರಕಟನೆಗೆ ತೊಡಗಿದ್ದುದಕ್ಕೆ ಅವರ ಭಾವಗೀತೆಗಳ ಮೇಲಿನ ಮಮತೆ ಮತ್ತು ರಸಿಕರ ಬೇಡಿಕೆಯನ್ನು ಪೂರೈಸುವ ಬಯಕೆಗಳು ಕಾರಣಗಳಾಗಿರಬೇಕೆಂದು ಊಹಿಸಿದರೆ ತಪ್ಪೇನೂ ಆಗದು.

ಇಮ್ರಾಪೂರವರು ನವೋದಯ ಮತ್ತು ನವ್ಯ ಮಾರ್ಗಗಳೆರಡರಲ್ಲಿಯೂ ಆಸ್ಥೆಯಿಂದ ಕಾವ್ಯಸೃಷ್ಟಿಗೆ ತೊಡಗಿದ್ದಾರೆ. ಅವರು ತಮ್ಮ ಭಾವಗೀತೆಗಳಿಂದ ರಸಿಕರ ಹೃದಯವನ್ನು ತಣಿಸುವಂತೆ, ನವ್ಯ ಕವಿತೆಗಳಿಂದ ಓದುಗರ ಮನಸ್ಸನ್ನು ಕೆಣಕಬಲ್ಲವರೂ ಆಗಿದ್ದಾರೆ.

‘ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ’ ಕವನ ಸಂಗ್ರಹವು ಇಮ್ರಾ-ಪೂರವರ ಭಾವಗೀತ ಸೃಷ್ಟಿಯಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ರಸ-ಸಂಪ್ರದಾಯದಲ್ಲಿ ಮಹತ್ವದ್ದೆನಿಸಿದ ಶೃಂಗಾರವು ಇಲ್ಲಿಯ ಎಲ್ಲ ಕವಿತೆಗಳ ಜೀವನಾಡಿಯಾಗಿದೆ. ಬೇಂದ್ರೆ, ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ, ಚೆನ್ನವೀರ ಕಣವಿ ಮೊದಲಾದವರ ಸರಸಶೃಂಗಾರದ ಗಂಧ ಗಾಳಿಯಿಂದ ತುಂಬಿದ ಪ್ರಣಯ ಗೀತೆಗಳು ಈ ಹಿಂದೆ ರಸಿಕರ ಮನಸ್ಸನ್ನು ಸೂರೆಗೊಂಡಿದ್ದವು. ನವ್ಯಯುಗ ಪ್ರಾರಂಭವಾದ ಮೇಲೆ ‘ಲಿಬಿಡೋ’ ಮುಂದೆ ಬಂದು, ಸರಸಶೃಂಗಾರ ಬದಿಗೆ ಸರಿಯಿತು. ಈಗ ಇಮ್ರಾಪೂರ ಅವರು ಪ್ರಸ್ತುತ ಸಂಗ್ರಹದ ಮೂಲಕ ಆ

ಶೃಂಗಾರವನ್ನು ಮತ್ತೆ ಮೊದಲಿನ ಸ್ಥಾನದಲ್ಲಿ ತಂದಿರಿಸುವ ಯತ್ನ ಮಾಡಿದ್ದಾರೆಂದು ಹೇಳಬಹುದು. ಡಾ. ಕಲಬುರ್ಗಿಯವರು "ಮೈಸೂರು ಮಲ್ಲಿಗೆ" ಅರಳಿ ಮೂವತ್ತು ವರ್ಷಗಳು ಗತಿಸಿದವು. ಅದನ್ನು ನೆನಪಿಸುವ ಪ್ರೇಮ ಕವನ ಸಂಕಲನ ತುಂಗಭದ್ರೆಯ ಉತ್ತರ-ದಕ್ಷಿಣದಲ್ಲಿ ಈ ವರೆಗೆ ಮೂಡಿಬರಲಿಲ್ಲ. ಆ ಕೊರತೆಯನ್ನು ತುಂಬಿಕೊಡುತ್ತದೆ ಈ "ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ" ಎಂಬ ಅಭಿಪ್ರಾಯದಲ್ಲಿ ಮೂವತ್ತು ವರ್ಷಗಳ ಹಿಂದಿನ ಪ್ರೇಮದೃಷ್ಟಿ ಮರಳಿ ಬಂದಿದ್ದುದರ ಸೂಚನೆಯಿದೆ. "ಆನಂದಕಂದರ 'ನಲ್ವಾಡುಗಳ' ತರುವಾಯ ಆ ಸಂಪ್ರದಾಯಕ್ಕೆ ಇನ್ನಿಷ್ಟು ಎಣ್ಣೆ ಎರೆದು ಅದನ್ನು ಉಜ್ವಲಗೊಳಿಸಿದ ಶ್ರೇಯಸ್ಸು ನಿರ್ವಿವಾದವಾಗಿ ಶ್ರೀ ಇಮ್ರಾಪೂರ ಅವರಿಗೆ ಸಲ್ಲುತ್ತದೆ" ಎಂಬ ಶ್ರೀ ಚೆನ್ನವೀರ ಕಣವಿಯವರ ವಿಮರ್ಶಾತ್ಮಕ ಹೇಳಿಕೆಯಲ್ಲಿ ಈ ಸಂಗ್ರಹದ ಮುಖ್ಯ ಸತ್ತ್ವ ಜಾನಪದ ರೀತಿಯದೆಂಬುದನ್ನು ಸರಿಯಾಗಿ ಗುರುತಿಸಲಾಗಿದೆ. ಅಂತೂ ಇಮ್ರಾಪೂರವರು ಹಿಂದಿನ ಪ್ರೇಮಭಾವವನ್ನು ಪುನರುಜ್ಜೀವನಗೊಳಿಸದಂತಾಯಿತು.

ಡಾ. ಕಲಬುರ್ಗಿ ಮತ್ತು ಶ್ರೀ ಕಣವಿಯವರ ಅಭಿಪ್ರಾಯಗಳಲ್ಲಿ 'ಮೈಸೂರ ಮಲ್ಲಿಗೆ' ಮತ್ತು 'ನಲ್ವಾಡುಗಳ' ನ್ನೂ 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಸಂಕಲನವು ಒಂದೊಂದು ದೃಷ್ಟಿಯಿಂದ ಹೋಲುತ್ತದೆಂಬ ಇನ್ನೊಂದು (ಇದೇ ಮುಖ್ಯವಾದುದು) ವಿಚಾರವಿದ್ದುದು ಸುವ್ಯಕ್ತವಾಗಿದೆ. ಅವರಿಬ್ಬರ ಹೇಳಿಕೆಗಳು ಆ ಆ ದೃಷ್ಟಿಯಿಂದ ಸತ್ಯವಾದವುಗಳೆ. ಹಾಗೆಂದ ಮಾತ್ರಕ್ಕೆ "ಮೈಸೂರ ಮಲ್ಲಿಗೆ' ಮತ್ತು 'ನಲ್ವಾಡುಗಳ ಅನುಕರಣೆ ಇಮ್ರಾಪೂರವರವೆಂದು ಭಾವಿಸಲಿಕ್ಕಾಗದು. "ಮೈಸೂರ ಮಲ್ಲಿಗೆ' ಯ ಮೆಲು ಮಾತುಗಳ ನಾಜೂಕು ಬೇರೆ, 'ನಲ್ ವಾಡುಗಳ' ಜಾನಪದ ನಲ್ನುಡಿಯ ಸೊಗಸು ಬೇರೆ; ಗ್ರಾಮ್ಯ ಜೀವನದ ಗಡಸು, ಗ್ರಾಮ್ಯ ಭಾಷೆಯ ಪೆಡಸು ಇದ್ದಕ್ಕಿದ್ದಂತೆ ಮೂಡಿಸುವ 'ಗಂಡ ಹೆಂಡಿರ ಜಗಳ........' ದ ವಿಶಿಷ್ಟತನವೇ ಬೇರೆ. ಇಮ್ರಾಪೂರ ಅವರ ಕಾವ್ಯದ ಹೂರಣ ಅವರ ಸ್ವಂತ ರುಬ್ಬುಗುಂಡಿನಲ್ಲಿ ಸಿದ್ಧವಾದುದು. ನಾದದ (ಛಂದೋಲಯದ) ಕಣಕ ನಾದುವಾಗ ಮಾತ್ರ ಕೆಲವೆಡೆಯಲ್ಲಿ ಬೇಂದ್ರೆಯವರ ಪ್ರಭಾವದಿಂದ ತಪ್ಪಿಸಿಕೊಳ್ಳದೇ ಹೋಗಿದ್ದಾರೆ. ಈ ಅಸಹಾಯಕತೆ ಅಸಹಜವಾದುದೇನೂ ಆಗಿಲ್ಲ. ಆರಂಭದ ಕಾವ್ಯ ರಚನೆಯಲ್ಲಿ ಎಲ್ಲ ಕವಿಗಳೂ ಒಂದಿಲ್ಲ ಒಂದು ರೀತಿಯಿಂದ ಇನ್ನೊಬ್ಬರ ಪ್ರಭಾವಕ್ಕೊಳಗಾಗುವುದು ಸ್ವಾಭಾವಿಕವೇ ಆಗಿದೆ. ಇಲ್ಲಿಯೇ ಕಾವ್ಯದ ಛಂದಸ್ಸು ಮತ್ತು ಭಾಷೆಯ ವಿಷಯವಾಗಿ ಒಂದು ಮಾತು ಹೇಳುವದು ಅವಶ್ಯವೆನಿಸುತ್ತದೆ. ಭಾವಗೀತ ಸೃಷ್ಟಿಯಲ್ಲಿ ಸರ್ವಸಾಮಾನ್ಯವಾಗಿ ಹೊಸ ಕನ್ನಡದ ಗ್ರಾಂಥಿಕ ಭಾಷೆಯನ್ನು ಬಳಸಲಾಗುತ್ತಿತ್ತು. ಬೇಂದ್ರೆ,

ಮಧುರಚೆನ್ನ, ಆನಂದಕಂದ ಇವರು ಜಾನಪದ ಛಂದಸ್ಸು ಮತ್ತು ಭಾಷೆಯನ್ನು ಅಭಿವ್ಯಕ್ತಿಯ ವಾಹಕವಾಗಿ ಮಾಡಿಕೊಂಡು ಕಾವ್ಯಕ್ಕೆ ಕಸುವು ತಂದು ಕೊಟ್ಟರು. ಅನಂತರ ಕಣವಿಯವರ ಕೆಲವು ಪ್ರಯೋಗಗಳು, ಕಂಬಾರರ ಹಲವು ಪ್ರಯೋಗಗಳು ಈ ದಿಶೆಯಲ್ಲಿ ಮಹತ್ವದ ಸಾಧನೆಗಳಾದವು. ಈ ದೃಷ್ಟಿಯಿಂದ ಹೊಸಪೀಳಿಗೆಯಲ್ಲಿ ಇವರ್‍ರಪೂರ ಅವರ ದೃಷ್ಟಿ ಗಮನಾರ್ಹ ವಾಗಿದೆ. ಅವರ ಎಲ್ಲ ಕವನ ಸಂಗ್ರಹಗಳಲ್ಲಿಯೂ ಅವರ ರಕ್ತಗತವಾಗಿದ್ದ ಜಾನಪದ.ಶೈಲಿ ಒಡೆದು ಕಾಣುತ್ತದೆ.

ಪ್ರಸ್ತುತ ಸಂಕಲನದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದ ಕವಿತೆಗಳೆಲ್ಲ ಸಂಭಾಷಣೆಯ ತಂತ್ರಕ್ಕೆ ಒಳಗಾದವುಗಳಾಗಿವೆ; ಎರಡನೆಯ ಭಾಗದ ಕವಿತೆಗಳು ಪ್ರೇಮದ ವಿವಿಧ ಮುಖದ ನೇರ ಅಭಿವ್ಯಕ್ತಿಗಳಾಗಿವೆ.

'ಖಾಸಗಿ ಸಂಸಾರ'ವೊಂದನ್ನು ಬಿಟ್ಟರೆ ಮೊದಲ ಭಾಗದ ಕವಿತೆಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಗಂಡ-ಹೆಂಡರಲ್ಲಿ ನಡೆದ ಜಗಳವಿದೆ. ಪ್ರಪ್ರಥಮ ವಾಗಿ ಕಾಣಿಸಿಕೊಳ್ಳುವ 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಗ' ಈ ಭಾಗದ ಮಹತ್ವದ ಕವಿತೆ, ಅದಕ್ಕೆ ಹೊಯ್‌ ಕೈಯಾಗಿರುವದು 'ಬೇವು-ಬೆಲ್ಲ' ಈ ಎರಡು ಕವಿತೆಗಳು ಗಾತ್ರದಲ್ಲಿ ಸುಮಾರಾಗಿ ಸಮಾನವೆನಿಸಿದರೂ ಪಾತ್ರದಲ್ಲಿ ಭಿನ್ನ ರುಚಿಯಿಂದ ಕೂಡಿವೆ. ಎರಡರಲ್ಲಿಯೂ ಗಂಡ-ಹೆಂಡಿರ ಜಗಳದ ಮೊದಲಿಕೆಯ ಮಾಲೆಯಿದ್ದು ಮುಕ್ತಾಯದಲ್ಲಿ ಪರಸ್ಪರ ಒಪ್ಪಂದದ ಒಪ್ಪವಿದೆ. ಅದರಿಂದಾಗಿಯೇ ಅವರ ಜಗಳದಿಂದ ಗಂಧ ತೀಡಿದ್ದುದರ ವಾಸನೆ ಬರುತ್ತದೆ.

'ಗಂಡ-ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಪದ್ಯದಲ್ಲಿಯ ಜೋಡಿ ಒಂದು ರೈತ ಕುಟುಂಬಕ್ಕೆ ಸೇರಿದುದು. ಗಂಡನು ಒಂದು ಬೆಳಗಿನ ದೈನಂದಿನ ಕೆಲಸಕ್ಕೆ ಅಣಿಯಾಗಲು ಹೆಂಡತಿಯನ್ನು ಎಬ್ಬಿಸಹೋದರೆ

ಕುಬ್ಸಾಕ ಮತ್ತ ಬೀಸಾಕ ಇವಕ
ಕೊಟ್ಟಿಲ್ಲ ನ್ನನ್ನ ನಿನಗ

ಎಂದು ಅವಳು ಕಟಕಿ ನುಡಿದಿದ್ದುದೇ ಜಗಳಕ್ಕೆ ಕಾರಣವಾಗುತ್ತದೆ. ಗಂಡನು ಅದಕ್ಕೆ ಪ್ರತಿಯಾಗಿ

ಮಾರೀಯ ಗಂಟು ಹಾಕೀದಿ ಯಾಕ
ನಿಟ್ಟೆಲುವ ಮುರಿಯಲೇನ

ಎಂದು ಜಬರಿಸಿಯೇಬಿಡುತ್ತಾನೆ. ಹೀಗೆ ಪ್ರಾರಂಭವಾದ ಅವರ ಜಗಳವು ಪರಸ್ಪರರ ಸ್ವಾಭಿಮಾನವನ್ನು ಕೆಣಕುತ್ತ, ವಾಗ್ವಾದದ ಕಾವು ಏರುತ್ತೇರುತ್ತ

ಹೋಗುತ್ತದೆ. ಹೆಂಡತಿಯು ಅವ್ವ-ಅಪ್ಪರ ಸ್ಥಿತಿ ಗತಿ, ಗಂಡನ ಒಣ ಟಬರಿನ ಹಿಂದಿರುವ ವಸ್ತುಸ್ಥಿತಿ, ಜಗಳದ ಸಾಮಗ್ರಿಯಾಗಿದ್ದು ಕವಿತೆಯ ಬೆಳವಣಿಗೆ ಕೂತುಹಲಕಾರಿಯಾಗಿದೆ. ಜಗಳದ ಮಜಲಿನಲ್ಲಿ ನುಸುಳಿ ಬರುವ ವ್ಯಂಗ್ಯೋಕ್ತಿಗಳು ಹಾಸ್ಯವನ್ನು ಹೊಮ್ಮಿಸುತ್ತವೆ.

ನಮ್ಮಪ್ಪ ಅವ್ವ ಕೊಟ್ಟಾರ ನಿನಗ
ಕೈ ತುಂಬ ರೊಕ್ಕ ತೆತ್ತು

ಎಂದು ಹೆಂಡತಿ ಹಂಗಿಸಿದರೆ

ಜನ ತುಂಬಿ ನಿಂತ ಹಂದರದ ಒಳಗ
ನಿಮ್ಮಪ್ಪ ಕೈಯ ಕೊಟ್ಟಾ
ಕಡೆಗೆ ಎಲ್ಲಾ ಕೊಡತೀನಿ ಅಂತ
ಕೊಡಲಿಲ್ಲ ಒಂದು ಚುಟ್ಟಾ.

ಎಂದು ಥಟ್ಟನೆ ಉತ್ತರಿಸಿ ಸತ್ಯವನ್ನು ಬಯಲಿಗಿಟ್ಟಾಗ, ಹೆಂಡತಿಗೆ ಮುಖಭಂಗವಾಗಿರಬಹುದಾದರೂ ಓದುಗನಲ್ಲಿ ನಗೆ ಹುಟ್ಟಿಸುತ್ತದೆ. ಇಂಥ ಮಾತಿನ ಚಮತ್ಕಾರಗಳನ್ನು ಅಲ್ಲಿಗಲ್ಲಿಗೆ ಕಾಣಬಹುದು.

ವಾದಕ್ಕೆ ಬೇಸತ್ತು ಗಂಡನು ಮನೆ ಬಿಟ್ಟು ಹೊರಡಲನುವಾದಾಗ ಹೆಂಡತಿ :

ಮಾರಾಯ ನಿನ್ನ ಕಾಲ್ಮುಗಿಯುತೀನಿ
ಸಾಕೇಳ ಸೆಟಗೊಬ್ಯಾಡಾ

ಎಂದು ಅಪಸತ್ ಮಾಡಿಕೊಂಡು ಬಿಸಿ ಬುತ್ತಿ ಕಟ್ಟಲು ಆಶ್ವಾಸನ ನೀಡುತ್ತಿರುವಂತೆಯೇ ಜಗಳದ ಸುರಿಮಳೆ ನಿಂತು, ಅನುರಾಗದ ಭೂಮಿಯು ಕಂಪು ಬರುತ್ತದೆ.

'ಬೇವು-ಬೆಲ್ಲ'ದಲ್ಲಿಯ ಗಂಡ ಸೆರೆಗುಡುಕ, ಹೆಂಡತಿ ಹಳ್ಳಿಯ ಸಾಧ್ವಿಮಣಿ, ಕುಡುಕನ ಒರಟುತನ ಸಾಧ್ವಿಯ ದಿಟ್ಟತನ ಇಲ್ಲಿಯ ಜಗಳದ ಸರಪಳಿಯಲ್ಲಿವೆ

ಹೆಂಡದ ವಾಸನೆ ಮನೆ ತುಂಬಾ ಬಂದಾಗ
ಬಂದೀರಿ ಅಂತನ ತಿಳಕೊಂಡ್ಯಾ
ಪೆಣ್ಣೀನ ಜಲುಮ ತಾ ಖೊಟ್ಟಿತಿ ತಳಮಳಿಸಿ
ನನ್ನ ಗಲ್ಲ ನಾನs ಬಡಕೊಂಡ್ಯಾ

ಇಂಬಲ್ಲಿ ಗಂಡನ ಆಗಮನ ಚಿಹ್ನವೂ ಹೆಂಡತಿಯ ದುಸ್ಥಿತಿಯೂ ಮನೋಜ್ಞ

“ ಇಳೆಯೆಂಬ ಮನೆಗೆ ಕಳಸವೆನಿಸುವ ಬೆಳಂ
ಗುಳದಬೆ.ಟ್ಟದೊಳರ್ಕ. ಕೋಟಿ
ಬೆಳಗನೇಳಿಪ ತನುವಿಡಿದಿಹನೆನೆ ಭುಜ
ಬಲಿ ಜಿನ.ರ್ಗೆಱಗುವೆ. ಮುದದಿ."[೭]

ನಂಜಂಡಕವಿಯ ರಾಮನಾಥ ಚರಿತ :

“ ಗಂಗಾ ತುಂಗ ತರಂಗ ಧವಳಿತ ಪಿ
ಶಂಗ ಜ.ಟಾಜೂಟ. ಭಾರ
ಮಂಗಲಾತ್ಮಕ ಮದನಾಂಗ ದಹನ ಭ
ಸ್ಮಾಂಗ ಕೊ.ಡೆನಗೆ ಸ.ನ್ಮತಿಯ "[೮]

“ ಪರಿಯೆಮೆಯೊಳು ಬೊಮ್ಮನಜಾಯೊಳುಪುರ
ಹರನ ವಾ.ಮಾಂಗ ಭಾ.ಗದೊಳು
ಅರಲಶರಲ ಡಾಗ ನೊತ್ತಿದಂಗಜ ವೀರ
ಬರಲಂಜಿ.ದನು ರಾಮ.ನೆಡೆಗೆ."[೯]

ರತ್ನಾಕರವರ್ಣಿಯ ಭರತೇಶ ವೈಭವ :

“ ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊ.ಳರಿವರಿ.ನೆರಡು
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ
ಕಬ್ಬೇ ಹೇ.ಳೆಲೆ ಸರ.ಸತಿಯೆ."[೧೦]

“ ತುಂಬಿಯಗಾನವಂತಿರಲಿ ಕೋಕಿಲನಾದ
ವೆಂಬರ. ಮಾತದಂ.ತಿರಲಿ
ತುಂಬುರ ನಾರದರಿನ್ನೇಕೆ ಹೋಪುರೆ
ಯೆಂಬಂತೆ. ಸೊಗಸಿ ಹಾ.ಡಿದರು.’’[೧೧]

---

೮. ಸಂ. ಶ್ರೀ ಎಚ್. ದೇವೀರಪ್ಪ. “ ರಾಮನಾಥ ಚರಿತ ” ಸಂಪುಟ : ೨; ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೫೯. ಪೀಠಿಕಾ ಸಂಧಿ; ಪದ್ಯ : ೨.

೯. ಅದೇ, ಸಂಪುಟ : ೩; ಸಂಧಿ : ; ಪದ್ಯ :

೧೦. ಸಂ. ಶ್ರೀ ತ. ಸು. ಶಾಮರಾಯ, “ಭರತೇಶ ವೈಭವ ಸಂಗ್ರಹ ”; ಮೈಸೂರು ವಿಶ್ವ ವಿದ್ಯಾಲಯ, ೧೯೫೫. ಆಸ್ಥಾನ ಸಂಧಿ; ಪದ್ಯ-೩.

೧೧. ಅದೇ; ಆಸ್ಥಾನ ಸಂಧಿ; ಪದ್ಯ-೪೨.

ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ :

"ಕನ್ನಡ ಜಾಣೆ ನೀಬಾರೆಂದು ಕರವಿಡಿ
ದೆನ್ನ ತ.ನ್ನೊತ್ತಿಗೆ. ಬರಿಸಿ
ಎನ್ನೊಳು ನೆವ ಮಿಗಿತಿಲ್ಲದೆರಕ ಗೂಡಿ
ಮನ್ನಿಸಿ. ನುಡಿದಳಿಂ.ತೆಂದು "೧೨

"ಪತಿಯೊಲವಕ್ಕೆ ಸತಿಯರೊಳು ಸತಿಯರು
ಪತಿಪಾದ. ಭಕ್ತೆಯ.ರಕ್ಕೆ
ಸತಿಯರ ಮೈಮೆಸಕಲ ಜಗದೆಳುನಿಲ್ಕೆ
ಸತಿಧರ್ಮ. ಶಾಶ್ವತ.ಮುಕ್ಕೆ "೧೩

ಎಲ್ಲಾ ಸಾಂಗತ್ಯ ಕೃತಿಗಳಲ್ಲಿನ ಪದ್ಯಗಳನ್ನು ಗಮನಿಸಿದಾಗ ಏಳನೆ ಹಾಗೂ ಹದಿನಾಲ್ಕನೆ ಗಣ ಬ್ರಹ್ಮ ಎಂದು ವಿದಿತವಾಗುತ್ತದೆ. ಆದುದರಿಂದ ಸಾಂಗತ್ಯದಲ್ಲಿ ಬ್ರಹ್ಮನಿತ್ಯ ಎಂಬಂಶ ನಿರ್ವಿವಾದವಾದುದು. ಇದು ವಿಷ್ಣುವೊ ರುದ್ರವೋ ಆಗಿಲ್ಲ.

ದೇಪರಾಜನ ಸೊಬಗಿನ ಸೋನೆಯ ಪದ್ಯಗಳನ್ನೂ ಗಮನಿಸಿ ಅದರ ಲಕ್ಷಣವನ್ನು ಗ್ರಹಿಸೋಣ.

"ವಾಣಿ ವರದೆ ವೀಣಾಪಾಣಿ ಬೊಮ್ಮನ
ರಾಣಿ ಗೀ.ರ್ವಾಣ ವಂ.ದಿತಪಾದೆ
ಜಾಣೆ ಕಲ್ಯಾಣಿ ಜನನಿ ಬಂದು ನೀ ಕೂರ್ತು
ಮಾಣದೆ.ನ್ನೆದೆಯೊಳು. ನೆಲೆಗೊಳ್ಳ "೧೪

"ಜಲಜಕ್ಕೆ ಕಣ್ಮಲರ್ಗಳ ಜಕ್ಕವಕ್ಕಿಗೆ
ಮೊಲೆಗಳ. ತುಂಬಿಗೆ. ಕುರುಳ್ಗಳ
ಮಳಲ್ದಿಣ್ಣೆಗೆ ಪೊಱವಾರ್ಗಳ ನೀರ್ಗೈಪ್ಪ
ವೆಳಗ ಮು.ಯ್ಯಿತ್ತರ,ಖಲೆಯರು "೧೫

---

೧೨. ಸಂ. ಮಂ. ಅ. ರಾಮಾನುಜಯ್ಯಂಗಾರ್. "ಹದಿಬದೆಯ ಧರ್ಮಂ" ಮೈಸೂರು. ೧೯೩೫. ಸಂಧಿ–೧; ಪದ್ಯ–೧೭.

೧೩. ಅದೇ; ಸಂಧಿ–೯; ಪದ್ಯ–೪೯.

೧೪. ಸೊಬಗಿನ ಸೋನೆ; ಸಂಧಿ–೧; ಪದ್ಯ–೬.

೧೫. ಅದೇ; ಸಂಧಿ–೩; ಪದ್ಯ–೨.

“ ಸಸಿ ಬಿಸರುಹ ಕತ್ತಲೆ ಜೊನ್ನವೆಳೆವಿಸಿ
ಲಸಿ ಕಾಬ್ಬ. ತಮ್ಮೊಳು. **ಕೆಳೆಗೊಂಡು**
ಪಸರಿಸಿದೊಲು ಮೊಗಕರ ಕುರುಳ್ಗೆ ದೊಡ
ದೆಸಕ ಲೋಚನಗಳಾ**ಗೆಸೆದವು** ”[೧೬]

ಇಲ್ಲಿ ‘ ಸೊಬಗಿನ ಸೋನೆ ’ ಸಾಂಗತ್ಯದಂತೆಯೇ ನಾಲ್ಕು ಪಾದಗಳನ್ನು ಹೊಂದಿದೆ. ಒಂದು ಮತ್ತು ಮೂರನೆ ಪಾದದಲ್ಲಿ ನಾಲ್ಕು ವಿಷ್ಣು ಗಣಗಳು ಬರುತ್ತವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳಿವೆ. ಆದುದರಿಂದ ‘ ಸೊಬಗಿನ ಸೋನೆ ’ ಗೂ ಸಾಂಗತ್ಯಕ್ಕೂ ಇರುವ ವ್ಯತ್ಯಾಸವೆಲ್ಲಾ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ. ಹಾಗೂ ಹಾಡು-ಗಾರಿಕೆಯಲ್ಲಿ. ಎರಡು ಮತ್ತು ನಾಲ್ಕನೆ ಪಾದಗಳಲ್ಲಿ ಮೂರು ವಿಷ್ಣು ಗಣಗಳು ಬರುವುದನ್ನು ಗಮನಿಸಿದ ಕೈಪಿಡಿಕಾರರು ಕವಿಚರಿತೆಯ (II. ೩೯೧) ಉದಾಹರಣೆಯನ್ನು ಉದ್ಧರಿಸಿ, “ ಎರಡನೆಯ ಮತ್ತು ನಾಲ್ಕನೆಯ ಪಾದಗಳಿಗೆ ಇನ್ನೊಂದು ಗಣವನ್ನು ಹೆಚ್ಚಿಸಿರುವ ಉದಾಹರಣೆಗಳಿವೆ.”[೧೭] ಎಂದು ಹೇಳಿ ಅದನ್ನು ಪ್ರಸ್ತಾರ ಹಾಕುತ್ತಾ,

“ ಬೆಳಗಿದ | ಕನ್ನಡಿ | ಯೊಳು ಮುಖ | ಬಿಂಬವು ||
ತಿಳಿನೀರೊಳು ಭಾನು | ಮಂಡಲ ||
ಬೆಳಗುವಂ | ತೆ ನಿಷ್ಪಾಪಿಯ | ಮನದೊಳು ||
ತೊಳಗಿ ಬೆ | ಳಗಿ ಶಿವ | ಕಳೆ ತೋ | ರ್ಕು || ”[೧೭]

ಈ ರೀತಿ ನಿರೂಪಿಸಿದ್ದಾರೆ. ಆದರೆ ಇದು ತಪ್ಪು. ಕೈಪಿಡಿಯಲ್ಲಿ ಕನ್ನಡ ಛಂದಸ್ಸಿನ ಚರಿತ್ರೆಯನ್ನು ಬರೆದ ಶ್ರೀಮಾನ್ ಶ್ರೀನಿವಾಸ ರಾಘವಾಚಾರ್ಯರು ‘ ಸೊಬಗಿನ ಸೋನೆ ವರ್ಣ ’ ಎಂಬುದೊಂದು ಹಾಡು ಗಬ್ಬ ಇದೆಯೆಂದು ಬಹುಶಃ ಗಮನಿ-ಸಿರಲಾರರು. ಆದುದರಿಂದ ಸೊಬಗಿನ ಸೋನೆ ವರ್ಣದಲ್ಲಿನ ಒಂದು ನುಡಿಗೆ ಅವರು ಪ್ರಸ್ತಾರ ಹಾಕಿ ತೋರಿಸಿದ್ದಾರೆ. ಮತ್ತು ಅದು ಕೊನೆಯಲ್ಲಿ ಒಂದು ಅಕ್ಷರ ಉಳಿದರೂ ಅದಕ್ಕೆ ಒಂದು ಗಣದ ತೂಕವನ್ನು ಕೊಡಬೇಕೆಂದು ಭಾವಿಸಿರ ಬಹುದು ಆದರೆ ಅದು ೨ ಮತ್ತು ೪ ನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳನ್ನುಳ್ಳ ಸೊಬಗಿನ ಸೋನೆ ವರ್ಣ ಎಂಬಂಶವನ್ನು ಗಮನಿಸಬೇಕು.

‘ ಸೊಬಗಿನ ಸೋನೆ ವರ್ಣ ’ ಎಂದು ಹಾಡು ಗಬ್ಬದ ಹಲವು ಪದಗಳು, ಸುಮಾರು, ಕ್ರಿ. ಶ. ೧೭೫೦ ರವನೆಂದು ಊಹಿಸಲಾಗಿರುವ[೧೮] ಚೆನ್ನಪ್ಪ ಕವಿಯ

೧೬. ಸೊಬಗಿನ ಸೋನೆ; ಸಂಧಿ; ೨೧; ಪದ್ಯ: ೨೦.
೧೭. ಕನ್ನಡ ಕೈಪಿಡಿ; ಸಂಪುಟ: ೧; ಪುಟ ೧೩೯.
೧೮. ಶ್ರೀ. ಆರ್. ನರಸಿಂಹಾಚಾರ್ಯ. ‘ ಕರ್ನಾಟಕ ಕವಿಚರಿತ್ರೆ ’; ಸಂಪುಟ: ೨ ಪುಟ ೮೬.

"ಶರಣ ಲೀಲಾಮೃತ" ದಲ್ಲಿ ಬರುತ್ತದೆ. ಉದಾಹರಣೆಗೆ ಈ ಪದಗಳನ್ನು ಗಮನಿಸಬಹುದು.

"ಧನುವಜ್ರ ಶಕ್ತಿ ಸರಳುಗಳಾಯುಧದಿಂದ
ತನುಕಾಂತಿ. ರತ್ನದ. **ಪ್ರಭೆಯಂತೆ**
ಘನತರವಾದ ಭಟರು ಮೂರುಕೋಟಿಯು
ದಿನಗಾಯ್ವ. ವಾರ್ಯುವ್ಯ. **ದೆಸೆಯೊಳು**"[೧೯]

"ಯಜ್ಞ ಬೋನವನುಣ ಬಂದ ವೇವತೆಗಳು
ಭಗ್ನವಾ.ದರು ಹೋಮ. **ದೆಸೆಯಿಂದ**
ಸುಜ್ಞಾನವಳಿದು ಸುಖವು ತಪ್ಪಿ ಶಿವಪೂಜೆ
ವಿಘ್ನರಾ.ದರು ಎಲ್ಲ. **ಸುರರಾಗ**"[೨೦]

"ಎಲ್ಲಿಗೆ ಬಹುದು ತಾವೆಲ್ಲಿಗೆ ಪೋದರು
ಎಲ್ಲವ. ನುಸುರೆಂದು. **ಬೆಸಗೊಳ್ಳೆ**
ನಿಲ್ಲದೆ ಸಂಗಮನಲ್ಲಿಗೆ ಪೋದರು
ಅಲ್ಲಿಗೆ. ನಿಮ್ಮನು. **ಕರೆದರು**"[೨೧]

"ಕರೆದರೇನಾಯ್ತು ಸಂಗಮ ನಮ್ಮ ಕರದೊಳ
ಗಿರುತಿರೆ. ನಾನೊಲ್ಲೆ. **ನೆನುತಲ್ಲಿ**
ಉರದಲಿಂಗ ವ ಬಿಚ್ಚಿ ಕರದೊಳಗಿಂಬಿಟ್ಟು
ಶರಣೆಂದು. ಲಿಂಗ ದೊ. **ಳ್ಬೆರೆದಳು**"[೨೨]

ಈ ಎಲ್ಲ ಉದಾಹರಣೆಗಳನ್ನು ಪರಿಶೀಲಿಸಿದರೆ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣುಗಣಗಳೆಂಬುದು ಸರ್ವವಿದಿತ ಆದುದರಿಂದ ಇಲ್ಲಿ ವಿಷ್ಣು ನಿತ್ಯ. ಇಲ್ಲಿಯೂ ಕ್ವಚಿತ್ತಾಗಿ ವಿಷ್ಣುವಿಗೆ ಬದಲಾಗಿ ರುದ್ರಗಣ ಬರುತ್ತದೆ ಎಂಬಂಶವನ್ನು ಈ ಉದಾಹರಣೆಗಳಿಂದ ಸ್ಪಷ್ಟಗೊಳಿಸಬಹುದು—

"ಭಾಪುರೆ ತಿಮಿರ ಭಾಸ್ಕರ ರಿಪುಮರ್ಧನ
ಭಾಪುರೆ. ಗಜ ಕಂಠೀ. **ರವನೆಶೂರ**

---

೧೯. ಸಂ. ಶ್ರೀ. ಶಿವಬಸವಸ್ವಾಮಿಗಳು, "ಶರಣಲೀಲಾಮೃತ" ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯ, ಮೈಸೂರು. ೧೯೫೫; ಸಂಧಿ: ೮; ಪದ್ಯ: ೨೫.

೨೦. 'ಶರಣಲೀಲಾಮೃತ'; ಸಂಧಿ: ೭; ಪದ್ಯ: ೨೨.

೨೧. ಅದೇ, ಸಂಧಿ: ೨೧; ಪದ್ಯ: ೨.

೨೨. ಅದೇ, ಸಂಧಿ: ೨೮; ಪದ್ಯ: ೧೭.

ಭಾಪುರೆ ಬಣಗು ದೈವದ ಗಂಡ ಭೇರುಂಡ
ಭಾಪೆಂದು. ನುತಿಸಿ ಕೀ. **ರ್ತಿಸುತಿರ್ದರು** ”[೨೩]

ಇಲ್ಲಿ ರುದ್ರಗಣವು ವಿಷ್ಣುವಿಗೆ ಬದಲಾಗಿ ಬಂದಿದೆಯೇ ಹೊರತು ಬ್ರಹ್ಮವಾಗಿಲ್ಲ ವೆಂದು ಗಮನಿಸಬೇಕು.

ಈ ಕೃತಿಯಲ್ಲಿ ಇದಲ್ಲದೆ ಇನ್ನೂ ಅನೇಕ ಹಾಡುಗಬ್ಬಗಳನ್ನು ಹೇಳ-ಲಾಗಿದೆ. ಆದರಲ್ಲಿ ಸಾಂಗತ್ಯವೂ ಇದೆ. ಶರಣಲೀಲಾಮೃತದಲ್ಲಿ ಬಳಿಕೆಯಾಗಿರುವ ಸಾಂಗತ್ಯ ಈ ರೀತಿ ಇದೆ.

“ ಶುಕ ನುಡಿ ಸುಗುಣೆ ಸುಂದರಿ ಸೊಬಗಿನ ಮೇ
ಲ್ಪಿಕಗಾನೆ. ಪದ್ಮದ. **ಳಾಕ್ಷಿ**
ಮುಕುರಪ್ರಭೆಯು ಮೋಹನ ರನ್ನೆ ಕಲ್ಯಾಣಿ
ಯುಕುತಿಯು. ಕಾರ್ಯವಂ. **ಕೇಳು.**”[೨೪]

“ ಮಂತ್ರೀಶ ಬಸವರಾಜನು ಸಹಿತೆಲ್ಲರು
ಸಂತೋಷ. ಸಂಪತ್ತಿ.**ನಿಂದ**
ಮಂತಣಾಧಿಪನ ಪಟ್ಟದ ಕರಿಯೆನ್ನಾಗ
ಇಂತು ಸಂ.ಭ್ರಮದಿ ಶೃಂ.**ಗರಿಸಿ** ”[೨೫]

ಆಟಪಾಟಗಳಿಗೆ ನಾಟಿರಾಗವೆ ಮೊದಲು
ನೋಟಕ್ಕೆ. ಕಣ್ಣಳೆ. **ಮೊದಲು**
ಕೋಟಿದೈವಗಳಿಗೆ ಮೀಟು ಶಿವನೆ ಮೊದಲು
ಊಟ ಕುಂ.ಪ್ಪಿನಕಾಯಿ. **ಮೊದಲು** ”[೨೬]

ಈ ಉದಾಹರಣೆಗಳಲ್ಲಿ ಏಳನೆಯ ಮತ್ತು ಹದಿನಾಲ್ಕನೆಯ ಗಣಗಳು ಬ್ರಹ್ಮ ವಾಗಿರುವುದನ್ನು ಗಮನಿಸಬೇಕು. ಸಾಂಗತ್ಯದ ಲಕ್ಷಣವನ್ನು ತಿಳಿದಿದ್ದ ಚೆನ್ನಪ್ಪ ಕವಿಯು, ದೇಪರಾಜನ ‘ಸೊಬಗಿನ ಸೋನೆ’ಯ ಲಕ್ಷಣವನ್ನು ಬಳಸಿಕೊಂಡು ಆದಕ್ಕೆ ‘ವರ್ಣ’ ಎಂಬ ಹೆಸರನ್ನು ಸೇರಿಸಿ “ಸೊಬಗಿನ ಸೋನೆ ವರ್ಣ” ಎಂಬ ಹೆಸರಿನಿಂದ ತನ್ನ ಹಾಡುಗಬ್ಬ ಕೃತಿಯಲ್ಲಿ ಹೇಳಿದ್ದಾನೆ. ‘ವರ್ಣ’ ಎಂದರೆ ಸಂಗೀತ ಶಾಸ್ತ್ರದಲ್ಲಿ ಈ ರೀತಿಯ ವಿವರಣೆ ಇದೆ. “ವರ್ಣಗಳು ಪಾಂಡಿತ್ಯದಿಂದ ಕೂಡಿದ ರಚನಾ ವಿಶೇಷಗಳು. ಇವು ರಾಗ ಭಾವದಿಂದ ತುಂಬಿರುವ ರಚನೆಗಳಾ-

---

೨೩. ಅದೇ, ಸಂಧಿ: ೩; ಪದ್ಯ: ೧.
೨೪. ‘ಶರಣಲೀಲಾಮೃತ’; ಸಂಧಿ: ೮; ಪದ್ಯ: ೧.
೨೫. ಅದೇ.; ಸಂಧಿ: ೧೧; ಪದ್ಯ: ೨.
೨೬. ಅದೇ; ಸಂಧಿ: ೨೪; ಪದ್ಯ: ೧.

ಗಿವೆ. ಅಭ್ಯಾಸಗಾನದಲ್ಲಿ ವರ್ಣಗಳು ಬಹಳ ಮುಖ್ಯವಾದುವು. ಇವು ರಾಗದ ರಾಗರಂಜಕ ಪ್ರಯೋಗಗಳು, ವಿಶೇಷ ಸಂಚಾರಗಳು, ಧಾತು ಪ್ರಯೋಗಗಳು ಮತ್ತು ಅಪೂರ್ವ ಪ್ರಯೋಗಗಳನ್ನೊಳಗೊಂಡಿವೆ.''[೨೭] ಈ ವರ್ಣದ ಲಕ್ಷಣವು ಚೆನ್ನಪ್ಪಕವಿಯು ಹೇಳಿರುವ 'ಸೊಬಗಿನ ಸೋನೆ ವರ್ಣ'ದ ಹಾಡುಗಳಲ್ಲಿ ಭಾವ ತುಂಬಿದೆ. ರಾಗದ ತಾಳದ ವೈಶಿಷ್ಟ್ಯವಿದೆ. ಇದು ಸೊಗಸಾದ ಹಾಡುಗಬ್ಬ. ಇದರದೇ ವಿಶಿಷ್ಟವಾದ ಛಂದೋಬಂಧ ಎಂಬಂಶ ಗಮನಾರ್ಹವಾದುದು.

'ಸೊಬಗಿನಸೋನೆ'ಯು ಮಟ್ಟು ಬೇರೆ ಎಂದು ಹೇಳಲು ಚೆನ್ನಪ್ಪಕವಿ ಕೃತ 'ಸೊಬಗಿನಸೋನೆ ವರ್ಣ' ಎಂಬ ಶಿರೋನಾಮೆಯುಲ್ಲಿ ಬಂದಿರುವ ಪದಗಳಷ್ಟೇ ಅಲ್ಲದೆ ಇನ್ನೂ ಹಲವಾರು ಕೃತಿಗಳಲ್ಲಿ ಈ ಹಾಡುಗಬ್ಬವು ಬಳಕೆಯಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯದ, ಪ್ರಾಚ್ಯ-ಕೋಶಾಗಾರದಲ್ಲಿರುವ ಕೆ. ಬಿ. ೫೩೨೮ ಕಾಗದದ ಹಸ್ತಪ್ರತಿಯಲ್ಲಿ "ಸೊಬಗಿನ ಸೋನೆ ವರ್ಣ" ಎಂಬ ಧಾಟಿಯಲ್ಲಿ ಇಪ್ಪತ್ತು ಪದ್ಯಗಳಿವೆ. ಅವುಗಳಲ್ಲಿ ಒಂದೆರಡನ್ನು ಗಮನಿಸೋಣ.

"ಧರೆಸಾಕೇತ [ದಲಿ] ಭೂವರ ನಾಭಿರಾಜನ
ತರುಣೀಮ.ಣಿ ಯುಮರು. ದೇವಿಯಾ
ವರಸುಕುಮಾರ ವೃಷಭ ತೀರ್ಥನಾಥನ
ಹರಣಕ್ಕೆ.ರಗಿ ನಾನು. ಬಲಗೊಂಬೆ."

"ಸಿರಿ ವೆತ್ತ ಭದ್ರಪುರದ ದೃಢರಥನಿಗೆ
ಸರಸಿಜಾ.ನನೆ ಸುನಂ.ದೆಯುಪೆತ್ತಾ
ಸುರನರ ನಾಗಾರ್ಚಿತ......... ಶಿತವೆಸಗೆ
ಕರವ ಮು.ಗಿದು ನಾನು. ಬಲಗೊಂಬೆ."[೨೮]

ಕೆ. ೪೪ನೇ ಹಾಡುಗಳ ಓಲೆಕಟ್ಟಿನಲ್ಲಿ "ತತ್ತ್ವದ ಸೊಬಗಿನ ಸೋನೆ''. (ತತ್ತ್ವ ಪದ) ಎಂಬ ಗ್ರಂಥವಿದೆ. ಇದರ ಕರ್ತೃ ಗೋಪಾಲಾರ್ಯಶಿಷ್ಯ. ಈತನ ಕಾಲ ಸುಮಾರು ಕ್ರಿ. ಶ. ೧೭೫೦. ಇದರಲ್ಲಿ

"ಇಂತಿವರಭಿಮತಗಳ ಕೇಳಿ ಮನಸಿನಲಿ
ಚಿಂತಿಸು.ವೆನುಸತ್ಯ. ನೇನೆಂದು
ಭ್ರಾಂತಿವಿಡಿದು ನಿಜವರಿಯದೆ ತಮಗೆ ಸು
ಶಾಂತಿಯಿ.ಲ್ಲದೆ ಮನ.ದೊಳಗೀಗ."[೨೯]

---

೨೭. ಸಂಗೀತ ವಿದ್ವಾನ್ ವಿ. ರಾಮರತ್ನಂ ಮತ್ತು ವಿ. ಎಸ್. ಸಂಪತ್ಕುಮಾರಾಚಾರ್ಯ; 'ಕರ್ಣಾಟಕ ಸಂಗೀತ ಸುಧಾ"; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೬೭. ಪುಟ: ೭೩.

" ನಾನಿಮ್ಮ ಚರಣಕಮಲದ ಭಾವನೆಯಿಂದ
ಸಾನುರಾ.ಗ ದಲಿ ನಿ.ರ್ಣಯವಿಟ್ಟಾ
ಸ್ವಾನುಭೂತಿಯ ಪೇಳುವೆನು ಕೇಳ ನಿಮ್ಮಯ
ಜ್ಞಾನ ನಿ.ಶ್ಚಯವ ಕ.ರುಣಿಪುದು."[೨೮]

"ಮದನ ಮೋಹಿನಿ ಕಥೆ''ಯನ್ನು ಲಕ್ಷಯ್ಯನೆಂಬ ಕವಿ ವಿರಚಿಸಿದ್ದಾನೆ (ಕೆ. ಎ. ೩೮೯. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ). ಇದರಲ್ಲಿ ' ಮದನ ಮೋಹಿನಿ ಕಥೆ' ' ಸೊಬಗಿನ ಸೋನೆ ವರ್ಣ ' ಎಂದಿದೆ. ಅದರಲ್ಲಿನ ಎರಡು ಪದ್ಯಗಳನ್ನು ಗಮನಿಸಬಹುದು.

" ವ್ಯಾಸ ವಾಲ್ಮೀಕಿ ಹರೀಶ ಬಾಣನು ಕಾಳ
ದಾಸ ಮ.ಯೂರನು. ಮಲುಹಣ.
ಈಶಭಕ್ತನು ರಾಘವಾಂಕ ನಬಲಗೊಂಡು
ಲೇಸಾಗಿ. ಪೇಳ್ವೆ ನೀ. ಕೃತಿಯನು."[೨೮]

" ಹರಿಸುತನರಸಿಯಸಿರಿಮುಡಿಪಿಡಿದವ
ಗೊರ ವಿ.ತ್ತನ ಪ್ರಾಣ. ಕಾಂತೆಯು
ಹಿರಿಮಗನ [ವರ] ಶ್ರೀಚರಣಾರವಿಂದಕೆ
ಯೆರಗುವೆ.ನಾನತಿ. ಮುದದಿಂದ."[೨೮]

ಈ ಎಲ್ಲಾ ಪದ್ಯಗಳನ್ನು ಗಮನಿಸಿದಾಗ ನಾವು ಹಿಂದೆ ಉದ್ಧರಿಸಿದ 'ಸೊಬಗಿನ ಸೋನೆ ವರ್ಣ'ಕ್ಕೆ ಸಂಪೂರ್ಣ ಸಾಮ್ಯವಿರುವುದನ್ನು ಕಾಣಬಹುದು ಈ ವಿಚಾರದಿಂದ ಸೊಬಗಿನ ಸೋನೆ ಒಂದು ವಿಶಿಷ್ಟವಾದ ಛಂದಸ್ಸು, ಹಾಡುಗಬ್ಬ ಎಂದು ಸ್ಪಷ್ಟವಾಗುತ್ತದೆ.

"ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡು ವಿಷ್ಣು ಒಂದು ಬ್ರಹ್ಮಕ್ಕೆ ಬದಲಾಗಿ ಮೂರು ವಿಷ್ಣುಗಳೇ ಬರುತ್ತವೆ……… ಹೀಗೆ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣುಗಣಗಳು ಬರುವುದು ಸೊಬಗಿನ ಸೋನೆಗೆ ವಿಶಿಷ್ಟವಾದುದು"[೨೯] ಎಂದು ಹೇಳಿರುವ ಸಂಪಾದಕರು ಮುಂದುವರೆದು " ಹೀಗಿರುವುದರಿಂದಲೇ ಕೆಲವರು ಇದನ್ನು ಸಾಂಗತ್ಯವೇ ಅಲ್ಲ ಎನ್ನುವ ಮಾತನ್ನು ಆಡುತ್ತಾರೆ. ಆದರೆ, ಸಾಂಗತ್ಯವಲ್ಲದಿದ್ದರೆ ಮತ್ತೇನು ? ಎಂಬ ಮಾತಿಗೆ ನಿರುತ್ತರರಾಗುತ್ತಾರೆ. ರೂಢಿಯಲ್ಲಿನ ಛಂದಸ್ಸುಗಳ ಪ್ರಕಾರದಲ್ಲಿ

---

೨೮. ಈ ಎಲ್ಲಾ ಉದಾಹರಣೆಗಳನ್ನು ಶ್ರೀಯುತ ಬಿ. ಎಸ್. ಸಣ್ಣಯ್ಯನವರು ಸಂಪಾದಿಸಿರುವ ' ಸೊಬಗಿನ ಸೋನೆ ' ಕೃತಿಯ ಪೀಠಿಕೆಯಲ್ಲಿ ಹೇಳಿದ್ದಾರೆ. ನಾವು ಅಲ್ಲಿಂದಲೇ ಈ ಪದ್ಯಗಳನ್ನು ಉದ್ಧರಿಸಿದ್ದೇವೆ.

೨೯. ' ಸೊಬಗಿನ ಸೋನೆ '; ಪೀಠಿಕೆ; ಪುಟ: XLVII.

ಮತ್ತಾವುದನ್ನೂ ಇದಕ್ಕೆ ಅನ್ವಯಿಸಲು ಸಾಧ್ಯವಿಲ್ಲದಿದ್ದರೂ ಕೆಲವರು ಸೊಬಗಿನ ಸೋನೆ ಮಟ್ಟು ಬೇರೆ ಎಂಬ ಆಲೋಚನೆಯನ್ನು ಮಾಡಿದ್ದಾರೆ." ಎಂದು ಹೇಳಿದ್ದಾರೆ. ೨ ಮತ್ತು ೪ ನೆಯ ಪಾದಗಳಲ್ಲಿ ಮೂರು ವಿಷ್ಣುಗಣಗಳು ಬರುವುದು ಸೊಬಗಿನ ಸೋನೆಗೆ ವಿಶಿಷ್ಟವಾದುದು ಎಂದು ಹೇಳಿದ ಸಂಪಾದಕರು, ವಾದದ ಬಗೆಗೆ ಮೌನ ತಳೆದು 'ಸೊಬಗಿನ ಸೋನೆ' 'ಸಾಂಗತ್ಯ'ವೆಂದು ತೀರ್ಮಾನಿಸಿ ಸಂಪಾದಿಸಿದ್ದಾರೆ. ಇದು ಆತುರದ ತೀರ್ಮಾನವೆಂದು ನಮ್ಮ ಭಾವನೆ.

ಯಕ್ಷಗಾನ ಛಂದಸ್ಸಿನ ಬಗೆಗೆ ಬರೆಯುತ್ತಾ "ಅಂಶಗಳ ಲಯದ ಪದ್ಯಗಳಲ್ಲಿ ವಿಷ್ಣುಗಣ ವಿರತಕ್ಕ ಸ್ಥಾನದಲ್ಲಿ ಬ್ರಹ್ಮಗಣವಿರುವುದುಂಟು. [ಪುರಾತನ ಕಾವ್ಯಗಳಲ್ಲಿಯೂ ಇಂತಹ ಪ್ರಯೋಗಗಳಿವೆ.] ರುದ್ರಗಣವಿರಬೇಕಾದಲ್ಲಿ ವಿಷ್ಣುಗಣವಿರುವುದುಂಟು. ಆಗ ಗಣಗಳ ಸ್ವರವಿಸ್ತಾರವು ಸರಿಹೊಂದುವಂತೆ ಅಕ್ಷರಗಳನ್ನು ವಿಲಂಬಿಸಿ, ಓದಬೇಕಾಗುವುದು. ಕೆಲವೆಡೆಗಳಲ್ಲಿ ವಿಷ್ಣುಗಣವಿರಬೇಕಾದಲ್ಲಿ ರುದ್ರಗಣವಿರಬಹುದು. ಆಗ ಅದನ್ನು ವಿಷ್ಣುಗಣಕ್ಕೆ ಸರಿಯಾಗುವಂತೆ ತ್ವರಿತೋಚ್ಚಾರದಿಂದ ಅಕ್ಷರಗಳನ್ನು ಸಂಕೋಚಗೊಳಿಸಿ ಓದಬೇಕಾವುದು. ಬ್ರಹ್ಮಗಣವಿರಬೇಕಾದಲ್ಲಿ ವಿಷ್ಣುಗಣ ಅಥವಾ ರುದ್ರಗಣವನ್ನು ಪ್ರಯೋಗಿಸುವುದು ವಿರಳ."[೩೦] ಎಂದು ಶ್ರೀ ಕ. ಪು. ಸೀತಾರಾಮ ಕೆದಿಲಾಯರವರು ಹೇಳಿದ್ದಾರೆ. ಇಲ್ಲಿ ಬ್ರಹ್ಮಗಣಕ್ಕೆ ವಿಷ್ಣು ಅಥವಾ ರುದ್ರಗಳನ್ನು ಬಳಸುವುದು ವಿರಳ ಎಂಬ ಮಾತನ್ನು ಗಮನಿಸಿದಾಗ, ಸೊಬಗಿನ ಸೋನೆ ಸಂಪಾದಕರು ಹೇಳಿರುವ ಸಾಂಗತ್ಯದಲ್ಲಿನ ಬ್ರಹ್ಮಗಣಕ್ಕೆ ಬದಲಾಗಿ ವಿಷ್ಣು ಬಂದು 'ಸಾಂಗತ್ಯ' ವಾಗಿವೆ ಎಂಬ ಮಾತಿಗೆ ಪುಷ್ಟಿ ದೊರೆಯುವುದಿಲ್ಲ.

ಹಾಗಿದ್ದರೆ 'ಸೊಬಗಿನ ಸೋನೆ' ಎಂಬ ಹೆಸರು ಬಂದದ್ದು ಹೇಗೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದನ್ನು ಈ ರೀತಿ ಊಹಿಸಬಹುದು. ಆಂಡಯ್ಯನ 'ಕಬ್ಬಿಗರಕಾವ'ಕ್ಕೆ 'ಸೊಬಗಿನ ಸುಗ್ಗಿ'[೩೧] ಎಂಬ ಹೆಸರಿರುವುದು ಸರ್ವವಿದಿತ. ಸೊಬಗಿನ ಸುಗ್ಗಿ ಎಂಬ ಮಾತಿನಿಂದ ಉತ್ತೇಜಿತನಾದ ದೇಪರಾಜ 'ಸೊಬಗಿನ ಸೋನೆ' ಎಂಬ ಹೆಸರನ್ನು ಕಾವ್ಯಕ್ಕೂ ಛಂದಸ್ಸಿಗೂ ಅದೇ ಹೆಸರನ್ನು ಬಳಸಿಕೊಂಡು ಕೃತಿ ರಚಿಸಿರಬಹುದು. ಇದಕ್ಕೆ ಆತನ ಕೃತಿಯಲ್ಲಿ ನಿದರ್ಶನಗಳು ದೊರೆಯುತ್ತವೆ.

"ಎಲೆ ಪ್ರಿಯೆ ಕೇಳು ತೊಳದ ಮುತ್ತು ಕರತಳಾ
ಮಳಕವೀಕಥೆ **ಸೊಬಗಿನಸೋನೆ**

---

೩೦ ಶ್ರೀ ಕ. ಪು. ಸೀತಾರಾಮ ಕೆದಿಲಾಯ. "ಯಕ್ಷಗಾನ ಛಂದಸ್ಸು" ಬೆಳ್ತಂಗಡಿ. ೧೯೬೪. ಪೀಠಿಕೆ.

೩೧. ಶ್ರೀ ಆರ್. ನರಸಿಂಹಾಚಾರ್ಯ; ಕರ್ಣಾಟಕ ಕವಿಚರಿತ್ರೆ; ಸಂ. ಪುಟ ೧; ಪುಟ ೪೯೫.

ಶಿವಶಿವಾ ಮಾದೇವ ತಂದಿ
ಗೌರಿಯರಸ ಗಂಗಾಧರನೆ
ಅರಿವಿರಲಿ ಶಂಭೋ ನಿನಗೆ ಮಾನಾ ಕಾಯಿರಿ.

ಸತ್ಯಕಾಲದ ಶರಣರಿವರು
ನಿತ್ಯಕಾಲದ ಧರ್ಮರಾಯ
ಸತ್ಯ ಜನರಿಗನ್ನಕೊಡುವಂಥ ಸರ್ವೇಶ ಕಾಯರಿ.

ಪಂಚ ಪಾಂಡುರೈವರು ಮಂದಿ
ಎಂಥವನವ್ವ ಕೌರವರಾಯ
ಪಂಥಗೇಡಿ ಪಗಡಿನಾಡಿ ಜೂಜಗೆದ್ದಾನು.

ನಕುಲ ಸಾದೇವ ಅರ್ಜುನ
ಭೀಮಸೇನ ಧರ್ಮರಾಯ
ಐವರಿಗೆ ಒಬ್ಬಳು ಮಡದಿ ಮಾನಕಾಯರಿ.

ಕೆಟ್ಟ ದುಷ್ಟನ ಕಟ್ಟೇ ವ್ಯಾಲಿ
ಪಟ್ಟಾವಳಿ ಸೆಳುವುತಾಗ
ಅಕ್ಕ ನಾಗರಕನ್ನೆ ನಿನ್ನ ಸ್ಮರಣಿ ಮಾಡುವೆ.

ಆಕಾಶ ಹಿಡಿದು ಎತ್ತುತಾಳೆ
ಭೂಮಿನಾದರೆ ಚಪ್ಪರಿಸುತಾಳೆ
ಕರಿಕರಿ ಮುಂಬಲ್ಲಿ ಕಡೆದು ಕೊಡವಿ ನಡೆನಳು.

ಎತ್ತಲಿದ್ದ ದುರ್ವಾಸ
ಸಿಟ್ಟಿಗೆದ್ದು ಮುಂದ ನಿಂತು
ಕುತ್ತಗಿ ಮೇಲೆ ಕತ್ತಿನಿಟ್ಟು ಸೀರಿ ಸೆರಗ್ಹಿಡದ.

ಸೆರಗಹಿಡದ ಎಳೆಯ ಬೇಡ
ಮುಡಿಯ ಹಿಡದ ಜಗ್ಗಬೇಡ
ಎನ್ನ ಮಾಡಿ ಕೊಂಡಂಥ ಅರ್ಜುನ ಕಂಡರೆ ಬಾಣಲ್ಲೊಗದಾನು.

ಪಂಥ ಹಾಕದಿರಃ ಎನಗ
ಕುಂತಿಸೊಸೆಯ ದ್ರೌಪತಿ–ನೀನು
ಜಂತಿಗೆ ಜಂತಲಾದರಗಟ್ಟಿ ಸೀರಿ ಸೆಳೆಯುವೆ.

ಆಕಾಶ ಬಣ್ಣದಃ ಸೀರಿ
ಲೋಕದಾಗಿಲ್ಲದಂಥ ಸೀರಿ
ಸಾಕ್ಷಾತ್ ಕೃಷ್ಣ ಕೊಟ್ಟಂಥ ಸೀರಿ ಸವೆಯಲಿಲ್ಲವು.

ಸೀರಿ ಎಳೆದು ಗುಡ್ಡ ಬಿತ್ತು
ಸೋತು ನಿಂತ ದುಸ್ಯವಾಸ
ಅತ್ತ ದುರ್ಯೋಧನನು ತಾನು ಮಾರಿ ನೆಲಕ್ಕಿಟ್ಟ.
ದುಸ್ಯವಾಸ ಸೋತನೆಂದು
ದುರ್ಯೋಧನ ಸೆಳೆವುತ ಬಂದ
ಉಟ್ಟ ಸೀರಿ ಸೇಸೆನಾಗಿ ಕೈಯ ಕಚ್ಚಾಳು.
ಬಿಚ್ಚಿದ ಕೇಶ ಕಟ್ಟುತಲಿ
ಅಂಗಾಲಾನ ಮಣ್ಣು ಒರಸುತಲಿ
ಸಾಕ್ಷ್ಯದ ಶಿವನ ಸ್ಮರಣೆ ನೆನೆವುತ ನಿಂತಳು.
ಕೆಟ್ಟ ಕುಲದ ಕೌರರಿವವರು
ಮುಟ್ಟಿ ಸೆರಗ ಹಿಡಿದಾರೆಂದು
ಪಟ್ಟವಾಳಿ ಸೀರಿ ಸೆರಗು ಹರಿದು ಚೆಲ್ಯಾಳು.
ನೀಚ ಕುಲದ ಕೌರವರಿವರು
ಮತ್ತೆ ಸೆರಗ ಹಿಡಿದಾರೆಂದು
ಮಲ್ಲಿಗಿ ಹೂವಿನ ಸೀರಿ ಸೆರಗ ಹರಿದು ಚೆಲ್ಯಾಳು.
ಎತ್ತಹ್ಯಾದಿ ದುಸ್ಯವಾಸ
ಲೆತ್ತ ಪಗಡಿ ತಾ ಎಂದಾಳು
ಚಿತ್ತವಿಟ್ಟು ದ್ರೌಪತಿ ಅವರನು ಆಟಕ್ಕೆ ಕರೆದಾಳು.
ದುರ್ಯೋದನನೆ ಹಾಕುತಲಿ
ದ್ರೌಪತಾ ದೇವಿ ಆಡುತಲಿ
ಲೆತ್ತ ಪಗಡಿ ಪಾದದಲಾಡಿ ಜೂಜ ಗೆದ್ದಾಳು.
ಧರ್ಮರಾಯ ಆಟ ಸೋತ-
ದ್ರೌಪತಿದೇವಿ ಗೆದ್ದಾಳು
ಸಾಕು ತಾಯಿ ಆಟವೆಂದು ಕರವ ಮುಗಿದಾನು.
ದ್ರೌಪತಾದೇವಿ ಗೆದ್ದಾಳೆಂದು
ಧೃತರಾಷ್ಟ್ರ ನೋಡಲು ಬಂದ
ಹೋದಂತಾವೆರಡು ಕಂಗಳು ತಾವೆ ಬಂದಾವು.
ಪಾಂಡವರ ಪದವ ಕೇಳಿ
ಪಟ್ಟಪದವಿ ಆಗಲವರಿಗೆ
ದ್ರೌಪದಿ ಹಂಗ ಅಷ್ಟ ಅಯುಸ್ವರ್ಯವು ಸಿಗಲಿ ಅವರಿಗೆ.

★ ಸಿ. ವ್ಹಿ. ಕೆರಿಮನಿ

ಶ್ರೀಮತಿ ದೇವಕ್ಕ ಲಕ್ಷ್ಮೇಶ್ವರ ಇವರಿಂದ ಸಂಗ್ರಹಿಸಲಾಗಿದೆ. ಪ್ರೊ. ವಿ. ಶಿವಾನಂದ ಗದಗ ಇವರ ಸಹಕಾರ ದೊರೆತಿದೆ

ಪೆರಿಯಪುರಾಣದ ಕಥೆಗಳು

೨. ಇಯರ್ಪಗೈ ನಾಯನಾರ್

(ಕಳೆದ ಸಂಚಿಕೆಯಿಂದ)

ಚೋಳ ದೇಶದಲ್ಲಿ ಕಾವೇರಿಪಟ್ಟನಂ ಎಂಬ ನಗರವು ಶೋಭಿಸುತ್ತಿರುವುದು. ಇದನ್ನು ಪುಹಾರ್ ಎಂತಲೂ ಕರೆಯುವರು. ಇದು ಕಾವೇರಿ ನದಿ ಸಮುದ್ರವನ್ನು ಸೇರುವ ಸಂಗಮ ಸ್ಥಾನದಲ್ಲಿರುವುದು. ಪುಹಾರ್ ನಗರವು ಒಂದು ಕಾಲದಲ್ಲಿ ಚೋಳ ದೇಶದ ರಾಜಧಾನಿಯಾಗಿತ್ತು. ಆ ನಗರದಲ್ಲಿ ವಣಿಕರ ಕುಲದಲ್ಲಿ ಇಯರ್ಪಗೈ ಎಂಬ ಶಿವಭಕ್ತರೊಬ್ಬರಿದ್ದರು. [ಇಯಲ್ + ಪಗೈ = ಸ್ವಭಾವಕ್ಕೆ ವೈರಿ ಎಂಬುದು ಶಬ್ದಾರ್ಥ]. ಅವರು ಲೋಕಸ್ವಭಾವಕ್ಕೆ ಪಗೆಯಂತಿದ್ದರು. ಪೆರೆಸೂಡಿದ ಪರಶಿವನ ಭಕ್ತಾವಳಿಗೆ ಸೇವೆಸಲ್ಲಿಸುವುದರಲ್ಲಿ ಅಗ್ರಗಣ್ಯರಾಗಿದ್ದರು. ಶಿವನಡಿಯಾರ್ (=ಶಿವ ಶರಣರು) ಯಾವುದನ್ನು ಬೇಡಿದರೂ 'ಇಲ್ಲ' ಎನ್ನದೆ ಕೊಡುವ ಸ್ವಭಾವದವರು. ಮೈಮೇಲೆ ವಿಭೂತಿಯನ್ನು ಉದ್ಧೂಳಿಸಿಕೊಂಡು ಹರಭಕ್ತರು ಯಾರು ಬಂದರೂ ಅವರು ಬೇಡಿದುದನ್ನು ನೀಡುವರು. ಅವರ ಇಷ್ಟಾರ್ಥವನ್ನು ಪೂರ್ತಿಗೊಳಿಸುವರು. ಗೃಹಸ್ಥಾಶ್ರಮದಲ್ಲಿದ್ದರೂ ಅವರು ಜ್ಞಾನಿಯಾಗಿದ್ದರು. ಅವರ ಹೆಂಡತಿಯು ತನ್ನ ಪತಿ ಬಗೆದದ್ದನ್ನೇ ತಾನೂ ಬಗೆವ ಒಮ್ಮನದವಳಾದ್ದಳು. ದಂಪತಿಗಳ ಬಾಳ್ವೆಯು ನಲ್ಮೆಯಿಂದ ಸುಗಮವಾಗಿ ಸಾಗುತ್ತಿತ್ತು.

ಒಮ್ಮೆ ಪರಶಿವನು ಇಯರ್ಪಗೈ ನಾಯನಾರರ ಶಿವಭಕ್ತಿಯ ಛಲವನ್ನೂ, ಅವರ ಜಂಗಮ ಸೇವೆಯ ಹಿರಿಮೆಯನ್ನೂ ಲೋಕಕ್ಕೆ ಸಾರಬೇಕೆಂದೆಣಿಸಿ ಒಬ್ಬ ಬ್ರಾಹ್ಮಣರ ರೂಪವನ್ನು ತಳೆದು ಇಯರ್ಪಗೈಗಳ ಮನೆಗೆ ಎಳ್ತಂದರು. ಅವರ ಮೈಮೇಲೆ ಬೆಳ್ಳನೆಯ ವಿಭೂತಿ ಜೆಳಗುತ್ತಿತ್ತು. ಆದರೂ ಅವರ ತೋರ್ಕೆ ಕಾಮುಕರಂತಿತ್ತು; ಚತುರೆ ಧೂರ್ತ ವಿಟನಂತಿತ್ತು. ಕಂಡವರು ಅಂಜುವಂಥ ಮಾಯದ ರೂಪ. ಇಯರ್ಪಗೈ ನಾಯನಾರರು ಅವರನ್ನು ನೋಡಿ ಇದಿರುಗೊಂಡು ಸಾಷ್ಟಾಂಗವೆರಗಿ ಪೊಡಮಟ್ಟು ಕೈಗೊಟ್ಟು ಕರೆತಂದು ಮಣಿಪೀಠವನ್ನಿತ್ತು ಆದರದಿಂದ ಕುಳ್ಳಿರಿಸಿ ಪಾದಪ್ರಕ್ಷಾಲನಗೈದು ಅರ್ಚಿಸಿ, "ಎಲೈ ದೇವಾ! ತಾವು ಇಲ್ಲಿಗೆ ದಯಮಾಡಿದ್ದು ನನ್ನ ಭಾಗ್ಯ" ಎಂದು ಸ್ವಾಗತಿಸಿದರು. ಬ್ರಾಹ್ಮಣರು "ಕಕ್ಕೆಹಾರವನಾಂತ ಜಟಾಧರನ ಭಕ್ತರು ಬೇಡಿದುದನ್ನೆಲ್ಲಾ ನೀವು ನಿರಾಕರಿಸದೆ ಈಯುವಿರಂತೆ. ನಾನು ಒಂದನ್ನು ಬಯಸಿ ಇಲ್ಲಿಗೆ ಬಂದಿರುವೆನು. ಅದನ್ನು ಕೊಡಲು ನೀವು ಒಪ್ಪಿದರೆ, ಅದು ಏನೆಂದು ಹೇಳುವೆನು." ಎಂದರು. ಅದಕ್ಕೆ ಇಯರ್ಪಗೈಗಳು "ನನ್ನಲ್ಲಿ ಯಾವುದೊಂದಿದ್ದರೂ ಅದು ಶಿವಭಕ್ತರ

ಒಡವೆ. ಆದುದರಿಂದ ನೀವು ಸಂಶಯಪಡದೆ ಬೇಕಾದುದನ್ನು ಅಪ್ಪಣೆ ಕೊಡಿಸಬಹುದು." ಎಂದರು. "ನಿಮ್ಮ ಸತಿಯನ್ನು ಬಯಸಿ ಇಲ್ಲಿಗೆ ಬಂದಿರುವೆನು" ಎಂದು ಶರಣರು ಉತ್ತರಿಸಿದರು. ಇದನ್ನು ಕೇಳಿದ ಇಯರ್ಪಗೈ ಗಳು ಬೆಚ್ಚಲಿಲ್ಲ, ನಿರಾಕರಿಸಲಿಲ್ಲ. ಸಂತೋಷದಿಂದ "ನನ್ನಲ್ಲಿರುವುದನ್ನೇ ಬೇಡಿ ದಿರಿ; ನಿಮ್ಮ ಅನುಗ್ರಹ" ಎಂದು ಹೇಳಿ ಮನೆಯೊಳಗೆ ಹೋಗಿ ತನ್ನ ಸತಿಯನ್ನು ಕರೆದು ಪಕ್ಕವಾಗಿ ಮಾತನಾಡಿ, "ಇಂದು ನಿನ್ನನ್ನು ಈ ತಪೋಧನರಿಗೆ ಇತ್ತಿರು ವೆನು" ಎಂದು ನುಡಿದರು. ಇದನ್ನು ಕೇಳಿದ ಅವರ ಸತಿ ತಬ್ಬಿಬ್ಬಾದಳು. ಅವಳ ಮನಸ್ಸು ಕದಡಿತು. ಆದರೂ ಕೂಡಲೇ ತಿಳಿವು ಪಡೆದು ತರಿಸಂದಳು. ಪತಿಯನ್ನು ನೋಡಿ, "ನಾಥ! ನೀವು ಬಯಸಿದ್ದನ್ನು ಪಾಲಿಸುವುದಲ್ಲದೆ ನನಗೆ ಬೇರೆ ಬಾಧ್ಯತೆ ಇರುವುದೇ?" ಎಂದು ವಂದಿಸಿ ಹೇಳಿದಳು. ಇದನ್ನು ಕೇಳಿದ ಇಯರ್ಪಗೈ ನಾಯನಾರ್ ಹರ್ಷಚಿತ್ತರಾದರು. ಆಕೆಯು ಈಗ ಶಿವಶರಣರಿಗೆ ಸೇರಿದವಳಾದುದರಿಂದ ತನ್ನ ಸತಿಯನ್ನು ವಂದಿಸಿದರು. ಬಳಿಕ ಅವರ ಸತಿ ಮುಂದೆ ಹೋಗಿ ಅತಿಥಿಯಾಗಿ ಬಂದಿದ್ದ ಬ್ರಾಹ್ಮಣರನ್ನು ನಮಸ್ಕರಿಸಿದಳು. ಇಯರ್ಪಗೈ ನಾಯನಾರರೂ ಸಹ ಬ್ರಾಹ್ಮಣರನ್ನು ವಂದಿಸಿ "ಇನ್ನು ನಾನು ಮಾಡತಕ್ಕ ಸೇವೆ ಯಾವುದು?" ಎಂದು ಪ್ರಶ್ನಿಸಿದರು. "ಈ ತರುಣಿಯನ್ನು ನಾನು ಕರೆದುಕೊಂಡು ಹೋಗುವಲ್ಲಿ, ನಿನ್ನ ಬಂಧು ಬಳಗದವರನ್ನೂ ಈ ನಗರ ವನ್ನೂ ದಾಟುವವರೆಗೆ ನೀನು ನನಗೆ ಬೆಂಗಾವಲಾಗಿ ಬರಬೇಕು" ಎಂದು ಕೃತಕ ಬ್ರಾಹ್ಮಣರು ಉತ್ತರಕೊಟ್ಟರು. "ನಾನೇ ತಿಳಿದು ಮಾಡಬೇಕಾದ ಕೆಲಸ ವಿದು. ಇದನ್ನು ಇವರು ಅಪ್ಪಣೆ ಕೊಡಿಸುವವರೆಗೆ ನಾನು ಸುಮ್ಮನಿದ್ದುದು ತಪ್ಪಾಯಿತು" ಎಂದು ಬಗೆದು, "ಇಗೋ ಬಂದೆ" ಎಂದು ಹೇಳಿ ನಾಯನಾರರು ಮನೆಯೊಳಕ್ಕೆ ಹೊಕ್ಕು ಸಮರಕ್ಕೊಪ್ಪುವಂತೆ ಸುಸಜ್ಜಿತರಾಗಿ ಅಸಿಫಲಕ ಗಳನ್ನು ಹಿಡಿದು ಹೊರಬಂದರು. ಅವರೀರ್ವರನ್ನು ಮುಂದೆ ಹೋಗಗೊಟ್ಟು, ಅವರನ್ನು ತಡೆದವರನ್ನು ತರಿದುಹಾಕುವೆನೆಂದು ಹೇಳಿ ತಾನು ಅವರನ್ನು ಹಿಂಬಾಲಿಸಿದರು. ಈ ಸುದ್ದಿ ವಾಯುವೇಗದಿಂದ ಎಲ್ಲೆಲ್ಲೂ ಹರಡಿತು. ಸತಿಯ ಬಂಧು ಬಳಗದವರೂ ನಾಯನಾರರ ಬಂಧು ಬಳಗದವರೂ ಈ ವಾರ್ತೆಯನ್ನು ಕೇಳಿ ಕಡುಮುಳಿದು ಕಿಡಿಕಿಡಿಯಾಗಿ, "ಈ ಪರಿ ಹೆಂಡತಿಯನ್ನು ಬ್ರಾಹ್ಮಣ ಭಿಕ್ಷುವಿಗೆ ಕೊಡುವನಾರ್? ಪಿತ್ತನಾದ ಇಯರ್ಪಗೈ ನಾಯನಾರ್ ಮರುಳ್ಮಸಗಿ ತನ್ನ ಹೆಂಡತಿಯನ್ನು ಕೊಟ್ಟನಾದರೂ, ಆ ಧೂರ್ತನು ಇಂಥ ಪತಿವ್ರತಾ ಶಿರೋ ಮಣಿಯನ್ನು ಕರೆದೊಯ್ಯಲಾಗುವುದೇ? ಪಳಿಗೆ ಪಾತ್ರವಾಗುವ ಈ ಅನ್ಯಾಯವನ್ನು ನಾವು ಎಂದಿಗೂ ಆಗಗೊಡೆವು" ಎಂದು ಅಬ್ಬರಿಸುತ್ತ ಸಮರಕ್ಕೆ ಉದ್ಯುಕ್ತರಾದರು. ಶೂಲ, ಚಾಪ, ಬಾಳು, ಸುರಿಗೆಮುಂತಾದ ಕೈದುಗಳನ್ನಾಂತು ಅತಿ ವೇಗದಿಂದ ಮುಂಬರಿದು ಅರ್ಭಟಿಸಿ ಅವರನ್ನು ಅಡ್ಡಗಟ್ಟ ಮುತ್ತಿ

ಕೊಂಡರು. ಮತ್ತು ಮುನೀಶ್ವರನನ್ನು ನೋಡಿ" ಎಲವೋ, ನೀತಿಗೆಟ್ಟವನೇ! ಹೋಗಬೇಡ ನಿಲ್ಲು. ನಮ್ಮ ಕುಲವಧುವನ್ನು ಇಲ್ಲೇ ಬಿಟ್ಟು ಪಳಿ ಪಾಪಗಳಿಗೆ ಗುರಿಯಾಗದೆ ನೀನು ತೊಲಗು!" ಎಂದು ಬೊಬ್ಬಿಡುತ್ತ ನಾಲ್ದೆಸೆಯಿಂದಲೂ ಸುತ್ತುಗಟ್ಟಿದರು. ಬ್ರಾಹ್ಮಣ ರೂಪದಲ್ಲಿ ಬಂದವರು ಅಂಜಿದಂತೆ ನಟಿಸುತ್ತ ಇಯರ್ಪ್ಪಗೈನಾಯನಾರರ ಸತಿಯ ಕಡೆ ದೃಷ್ಟಿ ಬೀರಿದರು. ಆಕೆಯು "ದೇವಾ! ಅಂಜಬೇಡಿರಿ, ಇಯರ್ಪ್ಪಗೈಗಳು ಗೆಲ್ಲುಂ" ಎಂದಳು. ಇದನ್ನು ಕೇಳಿದ ನಾಯನಾರ್, "ತಾವು ಚಿಂತಿಸಬೇಡಿರಿ, ನಾನು ಇವರನ್ನೆಲ್ಲಾ ದಿಂಡುಗೆಡಹಿ ತರಿದೊಟ್ಟುವೆನು," ಎಂದರು. ಬಳಿಕ ಸಿಂಹದಂತೆ ಹಾಯ್ದು ಕಿಡಿಕಾರುತ್ತ ಬಳಗ ಮತ್ತು ನಿಜಮಿತ್ರರ ಮೇಲೆರಗಿ ಕೂರಸಿಯಿಂದ ಅವರನ್ನು ಕಡಿದು ತರಿದು ಬರಿಕೆಯ್ದರು. ಮಾರೊಡ್ಡಿ ನಿಂತ ಪರಿಜನರ ತಲೆಯೊಂದೆಡೆ, ತೋಳೊಂದೆಡೆ, ಕೈಗಳೊಂದೆಡೆ, ಕಾಲ್ಗಳೊಂದೆಡೆ ಹೀಗೆ ಅಸ್ತವ್ಯಸ್ತವಾಗಿ ತುಂಡರಿಸಿ ಬಿದ್ದವು. ಬಳಗದವರು ಒಮ್ಮೆ ಬೇರೆ ಬೇರೆಯಾಗಿ ಬಂದು ಎದುರಿಸಿದರು. ಅವರೆಲ್ಲರನ್ನು ಇಯರ್ಪ್ಪಗೈಗಳು ಒಬ್ಬರೇ ನಿಂತು ತಡೆಗಟ್ಟಿ ಕಲಿತನದಿಂದ ಕಾದಾಡಿ ಸದೆಬಡಿದರು. ನಾಯನಾರರ ಮುಂದೆ ಯಾರೂ ನಿಲ್ಲಲಾರದೆ ಮಡಿದು ಮಣ್ಣುಪಾಲಾದರು. ಬ್ರಾಹ್ಮಣರನ್ನು ನೋಡಿ "ಈಗ ನೀವು ಅಂಜಿಕೆಯಿಲ್ಲದೆ ಹೋಗಬಹುದು ಕಾನನವನ್ನು ದಾಟುವ ತನಕ ನಾನು ತಮ್ಮ ಜೊತೆ ಬರುವೆನು." ಎಂದು ನುಡಿದು ತಿರುಚ್ಚಾಯ್ಕಾಡು ಎಂಬ ಶಿವಲಿಂಗ ಕ್ಷೇತ್ರವನ್ನು ತಲುಪುವವರೆಗೆ ಇಯರ್ಪ್ಪಗೈಗಳು ಅವರ ಸಂಗಡ ಹೋದರು. ಬ್ರಾಹ್ಮಣರು ನಾಯನಾರರನ್ನು ನೋಡಿ, "ನೀವು ಈಗ ಮನೆಗೆ ಹಿಂತಿರುಗ ಬಹುದು" ಎಂದು ಬೀಳ್ಕೊಟ್ಟರು. ಇಯರ್ಪ್ಪಗೈಗಳು ಬ್ರಾಹ್ಮಣರ ಕಾಲ್ಗೆರಗಿ ವಂದಿಸಿ ಮನೆಗೆ ಹಿಂದಿರುಗಿದರು. ಮಾಡಲರಿದಾದ ಸಾಧನೆಯನ್ನು ಮಾಡಿದ ಪರಶಿವನು ಹರ್ಷಚಿತ್ತನಾಗಿ, "ಹುಸಿ ಕಪಟವಿಲ್ಲದ ಹೃದಯದವನು; ತನ್ನ ಪತ್ನಿಯನ್ನು ಇತ್ತಬಳಿಕ ಅವಳನ್ನು ತಲೆಯೆತ್ತಿ ನೋಡದೆಯೇ ಹೋಗುತ್ತಿರುವನು. ಎಂಥ ಪವಿತ್ರ ಚಿತ್ತದವನು!" ಎಂದು ಮನದಲ್ಲಿ ಕೊಂಡಾಡಿ ಸತ್ಯ ಹೃದಯದ ನಾಯನಾರರನ್ನು ಮತ್ತೆ ಕರೆಯತೊಡಗಿದನು. "ಇಯರ್ಪ್ಪಗೈ ಮುನಿಪನೇ! ಶಿವಧೋ! ಇತ್ತ ನೀಂ ಬರ್ಕೆ, ಶಿವಧೋ! ಹರನನ್ನು ಎಂದೂ ಮರೆಯದವನೇ, ಶಿವಧೋ! ಪ್ರಿಯನೇ, ಶಿವಧೋ, ! ಶಿವಧೋ! ಮಾಡಲರಿದಾದ ಕಜ್ಜವನು ಮಾಡಿ ನೆರಪಿದ ಧೀರನೇ, ಶಿವಧೋ! ಎಂದು ಶಿವದಿಟ್ಟರು. ಈ ಆರ್ತಸ್ವರವನ್ನು ಕೇಳಿದ ನಾಯನಾರರು, "ಬಂದೆ, ಬಂದೆ, ನಿಮಗೆ ಕೋಟಲೆ ಮಾಡುವ ವಕ್ರಿಗಳು ಇನ್ನಾರಾದರು ಉಳಿದಿರುವರೇ? ಅಂಥವರನ್ನು ಚಿಟಕೆಹೊಡೆಯುವಷ್ಟರಲ್ಲಿ ಕಡಿದು ಹಾಕುವೆನು" ಎಂದು ಕೂಗಾಡುತ್ತ ಧಾವಿಸಿ ಬಂದರು. ಹಾಗೆ ಬಂದವರೇ, ಅಲ್ಲಿ ಬ್ರಾಹ್ಮಣರನ್ನು ಕಾಣಲಿಲ್ಲ! ಲಲನೆಯನ್ನು

ಮಾತ್ರ ಕಂಡರು, ಮರುಕ್ಷಣದಲ್ಲಿ ಪರಶಿವನು ಗಗನದಲ್ಲಿ ಪಾರ್ವತಿಯೊಡನೆ ವೃಷಭಾರೂಢನಾಗಿ ತನ್ನ ನಿಜರೂಪವನ್ನು ತೋರಿದನು. ಆ ದೃಶ್ಯವನ್ನು ಕಂಡ ಇಯರ್ಪಗೈನಾಯನಾರರು ಸಾಷ್ಟಾಂಗ ಪ್ರಣಾಮಮಾಡಿ ಈಶ್ವರನನ್ನು ಸ್ತುತಿಸುತ್ತನಿಂತರು. ಅವರನ್ನು ನೋಡಿ ಉಮಾಪತಿಯು "ನಿನ್ನ ಭಕ್ತಿಯ ಛಲವನ್ನೂ ಸೇವಾಧರ್ಮದ ಹಿರಿಮೆಯನ್ನೂ ನಾವು ಬಹಳ ಮೆಚ್ಚಿದೆವು. ನಿನ್ನ ಸತಿಯೊಡನೆ ನೀನು ನಮ್ಮ ಜೊತೆ ಬರುವುದು ನಿಮಗೆ ಗಣಪದವನೀವೆನು" ಎಂದು ನುಡಿದು ಕಣ್ಮರೆಯಾದನು. ಅಮರರು ಅರಳಮಳೆಯನ್ನು ಸುರಿದರು. ಇಯರ್ಪಗೈನಾಯನಾರರೂ ಅವರ ಸತಿಯೂ ವಿಮಾನದಲ್ಲಿ ಕುಳಿತು ಶಿವ ಲೋಕವನ್ನೇರಿ ಪರಮಾನಂದದಿಂದಿದ್ದರು. ಇಯರ್ಪಗೈಗಳೊಡನೆ ಕದನಮಾಡಿ ಮಡಿದುಬಿದ್ದ ಅವರ ಬಂಧು ಬಳಗದವರೂ ಸಹ ಪರಶಿವನ ಅನುಗ್ರಹವನ್ನು ಪಡೆದು ಗಣಪದವನ್ನು ಹೊಂದಿ ಪ್ರಮಥರೊಡನೆ ಸುಖದಿಂದಿದ್ದರು

(ಮುಂದುವರಿಯುವುದು)

★ ಎಂ. ವಿ. ಜಂಬುನಾಥನ್

ದೇಪರಾಜ ವಿರಚಿತ —

ಸೊಬಗಿನ ಸೋನೆಯ ಛಂದಸ್ಸು

ಕ್ರಿ.ಶ. ಸುಮಾರು ೧೪೧೦ ರಲ್ಲಿದ್ದವನೆಂದು ಊಹಿಸಲಾಗಿರುವ ದೇಪರಾಜನ ಕೃತಿ 'ಸೊಬಗಿನ ಸೋನೆ' ಯನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಅಚ್ಚುಹಾಕಿಸಿದ್ದಾರೆ. ಇದರ ಸಂಪಾದಕರು ಶ್ರೀಯುತ ಬಿ. ಎಸ್. ಸಣ್ಣಯ್ಯನವರು. ಇದರ ಛಂದಸ್ಸಿನ ಬಗೆಗೆ ಭಿನ್ನಾಭಿಪ್ರಾಯಗಳಿವೆ ಎಂಬುದು ಸಂಪಾದಕರಾದ ಶ್ರೀ. ಬಿ. ಎಸ್. ಸಣ್ಣಯ್ಯನವರ ಮಾತುಗಳಿಂದ[೧] ವ್ಯಕ್ತವಾಗುತ್ತದೆ. ಇದನ್ನು ಕವಿಚರಿತೆಕಾರರು ಸಾಂಗತ್ಯವೆಂದು ಕರೆದಿದ್ದಾರೆ.[೨] ಹೀಗೆ ಇದು ಸಾಂಗತ್ಯ ಎಂದು ಕೆಲವರ ಅಭಿಪ್ರಾಯ. ಇದು ಸಾಂಗತ್ಯವಲ್ಲ. ಇದೇ ಒಂದು ವಿಶಿಷ್ಟವಾದ ಛಂದಸ್ಸು. ಇದು ಹಾಡುಗಬ್ಬ, ಎಂದು ಕೆಲವರ ಅಭಿಮತ.[೩] ಈ ಅಭಿಪ್ರಾಯಗಳನ್ನು ವಿಚಾರ ಮಾಡಿ ಶಾಸ್ತ್ರೋಕ್ತವಾಗಿ ಈ ಛಂದಸ್ಸಿನ ಗುಣವನ್ನು ನಿರೂಪಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

ಈ ಕೃತಿಯ ಛಂದಸ್ಸು ಗೇಯಗುಣದ್ದು ಎಂಬಂಶ ನಿರ್ವಿವಾದವಾದದು. ಸಾಂಗತ್ಯವೂ ಗೇಯಗುಣದ್ದು. ಆದುದರಿಂದ ಇದು ಸಾಂಗತ್ಯವೆಂದು ಸಂಪಾದಕರು ಗ್ರಹಿಸಿದ್ದಾರೆ.[೪] ಸಾಂಗತ್ಯದಂತೆ ಕಾಣುವ, ಗೇಯಗುಣವುಳ್ಳ ಈ ಛಂದಸ್ಸನ್ನು ಸಾಂಗತ್ಯವೆಂದೇ ನಿರೂಪಿಸುವುದರ ಔಚಿತ್ಯವೇನು ? ಹೀಗೆ ಹತ್ತಿರದ ಸಾಮ್ಯವಿದೆ ಎಂದ ಮಾತ್ರಕ್ಕೆ ಇದೇ ಅದು ಎಂದು ನಿರೂಪಿಸುವುದು ಎಷ್ಟರ ಮಟ್ಟಿಗೆ ಸೂಕ್ತ ? ಯಾವುದೇ ಗ್ರಂಥವನ್ನು ಸಂಪಾದಿಸುವಾಗ ಆ ಗ್ರಂಥದ ಛಂದಸ್ಸಿನ ರೂಪವನ್ನು ಸಮಗ್ರವಾಗಿ ತಿಳಿದಿರಬೇಕಾಗುತ್ತದೆ. ಛಂದಸ್ಸಿನ ಲಕ್ಷಣವನ್ನು ಸಮಗ್ರವಾಗಿ ತಿಳಿಯದೆ ಗ್ರಂಥವನ್ನು ಸಂಸ್ಕರಿಸಿ ಸಂಪಾದಿಸಿದರೆ ಪ್ರಮಾದವಾಗುತ್ತದೆ. ಅಲ್ಲದೆ ಕವಿಗೆ ಅಪಚಾರವೆಸಗಿದಂತೆಯೇ ಸರಿ. ನೆಲಗಟ್ಟಿಲ್ಲದೆ ಮನೆ ಕಟ್ಟುವರೆ !

---

೧. ಸಂ. ಶ್ರೀ. ಬಿ. ಎಸ್. ಸಣ್ಣಯ್ಯ, 'ಸೊಬಗಿನ ಸೋನೆ' ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೦. ಪೀಠಿಕೆ, ಪುಟ XLVII.

೨. ಶ್ರೀ. ಆರ್. ನರಸಿಂಹಾಚಾರ್ಯರ್, 'ಕರ್ಣಾಟಕ ಕವಿ ಚರಿತ್ರೆ', ಸಂಪುಟ ಎರಡು; ಪುಟ. ೪೩.

೩. ಮಾನ್ಯ. ಶ್ರೀ. ಎಚ್. ದೇವೀರಪ್ಪನವರೊಡನೆ ಈ ವಿಚಾರ ನಡಸಿದಾಗ ತಿಳಿದು ಬಂದ ಅಂಶ.

೪. 'ಸೊಬಗಿನ ಸೋನೆ'; ಪೀಠಿಕೆ, ಪುಟ. XLVII.

ಸಾಂಗತ್ಯದ ಲಕ್ಷಣ ಈ ರೀತಿಯದಾಗಿದೆ. “ಗೀತಿಕೆಯ ಎರಡು ಪಾದಗಳ ಅಥವಾ ಸಿರಿಯಕ್ಕರದ ಎರಡು ಪಾದಗಳ ರೂಪಾಂತರವೇ ಸಾಂಗತ್ಯವಾಗಿ ತೋರುವುದು. .... ಸಾಂಗತ್ಯದಲ್ಲಿ ಏಳು ಗಣದ ಪಾದ ಎರಡಾಗಿ ಒಳ-ಪ್ರಾಸಗೊಂಡು, ೪ + ೩ ಗಣವಾಗಿದೆ. ಒಟ್ಟು ನಾಲ್ಕು ಪಾದಗಳು, ಪ್ರಾಸ: ವಿಷ್ಣುವಿಗೆ ಪರ್ಯಾಯವಾಗಿ ಬ್ರಹ್ಮ— ಇದು ಲಕ್ಷಣ.”[೫] ಎಂದು ಕನ್ನಡ ಕೈಪಿಡಿಯಲ್ಲಿ ಹೇಳಿದ್ದರೆ, ಸನ್ಮಾನ್ಯ ಟಿ. ವಿ. ವೆಂಕಟಾಚಲಶಾಸ್ತ್ರಿಯವರು[೬] ಸಾಂಗತ್ಯದ ಲಕ್ಷಣವನ್ನು “ನಾಲ್ಕು ಪಾದಗಳು. ೧ ಮತ್ತು ೩ ನೆಯ ಪಾದಗಳಲ್ಲಿ ೪ ವಿಷ್ಣು; ೨ ಮತ್ತು ೪ ನೆಯ ಪಾದಗಳಲ್ಲಿ ೨ ವಿಷ್ಣು, ೧ ಬ್ರಹ್ಮ. ಆದರೆ ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮವೋ ರುದ್ರವೋ; ಬ್ರಹ್ಮನ ಸ್ಥಾನದಲ್ಲಿ ವಿಷ್ಣುವೋ ರುದ್ರವೋ ಸಾಮಾನ್ಯವಾಗಿ ಬರುವುದುಂಟು. ಇದು ಶುದ್ಧ ಗೇಯ ವ್ಯಕ್ತವಾದುದರಿಂದ, ರಚನೆಯ ಸೌಕರ್ಯದ ಅಪೇಕ್ಷೆಯಿಂದಲೂ ಪ್ರಯೋಗದಲ್ಲಿ ನವೀನತೆಯ ಕಾಂಕ್ಷೆಯಿಂದಲೂ ಸಹಜವಾಗಿ ಗಣ ವಿನ್ಯಾಸದಲ್ಲಿ ವ್ಯತ್ಯಾಸಗಳು ತಲೆದೋರುತ್ತವೆ. ಇದಕ್ಕೆ ಯಾವುದೇ ಸಾಂಗತ್ಯ ಕೃತಿಯಲ್ಲಿ ಯಥೇಚ್ಛವಾಗಿ ನಿದರ್ಶನಗಳನ್ನು ತೋರಿಸಬಹುದು,” ಎಂದು ಹೇಳಿದ್ದಾರೆ. ಆದರೆ ಈ ಗಣವಿನ್ಯಾಸಕ್ಕೆ ತಾವು ಕಂಡಿರುವ ಯಥೇಚ್ಛವಾದ ಉದಾಹರಣೆಗಳಲ್ಲಿ ಒಂದನ್ನೂ ಓದುಗರಿಗಿತ್ತಿಲ್ಲ. ಇದು ವಿಚಾರಾರ್ಹ.

ಕೈಪಿಡಿಕಾರರು ‘ವಿಷ್ಣುವಿಗೆ ಪರ್ಯಾಯವಾಗಿ ಬ್ರಹ್ಮ’ ಎಂದು ಹೇಳಿರುವರೇ ಹೊರತು ಬ್ರಹ್ಮಕ್ಕೆ ಬದಲಾಗಿ ವಿಷ್ಣು ಅಥವಾ ರುದ್ರ ಎಂದು ಹೇಳಿಲ್ಲ. ಆದರೆ ಶ್ರೀ ಯು. ಟಿ. ವಿ. ವಿ. ಶಾಸ್ತ್ರಿಯವರು ಬ್ರಹ್ಮಕ್ಕೆ ಬದಲಾಗಿ ವಿಷ್ಣು ಅಥವಾ ರುದ್ರ ಬರುವುದೆಂದು ಹೇಳಿದ್ದಾರೆ. ಇದು ಸಾಧುವಲ್ಲ ಎಂಬಂಶವನ್ನು ಉದಾಹರಣೆಗಳಿಂದ ಸಾದರಪಡಿಸಬಹುದು.

ಶಿಶುಮಾಯಣನ ತ್ರಿಪುರದಹನ ಸಾಂಗತ್ಯ :

“ಅವರಿವರೆನ್ನದೆ ಭುವನದೊಳಿಹ ಜೀವ
ನಿವಹಕೆ. ಶಾಂತ ರ.ಸವನು
ಅವಿರಳ ಮೆನಲೀವ ಶಾಂತಿ ಜಿನರಪಾದ
ಭುವನ ಜ.ಗ ಳಿಗೆಱ.ಗುವೆನು.”[೭]

---

೫. ‘ಕನ್ನಡ ಕೈಪಿಡಿ’; ಮೈಸೂರು ವಿಶ್ವವಿದ್ಯಾನಿಲಯ, ೧೯೬೯. ಪುಟ. ೧೩೮.

೬. ಶ್ರೀ. ಟಿ. ವಿ. ವೆಂಕಟಾಚಲಶಾಸ್ತ್ರಿ: ‘ಕನ್ನಡ ಛಂದಸ್ಸು’ ಪ್ರಕಟಣೆ. ಡಿ. ವಿ. ಕೆ. ಮೂರ್ತಿ, ಮೈಸೂರು. ಪುಟ. ೭೧.

೭. ಸಂ. ಶ್ರೀ ಎನ್. ಬಸವಾರಾಧ್ಯ. ‘ತ್ರಿಪುರದಹನ ಸಾಂಗತ್ಯ’; ಕನ್ನಡ ಸಾಹಿತ್ಯ ಪರಿಷತ್ತು; ೧೯೫೯. ಪದ್ಯ: ೩ ಮತ್ತು ೭.

"ಇಳೆಯೆಂಬ ಮನೆಗೆ ಕಳಸವೆನಿಸುವ ಬೆಳ್ಳಿ
ಗುಳದಬೆ.ಟ್ಟದೊಳರ್ಕ. **ಕೋಟಿ**
ಬೆಳಗನೇಳಿಪ ತನುವಿಡಿದಿಹನೆನೆ ಭುಜ
ಬಲಿ ಜಿನ.ಗೆಣಿಗುವೆ. **ಮುದದಿ.**"[೭]

ನಂಜುಂಡಕವಿಯ ರಾಮನಾಥ ಚರಿತ :

"ಗಂಗಾ ತುಂಗ ತರಂಗ ಧವಳಿತ ಪಿ
ಶಂಗ ಜ.ಟಾಜೂಟ. **ಭಾರ**
ಮಂಗಲಾತ್ಮಕ ಮದನಾಂಗ ದಹನ ಭ
ಸ್ಮಾಂಗ ಕೊ.ಡೆನಗೆ ಸ.**ನ್ಮತಿಯ**"[೮]

"ಪರಿಮೆಪೆಯೊಳು ಬೊಮ್ಮನಜಾಯೋಳಪುರ
ಹರನ ವಾ.ಮಾಂಗ ಭಾ.**ಗದೊಳು**
ಅರಲಶರಲ ಡಾಗ ಸೊತ್ತಿದಂಗಜ ವೀರ
ಬರಲಂಜಿ.ದನು ರಾಮ.**ನೆಡೆಗೆ.**"[೯]

ರತ್ನಾಕರವರ್ಣಿಯ ಭರತೇಶ ವೈಭವ :

"ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊ.ಳರಿವರಿ.**ನೆರಡು**
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ
ಕಬ್ಬೇ ಹೇ.ಳಿಲೆ ಸರ.**ಸತಿಯೆ.**"[೧೦]

"ತುಂಬಿಯಗಾನವಂತಿರಲಿ ಕೋಕಿಲನಾದ
ವೆಂಬರ. ಮಾತದಂ.**ತಿರಲಿ**
ತುಂಬುರ್ನಾರದರಿನ್ನೇಕೆ ಹೋಪುರೆ
ಯೆಂಬಂತೆ. ಸೊಗಸಿ ಹಾ.**ಡಿದರು.**"[೧೧]

---

೮. ಸಂ. ಶ್ರೀ ಎಚ್. ದೇವೀರಪ್ಪ. "ರಾಮನಾಥ ಚರಿತ" ಸಂಪುಟ : ೨; ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೫೯. ಪೀಠಿಕಾ ಸಂಧಿ; ಪದ್ಯ : ೨.

೯. ಅದೇ, ಸಂಪುಟ : ೩; ಸಂಧಿ : ; ಪದ್ಯ :

೧೦. ಸಂ. ಶ್ರೀ ತ. ಸು. ಶಾಮರಾಯ, "ಭರತೇಶ ವೈಭವ ಸಂಗ್ರಹ"; ಮೈಸೂರು ವಿಶ್ವ ವಿದ್ಯಾಲಯ, ೧೯೫೫. ಆಸ್ಥಾನ ಸಂಧಿ; ಪದ್ಯ-೩.

೧೧. ಅದೇ; ಆಸ್ಥಾನ ಸಂಧಿ; ಪದ್ಯ-೪೨.

ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ :

“ ಕನ್ನಡ ಜಾಣೆ ನೀಬಾರೆಂದು ಕರವಿಡಿ
ದೆನ್ನ ತ.ನ್ನೊತ್ತಿಗೆ. **ಬರಿಸಿ**
ಎನ್ನೊಳು ನೆವ ಮಿಗಿತಿಲ್ಲದೆರಕ ಗೂಡಿ
ಮನ್ನಿಸಿ. ನುಡಿದಳಿಂ.**ತೆಂದು** ”[೧೨]

“ ಪತಿಯೊಲವಕ್ಕೆ ಸತಿಯರೊಳು ಸತಿಯರು
ಪತಿಪಾದ. ಭಕ್ತಿಯ.ರಕ್ಕೆ
ಸತಿಯರ ಮೈಮೆಸಕಲ ಜಗದೆಳುನಿಲ್ಕೆ
ಸತಿಧರ್ಮ. ಶಾಶ್ವತ.**ಮಕ್ಕೆ** ”[೧೩]

ಎಲ್ಲಾ ಸಾಂಗತ್ಯ ಕೃತಿಗಳಲ್ಲಿನ ಪದ್ಯಗಳನ್ನು ಗಮನಿಸಿದಾಗ ಹೀಗೂ ಹದಿನಾಲ್ಕನೆ ಗಣ ಬ್ರಹ್ಮ ಎಂದು ವಿದಿತವಾಗುತ್ತದೆ. ಆದುದರಿಂದ ಸಾಂಗತ್ಯ ದಲ್ಲಿ ಬ್ರಹ್ಮನಿತ್ಯ ಎಂಬಂಶ ನಿರ್ವಿವಾದವಾದುದು. ಇದು ವಿಷ್ಣುವೊ ರುದ್ರವೋ ಆಗಿಲ್ಲ.

ದೇಪರಾಜನ ಸೊಬಗಿನ ಸೋನೆಯ ಪದ್ಯಗಳನ್ನೂ ಗಮನಿಸಿ ಅದರ ಲಕ್ಷಣ ವನ್ನು ಗ್ರಹಿಸೋಣ.

“ ವಾಣಿ ವರದೆ ವೀಣಾಪಾಣಿ ಬೊಮ್ಮನ
ರಾಣಿ ಗೀ.ರ್ವಾಣ ವಂ.**ದಿತಪಾದೆ**
ಜಾಣೆ ಕಲ್ಯಾಣಿ ಜನನಿ ಬಂದು ನೀ ಕೂರ್ತು
ಮಾಣದೆ.ನ್ನೆದೆಯೊಳು. **ನೆಲೆಗೊಳ** ”[೧೪]

“ ಜಲಜಕ್ಕೆ ಕಣ್ಮಲರ್ಗಳ ಜಕ್ಕವಕ್ಕಿಗೆ
ಮೊಲೆಗಳ. ತುಂಬಿಗೆ. **ಕುರುಳ್ಗಳ**
ಮಳಲ್ದಿಣ್ಣೆಗೆ ಪೊಱವಾರ್ಗಳ ನೀರ್ಗೈ ಪ್ಪ
ವೆಳಗ ಮು.ಯ್ಯಿತ್ತರ,**ಬಲೆಯರು** ”[೧೫]

---

೧೨. ಸಂ. ಮಂ. ಆ. ರಾಮಾನುಜಯ್ಯಂಗಾರ್. “ಹದಿಬದೆಯ ಧರ್ಮಂ” ಮೈಸೂರು. ೧೯೩೫. ಸಂಧಿ–೧; ಪದ್ಯ-೧೭.

೧೩. ಅದೇ; ಸಂಧಿ-೯; ಪದ್ಯ-೪೯.

೧೪. ಸೊಬಗಿನ ಸೋನೆ; ಸಂಧಿ-೧; ಪದ್ಯ-೬.

೧೫. ಅದೇ; ಸಂಧಿ-೩; ಪದ್ಯ-೨.

" ಸಸಿ ಬಿಸರುಹ ಕತ್ತಲೆ ಜೊನ್ನವೆಳೆವಿಸಿ
ಲಸಿ ಕಾಬ್ಜ. ತಮ್ಮೊಳು. ಕೆಳೆಗೊಂಡು
ಪಸರಿಸಿದೊಲು ಮೊಗಕರ ಕುರುಳ್ಳಗೆ ದೊಡ
ದೆಸಕ ಲೋಚನಗಳಾಗೆಸೆದವು "[೧೬]

ಇಲ್ಲಿ ' ಸೊಬಗಿನ ಸೋನೆ ' ಸಾಂಗತ್ಯದಂತೆಯೇ ನಾಲ್ಕು ಪಾದಗಳನ್ನು ಹೊಂದಿದೆ. ಒಂದು ಮತ್ತು ಮೂರನೆ ಪಾದದಲ್ಲಿ ನಾಲ್ಕು ವಿಷ್ಣು ಗಣಗಳು ಬರುತ್ತವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳಿವೆ. ಆದುದರಿಂದ ' ಸೊಬಗಿನ ಸೋನೆ ' ಗೂ ಸಾಂಗತ್ಯಕ್ಕೂ ಇರುವ ವ್ಯತ್ಯಾಸವೆಲ್ಲಾ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ. ಹಾಗೂ ಹಾಡು-ಗಾರಿಕೆಯಲ್ಲಿ. ಎರಡು ಮತ್ತು ನಾಲ್ಕನೆ ಪಾದಗಳಲ್ಲಿ ಮೂರು ವಿಷ್ಣು ಗಣಗಳು ಬರುವುದನ್ನು ಗಮನಿಸಿದ ಕೈಪಿಡಿಕಾರರು ಕವಿಚರಿತೆಯ (II. ೩೯೧) ಉದಾಹರಣೆಯನ್ನು ಉದ್ಧರಿಸಿ, " ಎರಡನೆಯ ಮತ್ತು ನಾಲ್ಕನೆಯ ಪಾದಗಳಿಗೆ ಇನ್ನೊಂದು ಗಣವನ್ನು ಹೆಚ್ಚಿಸಿರುವ ಉದಾಹರಣೆಗಳಿವೆ."[೧೭] ಎಂದು ಹೇಳಿ ಅದನ್ನು ಪ್ರಸ್ತಾರ ಹಾಕುತ್ತಾ,

" ಬೆಳಗಿವ | ಕನ್ನಡಿ | ಯೊಳು ಮುಖ | ಬಿಂಬವು ||
ತಿಳಿನೀರೊಳು ಭಾನು | ಮಂಡಲ ||
ಬೆಳಗುವಂ | ತೆ ನಿಷ್ಪಾಪಿಯ | ಮನದೊಳು ||
ತೊಳಗಿ ಬೆ | ಳಗಿ ಶಿವ | ಕಳೆ ತೋ | ರ್ಕು ||"[೧೭]

ಈ ರೀತಿ ನಿರೂಪಿಸಿದ್ದಾರೆ. ಆದರೆ ಇದು ತಪ್ಪು. ಕೈಪಿಡಿಯಲ್ಲಿ ಕನ್ನಡ ಛಂದಸ್ಸಿನ ಚರಿತ್ರೆಯನ್ನು ಬರೆದ ಶ್ರೀಮಾನ್ ಶ್ರೀನಿವಾಸ ರಾಘವಾಚಾರ್ಯರು ' ಸೊಬಗಿನ ಸೋನೆ ವರ್ಣ ' ಎಂಬುದೊಂದು ಹಾಡು ಗಬ್ಬ ಇದೆಯೆಂದು ಬಹುಶಃ ಗಮನಿ-ಸಿರಲಾರರು. ಆದುದರಿಂದ ಸೊಬಗಿನ ಸೋನೆ ವರ್ಣದಲ್ಲಿನ ಒಂದು ನುಡಿಗೆ ಅವರು ಪ್ರಸ್ತಾರ ಹಾಕಿ ತೋರಿಸಿದ್ದಾರೆ. ಮತ್ತು ಅದು ಕೊನೆಯಲ್ಲಿ ಒಂದು ಅಕ್ಷರ ಉಳಿದರೂ ಅದಕ್ಕೆ ಒಂದು ಗಣದ ತೂಕವನ್ನು ಕೊಡಬೇಕೆಂದು ಭಾವಿಸಿರ ಬಹುದು ಆದರೆ ಅದು ೨ ಮತ್ತು ೪ ನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳನ್ನುಳ್ಳ ಸೊಬಗಿನ ಸೋನೆ ವರ್ಣ ಎಂಬಂಶವನ್ನು ಗಮನಿಸಬೇಕು.

' ಸೊಬಗಿನ ಸೋನೆ ವರ್ಣ ' ಎಂದು ಹಾಡು ಗಬ್ಬದ ಹಲವು ಪದಗಳು, ಸುಮಾರು, ಕ್ರಿ. ಶ. ೧೭೫೦ ರವನೆಂದು ಊಹಿಸಲಾಗಿರುವ[೧೮] ಚೆನ್ನಪ್ಪ ಕವಿಯ

೧೬. ಸೊಬಗಿನ ಸೋನೆ; ಸಂಧಿ; ೨೧; ಪದ್ಯ: ೨೦.
೧೭. ಕನ್ನಡ ಕೈಪಿಡಿ; ಸಂಪುಟ: ೧; ಪುಟ ೧೩೯.
೧೮. ಶ್ರೀ. ಆರ್. ನರಸಿಂಹಾಚಾರ್ಯ. ' ಕರ್ನಾಟಕ ಕವಿಚರಿತ್ರೆ '; ಸಂಪುಟ: ೨ ಪುಟ ೮೬.

"ಶರಣ ಲೀಲಾಮೃತ" ದಲ್ಲಿ ಬರುತ್ತದೆ. ಉದಾಹರಣೆಗೆ ಈ ಪದಗಳನ್ನು ಗಮನಿಸಬಹುದು.

" ಧನುವಜ್ರ ಶಕ್ತಿ ಸರಳುಂಗಳಾಯುಧದಿಂದ
ತನುಕಾಂತಿ. ರತ್ನದ. **ಪ್ರಭೆಯಂತೆ**
ಘನತರವಾದ ಭಟರು ಮೂರುಕೋಟಿಯು
ದಿನಗಾಯ್ವ. ವಾರ್ಯುವ್ಯ. **ದೆಸೆಯೊಳು** "[೧೯]

" ಯಜ್ಞ ಬೋನವನುಣ ಬಂದ ವೇವತೆಗಳು
ಭಗ್ನವಾ.ದರು ಹೋಮ. **ದೆಸೆಯಿಂದ**
ಸುಜ್ಞಾನವಳಿದು ಸುಖವು ತಪ್ಪಿ ಶಿವಪೂಜೆ
ವಿಘ್ನರಾ.ದರು ಎಲ್ಲ. **ಸುರರಾಗ** "[೨೦]

" ಎಲ್ಲಿಗೆ ಬಹುದು ತಾವೆಲ್ಲಿಗೆ ಪೋದರು
ಎಲ್ಲವ. ನುಸುರೆಂದು. **ಬೆಸಗೊಳ್ಳೆ**
ನಿಲ್ಲದೆ ಸಂಗಮನಲ್ಲಿಗೆ ಪೋದರು
ಅಲ್ಲಿಗೆ. ನಿಮ್ಮನು. **ಕರೆದರು** "[೨೧]

" ಕರೆದರೇನಾಯ್ತು ಸಂಗಮ ನಮ್ಮ ಕರದೊಳ
ಗಿರುತಿರೆ. ನಾನೊಲ್ಲೆ. **ನೆನುತಲ್ಲಿ**
ಉರದಲಿಂಗ ವ ಬಿಚ್ಚಿ ಕರದೊಳಗಿಂಬಿಟ್ಟು
ಶರಣೆಂದು. ಲಿಂಗ ದೊ. **ಳೈದಿದಳು** "[೨೨]

ಈ ಎಲ್ಲ ಉದಾಹರಣೆಗಳನ್ನು ಪರಿಶೀಲಿಸಿದರೆ ಎರಡನೆಯ ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳೆಂಬುದು ಸರ್ವವಿದಿತ ಆದುದರಿಂದ ಇಲ್ಲಿ ವಿಷ್ಣು ನಿತ್ಯ. ಇಲ್ಲಿಯೂ ಕ್ವಚಿತ್ತಾಗಿ ವಿಷ್ಣುವಿಗೆ ಬದಲಾಗಿ ರುದ್ರಗಣ ಬರುತ್ತದೆ ಎಂಬಂಶವನ್ನು ಈ ಉದಾಹರಣೆಗಳಿಂದ ಸ್ಪಷ್ಟಗೊಳಿಸಬಹುದು—

" ಭಾಪುರೆ ತಿಮಿರ ಭಾಸ್ಕರ ರಿಪುಮರ್ಧನ
ಭಾಪುರೆ. ಗಜ ಕಂಠೀ. **ರವನೆಶೂರ**

---

೧೯. ಸಂ. ಶ್ರೀ. ಶಿವಬಸವಸ್ವಾಮಿಗಳು, "ಶರಣಲೀಲಾಮೃತ" ಶಿವಶರಣ ವಾಙ್ಮಯ ಪ್ರಕಾಶ ಕಾರ್ಯಾಲಯ, ಮೈಸೂರು. ೧೯೫೫; ಸಂಧಿ: ೮; ಪದ್ಯ: ೨೫.

೨೦. 'ಶರಣಲೀಲಾಮೃತ'; ಸಂಧಿ: ೩; ಪದ್ಯ: ೨೨.

೨೧. ಅದೇ, ಸಂಧಿ: ೨೧; ಪದ್ಯ: ೨.

೨೨. ಅದೇ, ಸಂಧಿ: ೨೮; ಪದ್ಯ: ೧೭.

ಭಾಪುರೆ ಬಣಗು ದೈವದ ಗಂಡ ಭೇರುಂಡ
ಭಾಪೆಂದು. ಸ್ತುತಿಸಿ ಕೇ. **ಳಿಸುತಿರ್ದರು** ”೨೩

ಇಲ್ಲಿ ರುದ್ರಗಣವು ವಿಷ್ಣುವಿಗೆ ಬದಲಾಗಿ ಬಂದಿದೆಯೇ ಹೊರತು ಬ್ರಹ್ಮವಾಗಿಲ್ಲ ವೆಂದು ಗಮನಿಸಬೇಕು.

ಈ ಕೃತಿಯಲ್ಲಿ ಇದಲ್ಲದೆ ಇನ್ನೂ ಅನೇಕ ಹಾಡುಗಬ್ಬಗಳನ್ನು ಹೇಳ-ಲಾಗಿದೆ. ಅದರಲ್ಲಿ ಸಾಂಗತ್ಯವೂ ಇದೆ. ಶರಣಲೀಲಾಮೃತದಲ್ಲಿ ಬಳಕೆಯಾಗಿರುವ ಸಾಂಗತ್ಯ ಈ ರೀತಿ ಇದೆ.

“ ಶುಕ ನುಡಿ ಸುಗುಣೆ ಸುಂದರಿ ಸೊಬಗಿನ ಮೇ
ಲ್ಪಿಕಗಾನೆ. ಪದ್ಮದ. **ಳಾಕ್ಷಿ**
ಮುಕುರಪ್ರಭೆಯು ಮೋಹನ ರನ್ನೆ ಕಲ್ಯಾಣೆ
ಯುಕುತಿಯು. ಕಾರ್ಯವಂ. **ಕೇಳು.**”೨೪

“ ಮಂತ್ರೀಶ ಬಸವರಾಜನು ಸಹಿತೆಲ್ಲರು
ಸಂತೋಷ. ಸಂಪತ್ತಿ.**ನಿಂದ**
ಮಂತಣಾಧಿಪನ ಪಟ್ಟದ ಕರಿಯೆನ್ನಾಗ
ಇಂತು ಸಂ.ಭ್ರಮದಿ ಶೃಂ.**ಗರಿಸಿ** ”೨೫

ಆಟಪಾಟಗಳಿಗೆ ನಾಟಿರಾಗವೆ ಮೊದಲು
ನೋಟಕ್ಕೆ. ಕಣ್ಣಳೆ. **ಮೊದಲು**
ಕೋಟಿದೈವಗಳಿಗೆ ಮೀಟು ಶಿವನೆ ಮೊದಲು
ಊಟ ಕು.ಪ್ಪಿನಕಾಯಿ. **ಮೊದಲು** ”೨೬

ಈ ಉದಾಹರಣೆಗಳಲ್ಲಿ ಏಳನೆಯ ಮತ್ತು ಹದಿನಾಲ್ಕನೆಯ ಗಣಗಳು ಬ್ರಹ್ಮ ವಾಗಿರುವುದನ್ನು ಗಮನಿಸಬೇಕು. ಸಾಂಗತ್ಯದ ಲಕ್ಷಣವನ್ನು ತಿಳಿದಿದ್ದ ಚೆನ್ನಪ್ಪ ಕವಿಯು, ದೇವರಾಜನ ‘ಸೊಬಗಿನ ಸೋನೆ’ಯ ಲಕ್ಷಣವನ್ನು ಬಳಸಿಕೊಂಡು ಅದಕ್ಕೆ ‘ವರ್ಣ’ ಎಂಬ ಹೆಸರನ್ನು ಸೇರಿಸಿ “ಸೊಬಗಿನ ಸೋನೆ ವರ್ಣ” ಎಂಬ ಹೆಸರಿನಿಂದ ತನ್ನ ಹಾಡುಗಬ್ಬ ಕೃತಿಯಲ್ಲಿ ಹೇಳಿದ್ದಾನೆ. ‘ವರ್ಣ’ ಎಂದರೆ ಸಂಗೀತ ಶಾಸ್ತ್ರದಲ್ಲಿ ಈ ರೀತಿಯ ವಿವರಣೆ ಇದೆ. “ವರ್ಣಗಳು ಪಾಂಡಿತ್ಯದಿಂದ ಕೂಡಿದ ರಚನಾ ವಿಶೇಷಗಳು. ಇವು ರಾಗ ಭಾವದಿಂದ ತುಂಬಿರುವ ರಚನೆಗಳಾ-

---

೨೩. ಅದೇ, ಸಂಧಿ: ೩; ಪದ್ಯ: ೧.
೨೪. ‘ಶರಣಲೀಲಾಮೃತ’; ಸಂಧಿ: ೮; ಪದ್ಯ: ೧.
೨೫. ಅದೇ.; ಸಂಧಿ: ೧೧; ಪದ್ಯ: ೨.
೨೬. ಅದೇ; ಸಂಧಿ: ೨೪; ಪದ್ಯ: ೧.

ಗಿವೆ. ಅಭ್ಯಾಸಗಾನದಲ್ಲಿ ವರ್ಣಗಳು ಬಹಳ ಮುಖ್ಯವಾದುವು. ಇವು ರಾಗದ ರಾಗರಂಜಕ ಪ್ರಯೋಗಗಳು, ವಿಶೇಷ ಸಂಚಾರಗಳು, ಧಾತು ಪ್ರಯೋಗಗಳು ಮತ್ತು ಅಪೂರ್ವ ಪ್ರಯೋಗಗಳನ್ನೊಳಗೊಂಡಿವೆ.''[೨೭] ಈ ವರ್ಣದ ಲಕ್ಷಣವು ಚೆನ್ನಪ್ಪಕವಿಯು ಹೇಳಿರುವ 'ಸೊಬಗಿನ ಸೋನೆ ವರ್ಣ'ದ ಹಾಡುಗಳಲ್ಲಿ ಭಾವ ತುಂಬಿದೆ. ರಾಗದ ತಾಳದ ವೈಶಿಷ್ಟ್ಯವಿದೆ. ಇದು ಸೊಗಸಾದ ಹಾಡುಗಬ್ಬ. ಇದರದೇ ವಿಶಿಷ್ಟವಾದ ಛಂದೋಬಂಧ ಎಂಬಂಶ ಗಮನಾರ್ಹವಾದುದು.

'ಸೊಬಗಿನಸೋನೆ'ಯು ಮಟ್ಟು ಬೇರೆ ಎಂದು ಹೇಳಲು ಚೆನ್ನಪ್ಪಕವಿ ಕೃತ 'ಸೊಬಗಿನಸೋನೆ ವರ್ಣ' ಎಂಬ ಶಿರೋನಾಮೆಯುಲ್ಲಿ ಬಂದಿರುವ ಪದಗಳಷ್ಟೇ ಅಲ್ಲದೆ ಇನ್ನೂ ಹಲವಾರು ಕೃತಿಗಳಲ್ಲಿ ಈ ಹಾಡುಗಬ್ಬವು ಬಳಕೆಯಾಗಿದೆ.

ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯದ, ಪ್ರಾಚ್ಯ-ಕೋಶಾಗಾರದಲ್ಲಿರುವ ಕೆ. ಬಿ. ೫೩೨ರ ಕಾಗದದ ಹಸ್ತಪ್ರತಿಯಲ್ಲಿ "ಸೊಬಗಿನ ಸೋನೆ ವರ್ಣ" ಎಂಬ ಧಾಟಿಯಲ್ಲಿ ಇಪ್ಪತ್ತು ಪದ್ಯಗಳಿವೆ. ಅವುಗಳಲ್ಲಿ ಒಂದೆರಡನ್ನು ಗಮನಿಸೋಣ.

"ಧರೆಸಾಕೇತ [ದಲಿ] ಭೂವರ ನಾಭಿರಾಜನ
ತರುಣೀಮ.ಣಿ ಯುಮರು. **ದೇವಿಯಾ**
ವರಸುಕುಮಾರ ವೃಷಭ ತೀರ್ಥನಾಥನ
ಹರಣಕ್ಕೆ.ರಗಿ ನಾನು. **ಬಲಗೊಂಬೆ.**"

"ಸಿರಿ ವೆತ್ತ ಭದ್ರಪುರದ ದೃಢರಥನಿಗೆ
ಸರಸಿಜಾ.ನನೆ ಸುನಂ.**ದೆಯುಪೆತ್ತಾ**
ಸುರನರ ನಾಗಾರ್ಚಿತ......... ಶಿತವೆಸಗೆ
ಕರವ ಮು.ಗಿದು ನಾನು. **ಬಲಗೊಂಬೆ.**"[೨೮]

ಕೆ. ೪೪ನೇ ಹಾಡುಗಳ ಓಲೆಕಟ್ಟಿನಲ್ಲಿ "ತತ್ತ್ವದ ಸೊಬಗಿನ ಸೋನೆ''. (ತತ್ತ್ವ ಪದ) ಎಂಬ ಗ್ರಂಥವಿದೆ. ಇದರ ಕರ್ತೃ ಗೋಪಾಲಾರ್ಯಶಿಷ್ಯ. ಈತನ ಕಾಲ ಸುಮಾರು ಕ್ರಿ. ಶ. ೧೭೫೦. ಇದರಲ್ಲಿ

"ಇಂತಿವರಭಿಮತಗಳ ಕೇಳಿ ಮನಸಿನಲಿ
ಚಿಂತಿಸು.ವೆನುಸತ್ಯ. **ವೇನೆಂದು**
ಭ್ರಾಂತಿವಿಡಿದು ನಿಜವರಿಯದೆ ತಮಗೆ ಸು
ಶಾಂತಿಯಿ.ಲ್ಲದೆ ಮನ.**ದೊಳಗೀಗ.**"[೨೮]

---

೨೭. ಸಂಗೀತ ವಿದ್ವಾನ್ ವಿ. ರಾಮರತ್ನಂ ಮತ್ತು ವಿ. ಎಸ್. ಸಂಪತ್ಕುಮಾರಾಚಾರ್ಯ; 'ಕರ್ಣಾಟಕ ಸಂಗೀತ ಸುಧಾ"; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೬೭. ಪುಟ: ೭೩.

"ನಾನಿಮ್ಮ ಚರಣಕಮಲದ ಭಾವನೆಯಿಂದ
ಸಾನುರಾ.ಗ ದಲಿ ನಿ.ರ್ಣಯವಿಟ್ಟಾ
ಸ್ವಾನುಭೂತಿಯ ಪೇಳುವೆನು ಕೇಳಿ ನಿಮ್ಮಯ
ಜ್ಞಾನ ನಿ.ಶ್ಚಯವ ಕ.ರುಣಿಪುದು."೨೮

"ಮದನ ಮೋಹಿನಿ ಕಥೆ"ಯನ್ನು ಲಕ್ಷಯ್ಯನೆಂಬ ಕವಿ ವಿರಚಿಸಿದ್ದಾನೆ (ಕೆ. ಎ. ೩೮೯. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ). ಇದರಲ್ಲಿ 'ಮದನ ಮೋಹಿನಿ ಕಥೆ' 'ಸೊಬಗಿನ ಸೋನೆ ವರ್ಣ' ಎಂದಿವೆ. ಅದರಲ್ಲಿನ ಎರಡು ಪದ್ಯಗಳನ್ನು ಗಮನಿಸಬಹುದು.

"ವ್ಯಾಸ ವಾಲ್ಮೀಕಿ ಹರೀಶ ಬಾಣನು ಕಾಳಿ
ದಾಸ ಮ.ಯೂರನು. ಮಲುಹಣ.
ಈಶಭಕ್ತನು ರಾಘವಾಂಕ ನಬಲಗೊಂಡು
ಲೇಸಾಗಿ. ಪೇಳ್ವೆ ನೀ. ಕೃತಿಯನು."೨೮

"ಹರಿಸುತನರಸಿಯಸಿರಿಮುಡಿಪಿಡಿದವ
ಗೊರ ವಿ.ತ್ತನ ಪ್ರಾಣ. ಕಾಂತೆಯ
ಹಿರಿಮಗನ [ವರ] ಶ್ರೀಚರಣಾರವಿಂದಕೆ
ಯೆರಗುವೆ.ನಾನತಿ. ಮುದದಿಂದ."೨೮

ಈ ಎಲ್ಲಾ ಪದ್ಯಗಳನ್ನು ಗಮನಿಸಿದಾಗ ನಾವು ಹಿಂದೆ ಉದ್ಧರಿಸಿದ 'ಸೊಬಗಿನ ಸೋನೆ ವರ್ಣ'ಕ್ಕೆ ಸಂಪೂರ್ಣ ಸಾಮ್ಯವಿರುವುದನ್ನು ಕಾಣಬಹುದು. ಈ ವಿಚಾರದಿಂದ ಸೊಬಗಿನ ಸೋನೆ ಒಂದು ವಿಶಿಷ್ಟವಾದ ಛಂದಸ್ಸು, ಹಾಡುಗಬ್ಬ ಎಂದು ಸ್ಪಷ್ಟವಾಗುತ್ತದೆ.

"ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡು ವಿಷ್ಣು ಒಂದು ಬ್ರಹ್ಮಕ್ಕೆ ಬದಲಾಗಿ ಮೂರು ವಿಷ್ಣುಗಳೇ ಬರುತ್ತವೆ........ ....ಹೀಗೆ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಮೂರು ವಿಷ್ಣುಗಣಗಳು ಬರುವುದು ಸೊಬಗಿನ ಸೋನೆಗೆ ವಿಶಿಷ್ಟವಾದುದು"೨೯ ಎಂದು ಹೇಳಿರುವ ಸಂಪಾದಕರು ಮುಂದುವರೆದು "ಹೀಗಿರುವುದರಿಂದಲೇ ಕೆಲವರು ಇದನ್ನು ಸಾಂಗತ್ಯವೇ ಅಲ್ಲ ಎನ್ನುವ ಮಾತನ್ನು ಆಡುತ್ತಾರೆ. ಆದರೆ, ಸಾಂಗತ್ಯವಲ್ಲದಿದ್ದರೆ ಮತ್ತೇನು? ಎಂಬ ಮಾತಿಗೆ ನಿರುತ್ತರರಾಗುತ್ತಾರೆ. ರೂಢಿಯಲ್ಲಿನ ಛಂದಸ್ಸುಗಳ ಪ್ರಕಾರದಲ್ಲಿ

---

೨೮. ಈ ಎಲ್ಲಾ ಉದಾಹರಣೆಗಳನ್ನು ಶ್ರೀಯುತ ಬಿ. ಎಸ್. ಸಣ್ಣಯ್ಯನವರು ಸಂಪಾದಿಸಿರುವ 'ಸೊಬಗಿನ ಸೋನೆ' ಕೃತಿಯ ಪೀಠಿಕೆಯಲ್ಲಿ ಹೇಳಿದ್ದಾರೆ. ನಾವು ಅಲ್ಲಿಂದಲೇ ಈ ಪದ್ಯಗಳನ್ನು ಉದ್ಧರಿಸಿದ್ದೇವೆ.

೨೯. 'ಸೊಬಗಿನ ಸೋನೆ'; ಪೀಠಿಕೆ; ಪುಟ: XLVII.

ಮತ್ತಾವುದನ್ನೂ ಇದಕ್ಕೆ ಅನ್ವಯಿಸಲು ಸಾಧ್ಯವಿಲ್ಲದಿದ್ದರೂ ಕೆಲವರು ಸೊಬಗಿನ ಸೋನೆ ಮಟ್ಟು ಬೇರೆ ಎಂಬ ಆಲೋಚನೆಯನ್ನು ಮಾಡಿದ್ದಾರೆ." ಎಂದು ಹೇಳಿದ್ದಾರೆ. ೨ ಮತ್ತು ೪ ನೆಯ ಪಾದಗಳಲ್ಲಿ ಮೂರು ವಿಷ್ಣು ಗಣಗಳು ಬರುವುದು ಸೊಬಗಿನ ಸೋನೆಗೆ ವಿಶಿಷ್ಟವಾದುದು ಎಂದು ಹೇಳಿದ ಸಂಪಾದಕರು, ವಾದದ ಬಗೆಗೆ ಮೌನ ತಳೆದು 'ಸೊಬಗಿನ ಸೋನೆ' 'ಸಾಂಗತ್ಯ'ವೆಂದು ತೀರ್ಮಾನಿಸಿ ಸಂಪಾದಿಸಿದ್ದಾರೆ. ಇದು ಆತುರದ ತೀರ್ಮಾನವೆಂದು ನಮ್ಮ ಭಾವನೆ.

ಯಕ್ಷಗಾನ ಛಂದಸ್ಸಿನ ಬಗೆಗೆ ಬರೆಯುತ್ತಾ "ಅಂಶಗಳ ಲಯದ ಪದ್ಯಗಳಲ್ಲಿ ವಿಷ್ಣು ಗಣ ವಿರತಕ್ಕೆ ಸ್ಥಾನದಲ್ಲಿ ಬ್ರಹ್ಮಗಣವಿರುವುದುಂಟು. [ಪುರಾತನ ಕಾವ್ಯಗಳಲ್ಲಿಯೂ ಇಂತಹ ಪ್ರಯೋಗಗಳಿವೆ.] ರುದ್ರಗಣವಿರಬೇಕಾದಲ್ಲಿ ವಿಷ್ಣು ಗಣವಿರುವುದುಂಟು. ಆಗ ಗಣಗಳ ಸ್ವರವಿಸ್ತಾರವು ಸರಿಹೊಂದುವಂತೆ ಅಕ್ಷರಗಳನ್ನು ವಿಲಂಬಿಸಿ, ಓದಬೇಕಾಗುವುದು. ಕೆಲವೆಡೆಗಳಲ್ಲಿ ವಿಷ್ಣು ಗಣವಿರಬೇಕಾದಲ್ಲಿ ರುದ್ರಗಣವಿರಬಹುದು. ಆಗ ಅದನ್ನು ವಿಷ್ಣು ಗಣಕ್ಕೆ ಸರಿಯಾಗುವಂತೆ ತ್ವರಿತೋಚ್ಚಾರದಿಂದ ಅಕ್ಷರಗಳನ್ನು ಸಂಕೋಚಗೊಳಿಸಿ ಓದಬೇಕಾವುದು. ಬ್ರಹ್ಮಗಣವಿರಬೇಕಾದಲ್ಲಿ ವಿಷ್ಣು ಗಣ ಅಥವಾ ರುದ್ರಗಣವನ್ನು ಪ್ರಯೋಗಿಸುವುದು ವಿರಳ."[೨೦] ಎಂದು ಶ್ರೀ ಕ. ಪು. ಸೀತಾರಾಮ ಕೆದಿಲಾಯರವರು ಹೇಳಿದ್ದಾರೆ. ಇಲ್ಲಿ ಬ್ರಹ್ಮಗಣಕ್ಕೆ ವಿಷ್ಣು ಅಥವಾ ರುದ್ರಗಳನ್ನು ಬಳಸುವುದು ವಿರಳ ಎಂಬ ಮಾತನ್ನು ಗಮನಿಸಿದಾಗ, ಸೊಬಗಿನ ಸೋನೆ ಸಂಪಾದಕರು ಹೇಳಿರುವ ಸಾಂಗತ್ಯದಲ್ಲಿನ ಬ್ರಹ್ಮಗಣಕ್ಕೆ ಬದಲಾಗಿ ವಿಷ್ಣು ಬಂದು 'ಸಾಂಗತ್ಯ' ವಾಗಿವೆ ಎಂಬ ಮಾತಿಗೆ ಪುಷ್ಟಿ ದೊರೆಯುವುದಿಲ್ಲ.

ಹಾಗಿದ್ದರೆ 'ಸೊಬಗಿನ ಸೋನೆ' ಎಂಬ ಹೆಸರು ಬಂದದ್ದು ಹೇಗೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದನ್ನು ಈ ರೀತಿ ಊಹಿಸಬಹುದು. ಆಂಡಯ್ಯನ 'ಕಬ್ಬಿಗರಕಾವ'ಕ್ಕೆ 'ಸೊಬಗಿನ ಸುಗ್ಗಿ'[೨೧] ಎಂಬ ಹೆಸರಿರುವುದು ಸರ್ವವಿದಿತ. ಸೊಬಗಿನ ಸುಗ್ಗಿ ಎಂಬ ಮಾತಿನಿಂದ ಉತ್ತೇಜಿತನಾದ ದೇಪರಾಜ 'ಸೊಬಗಿನ ಸೋನೆ' ಎಂಬ ಹೆಸರನ್ನು ಕಾವ್ಯಕ್ಕೂ ಛಂದಸ್ಸಿಗೂ ಅದೇ ಹೆಸರನ್ನು ಬಳಸಿಕೊಂಡು ಕೃತಿ ರಚಿಸಿರಬಹುದು. ಇದಕ್ಕೆ ಆತನ ಕೃತಿಯಲ್ಲಿ ನಿದರ್ಶನಗಳು ದೊರೆಯುತ್ತವೆ.

"ಎಲೆ ಪ್ರಿಯೆ ಕೇಳು ತೊಳದ ಮುತ್ತು ಕರತಳಾ
ಮಳಕವೀಕಥೆ **ಸೊಬಗಿನಸೋನೆ**

---

೨೦. ಶ್ರೀ ಕ. ಪು. ಸೀತಾರಾಮ ಕೆದಿಲಾಯ. "ಯಕ್ಷಗಾನ ಛಂದಸ್ಸು" ಜೆಪ್ಪಂಗಡಿ. ೧೯೬೪. ಪೀಠಿಕೆ.

೨೧. ಶ್ರೀ ಆರ್. ನರಸಿಂಹಾಚಾರ್ಯ; ಕರ್ಣಾಟಕ ಕವಿಚರಿತ್ರೆ; ಸಂ. ಪುಟ ೧; ಪುಟ ೪೯೩.

ತಿಳಿಯದೆ ಸುಯ್ದು ಮಗುಳೆ ಓದಿ ಬೇಸತ್ತು
ತಲೆಗೊಡಹುವ ಕಬ್ಬದೊಳಗಲ್ಲ."೩೨

ಎಂದು ಹೇಳಿರುವಲ್ಲಿ ತನ್ನಕಾವ್ಯಕ್ಕೆ 'ಸೊಬಗಿನ ಸೋನೆ'ಎಂದು ಹೆಸರಿಟ್ಟಿರುವುದಾಗಿ ತಿಳಿಯುತ್ತದೆ. ಹಾಗೆಯೇ—

ಇನಿತಂಗದೊಳು ಕಬ್ಬಕೆ ಸಿಂಗರವೆಂಬ
ರಿನಿಯಳೆ ಗಿರಿಜೇಶನೊಲವಿಂದ
ಎನಿತೊದವಿಸಿದನಿತನುಪೇಳ್ವೆ ನೀ ಸೊಬ
ಗಿನ ಸೋನೆಯೊಳು ಕವಿಗಳ ನೋಂತು"೩೩

ಎಂದು ಹೇಳಿದ್ದಾನೆ. ಇಲ್ಲಿ ಛಂದಸ್ಸಿಗೂ ಅದೇ ಹೆಸರನ್ನಿಟ್ಟುಕೊಂಡಿದ್ದಾನೆ ಎಂದು ತಿಳಿಯಬಹುದು. ಸಾಂಗತ್ಯದ ಲಕ್ಷಣವನ್ನು ತಿಳಿಯದಷ್ಟು ಎಗ್ಗನೇನಲ್ಲ ದೇಪರಾಜ. ಅವನ ಕಾಲಕ್ಕಾಗಲೇ ಸಾಂಗತ್ಯ ಸಾಕಷ್ಟು ಪರಿಚಯವಾಗಿದ್ದುದಾಗಿತ್ತು. ಬ್ರಹ್ಮವನ್ನು ವಿಷ್ಣುಗಣವಾಗಿಸಿ ಒಂದು ಛಂದೋರೂಪವನ್ನು ರೂಢಿಗೆ ತಂದಿದ್ದಾನೆ. ಇದು ವಿಶಿಷ್ಟವಾದ ಛಂದೋಲಯವೆಂಬುದನ್ನು ಗಮನಿಸಬೇಕು.

ಕನ್ನಡ ಕೈಪಿಡಿಯಲ್ಲಿ 'ಸೊಬಗಿನಸೋನೆ' ವರ್ಣದ ಲಕ್ಷಣವನ್ನು ವಿಚಾರ ಮಾಡದೆ ಇರುವುದರಿಂದ. ಕೈಪಿಡಿಯಲ್ಲಿ ಹೆಸರಿಸದಿರುವ ಛಂದೋಬಂಧಗಳು ಇಲ್ಲವೆಂದೇ ಭಾವಿಸುವುದು ತೀರ ಅಪಾಯಕಾರಿ ತೀರ್ಮಾನವಾಗುತ್ತದೆಂದು ನಮ್ಮ ಭಾವನೆ. ಹೀಗೆಯೇ ಎಷ್ಟೋ ಹಾಡುಗಬ್ಬಗಳ ಛಂದೋಬಂಧಗಳು ಮೂಲೆಗುಂಪಾಗಿ ಉಳಿದಿವೆ ಅವುಗಳನ್ನು ಬೆಳಕಿಗೆ ತರಬೇಕಾಗಿದೆ

ಈ ಎಲ್ಲ ಅಂಶಗಳಿಂದ ದೇಪರಾಜನ ಕೃತಿಯ ಛಂದಸ್ಸು ಸಾಂಗತ್ಯದಿಂದ ಭಿನ್ನವಾದದು. ಅದೇ ವಿಶಿಷ್ಟವಾದ ಛಂದೋಲಯವುಳ್ಳ ಹಾಡುಗಬ್ಬವೆಂದು ನಮ್ಮ ಅಭಿಪ್ರಾಯ. ಏಕೆಂದರೆ ಸಾಂಗತ್ಯದಲ್ಲಿ ಏಳನೇ ಮತ್ತು ಹದಿನಾಲ್ಕನೇ ಸ್ಥಾನದಲ್ಲಿ ಬ್ರಹ್ಮಗಣ ನಿತ್ಯ. ಸೊಬಗಿನ ಸೋನೆಯಲ್ಲಿ ಏಳನೇ ಮತ್ತು ಹದಿನಾಲ್ಕನೆ ಸ್ಥಾನದಲ್ಲಿ ವಿಷ್ಣುಗಣನಿತ್ಯ. ಮತ್ತು ಇವೆರಡರಲ್ಲಿ ಹಾಡುಗಾರಿಕೆಯಲ್ಲಿ ತಾಳದಲ್ಲಿ ಸೂಕ್ಷ್ಮವ್ಯತ್ಯಾಸವಿದೆ. ಹಾಗಾಗಿ ಇದು ಒಂದು ಸ್ವತಂತ್ರ ಛಂದೋಬಂಧವೆಂದು ನಾವು ಭಾವಿಸಿದ್ದೇವೆ.*

★ ಆರ್. ರಾಚಪ್ಪ

---

೩೨. "ಸೊಬಗಿನಸೋನೆ": ಸಂಧಿ: ೧: ಪದ್ಯ: ೨೧.
೩೩. ಅದೇ: ಸಂಧಿ: ೧; ಪದ್ಯ: ೨೪.
* ಈ ದಿಶೆಯಲ್ಲಿ ನನ್ನ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನಿತ್ತು ಅಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನೂ ತಿಳಿಸಿ ಸಲಹೆ ನೀಡಿದ ಶ್ರೀಮಾನ್ ಎಚ್. ದೇವೀರಪ್ಪನವರಿಗೆ ಚಿರಋಣಿ.

ವಿಶ್ವಸೃಷ್ಟಿ ವಿಚಾರಗಳ ಸಮೀಕ್ಷೆ

ಸುಮಾರು ಸಾವಿರ ವರ್ಷಗಳ ಹಿಂದೆ "ಪೃಥ್ವಿಯು ದುಂಡಗಿದೆ, ಆದು ತನ್ನ ಸುತ್ತಲೂ ಮತ್ತು ಸೂರ್ಯನ ಸುತ್ತಲೂ ತಿರುಗುತ್ತದೆ" ಎಂದು ಹೇಳಿದ್ದರೆ, ಇದನ್ನೊಂದು ಲಘುಹಾಸ್ಯವೆಂದು ಜನರು ತಿಳಿಯುತ್ತಿದ್ದರು. ಆದಕ್ಕೆ ಕಾರಣ ನಮ್ಮ ಜಗತ್ತೇ ಕೇಂದ್ರಬಿಂದುವಾಗಿ ಸೂರ್ಯ, ಚಂದ್ರ, ನಕ್ಷತ್ರಗಳೆಲ್ಲ ಭೂಮಿಗೆ ಪ್ರದಕ್ಷಿಣೆ ಹಾಕುತ್ತಿರುವಂತೆ ಭಾಸವಾಗುವದೇ ಆಗಿದೆ. ಆದರೆ ಪೃಥ್ವಿ ತನ್ನ ಸುತ್ತ ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಿರುವುದರಿಂದ ರವಿ, ರಜನಿ, ತಾರೆಗಳೆಲ್ಲ ಪೂರ್ವಕ್ಕೆ ಮೂಡಿ ಪಶ್ಚಿಮಕ್ಕೆ ಮುಳುಗುವಂತೆ ಕಾಣಿಸುತ್ತವೆ. ವಿಜ್ಞಾನಿಗಳ, ಖಗೋಲಜ್ಞರ ಸತತ ಪರಿಶ್ರಮದಿಂದ ಹಳೆಯ ವಿಚಾರಸರಣಿಗಳೆಲ್ಲ ಈಗ ಬದಲಾಗಿವೆ. ಮಾನವನು ಅಪೋಲೋ (ರಾಕೆಟ್) ಯುಗದಲ್ಲಿ ಬಹಳ ಮುಂದುವರಿದಿದ್ದಾನೆ. ನಾವೀಗ ನಮ್ಮ ಪೃಥ್ವಿ, ಸೂರ್ಯಮಂಡಲ ಅಥವಾ ಇವೆಲ್ಲವುಗಳನ್ನೊಳಗೊಂಡ ಕ್ಷೀರಪಥ (Milky way) ಇವುಗಳ ಅಭ್ಯಾಸವಲ್ಲದೆ; ಬೃಹತ್ತಾದ, ನಂಬಲಸಾಧ್ಯವಾದ ಪೂರ್ಣವಿಶ್ವವನ್ನು ಆದರ ರಚನೆಯನ್ನು ತಿಳಿದು ಅರಗಿಸಿಕೊಳ್ಳುವ ಭಗೀರಥ ಪ್ರಯತ್ನದಲ್ಲಿ ಮಗ್ನರಾಗಿದ್ದೇವೆ.

ವಿಶ್ವಶಾಸ್ತ್ರ (Cosmology) ಅಥವಾ ಪ್ರಪಂಚ ರಚನಾಶಾಸ್ತ್ರದಲ್ಲಿ ನಮ್ಮ ಸದ್ಯದ ಜ್ಞಾನ ಈ ಶತಮಾನದಲ್ಲಿ ಹೇಗೆ ಅಭಿವೃದ್ಧಿ ಹೊಂದಿತು ? ಇದಕ್ಕೆ ಕಾರಣರಾರು ? ಎಂಬುದನ್ನು ಸಂಕ್ಷಿಪ್ತವಾಗಿ ಒಂದು ಸಮೀಕ್ಷಣೆಯ ರೂಪದಲ್ಲಿ ವಿವರಿಸಲು ನಾವು ಇಲ್ಲಿ ಯತ್ನಿಸಿದ್ದೇವೆ.

೧೯೨೪ರಲ್ಲಿ ಇ. ಪಿ. ಹಬ್ಬಲ್ಲರು 'ಎಂಡ್ರೊಮಿಡಾ' (Andromida ಅಥವಾ 'ದೇವಯಾನಿ') ನೀಹಾರಿಕೆಯು ನಮ್ಮ ಕ್ಷೀರಪಥಕ್ಕಿಂತ ಅನತಿ ದೂರದಲ್ಲಿದೆ ಎಂಬುದನ್ನು ಮೊದಲಿಗೆ ದೃಢಪಡಿಸಿದರು. ಈ ಘಟನೆ ವಿಶ್ವರಚನಾ ಶಾಸ್ತ್ರದಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿಯಾಯಿತು. ಅತಿ ದೂರದಲ್ಲಿರುವ ಸಾವಿರಾರು ನಕ್ಷತ್ರಗಳನ್ನು ವಿಂಗಡಿಸಿ, ಅವುಗಳ ವರ್ಣ ಪಟಲ (Spectrum) ಪರೀಕ್ಷಣೆಗಳಿಂದ, ಅವುಗಳಲ್ಲಿ ಅನೇಕ ಚಂಚಲ ತಾರೆಗಳಿವೆಯೆಂದು (Cepheids) ಹಬ್ಬಲ್ಲರು ಕಂಡುಹಿಡಿದರು. ಚಂಚಲ ತಾರೆಗಳ ಕಾಂತಿವ್ಯತ್ಯಾಸವು ನಿಯಮಿತವಾಗಿರುತ್ತದೆ ಎಂಬುದು ಪ್ರಸಿದ್ಧವಾಗಿದೆ. ಇವುಗಳ ಈ 'ನಿಯಮಿತ ವ್ಯತ್ಯಾಸ ಕಾಲ' ಗೊತ್ತಿದ್ದರೆ ಅವುಗಳ 'ಸಹಜ ಕಾಂತಿ ವರ್ಗಾಂಕ' (Absolute magnitude) ಇಲ್ಲವೆ ಕಾಂತಿ(Cuminosity)ಯನ್ನು ಕಂಡುಹಿಡಿಯಬಹುದು ಜ್ಯೋತಿರ್ಮೇಘ(Nebulae)ಗಳ ವರ್ಣ ಪಟಲಗಳ ಅಭ್ಯಾಸವು ಅವುಗಳ ಅಂತರವನ್ನು (distance) ತಿಳಿಯಲು ಸಹಾಯಕವಾಗುತ್ತದೆ. ಆದುದರಿಂದ ಎಂಡ್ರೊ-

ಮಿಡಾ ನೀಹಾರಿಕೆ ನಮ್ಮಿಂದ ಸುಮಾರು ೭೫೦,೦೦೦ ಪ್ರಕಾಶವರ್ಷ*ಗಳಷ್ಟು (Light year) ದೂರದಲ್ಲಿದೆ ಎಂದು ಹಬ್ಬಲ್ಲರು ನಿರ್ಣಯಿಸಿದರು. ಈ ಅಂತರ ಮತ್ತು ಅದರ ವ್ಯಾಸಕೋನ (angular diameter) ಇವುಗಳ ಆಧಾರದ ಮೇಲಿಂದ ನೀಹಾರಿಕೆಯ ವ್ಯಾಸವು ಸುಮಾರು ೨೫೦೦೦ ಪ್ರಕಾಶವರ್ಷಗಳೆಂದು ತಿಳಿಯುತ್ತದೆ. ಅಂದರೆ ಎಂಡ್ರೊಮಿಡಾ (ದೇವಯಾನಿ) ನೀಹಾರಿಕೆಯು ಒಂದು ಸ್ವತಂತ್ರ ಬ್ರಹ್ಮಾಂಡವೇ ಆಗಿದೆ.

ಚಂಚಲತಾರೆಗಳು ಬೇರೆ ಕೆಲವು ಜ್ಯೋತಿರ್ಮೇಘಗಳಲ್ಲಿಯೂ ಕಾಣ ಬರುತ್ತವೆಯಲ್ಲದೆ, ಈ ಜ್ಯೋತಿರ್ಮೇಘಗಳ ಅಂತರವೂ ಸುಮಾರು ಎಂಡ್ರೊ-ಮಿಡಾದಷ್ಟೇ ಆಗಿದೆ. ಇವೆಲ್ಲವುಗಳನ್ನು ಸ್ವತಂತ್ರ ಬ್ರಹ್ಮಾಂಡಗಳೆಂದೇ ಕರೆಯ ಬಹುದು. ಇಂಥ ಜ್ಯೋತಿರ್ಮೇಘಗಳ ಅಂತರವನ್ನು ಅಳತೆ ಮಾಡಿ 'ಹಬ್ಬಲ್ಲ'ರು ನಮ್ಮ ವಿಶ್ವವ್ಯಾಪಕ ದೃಷ್ಟಿಯನ್ನು ವಿಶಾಲಗೊಳಿಸಿದ್ದಾರೆ. ಆದುದರಿಂದ ೧೫೦ ಮಿಲಿಯ (Million) ಪ್ರಕಾಶವರ್ಷಗಳ ಅಂತರದವರೆಗೆ ನಾವು ಅನೇಕ ನೀಹಾರಿಕೆಗಳನ್ನು ಕಾಣಬಹುದು.

೧೯೧೨ರಲ್ಲಿ 'ಸ್ಲೈಫರ'ರವರು, ಲೋವೆಲ್ಲ ವೀಕ್ಷಣಾಲಯದಿಂದ ಸುಮಾರು ೧೭ ಬೇರೆ ಬೇರೆ ನೀಹಾರಿಕೆಗಳನ್ನು ಅಭ್ಯಾಸ ಮಾಡಿ, ಅವುಗಳ ವೇಗವನ್ನು (Velocity) ಕಂಡು ಹಿಡಿದರು. ಆಗ ಅವರಿಗೆ ಕಂಡು ಬಂದ ಸಂಗತಿ ಇದು. ೧೭ ನೀಹಾರಿಕೆಗಳಲ್ಲಿ ಎರಡು ನೀಹಾರಿಕೆಗಳಿಗೆ ಪ್ರತಿ ಸೆಕೆಂಡಿಗೆ ೪೦೦ ಮೈಲಿನಂತೆ ವಿಮುಖ ಅಥವಾ ಹಿಮ್ಮೆಟ್ಟುತ್ತಿರುವ (Recessional) ವೇಗವಿದೆ. ಈ ವೇಗವು ಸುಮಾರು ಸೂರ್ಯನು ಸುತ್ತುವ ವೇಗಕ್ಕಿಂತ ಎರಡು ಪಾಲು ಹೆಚ್ಚು ಎಂದಾಗಾಯಿತು. ಎಲ್ಲ ನೀಹಾರಿಕೆಗಳೂ ನಮ್ಮ ಕ್ಷೀರಪಥದಿಂದ ದೂರ ಪ್ರಯಾಣಿ ಸುತ್ತಿವೆ. ಕೆಲವದರ ವೇಗವಂತೂ ಕಲ್ಪನಾತೀತವಾಗಿದೆ. ಜಗತ್ತಿನ ಬೇರೆ ಬೇರೆ ವೀಕ್ಷಣಾಲಯಗಳೂ (Observatories) ಈ ಆಶ್ಚರ್ಯಕರ ಚಲನೆಯನ್ನೇ ದೃಢ ಪಡಿಸಿದವು.

ಬೇರೆ ಬೇರೆ ನೀಹಾರಿಕೆಗಳ ನಕ್ಷತ್ರಗಳಿಂದ ಬರುವ ಬೆಳಕನ್ನು ವಿಶ್ಲೇಷಿಸಿ ದಾಗ ಅವುಗಳಲ್ಲಿಯ ರೇಖೆಗಳು (Lines of the Spectrum) ವರ್ಣಪಂಕ್ತಿಯ (visible spectrum) ಕೆಂಪಿನಕಡೆಗೆ ಸರಿಯುವುದು ಗೋಚರಿಸುತ್ತದೆ. ಡಾಪ್ಲರ ನಿಯಮದಂತೆ [Doppler principle]ಬೆಳಕಿನ ಉಗಮವು ವೇಗವಾಗಿ ತನ್ನ ಸ್ಥಳದಿಂದ ದೂರ ಸರಿಯುತ್ತಿದ್ದರೆ ಮಾತ್ರ ಇದು ಸಾಧ್ಯ. ಅಂದರೆ ನಕ್ಷತ್ರಗಳ

---

* ಪ್ರಕಾಶವರ್ಷ: ಸೆಕೆಂಡಿಗೆ ೧೮೦,೦೦೦ ಮೈಲುಗಳಂತೆ ಒಂದು ವರ್ಷದಲ್ಲಿ ಪ್ರಕಾಶವು ಚಲಿಸುವ ಅಂತರ.

ವರ್ಣರೇಖೆಗಳ, ಕೆಂಪಿನ ಕಡೆ ಸರಿಯುವಿಕೆ, ಅವುಗಳ ವಿಮುಖ ವೇಗವನ್ನೇ ಬೆಂಬಲಿಸುತ್ತದೆ.

ಹಬ್ಬಲ್ಲ ಮತ್ತು ಅವರ ಸಹೋದ್ಯೋಗಿಗಳು ನಿರಂತರ ವೀಕ್ಷಣೆಯಿಂದ 'ಹಬ್ಬಲ್ಲ ನಿಯಮ' (Hubble's law)ವನ್ನು ರೂಪಿಸಿದರು. ಈ ನಿಯಮದಂತೆ ನೀಹಾರಿಕೆಗಳ ತ್ರಿಜ್ಯವೇಗವು (Radial Velocity) ಅವುಗಳ ಅಂತರಕ್ಕೆ ಸರಿಪ್ರಮಾಣದಲ್ಲಿರುತ್ತದೆ. ಗಣಿತದಲ್ಲಿ ಹೇಳುವದಾದರೆ 'ಜ್ಯೋತಿರ್ಮೇಘಗಳ ಸರಾಸರಿ ತ್ರಿಜ್ಯವೇಗವು ಪ್ರತಿ ಒಂದು ಮಿಲಿಯ ಪ್ರಕಾಶ ವರ್ಷಗಳ ಅಂತರಕ್ಕೆ ಪ್ರತಿ ಸೆಕೆಂಡಿಗೆ ೧೦೦ ಮೈಲಿನಂತೆ ಹೆಚ್ಚುತ್ತದೆ ಅಂದರೆ ಎಲ್ಲ ಜ್ಯೋತಿರ್ಮೇಘಗಳು ಸರಾಸರಿ ಇದೇ ತ್ರಿಜ್ಯವೇಗದಿಂದ ಪರಸ್ಪರವಾಗಿ ದೂರಸರಿಯುತ್ತಿವೆ. ಇದಕ್ಕೆ ವಿಶ್ವವಿಕಾಸ (expanding universe) ಎಂದೂ ಹೆಸರು.

ಈ ವಿಸ್ತಾರವನ್ನು ಗಮನಿಸಿದಾಗ, ಕಂಡು ಬರುವ ಅಂಶವೆಂದರೆ ಆದಿಯಲ್ಲಿ ಈ ನೀಹಾರಿಕೆಗಳೆಲ್ಲ ಸುಮಾರು ೨೦೦೦ ಮಿಲಿಯ ವರ್ಷಗಳ ಹಿಂದೆ ಒತ್ತೊತ್ತಾಗಿ ಒಂದು ಕಡೆ ಇದ್ದಿರಬೇಕು. ಆಗ ಯಾವುದೋ ಒಂದು ನಿಮಿತ್ತದಿಂದ ಅವುಗಳ ವಿಮುಖತೆ (ದೂರ ಸರಿಯುವಿಕೆ) ಪ್ರಾರಂಭವಾಗಿರಬೇಕು. ಈ ೨೦೦೦ ಮಿಲಿಯ ವರ್ಷಗಳನ್ನೇ ವಿಶ್ವದ ವಯಸ್ಸೆಂದೂ ಅಥವಾ ಸಮಯಪಟ್ಟಿಯೆಂದು [Time scale] ಕರೆಯಬಹುದು.

ಪೃಥ್ವಿಯ ಮೇಲಿನ ಪುರಾತನ ಬಂಡೆಗಳು ಮತ್ತು ಅನಾದಿಕಾಲದಿಂದಲೂ ಬೀಳುತ್ತಿದ್ದ ಉಲ್ಕೆಗಳು ಇವುಗಳನ್ನು ರೇಡಿಯೋ-ವಿಕಿರಣ(Radio-activity) ದಿಂದ ಅಭ್ಯಸಿಸಿ ಇವುಗಳ ವಯಸ್ಸು ಸುಮಾರು ೪೦೦೦ ಮಿಲಿಯ ವರ್ಷಗಳೆಂದು ಸ್ಥಿರಪಡಿಸಲಾಗಿದೆ, ಅಂದಾಗ ವಿಶ್ವದ ವಯಸ್ಸು ೨೦೦೦ ಮಿಲಿಯ ವರ್ಷಗಳಾಗುವದು ಹೇಗೆ? ಎಂಬುದು ಅನೇಕ ಭಿನ್ನಾಭಿಪ್ರಾಯಗಳಿಗೆ ಎಡೆಗೊಟ್ಟಿತು. ಹಾಗಾದರೆ ವಿಶ್ವದ ವಯಸ್ಸನ್ನು ಅಂದಾಜು ಮಾಡಲು ಸಹಾಯಕವಾದ ಹಬ್ಬಲ್ಲ–ನಿಯಮದಲ್ಲೇ ಏನಾದರೂ ದೋಷವಿರಬೇಕು. ಆದುದರಿಂದ ಈ ಕೆಳಗಿನ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳೋಣ.

೧) ೧೯೩೨ ರಲ್ಲಿ 'ಡಬ್ಲ್ಯು. ಬ್ಲಾಡೆ' ಅವರು ಅನೇಕ ಕಾರಣಗಳನ್ನು ಕೊಟ್ಟು ಹಬ್ಬಲ್ಲ-ನಿಯಮವನ್ನು ಪರಿಷ್ಕರಿಸಲೇಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು. ಅವರು ಎಂಡ್ರೊಮಿಡಾ ನೀಹಾರಿಕೆಯನ್ನು ಅಭ್ಯಾಸಕ್ಕಾಗಿ ಆಯ್ದುಕೊಂಡರು. ಆದರ ಸುತ್ತುಮುತ್ತಲಿನ ಗೋಲಗುಚ್ಛಗಳನ್ನು (Globular clusters) ಅಭ್ಯಸಿಸಿದಾಗ ಅವುಗಳ ಗಾತ್ರ ಕ್ಷೀರಪಥದ ಗೋಲಗುಚ್ಛಗಳಿಗಿಂತ ಸಣ್ಣದೆಂದು ತಿಳಿದು ಬಂದಿತು. ಅವುಗಳಲ್ಲಿಯ ನಕ್ಷತ್ರಗಳ ವಿಂಗಡನೆ ಕೂಡ ಸುಲಭವಾಗಿರಲಿಲ್ಲ. ಒಂದು ವೇಳೆ ಎಂಡ್ರೊಮಿಡಾ ಮತ್ತು ಕ್ಷೀರಪಥದಲ್ಲಿಯ

ಗುಚ್ಛಗಳು ಒಂದೇ ಗಾತ್ರದ್ದಾಗಿದ್ದರೆ, ಎಂಡ್ರೊಮಿಡಾ ನೀಹಾರಿಕೆಯು ಹಬ್ಬಲ್ಲರ ಎಣಿಕೆಗಿಂತ ದೂರವಾಗಿರಬೇಕು ಮತ್ತು ಚಿಕ್ಕದಾಗಿ ಕಾಣಬೇಕು.

೨) ಆರ್ ಲೈರೇ [R Lyrae = ವೀಣಾಪುಂಜ] ಯ ನಕ್ಷತ್ರಗಳು ಸೂರ್ಯನಿಗಿಂತ ೧೦೦ ರಿಂದ ೨೦೦ ಪಾಲು ಕಾಂತಿಯುತವಾಗಿವೆ. ಇವುಗಳ ಅಂತರವನ್ನು ಹಬ್ಬಲ್ಲ ಗುಣಿಸಿ ತಿಳಿಸಿದ್ದಾರೆ. ಈ ಅಂತರಗಳು ಸರಿಯಾಗಿದ್ದರೆ ದೊಡ್ಡ ದೊಡ್ಡ ದೂರದರ್ಶಕಗಳಲ್ಲಿ ಫೋಟೊ ತೆಗೆದಾಗ ಇವುಗಳ ಚಿತ್ರ ಮೂಡಲೇಬೇಕಲ್ಲವೇ? ಆದರೆ ಯಾವವೂ ಮೂಡಿಲ್ಲ.

೩) ಬೇರೆ ಬೇರೆ ನೀಹಾರಿಕೆಗಳ ಗೋಲಗುಚ್ಛಗಳಲ್ಲಿ ಕಾಣುವ ನವ್ಯ ತಾರೆಗಳು [Novae] ನಮ್ಮ ಗೋಲಗುಚ್ಛಗಳ ನವ್ಯತಾರೆಗಳಿಗಿಂತಲೂ ೨ ಅಥವಾ ೩ ಪಾಲು ಮಸಕಾಗಿ ಕಾಣುತ್ತವೆ.

ಇವೆಲ್ಲ ಕಾರಣಗಳು ಹಬ್ಬಲ್ಲರು ಅಳತೆಮಾಡಿದ ಎಂಡ್ರೊಮಿಡಾ ನೀಹಾರಿಕೆಯು ಅಂತರವನ್ನು ೭೫೦,೦೦೦ ಪ್ರಕಾಶವರ್ಷಗಳ ಬದಲಾಗಿ ೧,೮೦೦,೦೦೦ ಪ್ರಕಾಶವರ್ಷಗಳೆಂದು ಸ್ಥಿರಪಡಿಸಿದವು.

ಬ್ಯಾಡೆಯುವರ ಸಂಶೋಧನೆಯ ಫಲವಾಗಿ ಹಬ್ಬಲ್ಲ–ನಿಯಮವನ್ನು ಈ ರೀತಿಯಾಗಿ ಬದಲಾಯಿಸಲಾಯಿತು :—

'ಪ್ರತಿ ಒಂದು ಮಿಲಿಯ ಪ್ರಕಾಶವರ್ಷಗಳ ಅಂತರಕ್ಕೆ ನೀಹಾರಿಕೆಗಳ ತ್ರಿಜ್ಯವೇಗವು ಪ್ರತಿ ಸೆಕೆಂಡಿಗೆ ೪೦ ಮೈಲಿನಷ್ಟು ಹೆಚ್ಚುತ್ತದೆ.'

ಇದಕ್ಕನುಗುಣವಾಗಿ ವಿಶ್ವದ ವಯಸ್ಸು ಅಥವಾ 'ಸಮಯಪಟ್ಟಿ' ಸುಮಾರು ೫೦೦೦ ಮಿಲಿಯ ವರ್ಷಗಳಾಗುತ್ತದೆ. ಇದು ಪುರಾತನ ಬಂಡೆಗಳ ಮತ್ತು ಉಲ್ಕೆಗಳ (Meteor) ವಯಸ್ಸಿಗೆ ಸರಿಹೊಂದುವದು.

ತೀರ ಇತ್ತೀಚೆ ಎ. ಆರ್. ಸಾಂಡೇಜ ಮತ್ತು ಅವರ ಸಹೋದ್ಯೋಗಿಗಳು ಹಬ್ಬಲ್ಲ–ನಿಯಮವನ್ನು ಈ ಕೆಳಗಿನಂತೆ ಮಾರ್ಪಾಟು ಮಾಡಿದ್ದಾರೆ :—

"ಪ್ರತಿ ಒಂದು ಮಿಲಿಯ ಪ್ರಕಾಶವರ್ಷಗಳ ಅಂತರಕ್ಕೆ ನೀಹಾರಿಕೆಗಳ ತ್ರಿಜ್ಯವೇಗವು ಪ್ರತಿ ಸೆಕೆಂಡಿಗೆ ೨೦ ಮೈಲುಗಳಷ್ಟು ಹೆಚ್ಚುತ್ತದೆ. ಇದು ವಿಶ್ವದ ವಯಸ್ಸು ಸುಮಾರು ೧೦,೦೦೦ ಮಿಲಿಯವರ್ಷಗಳೆಂದು ಸೂಚಿಸುತ್ತದೆ." ಈ ಸಮಯಪಟ್ಟಿ ೪೦ ವರ್ಷಗಳ ಹಿಂದೆ 'ಜೀನ್ಸ'ರವರು ತಿಳಿಸಿದ ಸಮಯಪಟ್ಟಿಗಿಂತ ಹೆಚ್ಚು ಸಮಂಜಸವೆನಿಸುತ್ತದೆ. ಆದರೆ ಈ ವಯಸ್ಸೇ ಖಚಿತವಾದದ್ದೆಂದು ಹೇಳಲು ಬರುವದಿಲ್ಲ. ಭವಿಷ್ಯತ್ತಿನಲ್ಲಿ ಪುನಃ ತಿದ್ದುಪಡಿಗಳಾದರೂ ಆಗಬಹುದು. ಇವೆಲ್ಲವುಗಳಿಂದ ನಮ್ಮ ವಿಶ್ವವೀಕ್ಷಣೆಯಲ್ಲಿ ಅನೇಕ ತೊಡಕುಗಳಿವೆ.

ಆಕಾಶದಲ್ಲಿ (Sky or Space) ನೀಹಾರಿಕೆಗಳನ್ನು ದೂರದರ್ಶಕಗಳಿಂದ ನೋಡುತ್ತಿರುವಾಗ ಕಂಡುಬರುವ ಅಂಶವೆಂದರೆ—ಯಾವದೇ ಒಂದು ದಿಕ್ಕಿನಲ್ಲಿ

ಕಾಣಬರುವ ನೀಹಾರಿಕೆಗಳ ಮತ್ತು ಗುಚ್ಛಗಳ ಸಂಖ್ಯೆ ಬೇರೆ ಯಾವದೇ ದಿಕ್ಕಿನಲ್ಲಿಯೂ ಸಾಧಾರಣವಾಗಿ ಅಷ್ಟಷ್ಟೇ ಇದೆ. ವಿಶ್ವ ಅವಕಾಶದಲ್ಲಿ ಗೋಚರಿಸುವ ಈ ಸರಿಸಮಾನತೆ ಖಗೋಲಶಾಸ್ತ್ರ ಅಭ್ಯಾಸದಲ್ಲಿ ಮಹತ್ವದ ಸಂಗತಿಯಾಗಿದೆ. ಅಲ್ಲದೆ ನೀಹಾರಿಕೆಗಳು ಗುಂಪು ಗುಂಪಾಗಿರುವಂತೆ ಅಥವಾ ಇರಲು ಪ್ರಯತ್ನಿಸುವಂತೆ ಕಾಣುತ್ತದೆ. ಉದಾಹರಣೆಗೆ ಅತಿ ಹತ್ತಿರದ, ೩೫ ಮಿಲಿಯ ಪ್ರಕಾಶ ವರ್ಷಗಳ ಅಂತರದಲ್ಲಿರುವ—'ಕನ್ಯಾ' (Virgo) ರಾಶಿಯು—೫೦೦ ನೀಹಾರಿಕೆಗಳನ್ನೊಳಗೊಂಡಿದೆ. ಹಾಗೆಯೇ ಅತಿ ದೂರದಲ್ಲಿರುವ 'ಅಜಗರ'(Hydry)ದಲ್ಲಿ ಕನಿಷ್ಠ ೨೦೦ ನೀಹಾರಿಕೆಗಳಿವೆ. ಅತಿ ಕಾಂತಿಯುತವಾದ ನೀಹಾರಿಕೆಗಳೂ ನಮ್ಮ ಕ್ಷೀರಪಥದಂತೆಯೇ ಭ್ರಮಣ ಮಾಡುತ್ತಿವೆ. ಆದರೆ ಇದು ಒಮ್ಮೆಲೇ ಗೋಚರವಾಗುವ ವಿಷಯವಲ್ಲ. ಏಕೆಂದರೆ ಪ್ರತಿ ನಾಲ್ಕು ಶತಮಾನಗಳಲ್ಲಿ ಕೇವಲ ೧/೧೦ ಸೆಕೆಂಡಿನ ಕೋನದಷ್ಟು ಇವುಗಳ ಸ್ಥಾನದಲ್ಲಿ ಬದಲಾವಣೆಯಾಗುತ್ತಿದೆ. ಅಂದರೆ ಒಬ್ಬ ಮನುಷ್ಯನ ಜೀವಿತಕಾಲದಲ್ಲಿ ಇದು ಕಂಡುಬರಲು ಸಾಧ್ಯವಾಗುವದಾದರೂ ಹೇಗೆ? ಅಂತೆಯೇ ಮನುಷ್ಯನ ಜೀವಮಾನದಲ್ಲಿ ಎಲ್ಲ ನಕ್ಷತ್ರಗಳು ಒಂದು ನೀಲಾಕಾಶದ ಪರದೆಗೆ ಸ್ಥಿರವಾಗಿ ಅಂಟಿಕೊಂಡಂತೆ ಅನಿಸುತ್ತದೆ.

ವಿಶ್ವದ ಬೃಹತ್ತತೆಯ ಲಕ್ಷಣಗಳು

ಸುಮಾರು ೪೦೦೦ ಮಿಲಿಯ ಪ್ರಕಾಶವರ್ಷಗಳ ಅಂತರದವರೆಗೂ ಜ್ಯೋತಿರ್ಮೇಘಗಳ ಅಸ್ತಿತ್ವ ಕಂಡುಬರುತ್ತದೆ. ಅವುಗಳ ವಿತರಣೆ (Distribution) ಕೂಡ ಎಲ್ಲ ದಿಕ್ಕುಗಳಲ್ಲಿ ಅಷ್ಟೇ ಇವೆ. ಮುಖ್ಯವಾದ ಕೆಲ ನೀಹಾರಿಕೆಗಳೂ ತಿರುಗುತ್ತಲೇ ಇವೆ (ಎಲ್ಲವುಗಳಂತೆ). ಈ ನೀಹಾರಿಕೆಗಳ ಭಾರ, ಸುಮಾರು ೨೦೦,೦೦೦ ಮಿಲಿಯ ಸೂರ್ಯಭಾರ (Solar mass) ಮತ್ತು ಇದರ ೧/೧೦ದಷ್ಟು ಇವುಗಳ ನಡುವೆ ಇದೆ. ಇಷ್ಟೊಂದು ಭಾರ ಮತ್ತು ಇಂಥ ದೂರ ಊಹೆಗೂ ನಿಲುಕದವು. ಇದಕ್ಕೂ ಕುತೂಹಲದ ಸಂಗತಿಯೆಂದರೆ ಪ್ರತಿ ಜ್ಯೋತಿರ್ಮೇಘವು ಇನ್ನೊಂದರಿಂದ ಪ್ರತಿ ಮಿಲಿಯ ಪ್ರಕಾಶವರ್ಷಗಳ ಅಂತರಕ್ಕೆ ಪ್ರತಿ ಸೆಕೆಂಡಿಗೆ ೨೦ ಮೈಲಿನಂತೆ ದೂರ ಸರಿಯುತ್ತದೆ. ಈ ನೀಹಾರಿಕೆಗಳು ಗುಂಪುಗಟ್ಟಿ ಗುಂಪಿನ ಒಂದು ಕೇಂದ್ರದ ಸುತ್ತ ಭ್ರಮಣ ಮಾಡುತ್ತಿವೆ.

ಪ್ರಪಂಚದ ಇಂಥ ಒಗಟುಗಳನ್ನು ಬಿಡಿಸಲು ಪ್ರಾಯೋಗಿಕ ಪ್ರಕಾಶ ದೂರದರ್ಶಕಗಳು (Optical telescopes) ಮತ್ತು ರೇಡಿಯೋ ದೂರದರ್ಶಕಗಳು (Radio-telescopes) ಇನ್ನೂ ಸುಧಾರಣೆ ಹೊಂದಬೇಕು. ಸದ್ಯಕ್ಕೆ ನಕ್ಷತ್ರ ವೀಕ್ಷಣೆಗಳಿಗೆ ಉಪಯೋಗಿಸುತ್ತಿರುವ ಸಾಧನಗಳು ಕಾಡು ಯುಗದ ಕಲ್ಲು ಕವಣೆಗಳಂತೆ ಎಂದರೂ ಅತಿಶಯೋಕ್ತಿಯಲ್ಲ.

ವಿಶ್ವಮೂಲತತ್ತ್ವ (Cosmic Principle)

ಈ ತತ್ತ್ವದ ತಿರುಳೆಂದರೆ "ಆಕಾಶದಲ್ಲಿ (ಅವಕಾಶದಲ್ಲಿ) ನೀಹಾರಿಕೆಗಳ ವಿತರಣೆ ಎಲ್ಲ ದಿಕ್ಕುಗಳಲ್ಲೂ ಸಮಾನವಾಗಿದೆ. ನಮಗೆ ಕಾಣುವ ವಿಶ್ವದ ಚಿತ್ರವೇ ಇನ್ನೊಬ್ಬನಿಗೂ ತೋರುತ್ತದೆ." ಅಂದರೆ ಇನ್ನೊಂದು ನೀಹಾರಿಕೆಯಲ್ಲಿ ವೀಕ್ಷಿಸುತ್ತಿರುವ ಒಬ್ಬ ಮನುಷ್ಯನಿಗೆ ಕಾಣಬರುವ ವಿಶ್ವದ ಚಿತ್ರ ಅಥವಾ ಕಲ್ಪನೆ ನಮ್ಮ ಸ್ಥಳೀಯ ಕ್ಷೀರಪಥದಲ್ಲಿರುವ ನಮಗೆ ಕಾಣಬರುವ ವಿಶ್ವದ ಚಿತ್ರಕ್ಕೂ ಯಾವ ಗಮನೀಯ ವ್ಯತ್ಯಾಸವೂ ಇಲ್ಲ.

ಪ್ರಪಂಚ ಮಾದರಿಗಳು ಅಥವ ರೂಪಕೃತಿಗಳು (World models)

ವಿಶ್ವದ ಸಂಪೂರ್ಣ ಕಲ್ಪನೆ ಬರುವಂತೆ ನಿರ್ಮಿಸಲಾದ ಕೃತಕ ರೂಪ ಕೃತಿಗೆ 'ಸಾದೃಶ್ಯ ಪ್ರಪಂಚ'ವೆಂದು ಕರೆಯಬಹುದು. ಶಾಲೆಗಳಲ್ಲಿ ಪೃಥ್ವಿಯ ಅಭ್ಯಾಸಕ್ಕಾಗಿ ಒಂದು ಗೋಲಾಕೃತಿಯನ್ನು (Globe) ಉಪಯೋಗಿಸುವ ದಿಲ್ಲವೇ? ಹಾಗೆ. ಅನೇಕ ಖಗೋಲಜ್ಞರು ತಮ ತಮಗೆ ತಿಳಿದ ರೀತಿಯಲ್ಲಿ ಇಂಥ ರೂಪಕೃತಿಗಳನ್ನು ಸಮೀಕರಣಗಳಿಂದ ತಾತ್ತ್ವಿಕವಾಗಿ ರಚಿಸಲು ಪ್ರಯತ್ನಿಸಿದ್ದಾರೆ.

ಇವುಗಳಲ್ಲಿ **ಮೊಟ್ಟ ಮೊದಲನೆಯ ಐನ್‌ಸ್ಟೈನ್ ವಿಶ್ವ.** ೧೯೧೭ ರಲ್ಲಿ ಆಲ್ಬರ್ಟ ಐನ್‌ಸ್ಟೈನ್‌ರು ತಮ್ಮ 'ಸಾಪೇಕ್ಷವಾದ'ದ (Relativity) ಕೆಲ ಸಮೀಕರಣಗಳನ್ನು ಜೋಡಿಸಿ ಈ ವಿಶ್ವಸಿದ್ಧಾಂತವನ್ನು ಮಂಡಿಸಿದರು. ಈ ರೂಪ ಕೃತಿಯಲ್ಲಿ (Model) ವಿಶ್ವಮೂಲತತ್ತ್ವಕ್ಕನುಗುಣವಾಗಿ 'ವಿಶ್ವದ ವಸ್ತುಗಳು ಎಲ್ಲ ಕಡೆ ಹಂಚಿಹೋಗಿವೆ. ಆದರೆ ಇವುಗಳ ಚಲನವೇಗ ಪ್ರಕಾಶದ ವೇಗ ವನ್ನೆಂದೂ ಮೀರಲಾರದು.' ಅವಕಾಶ (Space) ಮತ್ತು ಕಾಲ (Time)ಗಳು ಅನುಕ್ರಮವಾಗಿ ಸೀಮಿತ (Finite) ಮತ್ತು ಅನಿಯಮಿತ (Unbounded) ವಾಗಿವೆ. ಈ ಮಾದರಿಯಲ್ಲಿ ವಿಶ್ವವನ್ನು ಸಮತೋಲ ಸ್ಥಿತಿಯಲ್ಲಿರಿಸಬೇಕಾದ ಎಲ್ಲ ಗುಣ ವಿಶೇಷಗಳಿವೆ.

ಅನಂತರ **ಡಿ. ಸಿಟ್ಟರ**ರು ಈ ಮೂಲ ಸಮೀಕರಣಗಳನ್ನು ಬೇರೊಂದು ರೀತಿಯಲ್ಲಿ ಬಿಡಿಸಿದರು. ಅವರ 'ಪ್ರಪಂಚ ಮಾದರಿ'ಯಲ್ಲಿ ಭೌತ ಪದಾರ್ಥಗಳ ಸಾಂದ್ರತೆ (Material density) ಅತಿ ಕಡಿಮೆಯದಾಗಿದ್ದು 'ಡಾಪ್ಲರ ಸೂತ್ರ'ಕ್ಕಿಂತ ಬೇರೆ ರೀತಿಯಲ್ಲಿ ವಿಶ್ವವು ವಿಸ್ತಾರಹೊಂದುತ್ತಿರುವದರ ಮೊದಲ ಸೂಚನೆಯನ್ನು ಕೊಡುತ್ತದೆ.

ಆದರೆ ನಿಜವಾದ ವಿಸ್ತರಿಸುತ್ತಿರುವ ವಿಶ್ವವು ಈ ಎರಡೂ ಮಾದರಿಗಳ ಮಧ್ಯವರ್ತಿಯಾಗಿದೆ. ೧೯೨೧ ರಲ್ಲಿ **'ಫ್ರೈಡಮನ್ನ'**ರು ಈ ಎಲ್ಲ ವಿಶ್ವ 'ವಿಕಾಸ

ವಾದ'ಗಳನ್ನು ಪರೀಕ್ಷಿಸಿದರು. ಅವುಗಳನ್ನು ಕೂಲಂಕಷವಾಗಿ ಪರ್ಯಾ-ಲೋಚನೆಯನ್ನು ಮಾಡಿದವರು ಲೆಮಾಯ್ಟರ. ಸಧ್ಯಕಾಲಕ್ಕೆ ಲೆಮಾಯ್ಟರ ರವರ ವಿಶ್ವಶಾಸ್ತ್ರವೇ ಪ್ರಮುಖವಾದ ವಿಕಾಸಸಿದ್ಧಾಂತವೆನ್ನಬಹುದು.

'ಲೆಮಾಯ್ಟರ'ರ 'ಪಟಾಕಿ ಸಿದ್ಧಾಂತ' ಅಥವಾ 'ಬೃಹತ್‌ಸ್ಫೋಟ ಸಿದ್ಧಾಂತ'
[Fire works theory or Bigbang theory]

'ಹಬ್ಬಲ್ಲ'ರ ವಿಶ್ವವಿಮುಖತೆಯ ವಾದವನ್ನು ಸಮ್ಮತಿಸಿ ಅವರ ಆಧಾರ ದಿಂದ ಸ್ಫುಟವಾಗಿ ಲೆಮಾಯ್ಟರ ಈ ರೀತಿ ಮಂಡಿಸಿದ್ದಾರೆ. "ಅನಾದಿಕಾಲದಲ್ಲಿ ವಿಶ್ವಭೌತಪದಾರ್ಥವೆಲ್ಲ ಒಂದು 'ಆದ್ಯಪರಮಾಣು' ವಿನಲ್ಲಿ (Premeaval atom) ಅತಿಯಾಗಿ ದಟ್ಟೈಸಿತ್ತು." ಅವರೇ ಹೇಳುವಂತೆ ಈ ಆದ್ಯಪರಮಾಣು ಕೇವಲ ಕ್ಷಣಮಾತ್ರ ಅಸ್ತಿತ್ತ್ವದಲ್ಲಿದ್ದಿತ್ತು! ತುಂಬಾ ಚಂಚಲಸ್ಥಿತಿಯಲ್ಲಿ! ಉತ್ಪನ್ನವಾದ ಮುಹೂರ್ತದಲ್ಲೇ 'ರೇಡಿಯೋ ವಿಕಿರಣ ಬಾಹುಲ್ಯ (Super radio activity) ಪ್ರಕ್ರಿಯೆಗಳಿಂದ ಅಣುವು ಒಡೆಯಿತು. ಈ ಕ್ರಿಯೆ ಪುನಃ ಪುನಃ ನಡೆದು ಇಲೆಕ್ಟ್ರಾನ್, ಪ್ರೋಟಾನ್, ಆಲ್ಫಾ ಕಣಗಳು ಮುಂತಾದವು ಎಲ್ಲ ಕಡೆ ಸಿಡಿದವು. ಇವುಗಳಿಂದಲೇ ಕಟ್ಟಕಡೆಗೆ ಬೇರೆ ಬೇರೆ ನೀಹಾರಿಕೆಗಳು ರೂಪುಗೊಂಡವು. ಇಲ್ಲಿ ಗುರುತಿಸಬೇಕಾದ ಒಂದು ಮಹತ್ತ್ವದ ಅಂಶವೆಂದರೆ ಈ ಆದ್ಯಪರಮಾಣು ಎಲ್ಲಿಂದ ಬಂದಿತು? ಹೇಗೆ ಉತ್ಪನ್ನವಾಯಿತು? ಎಂಬುದು. ಇದಕ್ಕೆ ಏನಾದರೂ ವಿವರಿಸಲಾರದ ಕಾರಣ ವಿಶೇಷವಿರಬೇಕು. ಈ ಕಾರಣ ವಿಜ್ಞಾನಕ್ಕೆ ಇನ್ನೂ ಬಿಡಿಸಲಾರದ ಒಂದು ಒಗಟಾಗಿದೆ ಈ 'ಆದ್ಯಪರಮಾಣು ಸ್ಫೋಟವಾದ' ವನ್ನು ಲೆಮಾಯ್ಟರರು 'ಪಟಾಕಿ ಸಿದ್ಧಾಂತ' ಅಥವಾ 'ಬೃಹತ್ ಸ್ಫೋಟ ಸಿದ್ಧಾಂತ'ವೆಂದು ಬಣ್ಣಿಸಿದ್ದಾರೆ. ಅವರು, ಈ ಸಿದ್ಧಾಂತವು ವಿಶ್ವ-ಕಿರಣಗಳ (cosmic rays) ಉಗಮವನ್ನು ಕೂಡ ವಿವರಿಸುತ್ತದೆಂದು ಸಾಧಿಸುತ್ತಾರೆ.

ಸಮಸ್ಥಿತಿ ಸಿದ್ಧಾಂತ ಅಥವಾ ಸ್ವಪ್ರೇರಿತ ಉತ್ಪನ್ನ ಸಿದ್ಧಾಂತ
[Steady state theory or Spontaneous creation of matter]

ಹಿಂದೊಮ್ಮೆ ವಿಶ್ವದ ಎಲ್ಲ ಪದಾರ್ಥಗಳು ಒಂದು ದೈತ್ಯಪರಮಾಣುವಿ-ನಲ್ಲಿ (Giant atom) ಸಾಂದ್ರೀಕೃತವಾಗಿದ್ದವು. ಸುಮಾರು ೧೦,೦೦೦ ಮಿಲಿಯವರ್ಷಗಳ ಹಿಂದೆ ಈ ಆದ್ಯಪರಮಾಣು ಅಥವಾ ವಿಶ್ವಮೊಟ್ಟೆ (cosmic egg) ಸ್ಫೋಟಗೊಂಡು ಅದರ ಭಗ್ನಾವಶೇಷಗಳು (Debris) ನೀಹಾರಿಕಾಪುಂಜ ಗಳಾಗಿ ಘನೀಭವಿಸಿದವು. ಸಮಯ ಕಳೆದಂತೆ ಈ ನೀಹಾರಿಕೆಗಳು ದೂರ ದೂರ ಸರಿದವು. ಅಂದಿನಿಂದ ಸರಿಯುತ್ತಲೇ ಇವೆ ಮತ್ತು ಆಕಾಶವು (ಅವಕಾಶವು

space) ಪೊಳ್ಳಾಗುತ್ತ ನಡೆದಿದೆ. ಅಂತೆಯೇ ತುಂಬಾ ದೂರದ ನೀಹಾರಿಕೆಗಳು ಹತ್ತಿರದವುಗಳಿಗಿಂತ ಹೆಚ್ಚು ಗುಂಪುಗೂಡಿರುವಂತೆ ಕಾಣಿಸುತ್ತದೆ.

ತೀರ ಇತ್ತೀಚೆ **ಥಾಮಸ್ ಗೊಲ್ಡ, ಹೆರ್ಮನ್ನ ಬಾಂಡಿ** ಮತ್ತು **ಫ್ರೆಡ್ ಹಾಯ್ಲ್'ರ** ಒಟ್ಟಿಗೆ ನಿರೂಪಿಸಿದ ವಿಚಾರಸರಣಿಯಂತೆ ಒಂದು ಬಹಳ ದೊಡ್ಡ ಗಾತ್ರದ ಅವಕಾಶದಲ್ಲಿರುವ ನೀಹಾರಿಕೆಗಳ ಸಂಖ್ಯೆ ಸ್ಥಿರವಾಗಿರುತ್ತದೆ. ನೀಹಾರಿಕೆಗಳು ಒಂದರಿನ್ನೊಂದು ದೂರ ಸರಿಯುತ್ತಿದ್ದರೂ ಆಕಾಶದಲ್ಲಿ ಹೆಚ್ಚುತ್ತಿರುವ ಶೂನ್ಯತೆ ಅಥವಾ ಪೊಳ್ಳುತನ ಅವ್ಯಾಹತವಾಗಿ ಶೂನ್ಯದಿಂದ (emptiness) ಉತ್ಪನ್ನವಾಗುತ್ತಿರುವ ನೀಹಾರಿಕೆಗಳಿಂದ ನಿಯಂತ್ರಿತವಾಗಿದೆ. ಈ ವಿಚಾರಲಹರಿಯ ಆಧಾರದಂತೆ ವಿಶ್ವವು ಯಾವಾಗಲೂ ಅಸ್ತಿತ್ವದಲ್ಲಿಯೇ ಇದ್ದಿತ್ತು. ಮತ್ತು ಮುಂದೆ ಸಹ ನಿರಂತರವಾಗಿ ಅದರ ಸೃಷ್ಟಿವಿಕಾಸಕಾರ್ಯ ನಡೆಯುತ್ತಲೇ ಇರುತ್ತದೆ.

ಆದರೆ ವಿಜ್ಞಾನಿಗಳಲ್ಲಿ ಈ ನಿರಂತರ ಸೃಷ್ಟಿಸಿದ್ಧಾಂತ ಅಥವಾ ಸಮಸ್ಥಿತಿ ಸಿದ್ಧಾಂತದ ಬಗ್ಗೆ ಅನೇಕ ತೀವ್ರ ಭಿನ್ನಾಭಿಪ್ರಾಯಗಳಿವೆ ನಿಜವಾದ ಪರಿಸ್ಥಿತಿಗಳಿಗೆ ಸರಿದೂಗುವ ಹೊಸದೊಂದು ಸಿದ್ಧಾಂತಕ್ಕಾಗಿ ಎಲ್ಲರೂ ಇನ್ನೊಬ್ಬ ವಿಜ್ಞಾನ ಪ್ರವೀಣನ ಬರವನ್ನೆ ಎದುರುನೋಡಬೇಕಾಗಿದೆ.

★ **ರಮೇಶ ಎಸ್. ಗೋಡಬೋಲೆ**

ಸಹಾಯಕ ಗ್ರಂಥಗಳು

1. Book of astronomy — *H. C. King*
2. Planets, Stars &Galaxies — *Inxis S. J.*
3. The Riddle of the Universe — *W. M. Smart*
4. Physics of Interstellar Space — *S. Pikelner*
5. Various Journals on Astrophysics
6. ನಕ್ಷತ್ರಲೋಕ — ಎಲ್. ಆರ್. ನರಸಿಂಹಯ್ಯ
7. ವಿಜ್ಞಾನ ಪ್ರಪಂಚ — ಶಿವರಾಮ ಕಾರಂತ
8. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ-ಕನ್ನಡ ನಿಘಂಟು

ಜಂಭದ ಕೋಳಿ

ಇವರೇ ?
ಮಾತನಾಡಿಸಿದರೆ ಮುಸುಡಿ ತಿರುವುವ
ಇಲ್ಲವೇ,
ಎಗರಿ ಮೇಲೆ ಎರಗುವದು
ಈ ಮಹಾಪ್ರಾಣಿ !

ನೆಲಮುಟ್ಟದ ಚೀಲದಲಿ ಕಾಲು,
ಕಾಲೂ ಚೀಲಾ ಬೂಟ್ಸಿನಲಿ,
ಮಣ್ಣಿನ ವಾಸನೆಯೇ ಇಲ್ಲ ಇವರಿಗೆ.

ಮೈಯ ಒಳಗೂ ಹೊರಗೂ
ಬಣ್ಣ ಬಣ್ಣದ Tight ಟರಲೀನು, ಮೇಲೆ
ಬಕ್ಕ ಬರಿತಲೆ, ತಲೆ (ಗೆ) ಇಲ್ಲ ಏನೂ.

ಆದರೂ
ಹೇಗೋ ದೊರೆತಿವೆ ಒಂದೆರಡಕ್ಷರ.

ಕಂಠಕ್ಕೆ ಬಿಗಿದ ಕಂಠಪಾಠದ ಲಂಗೋಟಿ
ಸೆಟೆದು ನಡೆಯುವ ಈ ಜಂಭದ ಕೋಳಿ,
ಹೊಸ ಬೆಳಕಿಗೆ ಒದರುವದು ಕ್ಲಾಸಿನಲಿ,
ತನ್ನದೇನೂ ಇಲ್ಲಾ
ಇದಕೆ.

★ ಶ್ರೀಪಾದ ಪಾಟೀಲ

ಗ್ರಂಥಸ್ಥ ಕನ್ನಡದ ಸಂಧಿನಿಯಮಗಳು

೧.೦ ಸಂಧಿ :

ಎರಡು ಮುಕ್ತ–ಆಕೃತಿಮಾಗಳನ್ನು (free-morphemes)[೧] ಅಥವಾ ಒಂದು ಮುಕ್ತ ಒಂದು ಬದ್ಧ–ಆಕೃತಿಮಾ (bound-morpheme) ಗಳನ್ನು ಸಂಯುಕ್ತವಾಗಿ ಉಚ್ಚರಿಸುವುದೇ ಸಂಧಿ.

ಸ್ಥಾನದೃಷ್ಟಿಯಿಂದ ಸಂಧಿಯಲ್ಲಿ ದ್ವಿವಿಧ : ಒಂದೇ ಪದದೊಳಗೆ (ಅರ್ಥಾತ್ ಒಂದು ಮುಕ್ತಾಕೃತಿಮಾ ಒಂದು ಬದ್ಧಾಕೃತಿಮಾದೊಡನೆ ಸೇರುವಾಗ) ಆಗುವ ಸಂಧಿಯೇ **ಅಂತರ್ (Internal) ಸಂಧಿ.**

ಪದದ ಹೊರಗೆ (ಅರ್ಥಾತ್ ಎರಡು ಮುಕ್ತಾಕೃತಿಮಾಗಳು ಕೂಡುವಲ್ಲಿ) ಆಗುವ ಸಂಧಿಯೇ **ಬಹಿರ್ (external) ಸಂಧಿ.** ಈ ಎರಡು ಸಂಧಿಗಳ ನಿಯಮಗಳೂ ಬೇರೆ ಬೇರೆಯೇ. ಈ ನಿಯಮಗಳನ್ನು ವ್ಯಕ್ತಪಡಿಸುವುದೇ ಈ ಲೇಖನದ ಧ್ಯೇಯ.

೧.೧ ಅಂತರ್-ಸಂಧಿ

೧.೧೧ ಅಂತರ್-ಸಂಧಿಯ ನಿಯಮಗಳು (Laws of internal Sandhi)

೧. ಪೂರ್ವ ಸ್ವರಾಂತ ನಾಮ ಪ್ರಕೃತಿಗಳಿಗೆ[೨] ಆದಿ ಸ್ವರಯುಕ್ತ ಬದ್ಧಾಕೃತಿಮಾಗಳು ಪರವಾದರೆ /ಯ್/ ಆಗಮ.

---

೧. ಆಕೃತಿಮಾ ಎಂದರೆ ಮಾತಿನ ಅರ್ಥಪೂರ್ಣವಾದ ಅವಿಭಾಜಕ ಘಟಕ. ಸ್ವತಂತ್ರವಾಗಿ ಬಳಸಬಹುದಾದ ರೂಪಗಳೇ ಮುಕ್ತಾಕೃತಿಮಾಗಳು. ಉದಾ : /ಮರ/, /ವನ/, /ಹಳ್ಳಿ/. ಸ್ವತಂತ್ರವಾಗಿ ಬಳಸಲಾಗದ ರೂಪಗಳೇ ಬದ್ಧಾಕೃತಿಮಾಗಳು. ಉದಾ : /-ಗಳು/ ,/-ಗೆ/ /-ದು/ ಇತ್ಯಾದಿ ಪ್ರತ್ಯಯಗಳು. ಹೆಚ್ಚಿನ ವಿವರಕ್ಕೆ ಕೆಳಗಿನ ಪುಸ್ತಕಗಳನ್ನು ನೋಡಬಹುದು :

ಬಿಳಿಗಿರಿ, ಎಚ್. ಎಸ್. **ವರ್ಣನಾತ್ಮಕ ವ್ಯಾಕರಣ.** ಬೆಂಗಳೂರು : ಬೆಂಗಳೂರು ವಿಶ್ವವಿದ್ಯಾಲಯ, ೧೯೭೦.

ಕುಳ್ಳಿ, ಜೆ. ಎಸ್. **ಆಧುನಿಕ ಭಾಷಾವಿಜ್ಞಾನ,** ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ, ೧೯೭೬.

ಚಿದಾನಂದಮೂರ್ತಿ, ಎಂ. **ಭಾಷಾವಿಜ್ಞಾನದ ಮೂಲತತ್ತ್ವಗಳು,** ಮೈಸೂರು: ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ. ೧೯೭೩.

೨. ನಾಮಪ್ರಕೃತಿಯನ್ನು ಕೇಶಿರಾಜನು 'ಲಿಂಗ'ವೆಂದೂ ಕರೆದಿದ್ದಾನೆ. ಆತನು ತನ್ನ **ಶಬ್ದಮಣಿದರ್ಪಣ**ದಲ್ಲಿ 'ಲಿಂಗ'ದ ವ್ಯಾಖ್ಯೆಯನ್ನು ಕೆಳಗಿನಂತೆ ಕೊಟ್ಟಿದ್ದಾನೆ :

ಉದಾ :—

$$\{y\}^{3} + \{-ಇಂದ\}^{4} \longrightarrow \{y ಯಿಂದ\}$$

ಕ್ರಿಯೆಯಂ ನುಡಿಯದುದು ವಿಭ।
ಕ್ತಿಯುನಿಲ್ಲದುದರ್ಥಮುಳ್ಳುದೆಂತದು ಲಿಂಗಂ॥

ಕ್ರಿಯಾವಾಚಕವಲ್ಲದೆ, ಸಪ್ತವಿಭಕ್ತಿಗಳಿಲ್ಲದೆ ಯಾವುದಕ್ಕೆ ಅರ್ಥವಿದೆಯೋ ಅದೇ ಲಿಂಗವೆಂದು ಸೂತ್ರದ (ಸಂ.: ಡಿ. ಎಲ್. ನರಸಿಂಹಾಚಾರ್, ಸೂತ್ರ ೮೨) ತಾತ್ಪರ್ಯ. ಭಾಷಾವೈಜ್ಞಾನಿಕ ದೃಷ್ಟಿಯಿಂದ ಪ್ರಕೃತಿ (nominal base) ಯನ್ನು ವ್ಯಾಖ್ಯಾನಿಸುವುದಾದರೆ, ವಿಭಕ್ತಿ ಪ್ರತ್ಯಯಗಳನ್ನು ಅಂಗೀಕರಿಸುವ ಮುಕ್ತ ಇಲ್ಲವೆ ಸಂಯುಕ್ತ ಆಕೃತಿಮಾವೆನ್ನಬಹುದು. ಒಂದು ಮುಕ್ತ ಆಕೃತಿಮಾವು ಒಂದು ಬದ್ಧ ಆಕೃತಿಮಾದೊಡನೆ ಸೇರಿ ಉತ್ಪನ್ನವಾಗುವ ಆಕೃತಿಮಾವೇ ಸಂಯುಕ್ತಾಕೃತಿಮಾ. ಉದಾ: ಮನೆ+ಗಳು→ ಮನೆಗಳು: (ಮುಕ್ತಾಕೃತಿಮಾ+ಬದ್ಧಾಕೃತಿಮಾ→ಸಂಯುಕ್ತಾಕೃತಿಮಾ).

ಪ್ರಕೃತಿಗಳ ಅಂತ್ಯದಲ್ಲಿ ಬರುವ ಧ್ವನಿಮಾವನ್ನು ಗಮನಿಸಿ ಕನ್ನಡ ಪ್ರಕೃತಿಗಳನ್ನು ಸ್ಥೂಲವಾಗಿ ಎರಡು ವರ್ಗಗಳನ್ನಾಗಿ ವರ್ಗೀಕರಿಸಬಹುದು :

ಅ) ಸ್ವರಾಂತ ಪ್ರಕೃತಿಗಳು : ಕಿವಿ, ತಲೆ, ಹೊಟ್ಟೆ, ಗಲ್ಲ.......

ಆ) ವ್ಯಜನಾಂತ ಪ್ರಕೃತಿಗಳು : ಕಣ್ಣ್, ಅಣ್ಣನ್, ಕಾಲ್........

ಸ್ವರ ಪ್ರಭೇಧವನ್ನು ಲೆಕ್ಕಿಸಿ ಸ್ವರಾಂತ ಪ್ರಕೃತಿಗಳನ್ನು : ಕ) ಪೂರ್ವ ಸ್ವರಾಂತ ಖ) ಮಧ್ಯಸ್ವರಾಂತ ಗ) ಪಶ್ಚಸ್ವರಾಂತ ಎಂದು ವಿಭಜಿಸಬಹುದು.

ಉದಾ : **ಪೂರ್ವಸ್ವರಾಂತ ಪ್ರಕೃತಿಗಳು :** ಕವಿ, ರವಿ, ಸೆಟ್ಟಿ, ಅಜ್ಜಿ, ಎದೆ, ತಂದೆ, ಆನೆ, ಬೇಟೆ, ಹೇಂಟೆ.......

ಮಧ್ಯಸ್ವರಾಂತ ಪ್ರಕೃತಿಗಳು : ರೋಮ, ಆಟ, ಆಲ, ಹೊಲ, ಮರ, ಕೊಡ, ಹುಳ, ಓಟ.......

ಪಶ್ಚಸ್ವರಾಂತ ಪ್ರಕೃತಿಗಳು : ಮನು, ಯೇಸು, ವಧು, ಕರು, ಹಸು....

ವ್ಯಂಜನಾಂತ ಪ್ರಕೃತಿಗಳನ್ನು ೪ ವರ್ಗಗಳನ್ನಾಗಿ ವಿಂಗಡಿಸಬಹುದು :

i) **ದ್ವಿತ್ವಾಂತ್ಯ ಪ್ರಕೃತಿಗಳು :** ಹೆಣ್ಣ್, ಹೊನ್ನ್, ಮಣ್ಣ್, ಕೊಯ್ಲ್, ಹುಲ್ಲ್, ಹದ್ದ್........

ii) **ನಾಂತ್ಯ ಪ್ರಕೃತಿಗಳು :** ಅಜ್ಜನ್, ಅಪ್ಪನ್, ಅಕ್ಕನ್, ಕುರುಬನ್, ಗಾಣಿಗನ್........

iii) **ಏಕಾಕ್ಷರೀಯ ಪ್ರಕೃತಿಗಳು :** ಆಳ್, ಊರ್, ಜೇನ್, ಹೂವ್, ಒಂದ್, ಹತ್ತ್, ನೂರ್.........

iv) **ಅನೇಕಾಕ್ಷರೀಯ ಪ್ರಕೃತಿಗಳು :** ನವಿಲ್, ಮರಳ್, ಬೆರಳ್, ಕೊರಳ್, ಸರಳ್, ಕೂದಲ್........

೩. {y} = /ರವಿ, ಸೆಟ್ಟಿ, ಬಡಗಿ, ಲಕ್ಷ್ಮಿ, ಸ್ತ್ರೀ, ಸೀತೆ, ಅತ್ತೆ, ಗಿರಿಜೆ, ಕಮಲೆ, ಕಯ್.......‌/

೪. {ಇಂದ} ದ ಸ್ಥಾನದಲ್ಲಿ ಆದಿಸ್ವರಯುಕ್ತ ಬದ್ಧಾಕೃತಿಮಾಗಳು (ಅನ್ನು, ಅಲ್ಲಿ, ಅ.......) ಪರವಾಗಬಹುದು.

೨. ಮಧ್ಯ ಮತ್ತು ಪಶ್ಚ ಸ್ವರಾಂತ ನಾಮಪ್ರಕೃತಿಗಳಿಗೆ ಆದಿಸ್ವರಯುಕ್ತ ಬದ್ಧಾಕೃತಿಮಾಗಳು ಪರವಾದರೆ/ವ್/ ಆಗಮ.

ಉದಾ :— {X}[೫] + {– ಅನ್ನು} —> {X ವನ್ನು}

ರೂಪಾಂತರ ನಿಯಮ[೬] **:** (Transformational rule)

ವ್ => [ದ್ / ವಿನ್] / [ಮ. ಸ್ವ / ಪ. ಸ್ವ][೭] – { Vee { ಆ / ಇ ; V }

ಉದಾ :—

ಮರ + ಇಂದ —> ಮರವಿಂದ => ಮರದಿಂದ
ಹಣ + ಅಲ್ಲಿ —> ಹಣವಲ್ಲಿ => ಹಣದಲ್ಲಿ
ಗಾಣ + ಅ —> ಗಾಣವ => ಗಾಣದ
ಮನು + ಇಂದ —> ಮನುವಿಂದ => ಮನುವಿನಿಂದ
ಯೇಸು + ಅಲ್ಲಿ —> ಯೇಸುವಲ್ಲಿ => ಯೇಸುವಿನಲ್ಲಿ

೩. ನಾಂತ್ಯ[೮] ವಲ್ಲದ ವ್ಯಂಜನಾಂತ ನಾಮಪ್ರಕೃತಿಗಳಿಗೆ { Vee { ಆ / ಇ ; V } ರೂಪದ ಬದ್ಧಾಕೃತಿಮಾಗಳು ಪರವಾದರೆ/ಇನ್/ಆಗಮ

ಉದಾ :—

{Z}[೯] + {ಇಂದ}[೧೦] —> {Z ಇನಿಂದ}

ರೂಪಾಂತರ ನಿಯಮ :—

ಇನ್ => ಅರ್ / ಒಂದ್....ನೂರ್ ; ಅಷ್ಟ್, ಇಷ್ಟ್, ಎಷ್ಟ್ } – ಇಂದ

---

೫. { X } = /ಮರ, ಹಣ, ಸ್ವರ್ಗ, ನರಕ, ಮನು, ಗುರು. ಯೇಸು, ಹೂ, ಗೋ/
೬. => ಚಿಹ್ನೆಯು ರೂಪಾಂತರವನ್ನು ಸೂಚಿಸುತ್ತದೆ.
೭. ಮ. ಸ್ವ = ಮಧ್ಯಸ್ವರ : ಅ, ಆ
ಪ. ಸ್ವ = ಪಶ್ಚಸ್ವರ : ಉ, ಊ, ಒ, ಓ ಔ.
ಪೂ. ಸ್ವ = ಪೂರ್ವಸ್ವರ : ಇ, ಈ, ಎ, ಏ, ಯ್ (= ಅರ್ಧಸ್ವರ)
೮. ನೋಡಿ : ಅಡಿಟಿಪ್ಪಣಿ ೨ : ನಾಂತ್ಯ ಪ್ರಕೃತಿಗಳು.
೯. { Z } = /ಕಾಡ್, ನೀರ್, ಊರ್, ಹಣ್ಣ್, ಮಣ್ಣ್, ಚಿಕ್ಕ್, ಬಂದ್, ಹತ್ತ್, ಕಂದಲ್, ಬೆರಳ್....../
೧೦. ನೋಡಿ : ಅ. ಟಿ ೪.
೧೧. ಅದೇ.

ಉದಾ :— ಒಂದರಿಂದ, ನೂರರಿಂದ, ಅಷ್ಟರಿಂದ......
ಇಷ್ಟರಲ್ಲಿ, ಎಷ್ಟರ.......

೧.೨. ಬಹಿರ್-ಸಂಧಿ

ಧ್ವನಿ ಪ್ರಭೇದವನ್ನು ಗಮನಿಸಿದಾಗ ಬಹಿರ್-ಸಂಧಿಯಲ್ಲಿ ಸ್ವರ ಮತ್ತು ವ್ಯಂಜನ ಸಂಧಿಯೆಂದು ದ್ವಿವಿಧ.

ಸ್ವರಕ್ಕೆ ಸ್ವರ ಪರವಾದಾಗ ಆಗುವ ಸಂಧಿಯೇ ಸ್ವರ ಸಂಧಿ.

ಸ್ವರಕ್ಕೆ ವ್ಯಂಜನ ಅಥವಾ ವ್ಯಂಜನಕ್ಕೆ ವ್ಯಂಜನ ಪರವಾದಾಗ ಆಗುವ ಸಂಧಿಯೇ ವ್ಯಂಜನ ಸಂಧಿ.

೧.೨೧. ಸ್ವರಸಂಧಿಯ ನಿಯಮಗಳು

೧. ದ್ವಿ-ಅಕ್ಷರಯುಕ್ತವಾದ (di-syllabia) ಪೂರ್ವಪದದ ಪ್ರಥಮಾಕ್ಷರವು ದೀರ್ಘವಾಗಿದ್ದರೆ ಅಥವಾ ದ್ವಿತೀಯಾಕ್ಷರವು ದ್ವಿತ್ವವುಳ್ಳದ್ದಾಗಿದ್ದರೆ ಅಥವಾ ಆ ಪೂರ್ವಪದವು ಎರಡಕ್ಕಿಂತ ಹೆಚ್ಚು ಅಕ್ಷರಯುಕ್ತವಾಗಿದ್ದರೆ ಅದರ ಅಂತ್ಯ ಸ್ವರಕ್ಕೆ ಲೋಪ.

ಉದಾ :—

ಕೂಡಿ + ಇಡು —> ಕೂಡಿಡು
ನೋಡು + ಅಲ್ಲಿ —> ನೋಡಲ್ಲಿ
ಕಟ್ಟಿ + ಇಡು —> ಕಟ್ಟಿಡು
ಒಟ್ಟು + ಇಡು —> ಒಟ್ಟಿಡು
ಅವಳ + ಒಟ್ಟಿಗೆ —> ಅವಳೊಟ್ಟಿಗೆ
ದಾರಿಗೆ + ಒಬ್ಬ —> ದಾರಿಗೊಬ್ಬ

೨. ಏಕಾಕ್ಷರ ಸ್ವರಾಂತ ಪದ (monosyllabic) ಗಳಿಗೆ ಪೂರ್ವ ಸ್ವರ ಪರವಾದರೆ ಅಥವಾ ಪೂರ್ವಸ್ವರಾಂತ್ಯ[೧೨] ಪದಗಳಿಗೆ ಯಾವುದೇ ಸ್ವರ ಪರವಾದರೆ / ಯ್ /ಆಗಮ.

ಉದಾ :—

ಹಾ + ಎಂದು —> ಹಾಯೆಂದು
ಭೋ + ಎಂದು —> ಭೋಯೆಂದು
ಜೋ + ಎಂದು —> ಜೋಯೆಂದು

---

೧೨. /ಐ/ ಸಂಯುಕ್ತಸ್ವರ (diphtharg)ವನ್ನು ಪೂರ್ವಸ್ವರವೆಂದೂ /ಔ/ ಸಂಯುಕ್ತಸ್ವರವನ್ನು ಪಶ್ಚಸ್ವರವೆಂದೂ ಪರಿಗಣಿಸಲಾಗಿದೆ.

ಸ್ತ್ರೀ + ಎಂಬ —> ಸ್ತ್ರೀಯೆಂಬ
ಮನೆ + ಒಳಗೆ —> ಮನೆಯೊಳಗೆ
ಬೇಸಗೆ+ ಅಲ್ಲ —> ಬೇಸಗೆಯಲ್ಲ
ಮರಳಿ+ ಎಂದಳು—> ಮರಳಿಯೆಂದಳು

೩. ಮಧ್ಯ, ಪಶ್ಚ ಸ್ವರಾಂತ ಪದಗಳಿಗೆ ಯಾವುದೇ ಸ್ವರ ಪರವಾದರೆ / ವ್ / ಆಗಮ.

ಉದಾ :—

ಕಾರ್ಯ + ಇಲ್ಲ —> ಕಾರ್ಯವಿಲ್ಲ
ಮಧು + ಇಲ್ಲ —> ಮಧುವಿಲ್ಲ
ಹೆಣ + ಎಂದನು—> ಹೆಣವೆಂದನು
ತಿಲಕ + ಇಟ್ಟು —> ತಿಲಕವಿಟ್ಟು
ಗೋ + ಅಲ್ಲ —> ಗೋವಲ್ಲ

೧.೨೨ ವ್ಯಂಜನ ಸಂಧಿ ನಿಯಮಗಳು[೧೩]

೧. ಪರಪದದ ಆದಿಯ ಅಘೋಷ ಸ್ಫೋಟಕ (voicron ploivses) ಗಳು ಘೋಷಗಳಾಗುತ್ತವೆ.

ಉದಾ: – ಮರ + ಕಾಲು—> ಮರಗಾಲು
ಮೆಲ್ + ತುಟಿ —> ಮೆಲ್ದುಟಿ
ಕಣ್ + ಪನಿ —> ಕಂಬನಿ

೨. ಪರಪದದ ಆದಿಯ ಉಭಯೋಷ್ಠ್ಯಗಳು (bilalbials) ಉಭಯೋಷ್ಠ್ಯ ಅರ್ಧಸ್ವರ ಆಗುತ್ತವೆ.

ಉದಾ :– ಎಳ + ಪೆರೆ —> ಎಳವೆರೆ
ಕಡು + ಬೆಳ್ತು —> ಕಡುವೆಳ್ತು
ಮೆಲ್ + ಮಾತು —> ಮೆಲ್ಮಾತು.

೧೩. ವ್ಯಂಜನ ಸಂಧಿ ನಿಯಮಗಳು, ಅವುಗಳಲ್ಲಿಯ ನಿಯಮ ೨ ಮತ್ತು ೩ ಈಗಿನ ಕನ್ನಡದಲ್ಲಿ ಅಳಿದು ಹೋಗಿವೆ ಎನ್ನುವಷ್ಟು ಕ್ವಚಿತ್ತಾಗಿ ಕಾಣುತ್ತೇವೆ. ಹಳಗನ್ನಡದಲ್ಲಿ ಈ ನಿಯಮಗಳಿಗೆ ಅಪವಾದಗಳು ಹಲವಾರು! ಉದಾ:- ತಲೆಕಟ್ಟು ಬೆಸೆಕೋಲ್‘, ಬೆಂಗೆಪಂದಂ, ಕಣ್ಣೋಲಮುಂ, ಬೆಳ್ಸರಿ, ಬಾಯ್ಸುವಿ, ಕಲ್ಸೆರೆ... “**All grammers leak**” ಎಂದು ಹೇಳಿದ ಸಪೀರನ ಮಾತಿಗೆ ಕನ್ನಡದ ವ್ಯಂಜನ ಸಂಧಿ ನಿಯಮಗಳು ಉದಾಹರಣೆ.

೩. ಪರಪದದ ಆದಿಯ ಅನುಘರ್ಷ (fricative)ಗಳು ತಾಲವ್ಯ (palatal) ಗಳಾಗುತ್ತವೆ.

ಇನ್ + ಸರ —> ಇಂಚರ
ನುಣ್ + ಸರ —> ನುಣ್ಚರ
ಮುನ್ + ಸೂರ್ —> ಮುಂಜೂರ್
ಇರ್ + ಸಾಸಿರ —> ಇರ್ಚಾಸಿರ

★ ವಿಲ್ಯಮ್ ಮಾಡ್ತಾ

ಶಾಸನ ಪದಸೂಚಿ

(ದಕ್ಷಿಣ ಭಾರತದ ಶಾಸನಗಳು, ಸಂಪುಟ ೧೦, ಭಾಗ ೧)

(ಕಳೆದ ಸಂಚಿಕೆಯಿಂದ)

ಯ

(ಮುಂದುವರಿಯುವುದು)

★ ಎಸ್. ರಾಜಶೇಖರ

ಗ್ರಂಥಾವಲೋಕನ

ಕರ್ನಾಟಕ ಸಂಗೀತ ಸುಧಾ : ಲೇಖಕರು : ಸಂಗೀತ ವಿದ್ವಾನ್ ವಿ. ರಾಮರತ್ನಂ ಮತ್ತು ಬಿ. ಎಸ್ ಸಂಪತ್ಕುಮಾರಾಚಾರ್ಯ, ಎಂ. ಎ., ಬಿ. ಎಡ್., ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಪುಟ xi + ೩೯೦ ಬೆಲೆ : ಸಾದಾ ಪ್ರತಿ ರೂ. ೮ = ೦೦ ಉತ್ತಮ ಪ್ರತಿ : ರೂ. ೧೦ = ೦೦.

ಈ ಗ್ರಂಥವನ್ನು ಪ್ರಥಮವಾಗಿ ಕನ್ನಡದ ಕುಲರಸಿಕರಿಗೆ ನೀಡಿ ಲೇಖಕದ್ವಯರು ನಮ್ಮ ಸಂಸ್ಕೃತಿಯ ಹಾಗೂ ಸಾಹಿತ್ಯದ ಒಂದು ಹಿರಿಯ ಕೊರತೆಯನ್ನು ಸಮರ್ಪಕವಾಗಿ ತುಂಬಿಕೊಡುವ ಪ್ರಾಮಾಣಿಕ ಪ್ರಯತ್ನದಲ್ಲಿ ಕೃತಾರ್ಥರಾಗಿದ್ದಾರೆ. ಇದು ಸಂಗೀತಶಾಸ್ತ್ರವನ್ನು ಜನಪ್ರಿಯಗೊಳಿಸಲು ಹೊರಟದ್ದಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಮಾಲೆಯ ೪೬ ನೆಯ ಅರಳಿದು. ಪ್ರಧಾನ ಸಂಪಾದಕರಾದ ಡಾ. ಕೆ. ವಿ. ಪುಟ್ಟಪ್ಪನವರಂತೆ ಸಂಗೀತಾಭ್ಯಾಸಿಗಳೂ ಕಲೋಪಾಸಕರೂ ಹೆಚ್ಚು ಪ್ರಯೋಜನ ಪಡೆಯಬಹುದಾದ ಉದ್ಗ್ರಂಥವಿದು. ತಮ್ಮ ವಿದ್ವತ್ತಿಗೆ ಶೋಭಿಸುವ ವಿನಯದಿಂದ ಉಭಯಲೇಖಕರೇ ಅಂದಿದ್ದಾರೆ, "ಈ ಗ್ರಂಥವು ಸಂಗೀತಾಭ್ಯಾಸಿಗಳಿಗೂ ಕಲಾಪ್ರಿಯರಿಗೂ ಸಂಗೀತಕಲೆಯ ಪರಿಚಯ ಮಾಡಿಕೊಡುವದಲ್ಲದೆ ಇನ್ನೂ ಉತ್ತಮ ಗ್ರಂಥ ರಚನೆಗೆ ಸ್ಫೂರ್ತಿದಾಯಕವಾದರೆ ತಮ್ಮ ಶ್ರಮ ಸಾರ್ಥಕವಾದಂತೆ". ನಿಜವಾಗಿಯೂ ಲೇಖಕರ ಈ ಯತ್ನಕ್ಕೆ ತಕ್ಕ ಯಶಸ್ಸು ಶ್ರಮಕ್ಕೆ ತಕ್ಕ ಶ್ರೇಯಸ್ಸು, ಸಾಧನೆಗೆ ತಕ್ಕ ಸಾರ್ಥಕತೆ ಅವರಿಗೆ ಲಭಿಸಿದೆಯೆಂದು ಹೇಳಬಹುದು.

ಕರ್ನಾಟಕ ಸಂಗೀತದ ಒಂದಲ್ಲ ಒಂದು ಅಂಗವ ಕುರಿತು ಕನ್ನಡದಲ್ಲಿ ಪುಸ್ತಕಗಳು ಪ್ರಕಟವಾಗಿವೆ. ಹೆಚ್ಚಾಗಿ ಹರಿದಾಸರ ಕೀರ್ತನೆಗಳ ಹಾಗೂ ಕೆಲವು ವಾಗ್ಗೇಯಕಾರರ ಬಗೆಗೆ ಗ್ರಂಥಗಳು ಹೊರಬಂದಿವೆ. ಸಂಸ್ಕೃತ ಮೂಲದ ಆಕರಗ್ರಂಥಗಳ ಅನುವಾದವೂ ಕನ್ನಡದಲ್ಲಿ ಆಗಿದೆ. ಆದರೆ "ಕರ್ನಾಟಕ ಸಂಗೀತಸುಧಾ"ದಂಥ ಒಂದು ಸರ್ವಸಂಗ್ರಾಹಕವಾದ ಸಂಗೀತಶಾಸ್ತ್ರದ ಸಾಂಗೋಪಾಂಗ ವಿಚಿಕಿತ್ಸೆ ಇಷ್ಟೊಂದು ಸುಬೋಧ ಶೈಲಿಯಲ್ಲಿ ಉದ್ಬೋಧಕವಾಗಿ ಮಾಡಿಕೊಡುವ ಗ್ರಂಥವು ಕನ್ನಡದ ಒಂದು ಅಗತ್ಯದ ಬೇಡಿಕೆಯಾಗಿತ್ತು. ಸಂಗೀತವಿದ್ವಾನ್ ವಿ. ರಾಮರತ್ನಂ ಮತ್ತು ಶ್ರೀ ವಿ. ಎಸ್. ಸಂಪತ್ಕುಮಾರಾಚಾರ್ಯ—ಇವರಿಬ್ಬರೂ ಈ ಬೇಡಿಕೆಯನ್ನು ಧಾರಾಳವಾಗಿ ಪೂರೈಸಿ ಈ ವಿಧವಾದ ಅಭ್ಯಾಸಗಳ ಹಾಗೂ ಜಿಜ್ಞಾಸುಗಳ ಮೇಲೆ ಮಹದುಪಕಾರವನ್ನು ಮಾಡಿದ್ದಾಗಿದೆ. ಈ ಜೀವಾಳದ ಅನುಕೂಲತೆಯನ್ನು ಇಷ್ಟೊಂದು ಸುವಿಹಿತ

ವಾಗಿ ತಾತ್ಪರ್ಯದಿಂದ ಈ ಗ್ರಂಥದ ರೂಪದಲ್ಲಿ ಒದಗಿಸಿ ಮೈಸೂರು ವಿಶ್ವ ವಿದ್ಯಾನಿಲಯದ ಪ್ರಸಾರಾಂಗ ವಿಭಾಗವೂ ಅಭಿನಂದನೆಗೆ ಪಾತ್ರವಾಗಿದೆ.

ಇಂಥ ಪ್ರಮಾಣಗ್ರಂಥದಲ್ಲಿ ಸಾಮಾನ್ಯವಾಗಿ ಯಾವದೇ ಸಮಸ್ಯಾತ್ಮಕ, ವಿವಾದಾಸ್ಪದ, ಸಂದಿಗ್ಧ ಅಥವಾ ಅನುತ್ತರಿತ ಪ್ರಶ್ನೆ–ಪ್ರಮೇಯಗಳಿಗೆ ಎಡೆ ಗೊಡಲಾಗುವದಿಲ್ಲ. ಪೂರ್ವಾನುಮತ ಸರ್ವಾನುಮತ ತಥ್ಯಾಭಿಪ್ರಾಯಗಳಿಗೆ ಇಲ್ಲಿ ಆನವಶ್ಯಕ. ಈ ಗ್ರಂಥದಲ್ಲಿ ಈ ವರೆಗಿನ ಈ ವಿಷಯದ ವಿವಿಧ ವಿಧಾನ ಚರ್ಚಾಪ್ರಪಂಚದ ಕ್ರೋಢೀಕರಣ ದೃಢೀಕರಣಗಳೆ ಲೇಖಕರ ಉದ್ದೇಶ. ಈ ಸ್ವೀಕೃತ ಪರಿಮಿತಿಯಲ್ಲಿ ನಿಜವಾಗಿಯೂ ಈ ಉದ್ಗ್ರಂಥವು ಸುಪರ್ಯಾಪ್ತ ವಾಗಿದೆ.

೧ನೆಯ ಅಧ್ಯಾಯದಲ್ಲಿ ಪಾಶ್ಚಾತ್ಯ ಮತ್ತು ಭಾರತೀಯ ಸಂಗೀತ ಪದ್ಧತಿಗಳ ತೌಲನಿಕ ಪರಿಚಯವಿದ್ದರೆ ಉಪಸಂಹಾರದ ಅಧ್ಯಾಯದಲ್ಲಿ ಕೊನೆಗೆ ಭಾರತೀಯ ಸಂಗೀತದ್ದೆ ಎರಡು ಮುಖಗಳಾದ ಉತ್ತರಾದಿ ದಕ್ಷಿಣಾದಿ ಪದ್ಧತಿ ಗಳ ಸಾಮ್ಯ-ವ್ಯತ್ಯಾಸಗಳ ಪರಾಮರ್ಶವಿದೆ. ನಡುವಿನ ೨೬ ಅಧ್ಯಾಯಗಳಲ್ಲಿ ಕೇವಲ ಕರ್ಣಾಟಕ ಸಂಗೀತದ ಪ್ರತಿಪಾದನೆ ಮತ್ತು ವಿವೇಚನೆ ಸಾಕಲ್ಯದಿಂದ ಸಾಕೂಚವಾಗಿ, ಕಲೆ, ಶಾಸ್ತ್ರ, ವಿಕಾಸ, ಚರಿತ್ರೆ ಎಲ್ಲ ದೃಷ್ಟಿಯಿಂದಲೂ ಸರ್ವಾಂಗ ಸುಂದರವಾಗಿ ಬಂದಿದೆ.

ಸಂಗೀತ ಪರಿಭಾಷೆ, ರಾಗ, ಮೇಳ, ತಾಳ, ಅಲಂಕಾರ, ಶ್ರುತಿ, ಕೃತಿ ಶೈಲಿ, ಪ್ರಬಂಧ, ಮುದ್ರೆ ವಾದ್ಯವೈವಿಧ್ಯ, ಗಾಯಕರ ಗುಣದೋಷ, ವಾಗ್ಗೇಯಕಾರರ ಚರಿತ್ರೆ—ಎಲ್ಲವನ್ನು ತಿಳಿಯಾಗಿ ತಿಳಿಸಿಹೇಳಿದ್ದಾಗಿದೆ. ಇದು ಎಷ್ಟು ವಾಚನಿಯವೋ ಅಷ್ಟೆ ಆಲೋಚನೀಯವಾಗಿದೆ. ಆವಶ್ಯವೆನಿಸಿದಲ್ಲಿ ಸ್ವರಗಳ ಪೂರ್ವೋತ್ತರ ಮೇಳಗಳ, ಷಡ್ಜ-ಮಧ್ಯಮ-ಗ್ರಾಮಮಂಡಳಗಳ, ಶ್ರುತಿಪಟ್ಟಿಗಳ ಕೋಷ್ಟಕಗಳನ್ನು ಸವಿವರವಾಗಿ ಒದಗಿಸಿದ್ದು ಯುಕ್ತವೂ ಉಪಯುಕ್ತವೂ ಆಗಿದೆ.

ಭೇದಾಭೇದಗಳ ಇತ್ಯರ್ಥವೆ ಸಮ್ಯಕ್‌ಜ್ಞಾನ. ಮತಭೇದಗಳಿರುವನಕವೂ ಜ್ಞಾನದ ಮಾರ್ಗಕ್ಕೆ ಮುನ್ನಡೆ. ಇಂಥ ತತ್ತ್ವವಿವೇಚನೆಯ ಶಾಸ್ತ್ರವಿಚಿಕಿತ್ಸೆಯ ಗ್ರಂಥವು ಆದಷ್ಟೇ ಸಾವಧಾನದಿಂದ ಬರೆದಿದ್ದರೂ ಪ್ರಚೋದಕವಾಗದೆ, ವಿಚಾರ ಪ್ರಚೋದಕವಾಗಲಾರದು. ಆದರೂ ಈ ಗ್ರಂಥದ ಕುರಿತು ಕೌತುಕದ ಅಂಶ ವೇನೆಂದರೆ, ಇದರಲ್ಲಿ ಕಂಡುಬರುವದು ಕೆಲವು ಲೋಪಗಳೇ ಹೊರತು ದೋಷ ಗಳಲ್ಲ. ಮತ್ತೆ ಈ ವೈಗುಣ್ಯಗಳು ಗ್ರಂಥದ "ಗುಣಸನ್ನಿಪಾತ" ದಲ್ಲಿ ಕಾಲಿ ದಾಸನ "ಇಂದು ಕಿರಣಾಂಕ" ನ್ಯಾಯದಂತೆ ಮುಳುಗಿಹೋಗುತ್ತವೆ! ಎಂಥ ಅಪ್ಪಟ ಹಾಡುಗಾರಿಕೆಯಲ್ಲಿಯೂ ಅಲ್ಲಲ್ಲಿ ಕೀಸರ ಬಾರದೆ ಇರುತ್ತದೆಯೇ? ಅದೂ ಜೋಡಿ ತಂಬೂರಿಗಳ ಶ್ರುತಿಗೂಡಿಸಿ ಹಾಡುವಾಗ? ಹಾಗೆ ಶ್ರುತಿಗೂಡಿ-

ಸುವದು ಒಂದು ಯೋಗ. ಅದಕ್ಕೂ ಕಠಿಣ ಕರಾಮತ್ತು ಒಬ್ಬರು ಗಾಯಕರು "ಜುಗಲಬಂದಿ" ಕಟ್ಟಿ ಹಾಡುವದು! ಅದೇ ಬಗೆಯ ಸಹಯೋಗದ ಕುಶಲಕರ್ಮ ಇಲ್ಲಿ ಉಭಯ ಲೇಖಕರ ಈ ಸಂಯುಕ್ತ ಕೃತಿ. ಅಂದಾಗ ಇಲ್ಲಿಯ ಸಿದ್ಧಿಯಲ್ಲಿ "ಸಮಶ್ರುತಿ" ಎಷ್ಟು, "ಸ್ಥಾಯಿ ಶ್ರುತಿ" ಎಷ್ಟು—ವಿದ್ವಜ್ಜನ ಪರಿಶ್ರಮವನ್ನು ವಿದ್ವಾಂಸರೇ ತೀರ್ಮಾನಿಸಬೇಕು!

ಈ ಗ್ರಂಥದ ವಿಷಯ ಸಂಘಟನೆ ಇದಕ್ಕೂ ಹೆಚ್ಚು ಸುಸಂಗತವಾಗಬಹುದಿತ್ತು—ಅಧ್ಯಾಯಗಳ ಅನುಕ್ರಮದ ದೃಷ್ಟಿಯಿಂದ, ಶ್ರುತಿಗಳ ವಿಚಾರ (ಅ. ೧೧) ರಾಗಗಳ ವಿಚಾರದ (ಅ ೩) ಹಿಂದೆ, ಮೇಳಕರ್ತ ಪದ್ಧತಿಗೆ ಮೀಸಲಾದ ಅಧ್ಯಾಯಗಳೆಲ್ಲ (ಅ ೪, ೨೦, ೨೧) ಒಂದೆಡೆಗೆ ಬರಬಹುದಿತ್ತು. ಸಂಗೀತ ವಾದ್ಯಗಳ ವಿಷಯ (ಅ. ೯) ವೀಣೆಯ (ಅ. ೨೪) ಜತೆಗೆ, ಸಂಗೀತ ರಚನೆಗೆ ಸಂಬಂಧಪಟ್ಟ (ಅ. ೮ ಮತ್ತು ೨೨) ವಿಷಯ ಒಟ್ಟಿಗೆ ಸೇರಬೇಕಿತ್ತು. ಅದೇ ರೀತಿ ಕರ್ನಾಟಕದ ಪ್ರಮುಖ ಹರಿದಾಸರ ಮತ್ತು ಅವರ ಕೃತಿಗಳ ವಿಷಯ (ಅ. ೧೨) ಕೆಲವು ಪ್ರಮುಖ ವಾಗ್ಗೇಯಕಾರ ಲಕ್ಷಣಕಾರರ ಚರಿತ್ರೆಗಳ (ಅ. ೨೬) ಸಂಗಡ ಸಂಗೀತದ ಬೆಳವಣಿಗೆಯ (ಅ ೨೫) ನಂತರ ಸಮಾವೇಶವಾಗುವದು ಯುಕ್ತವಿತ್ತು. ಹಾಗೆಯೇ, ಮನೋಧರ್ಮ ಸಂಗೀತ (ಅ. ೧೦) ಸಂಗೀತದ ವಿವಿಧ ಶೈಲಿಗಳ (ಅ. ೧೬) ಚರ್ಚೆಯೊಂದಿಗೆ ಕೂಡಬೇಕು. ಲೇಖಕರು ಗಾಯನ ವಾದನಗಳನ್ನು ಪ್ರತ್ಯೇಕವಾಗಿ ವಿವೇಚಿಸಿದಂತೆಯೇ ವಾಗ್ಗೇಯಕಾರ ಲಕ್ಷಣಕಾರರ ಚರಿತ್ರೆಗಳಲ್ಲಿಯೂ ವೈಣಿಕ, ವಾಯೊಲಿನ್-ವೇಣುವಾದಕರೇ ಮೊದಲಾದ ವಾದ್ಯವಿಶಾರದರನ್ನು ಒಟ್ಟಾಗಿ ವರ್ಗೀಕರಿಸಿದರೆ ಒಪ್ಪಾಗಿತ್ತು. ಅಲ್ಲದೆ ಸಂಗೀತ ಚರಿತ್ರೆಯ ಆಧಾರಗಳ ಸೂಚಿ (ಅ. ೨೩) ಸಹಾಯಕ ಗ್ರಂಥಗಳ ಸೂಚಿಗೆ ಮುಂಚೆ ಕೊಡಬಹುದಿತ್ತು.

ಇನ್ನು ಕೆಲವು "ಲೋಪಾಮುದ್ರೆ"ಗಳು—

ಆರಂಭದಲ್ಲಿ ಪಾಶ್ಚಾತ್ಯ ಸಂಗೀತವಿಚಾರ ಸುಗಮವಾಗಿ ಬಂದಿದೆ. ಆದರೆ ಅದರಲ್ಲಿ "ವೃಂದಗಾನದ ಕೃತಿಗಳನ್ನು ಬೇರೆ ಬೇರೆ ಶ್ರುತಿಗಳಲ್ಲಿ ಹಾಡುತ್ತಾರೆ" ಎಂಬಲ್ಲಿ ಇನ್ನೂ ಹೆಚ್ಚಿನ ಉಲ್ಲೇಖ ಅಗತ್ಯವಿತ್ತು. ಅಂಥ ವೃಂದಗಾನದಲ್ಲಿ ಬೇರೆ ಬೇರೆ ಶ್ರುತಿಗೆ ಮಾತ್ರವಲ್ಲ, ಸ್ವಾಭಾವಿಕವಾಗಿಯೆ ಬೇರೆ ಬೇರೆ ಶ್ರುತಿಯುಳ್ಳ ಕಂಠಗಳು ಹಾಡುತ್ತವೆ. ಒಂದೊಂದು ಕಂಠದಿಂದವರಿಂದ ಒಂದೊಂದು ಶ್ರುತಿಯಂತೆ ಕೆಲಸ ಕೊಳ್ಳಲಾಗುತ್ತದೆ. ನಮ್ಮಲ್ಲಿಯಂತೆ ಬರಿ ಮಂದ್ರ, ಮಧ್ಯ, ತಾರ, ಗ್ರಾಮಗಳಲ್ಲಿ ಮಾತ್ರವಲ್ಲ ಬಾಸ್ (Bass), ಬಾರಿಟೋನ್ (Baritone), ಟೆನೊರ್ (Tenor), ಆಲ್ಟೊ (Alto), ಟ್ರೆಬ್ಲ್ (Treble), ಕಾಂಟ್ರಾಲ್ಟೊ (Cantralto), ಸಪ್ರಾನೊ (Soprano) ಎಂದು ಕಂಠಶ್ರುತಿ ಸಪ್ತಕವೆ ಪಾಶ್ಚಾತ್ಯರಲ್ಲಿ ಪ್ರಯುಕ್ತವಾಗುತ್ತದೆ— ವೃಂದಗಾಯ

ನದ ಕೆಲವೊಂದು ಕೃತಿಗಳಲ್ಲಿ. ಈ ಕುರಿತು ಸ್ವಲ್ಪ ಪರಿಚಯು ನಮ್ಮ ಸಂಗೀತಾ ಭ್ಯಾಸಿಗಳಿಗೆ ಸಿಕ್ಕರೆ ಆಧುನಿಕ ಸಂಗೀತದ ಆವಿಷ್ಕಾರಕ್ಕೆ ಅದು ಪ್ರಯೋಜಕ ವಾಗುತ್ತಿತ್ತು.

ಕೇವಲ ಕಾಲಾವಧಿಯ ದೀರ್ಘತೆಯಿಂದ ಪಾಶ್ಚಾತ್ಯ ಮತ್ತು ಭಾರ ತೀಯ ಸ್ವರಮೇಳ ಕೃತಿಗಳನ್ನು ತುಲನೆಮಾಡುವದು ಉಭಯಪದ್ಧತಿಗಳಿಗೂ ಅನ್ಯಾಯ. (ಬಿಥೊವಿನ್ ವ್ಯಾಗ್ನರರ ಸಿಂಫನಿ ಓಪೆರಾಗಳಿಗೂ ನಮ್ಮಲ್ಲಿಯ ರಾಗಮಾಲಿಕೆ, ಗೀತಾರೂಪಕಗಳಿಗೂ ಜಾತ್ಯಾ ವ್ಯತ್ಯಾಸವಿದೆ.)

ಸ್ವರವಿಶ್ಲೇಷಣೆಯ ಪ್ರಸ್ತಾಪದಲ್ಲಿ ೨೨ ಶ್ರುತಿಗಳ ವಿಭಜನೆ ಬಂದಂತೆ ಇಲ್ಲ: ಸ (೪), ರಿ (೩), ಗ (೨), ಮ (೪), ಪ (೪), ಧ (೩), ನಿ (೨). ನಮ್ಮ ಲ್ಲಿಯ ಈ ಮೂಲ ಸ್ವರಸಪ್ತಕವು ಕನಕಾಂಗೀ ರಾಗದ ಸ್ವರಮೇಳವಾಗಿದೆ. ("ಕನ್ನಡ ಸ್ಟಡೀಜ" ನಿಯಮಿತಕಾಲಿಕದ ೧೯೬೬ ಜುಲೈ ತ್ರೈಮಾಸಿಕ ಸಂಚಿಕೆ ಯಲ್ಲಿ ಶ್ರೀ ಆರ್. ಸತ್ಯನಾರಾಯಣರ History of Music in Karnatak between the 4th and 13th Centuries—ಎಂಬ ಲೇಖದಿಂದ).

ಷಡ್ಜಗ್ರಾಮ ಮಧ್ಯಮಗ್ರಾಮಗಳ ವಿವರಣೆಯೊಂದಿಗೆ ಈಗ ಲುಪ್ತವಾದ ಗಾಂಧಾರಗ್ರಾಮದ ಉಲ್ಲೇಖವನ್ನು ಲೇಖಕರು ಏಕೆ ಬಿಟ್ಟರೋ! ಡಾ. ಶಿವರಾಮ ಕಾರಂತರು ಈ ಗಾಂಧಾರಗ್ರಾಮವೆ ಯಕ್ಷಗಾನದ "ಪಂಚಮವರ್ಜ್ಯದೇಶೀ" ಸಂಗೀತದ ಆಧಾರವೆಂದು ಆ ಕಲೆಯ ಕುರಿತ ತಮ್ಮ ಗ್ರಂಥದಲ್ಲಿ ಚರ್ಚಿಸಿದ್ದು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಸಂಗೀತಚರಿತ್ರೆಯಲ್ಲಿ ಬಹಳ ಮುಖ್ಯ ಮೈಲುಗಲ್ಲು ಎಂದು ಉಲ್ಲೇಖಿಸಿದ ಮತಂಗಮುನಿಯ ಬೃಹದ್ದೇಶೀ ಗ್ರಂಥದಲ್ಲಿ ಪ್ರತಿಪಾದಿಸಿದ ಸಂಗೀತದ ಮೂಲ-ತತ್ವಮೀಮಾಂಸೆಯನ್ನೆ ಲೇಖಕರು ಅಲಕ್ಷಿಸಿದಂತಿದೆ. ಸಂಗೀತದ ಈ ಮೂಲ-ತತ್ವ "ಸ್ಫೋಟವಾದ" ಈ ಕುರಿತು ಆರಂಭದಲ್ಲಿ ತುಸು ವ್ಯಾಖ್ಯಾನ ಅಪ್ರಸ್ತುತ ವೆನಿಸುತ್ತಿದ್ದಿಲ್ಲ.

೨ಲನೆಯ ಅಧ್ಯಾಯದಲ್ಲಿ ರಾಗ-ಸರಗಳ ಸಂಬಂಧ ಪರಾಮರ್ಶೆ ಬಂದಿದೆ. ಇದೇ ವಿಷಯದ ಪ್ರಸ್ತಾಪ ೨ನೆಯ ಅಧ್ಯಾಯದಲ್ಲಿ ಪಾರಿಭಾಷಿಕ ಪದಗಳ ವಿಚಾರದೊಂದಿಗೆ ಮತ್ತು ೩ನೆಯ ಅಧ್ಯಾಯದಲ್ಲಿ ರಾಗವಿಂಗಡಣೆ ರಸಭೇದವನ್ನು ಹೇಳುವಾಗ ಬಂದಿದೆ. ಒಂದೊಂದು ಸ್ವರವೂ ಒಂದೊಂದು ರಸಸೂಚಕರಾಗ-ಗಳನ್ನು ರಸಗಳನ್ನು ಅನುಸರಿಸಿ ವಿಭಾಗಿಸಬಹುದು—ಎಂದು ಈ ಎರಡು ಸಂದರ್ಭಗಳಲ್ಲಿ ಹೇಳಿದ್ದಾಗಿದೆ. ೨ಲನೆಯ ಅಧ್ಯಾಯದಲ್ಲಿ ನವರಸಗಳ ವ್ಯಾಖ್ಯ-ವ್ಯಾಪ್ತಿಗಳ ವಿಚಾರವೆ ವಿಸ್ತಾರವಾಗಿದೆ; ಅಧ್ಯಾಯದ ಕೊನೆಗೆ ೨೨ ಕೃತಿ-ರಾಗ-ರಸ ಹೊಂದಾಣಿಕೆಯ ಸೂಚಿಯೊಂದು ಮಾತ್ರ ಕೊಟ್ಟಿದೆ.

ಈ ನಡುವೆ ರಸೋತ್ಪತ್ತಿಯ ದೃಷ್ಟಿಯಿಂದ ಕೃತಿಗಳನ್ನು ಗಾನರಸ ಮತ್ತು ನವರಸ ಇವೆರಡು ಬಗೆಬಗೆಯಾಗಿ ವಿಂಗಡಿಸಲಾಗಿದೆ. ಈ "ಗಾನರಸ" ವೆಂದರೇನು? ಇದು ಶಾಂತಿರಸವನ್ನು ಮೀರಿದ ೧೧ನೆಯ ರಸವೇ? ಅಲ್ಲದೆ ಸ್ವರಕ್ಕೆ ಒಂದು ರಸ,ರಾಗಕ್ಕೆ ಒಂದು ರಸ—ಕೆಲಸಲ ಒಂದು ರಾಗದಿಂದ ಅನೇಕ ರಸಗಳು!—ಹೀಗೆಲ್ಲ ಸೂಚಿಸಿದರೆ ಅನವಸ್ಥಾ ಪ್ರಸಂಗವೇ ಸರಿ. ಏಕೆಂದರೆ ರಸರೂಪಕ ಸಂಗೀತರಚನೆಗೆ ಲೇಖಕರು ಕಾಣಿಸಿದಂತೆ ೮ ಲಕ್ಷಣಗಳು ಕೂಡಿ ಕೊಂಡಿರಬೇಕು. ಅವುಗಳಲ್ಲಿ ರಾಗವು (ಅದೂ ರಕ್ತರಾಗವಾಗಿರಬೇಕು) ಒಂದು ಲಕ್ಷಣ. ಅಂದಾಗ ರಾಗಗಳಿಂದ ರಸನಿಷ್ಪತ್ತಿ ಹೇಗೆ?

ಯಾವದೇ ರಸನಿಷ್ಪತ್ತಿಯಲ್ಲಿ ಸಂಗೀತ ಒಂದು ವಿಭಾವ. ಅದೂ ಉದ್ದೀಪನ ವಿಭಾವ. ರಾಗವೇ ಒಂದು ಭಾವವಾಗಬಹುದೆ? ರಾಗಾಲಾಪನೆಯಿಂದ ರಸವ್ಯಂಜನೆ ಆಗುವದಂತೂ ಸತ್ಯ. (ರಮ್ಯ ಮಧುರ ಶಬ್ದಗಳನ್ನು ಕೇಳಿ ಸುಖಿಯಾಗುವದರ ಜತೆಗೆ ನಾವು ಪರ್ಯುತ್ಸುಕಿಗಳೂ ಆಗುವೆವೆಂಬ ಅಂಶ ವನ್ನು ಕಾಲಿದಾಸನೇ ಗಮನಿಸಿದ್ದಾನೆ!) ಅಂದಾಗ ಸಂಗೀತದಿಂದ ರಸೋತ್ಪತ್ತಿ ಏನು ಹೇಗೆ—ಎಂಬ ವಿಚಾರವನ್ನು ಇನ್ನೂ ವಿಶದವೂ ಖಚಿತವೂ ಆಗಬೇಕು. ಆದರೆ "ರಸದ ವಿಷಯ ಅತಿಸೂಕ್ಷ್ಮ ಗುರುಮುಖೇನ ತಿಳಿದುಕೊಳ್ಳಬೇಕು"— ಎಂದು ಲೇಖಕರು ಮಾತು ಮುಗಿಸಿದ್ದಾರೆ. ("ರಸಭಾವೋ ರಾಗ ಮುಖ್ಯಂ ನಹಿ ರಾಗೇನ ಗೀಯತೇ"— ಎಂದರೆನು?

"ಜನಕರಾಗಗಳು ಪ್ರಾಚೀನವೆಂದೂ ಜನ್ಯರಾಗಗಳು ಅವುಗಳಿಂದೀಚೆಗೆ ಹುಟ್ಟಿದವೆಂದೂ ಭಾವಿಸಬಾರದು"—ಎಂದಿದ್ದಾರೆ ಲೇಖಕರು. ಅದೇಕೆ? "ಅನೇಕ ಜನಕರಾಗಗಳು ಅರ್ವಾಚೀನವಂತೆ. ಆದರೆ ಹಾಗೆಂದ ಮಾತ್ರಕ್ಕೆ ಜನಕ-ಜನ್ಯ ಸಂಬಂಧದ ಆನುಪೂರ್ವಿ (Preedence) ಇಲ್ಲವಾಗುತ್ತದೆಯೋ? ಪ್ರಾಚೀನವಿರಲಿ, ಅರ್ವಾಚೀನವಿರಲಿ ಅದಕ್ಕೂ ಈಚಿನವಿರಲಿ ಜನ್ಯಕ್ಕಿಂತ ಜನಕವು ಹಿಂದಿನದಾಗಿಯೇ ಇರಬಹುದು.

"ಭಾಷಾಂಗ ರಾಗಗಳೆಲ್ಲವೂ ಮೊದಲು ಉಪಾಂಗ ರಾಗಗಳಾಗಿದ್ದವು" (ಕೆಲವು 'ಭಾಷಾಂಗ' ರಾಗಗಳನ್ನು 'ದೇಶಾಂಗ' ರಾಗಗಳೆಂದೂ ಹೇಳಿದ್ದಾರೆ) ಅಂದರೇನು? ಒಂದು ಉಪಾಂಗರಾಗ ಕಾಲಕ್ರಮೇಣ ದೇಶಾಂಗ (ಭಾಷಾಂಗ) ರಾಗವಾಗಿ ಪರಿಗಣಿಸಲ್ಪಡುವದೆಂದಾಗ ಈ ಪರಿಗಣನೆಯ ಗಮಕವೇನು? ಇಲ್ಲಿ ಶಾರ್ಙ್ಗದೇವನು ದೇಶಿರಾಗಗಳಲ್ಲಿ ಉಪಾಂಗ, ಭಾಷಾಂಗ, ರಾಗಾಂಗ, ಮತ್ತು ಕ್ರಿಯಾಂಗಗಳೆಂದು ಪರಿಭೇದ ಹೇಳಿದ್ದಾನೆ. ಮತಂಗಮುನಿಯು ರಾಗಗಳನ್ನು ಭಾಷಾಂಗ, ವಿಭಾಷಾಂಗ ಮತ್ತು ಅಂತರ್ಭಾಷಾಂಗಗಳೆಂದು ವಿಂಗಡಿಸಿದ್ದಾನೆ. ಇದೆಲ್ಲದರ ತಾಳ-ಮೇಳ ಹೇಗೆ ಹೊಂದಿಸುವದು? ನಮ್ಮ ಲೇಖಕರು ಈ ಗೊಂದಲಕ್ಕೆ ತಕ್ಕ ಪರಿಹಾರ ಕಾಣಿಸಿಲ್ಲ.

ಇನ್ನು 'ಕ್ರಿಯಾಂಗ'ದ ನಿಷ್ಕರ್ಷೆಯೂ ಅದೇ ಬಗೆ-ಅನಿಶ್ಚಿತ. ಅದು ಉತ್ಪಾದದಾಯಕವೆಂದೋ ವಕ್ರರಾಗವೆಂದೋ ರಾಗನಾಮದ ಕೊನೆಗೆ 'ಕ್ರಿಯೆ' ಎಂದಿರುವ ರಾಗವೆಂದೋ ಬಗೆಬಗೆಯಾಗಿ ವ್ಯಾಖ್ಯೆ ಕೊಟ್ಟಿದೆ. ಅಂದರೆ ಲೇಖಕರು ಇಂಥ ವಿವಾದ ವಿವರಗಳನ್ನು ಹಾಗೆಯೇ ಮುಂದಿಟ್ಟು ತಮ್ಮ ತೀರ್ಪು ಕೊಡದೆ ಬಿಟ್ಟಿದ್ದಾರೆ. (ಪುಟ ೪೫ರಲ್ಲಿ ತಾಳವರ್ತದಲ್ಲಿ ಸಶಬ್ದ ನಿಃಶಬ್ದ "ಕ್ರಿಯೆ"ಯ ಒಂದು ಉಲ್ಲೇಖವೂ ಇದೆ.)

'ಕ್ರಿಯೆ' 'ಪ್ರಿಯ' ಅಥವಾ 'ಗೌಳ' ಎಂಬ ನಾಮಾಂತ್ಯ ಪದವುಳ್ಳ ರಾಗಗಳ ಗುಂಪುಗಳೇ ಕಂಡುಬರುತ್ತವೆ. ಈ ಪದಗಳ ಇತ್ಯರ್ಥವೇನು ?

"ಘನ" "ನಯ" ರಾಗಗಳ ವರ್ಗೀಕರಣದಲ್ಲಿಯೂ ಕಟ್ಟುನಿಟ್ಟು ಕಾಣುವದಿಲ್ಲ. ಮಧ್ಯಮಕಾಲ ತಾನಗಳಲ್ಲಿ ಹಾಡಿದಾಗ ರಾಗದ ವಿಶೇಷ ಸ್ವರೂಪ ಪ್ರಕಾಶಕ್ಕೆ ಬರುವದು "ಘನ"; ವಿಸ್ತಾರವಾಗಿ ಆಲಾಪನೆಗೆ ಅವ ಕಾಶವಿರುವ ರಾಗಗಳೆಲ್ಲ "ಘನ"; ಬಹಳ ಗಂಭೀರ ಪರಿಣಾಮಕಾರಿಯಾದ ರಾಗ "ಘನ"; ಹೀಗೆಲ್ಲ ಒಂದೇ "ಘನ"ಕ್ಕೆ ಬೇರೆ ಬೇರೆ ವ್ಯಾಖ್ಯೆಗಳು !

ಇನ್ನು ವಿಲಂಬ ಕಾಲದಲ್ಲಿ ಆಲಾಪನೆಯಿಂದ ರಾಗಸ್ವರೂಪ ಪ್ರಕಾಶಿತ ವಾದರೆ ಅದು "ನಯ". ಅಂದರೆ ಇಲ್ಲಿ ವಿಸ್ತಾರಗಾಂಭೀರ್ಯಗಳು ವಿಲಂಬ ಕಾಲಕ್ಕಿಂತ ಮಧ್ಯಮಕಾಲದ ಆಲಾಪನೆಯಲ್ಲಿಯೇ ಹೆಚ್ಚೆಂದ ಹಾಗಿದೆ. ಯಾವದೆ ರಾಗದ ವೈಶಿಷ್ಟ್ಯ ವ್ಯಕ್ತವಾಗುವದು ಅದರಲ್ಲಿಯ ವಿಶಿಷ್ಟ ಸ್ವರ ಸಂಬಂಧ-ಸಂದರ್ಭವೋ ಕಾಲಾವಲಂಬನದಿಂದಲೊ ? ಅಂದರೆ ಇಲ್ಲಿಯೂ ಲೇಖ ಕರು ವಿವಿಧ ವ್ಯಾಖ್ಯೆಗಳನ್ನು ಒಟ್ಟಾಗಿ ಕೊಟ್ಟಿದ್ದಾರೆ, ಹೊರತು ಅವುಗಳ ಹೊಂದಾಣಿಕೆಗೆ ಯತ್ನಮಾಡಿದಂತಿಲ್ಲ.

ರಾಗ ಮತ್ತು ಅದನ್ನು ಹಾಡುವ ವೇಳೆ ಇವುಗಳ ಬಗೆಗೆ ಇನ್ನೂ ವಿವೇಚನೆ ಅಗತ್ಯವಿತ್ತು. ಇಂದಿನ ಧಾವತಿಯ ಯುಗದಲ್ಲಿ ಸದಾಕಾಲವೂ ರೇಡಿಯೊ ಕಿರುಚುವಲ್ಲಿ ಈ ವೇಳೆಯ ವಿಧಿನಿಷೇಧ ಸಂಗೀತಕ್ಕೆ ಸಾಧ್ಯವೇ? ಅದು ನಿಜ ವಾಗಿಯೂ ಮೂಲದಲ್ಲಿ ಹಾಗೆ ವಿಧಿಸಿದ್ದು ಯುಕ್ತವೆ?—ಎಂಬ ವಿಕಲ್ಪಕ್ಕೆ ಉತ್ತರವಿಲ್ಲದೆ ಉಳಿದಿದೆ.

೬ನೆಯ ಅಧ್ಯಾಯದಲ್ಲಿ "ವಿಶಿಷ್ಟ ವರ್ಣಸಂದರ್ಭ" ಎಂಬುದರ ಅನು- ವಾದ "ಸುಂದರ ಸ್ವರಗಳ ಸಮೂಹ" ಎಂದು ಮಾಡಿದ್ದು ಸಾಧುವಾಗಿಲ್ಲ. ಸ್ವರವೆಂದರೆ ವರ್ಣವೋ? ಇಲ್ಲಿ ವರ್ಣವು ಪಾರಿಭಾಷಿಕವೊ—ಪದವರ್ಣ ತಾನ ವರ್ಣಗಳ ಬಗೆಯದೋ? ಅಲ್ಲದೆ ಸುಂದರ-ಅಸುಂದರವೆಂಬ ಭೇದಸ್ವರಕ್ಕೆ ಅನ್ವಯಿಸುವದೋ ಸ್ವರಗಳ ಸಮೂಹಕ್ಕೊ? ಹಾಗೆಯೆ ಮುಂದೆ 'ಅಲಂಕಾರ ಮತ್ತು 'ಗಮಕ' ಗಳ ನಡುವೆ 'ಗಫಲತ್ತು' ಆದಂತಿದೆ. ಅಲಂಕಾರ ಹೀನ ಗೀತಕ್ಕೆ ಭರತಮುನಿ ಕೊಟ್ಟ ಉಪಮೆಗಳನ್ನು ಗಮಕವಿಲ್ಲದ ಗೀತಕ್ಕೆಂಬಂತೆ

ಲೇಖಕರು ಉದಾಹರಿಸಿದ್ದಾರೆ. 'ಅಲಂಕಾರ'ದ ವ್ಯಾಖ್ಯೆ ಬೇರೆ 'ಗಮಕ'ದ ವ್ಯಾಖ್ಯೆ ಬೇರೆ. ಆದರೆ ಇದರ ಎಚ್ಚರ ಲೇಖಕರು ಮರೆತಂತಿವೆ

ಪುರಾತನ ಸಾಮಗಾನದ ಸ್ವರಗಳು ಖರಹರಪ್ರಿಯ ರಾಗಕ್ಕೆ ಸರಿಸಮವಾದ ಸ್ವರಗಳು–ಎಂಬಲ್ಲಿ ಸ್ವರಕ್ಕೆ ಸ್ವರ ಹೇಗೆ ಸರಿ? ಆರ್ಚಿಕ ಗಾಥಿಕ ಸಾಮಿಕ ಈ ಭೇದಾನುಕ್ರಮದಲ್ಲಿ ಮೊದಲು ೪ ಆಮೇಲೆ ೭ ಸ್ವರಗಳ ಅಳವಡಿಕೆ ಆಯಿತೆಂದು ಹೇಳಿದಾಗ ಸಾಮಗಾನದ ನಿಶ್ಚಿತ ಸ್ವರಮೇಳ ಯಾವದು?

ತಂಬೂರಿಯ ಜನಕರು ತುಂಬುರ–ನಾರದರು ರಾವಣಹಸ್ತಕ ತಂತಿವಾದ್ಯ ಪಿಟೀಲಿನ ಪಿತಾಮಹ–ಇತ್ಯಾದಿ ಆಖ್ಯಾಯಿಕೆಗಳು ಪ್ರಮಾಣವಾಗಬಹುದೇ? ತಂಬೂರಿ-ತುಂಬುರ ಈ ಶಬ್ದಗಳ ವಾದಸಾದೃಶ್ಯ ಬಿಟ್ಟರೆ ಆವರ ಆಖ್ಯಾಯಿಕೆಗೆ ಬೇರೆ ಆಧಾರವಿಲ್ಲ. ಉತ್ತರ ಭಾರತದಲ್ಲಿ ತಂಬೂರಿಗೆ ತಾನು ಪುರಾ (ತಾನ ಪೂರಕ) ಎನ್ನುತ್ತಾರೆ (ಪಾಶ್ಚಾತ್ಯರಲ್ಲಿ Tambour ಅಥವಾ Tambourine ಎಂಬ ವಾದ್ಯವಿದೆ. ಆದರೆ ಆದು ಸುತ್ತಲೂ ಗೆಜ್ಜೆಗಳನ್ನು ಕಟ್ಟಿದ ಒಂದು 'ಕೈಪರೆ')

ಪಿಟೀಲು ದಕ್ಷಿಣಾದಿ ಸಂಗೀತಕ್ಕೆ ಇಷ್ಟೊಂದು ಒಗ್ಗಿಕೊಂಡುದರ ಸ್ವಾರಸ್ಯವೇನೋ! ಈ ಪಾಶ್ಚಾತ್ಯ ವಾದ್ಯವನ್ನು ಬಾಲಸ್ವಾಮಿ ದೀಕ್ಷಿತರು (೧೭೭೫–೧೮೩೫) ಮೊದಲು ಕರ್ನಾಟಕ ಸಂಗೀತಕ್ಕೆ ಅಳವಡಿಸಿಕೊಂಡರಂತೆ. ತಿರುವಾಂಕುರದ ಮಹಾರಾಜ ಸ್ವಾತಿತಿರುನಾಳರು ಬೆಳ್ಳಿಯ ಪಿಟೀಲನ್ನು ಶ್ರೀ ವಡಿವೇಲು ಇವರಿಗೆ ಉಡುಗೊರೆಯಾಗಿ ಕೊಟ್ಟರಂತೆ. ಇವರ ಕಾಲ ೧೮೧೩–೧೮೪೭ ಅಂದರೆ ದಕ್ಷಿಣ ಭಾರತದಲ್ಲಿ ಪಿಟೀಲು ೩೫–೫೦ ವರ್ಷಗಳಲ್ಲಿಯೆ ತುಂಬ ಜನಪ್ರಿಯವಾಗಿ ಪ್ರಚಾರಕ್ಕೆ ಬಂದಿತೆ? ಪಿಟೀಲಿನೊಂದಿಗೆ ಕರ್ನಾಟಕ ಸಂಗೀತ ರಚನೆಯಲ್ಲಿ ಪಾಶ್ಚಾತ್ಯ ಸ್ವರಮೇಳಗಳ ಪ್ರಭಾವವೂ ಬಿದ್ದಿರಬಹುದೇ?

"೧೧ನೆಯ ಅಧ್ಯಾಯ ಮನೋಧರ್ಮ" ಸಂಗೀತದ ಬಗೆಗೆ. ಈ "ಮನೋಧರ್ಮ" ಎಂಬ ಪರಿಭಾಷೆ ಲೇಖಕರದೋ ಅಥವಾ ಶಾಸ್ತ್ರೀಯವೋ ಸ್ಪಷ್ಟವಿಲ್ಲ. ಉತ್ತರಾದಿಯಲ್ಲಿ "ಖ್ಯಾಲ" ಎಂಬುದನ್ನೆ ಇಲ್ಲಿ "ಮನೋಧರ್ಮ" ಎಂದು ತರ್ಜುಮೆ ಮಾಡಿರಬಹುದು. ಈ ಅಧ್ಯಾಯ ತುಂಬ ಸ್ವಾರಸ್ಯವಾಗಿದೆ. ನಿಜವಾಗಿಯೂ ದಕ್ಷಿಣೋತ್ತರ ಸಂಗೀತದ ಸಮನ್ವಯಕ್ಕೆ ಪಲ್ಲವಿ–ಖ್ಯಾಲ ಗಾಯನಪದ್ಧತಿ ಒಂದು ಸೇತುವೆ ಆಗಬಲ್ಲದು. ಪಲ್ಲವಿ ಖ್ಯಾಲಗಳಲ್ಲಿ ತುಂಬ ಸಾಮ್ಯವಿದೆ ಇವೆರಡರಲ್ಲಿಯೂ ಕೃತಿಗೆ ಕಟ್ಟುಬೀಳದೆ ಸ್ವಯಂಪ್ರತಿಭೆಯ ರಾಗಾಲಾಪನೆಗೆ ಮುಕ್ತಕಂಠ. ದಕ್ಷಿಣಾದಿಯಲ್ಲಿ ರಾಗಾಲಾಪನೆಗೆ ತಾಳದ ಬಂಧ ಇಲ್ಲ. ಉತ್ತರಾದಿಯಲ್ಲಿ "ನೊಂತೊಂ" ತುಂಬುವ ಸ್ವರವಿಲಾಸದಂತೆಯೇ. ಆದರೆ ಪಲ್ಲವಿ ಖ್ಯಾಲ ಹಾಡಿಕೆಯಂತೆಯೇ ತಾಲಬದ್ಧ ರಾಗಾಲಾಪನೆ. ಈ ಕುರಿತು ಬರೆಯುವಾಗ ಉತ್ತರಾದಿ–ದಕ್ಷಿಣಾದಿ ಗಾಯನಗಳ ಸಮನ್ವಯದತ್ತ ನಿರ್ದೇಶವಿದ್ದರೆ ಚೆನ್ನಾಗಿತ್ತು.

೧೫ನೆಯ ಅಧ್ಯಾಯದಲ್ಲಿ ಜಾನಪದ ಸಂಗೀತದ ವಿವೇಚನೆ ಇದೆ. ಆದರೆ ಇಲ್ಲಿ ಹೆಚ್ಚಾಗಿ ಜಾನಪದ ಹಾಡುಗಳ, ವಿವಿಧ ಪ್ರಕಾರಗಳ, ಅವುಗಳ ಸಂದರ್ಭ ವಿಶೇಷಗಳ ವಿಷಯವೇ ಬೆಳೆದಿದೆ. ಇದು ಜಾನಪದ ಸಾಹಿತ್ಯದ ವಿಚಾರವೆ ಹೊರತು ಸಂಗೀತದ್ದಲ್ಲ. ಅಂಥ ಸಂಗೀತದ ಕೆಲವು ಪ್ರಮುಖ ಲಕ್ಷಣಗಳನ್ನು ಇಲ್ಲಿ ಹೇಳಿದ್ದಾಗಿದೆ. ಆದರೆ ಅವು ತೀರ ಕೆಲವು ಮತ್ತು ಸಾಮಾನ್ಯ ಸ್ವರೂಪದವು. "ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆ"ಯೆಂದು ಇದನ್ನು ಸಂಕ್ಷೇಪಗೊಳಿಸಿರಬೇಕು. ಇಲ್ಲಿಯೂ ಜಾನಪದ ವಾದ್ಯಗಳ ವರ್ಣನೆಯೇ ವಿಸ್ತಾರವಾಗಿ ಬಂದಿದೆ. ಅದೂ ಸರಿಯೇ.

ಆದರೆ ಅನೇಕ ರಾಗ-ರಾಗಿಣಿಗಳ ಮೂಲ ಪಡಿಯಚ್ಚುಗಳು ಜಾನಪದ ಸಂಗೀತದಲ್ಲಿ ಕಂಡುಬರುವಂತಿವೆ. ಈ ನಿಟ್ಟಿನಲ್ಲಿ ಶ್ರೀ ಕುಮಾರ ಗಂಧರ್ವರು ಪ್ರಶಂಸನೀಯ ಸಂಶೋಧನೆ ಮಾಡಿದ್ದುಂಟು. ಜಾನಪದ ಗತ್ತುಗಳಲ್ಲಿಯ ಸ್ವರ ಲಯಗಳ ಆಕೃತಿಗಳ ಪರಿಚಯ ನೀಡದ್ದರೆ ಗ್ರಂಥದ ಸಿರಿವಂತಿಕೆ ಹೆಚ್ಚುತ್ತಿತ್ತು.

"ಜಾನಪದ ಸಂಗೀತದ ಮುಖ್ಯ ಧ್ಯೇಯ ಮನೋರಂಜನೆ"—ಎಂದರೆ ಏನು ಬಂತು? ಇದು ಸಕಲಸಂಗೀತದ್ದೇ ಧ್ಯೇಯ ಅಲ್ಲ, ಸಾಮಾನ್ಯ ಲಕ್ಷಣ. "ಸ್ವಯಂ ರಜಕತ್ವ"ವೇ ಸ್ವರದ ಲಕ್ಷಣ. "ರಂಜಕ ಸ್ವರಸಂಯೋಗ"ವೇ ಗೀತದ ಲಕ್ಷಣ. ಅಂದಾಗ ರಂಜನೆ ಜಾನಪದ ಗೀತದ್ದೇ ಮುಖ್ಯ ಗಮಕವಾಗಲಾರದು. ಜಾನಪದ ಸಂಗೀತ ಧರ್ಮವಿಧಿ ವೈಧಾನಿಕ (Ritualistic) ಶುಭ ಶೋಭನ, ಹಬ್ಬಹುಣ್ಣಿವೆ, ಹರಕೆಹರಿದಿನ, ಋತುಮಾನ ಕ್ರಿಯಾವಿಧಾನಗಳಿಗೆ ಮೀಸಲಾದದ್ದು. ಬಹುಮಟ್ಟಿಗೆ ಕೌಟುಂಬಿಕ, ಸಾಮಾಜಿಕ ಸ್ವರೂಪದ್ದು. ರಚನೆಯಲ್ಲಿ ಒಂದು ರೀತಿ "ಅಪೌರುಷೇಯ"ವಾದದ್ದು.

ಇನ್ನು ದೇಶ್ಯ ದೇಶಿ ಪದದ ಇತ್ಯರ್ಥ. "ದೇಶೇ ದೇಶೀ ಪ್ರಚರಿತಂ ತತ್ ಸರ್ವಂ ದೇಶಿ ಸಮ್ಮತಂ" ಸರಿ. ಆದರೆ "ಯಾವ ರಾಗದ ಆಲಾಪನೆಯಿಂದ ರಾಗದ ವಿಶೇಷಸ್ವರೂಪ ಸುಲಭ ಪ್ರಕಾಶಪಡೆಯುವದೋ ಅಂಥ ರಾಗ ದೇಶ್ಯ' ಎಂದೂ ಹೇಳಿದೆ. ಆದೇ ರೀತಿ, ಈಗ ಮಾರ್ಗ ಸಂಗೀತ ರೂಢಿಯಲ್ಲಿ ಇಲ್ಲ. ಇದ್ದುದೆಲ್ಲ ದೇಶಿ. ದೇಶಿಯೇ ಮಾರ್ಗವಾಗುತ್ತಿದೆ ಎಂದೂ ಹೇಳಲಾಗಿದೆ. ಅಂದರೆ ಒಟ್ಟು ಅಂದದ್ದೇನು?

ರಾಗ ವಿಂಗಡಣೆಯ ಸೂತ್ರ ಯಾವದು? (i) ಷಡ್ಜಗ್ರಾಮದಿಂದ, (ii) ಕೆಲವು ದೇಶೀ ರಾಗಗಳಿಂದ, (iii) ಗ್ರಹಭೇದದಿಂದ ಎಂದಾಗ ಈ ವರ್ಗೀಕರಣ ಯದೃಚ್ಛೆಯದು (Arbitrary) ಅನಿಸುವಂತಿದೆ. ಇದಕ್ಕೆಲ್ಲ ಬೇರೆ ಏನಾದರೂ ಸಾಮಂಜಸ್ಯ-ಸಮರ್ಥನೆ ಇರಬೇಕು.

೧೮ನೆಯ ಅಧ್ಯಾಯದಲ್ಲಿ ಹೇಳಿದ ಗಾಯಕರ ಗುಣದೋಷಗಳನ್ನು ನಮ್ಮ ಸಂಗೀತಗಾರರು ಗುರುತುಹಾಕಿಕೊಂಡು ಗಮನಿಸತಕ್ಕದ್ದು. ಇಂದು

ಸರ್ವಸಾಧಾರಣವಾಗಿ ಶಾಸ್ತ್ರೀಯ ಸಂಗೀತ—ಅದೂ ದಕ್ಷಿಣಾದಿಯಲ್ಲಿ—ಕರ್ಣ ಕಠೋರವೂ ಕೈಬಾಯಿಗಳ ಅಸಹ್ಯ ವಿಕ್ಷೇಪಗಳಿಂದ ಕೂಡಿದ್ದೂ ಆಗಿಬಿಟ್ಟದೆ. ಈ ಮೂಲಕ ವಿಕಟವಿನೋದಕ್ಕೆ ಗುರಿಯಾಗಿದೆ. ಲೇಖಕರು ಉದಾಹರಿಸಿದ ಬಹಳಷ್ಟು ದೋಷಗಳನ್ನು ಶಾಸ್ತ್ರೀಯ ಸಂಗೀತವಿದ್ವಾಂಸರು ಗುಣವಿಶೇಷ ಗಳೆಂಬಂತೆ ಅನೂಚೀನವಾಗಿ ಅನುಸರಿಸಿಕೊಂಡು ಬಂದಂತಿದೆ. ಅನೇಕ ಸಲ ತಮ್ಮ ಗುರುಗಳ ಯಾವದೋ ಮುಖ, ಧ್ವನಿ, ಭಂಗಿಗಳ ಅನಿವಾರ್ಯ ವಿಕೃತಿ ಯನ್ನು ಅವರ ಸಚ್ಛಿಷ್ಯರುಗಳು ಪರಮನಿಷ್ಠೆಯಿಂದ ಕಲಿತು ಕಾಪಾಡಿಕೊಂಡು ಬಂದದ್ದು ಕಾಣುತ್ತದೆ. ಗುರುಗಳಿಗೆ ಶಾರೀರಕದೋಷದಿಂದ ಷಡ್ಜ ಹಚ್ಚಲು ಕಷ್ಟವಾಗುತ್ತಿತ್ತು. ಶಿಷ್ಯರೂ ತಮ್ಮ ಕಂಠ ಸಹಜವಾಗಿಯೇ ಸುಭಗವಿದ್ದರೂ ಅದೇ ಕೃತ್ರಿಮ ಕಷ್ಟದಿಂದ ಮೋರೆ ಸಿಂಡರಿಸಿಕೊಂಡು ಶ್ರುತಿಹಚ್ಚುವ ಚಟ ವನ್ನು ಹಟದಿಂದ ಪಳಗಿಸಿರುತ್ತಾರೆ! ಮಾಧುರ್ಯಕ್ಕಿಂತ ಕರ್ಕಶತೆಯೇ ಸಂಗೀತದ ಶಾಸ್ತ್ರಶುದ್ಧತೆಯ ಲಕ್ಷಣವೆಂದು ಅನೇಕ ಗಾಯಕರೂ ಅವರ ರಸಿಕರೂ ಭಾವಿ ಸಿದ್ದು ಕಂಡುಬರುತ್ತದೆ. ಈ ಪರಿಸ್ಥಿತಿಯ ಪರಿಮಾರ್ಜನೆಗೆ ಈ ಅಧ್ಯಾಯದ ಅಧ್ಯಯನ ಸಾಧಕವಾಗಲಿ.

"ಆಧುನಿಕ ಸಂಗೀತ" ವೆಂಬ ೧೯ನೆಯ ಅಧ್ಯಾಯದಲ್ಲಿ ಸದ್ಯದ ಸಂಗೀತ ಪೋಷಕವಾದ ವಿವಿಧ ಸಾರ್ವಜನಿಕ ಸೌಕರ್ಯಗಳ ಪ್ರಸ್ತಾಪವೇ ಹೆಚ್ಚಾಗಿದೆ. ವಿಶ್ವವಿದ್ಯಾಲಯ, ಸಂಗೀತ ನಾಟಕ ಅಕಾಡೆಮಿ, ರಾಷ್ಟ್ರೀಯ ಪ್ರಶಸ್ತಿ, ರೇಡಿಯೋ ಪ್ರಸಾರ. ಸಂಗೀತ ಮಹೋತ್ಸವಗಳು, ಐತಿಹಾಸಿಕ ವಾಗ್ಗೇಯ ಕಾರರ ಜಯಂತ್ಯುತ್ಸವಗಳು, ಅವರ ರಾಷ್ಟ್ರೀಯ ಸ್ಮಾರಕಗಳು—ಇತ್ಯಾದಿ ಒಳ್ಳೆಯ ಅಂಶಗಳನ್ನು ಇಲ್ಲಿ ನಿರೂಪಿಸಲಾಗಿದೆ. ಅದೇ ರೀತಿ, ಪಲ್ಲವಿ ಗಾಯನದ ಲೋಪ, ಲಘುಸಂಗೀತದ ಅಭಿರುಚಿ, ವಾದ್ಯಸಂಗೀತದತ್ತ ಉಪೇಕ್ಷೆ—ಇತ್ಯಾದಿ ಗಂಭೀರ ದೋಷಗಳನ್ನು ಎತ್ತಿಹೇಳಿದ್ದಾರೆ. ಅಭಿಜಾತ ಸಂಗೀತಾಭಿರುಚಿಯ ಜೋಪಾಸನೆ, ಉಪಾಸನೆಗಳಿಗೆ ಲೇಖಕರು ಕೆಲವು ಸೂಕ್ತ ಸಲಹೆಗಳನ್ನು ನೀಡಿದ್ದಾರೆ.

ಆದರೆ ಇದೆಲ್ಲ "ಆಧುನಿಕ ಸಂಗೀತ"ವೆಂದೆನಿಸಿಕೊಳ್ಳಲಾರದು. ಸಂಗೀತದ ಆಧುನೀಕರಣದ ಯಾವ ಪ್ರಯತ್ನ ಎಂಥ ಪ್ರಯೋಗ ಸದ್ಯ ನಡೆದಿದೆ? ಅದರ ಇತಿಮಿತಿಗಳೇನು?—ಎಂಬ ಪ್ರಶ್ನೆಗಳಿಗೆ ಇಲ್ಲಿ ಉತ್ತರವಿಲ್ಲ. (ಪ್ರಶ್ನೆಗಳನ್ನೂ ಎತ್ತಿಲ್ಲ!) ಈ ಅಧ್ಯಾಯದ ವಿಷಯ ಆಧುನಿಕ ಸಂಗೀತವಲ್ಲ, ನಮ್ಮ ಸಂಗೀತದ ಬಗೆಗೆ ಆಧುನಿಕ ಪರಿಸ್ಥಿತಿ ಎಂಬುದೇ ಆಗಿದೆ.

ವಾಗ್ಗೇಯಕಾರ ಲಕ್ಷಣಕಾರರ ಚರಿತ್ರೆಗಳನ್ನೊಳಗೊಂಡ ಕರ್ನಾಟಕ ಸಂಗೀತಶಾಸ್ತ್ರದ ಬೆಳವಣಿಗೆಯ ಕುರಿತಾದ ೨೬ನೆಯ ಅಧ್ಯಾಯ ಈ ದಿಶೆಯಲ್ಲಿ ಇದೇ ಮಹತ್ವದ ಪ್ರಥಮ ಪ್ರಯತ್ನವೆನ್ನಬಹುದು. ಸುಮಾರು ೯೨ ಪುಟದ

ಈ ಅಧ್ಯಾಯು ಈ ಗ್ರಂಥದಲ್ಲಿಯೇ ದೊಡ್ಡದು. ಗಾತ್ರದಂತೆ ಗುಣದಲ್ಲಿಯೂ ಹಿರಿದು. ದತ್ತಿಲ ಭರತಮುನಿಗಳಿಂದ ಮೊದಲುಮಾಡಿ ಚೌಡಯ್ಯ, ಜಯ-ಚಾಮರಾಜ ಒಡೆಯರ್ ಬಹಾದ್ದೂರರ ವರೆಗೂ ಈ ಚರಿತ್ರಮಾಲಿಕೆ ಸಂಪನ್ನವಾಗಿದೆ. ಇದೊಂದು ಚಾರಿತ್ರಿಕ ಲಘುಕೋಶವೇ ಸರಿ.—ಸಂಗ್ರಹವಿದ್ದಷ್ಟೇ ಸಂಗ್ರಾಹ್ಯವಾಗಿದೆ.

ಚರಿತ್ರಕೋಶದಂತೆಯೇ ೨೭ನೆಯ ಅಧ್ಯಾಯದ "ರಾಗಲಕ್ಷಣಗಳು" ಸಂಗೀತವ್ಯಾಸಂಗಿಗಳಿಗೆ ಉತ್ತಮ ಕೈಪಿಡಿ. ಲೇಖಕರು ೬೬ ರಾಗಗಳನ್ನು ಅವುಗಳ ಸ್ವರೂಪ, ಸ್ವರಸಂಚಾರಕ್ರಮ, ಅವುಗಳಲ್ಲಿಯ ಕೆಲವು ಪ್ರಸಿದ್ಧ ಕೃತಿರಚನೆಗಳು—ಈ "ತ್ರಿಭಂಗಿ"ಯಲ್ಲಿ ಸಂಕ್ಷೇಪವಾಗಿ ವಿವರಿಸಿದ್ದಾರೆ. ನಿಜ-ವಾದ ಕರ್ಣಾಟಕ ಸಂಗೀತಸುಧೆ ಇಲ್ಲಿ ಹರಿದಿದೆ.

"ಅಲಮತಿವಿಸ್ತರೇಣ." ಇವೆಲ್ಲವೂ ಹಿಂದೆಯೇ ಹೇಳಿದಂತೆ ಲೋಪಗಳ ನಿರ್ದೇಶವೇ ಹೊರತು ದೋಷಗಳದಲ್ಲ. ಈ ಲೋಪಗಳಿಗೂ ಒಂದು ಕಾರಣ ಹಿಂದೆಯೇ ಹೇಳಿದೆ—ಲೇಖಕರ ಪ್ರಾಮಾಣಿಕತೆ. ತಮಗೆ ತೋರಿದ್ದು ತೋಚಿದ್ದು ತೀರ್ಮಾನವೆನಿಸಿದ್ದು ನಮೂದಿಸುವದನ್ನು ಆದಷ್ಟು ತಪ್ಪಿಸಿಕೊಂಡು ಲೇಖಕ-ದ್ವಯರು ತಮ್ಮ ವಿದ್ವತ್ತೆಯ ವಿಮರ್ಶಾವಿಚಕ್ಷಣತೆಗೆ ವಿನಯದ ವಿಧೇಯ-ತೆಯ ವ್ಯಾಘಾತ ಹಾಕಿ, ಕೇವಲ ಪೂರ್ವಸೂರಿಗಳ ವ್ಯಕ್ತವ್ಯಾಶಂಗಳನ್ನಷ್ಟೇ ಇಲ್ಲಿ ಸುಸೂತ್ರವಾಗಿ ಸಂಕಲನಗೊಳಿಸಿದ್ದಾರೆ. ತಮ್ಮ ವ್ಯಕ್ತಿತ್ವ ಎಲ್ಲಿಯೂ ವ್ಯಕ್ತವಾಗದಂತೆ ಎಚ್ಚರವಹಿಸಿದ್ದಾರೆ, ಬಹುಲ ಪರಿಶ್ರಮದಿಂದ (ಅದೂ ಪ್ರತಿಭೆಯ ಒಂದು ಪ್ರಧಾನ ಲಕ್ಷಣವಷ್ಟೇ!) ಅಪಾರ ಶಾಸ್ತ್ರ ಸಮುದ್ರವನ್ನು ಮಂಥನಮಾಡಿ ಈ ಸಂಗೀತಸುಧೆಯನ್ನು ವಿದ್ಯಾರ್ಥಿಗಳಿಗೂ ಇತರ ವಾಚಕ ವರ್ಗಕ್ಕೂ ಕೃಪೆಗೆ ಕಾರ್ಪಣ್ಯವಿಲ್ಲದೆ ದಕ್ಷತೆಯಿಂದ ದಾಕ್ಷಿಣ್ಯದಿಂದ ಉಣಬಡಿಸಿದ್ದಾರೆ. ಅಲ್ಲಲ್ಲಿ ಏಕವಾಕ್ಯತೆ ಮಾಡುವ, ಸ್ವೋಪಜ್ಞತೆಯಿಂದ ನಿರ್ಣಯ ಕೊಡುವ ಸ್ವತಃಸಿದ್ಧವಾದ ಅಧಿಕಾರವನ್ನು ಉಪಯೋಗಿಸುವದೂ ಒಂದು ಚಾಪಲ್ಯವಾಗಬಹುದೆಂಬಂತೆ ತಾಟಸ್ಥ್ಯವನ್ನೇ ತೋರ್ಪಡಿಸಿದ್ದಾರೆ. ಸಂಗೀತಾ-ಮೃತಪಾಯಿಗಳಾದ ಯಾವ ಮಹಾಭಾಗರೂ ನಿರ್ಮತ್ಸರಿದ್ದರೆ ಈ ಗ್ರಂಥಕ್ಕಾಗಿ ಗ್ರಂಥಕರ್ತರಿಗೆ ಕೃತಜ್ಞರಾಗಲೇಬೇಕು. ಏಕೆಂದರೆ ಅವರು ಸಾಧಿಸಿದ ಈ ಕಾರ್ಯವು ಸಾರವತ್ತಾದದ್ದು, ಪ್ರಮಾಣಭೂತವಾದದ್ದು, ಸರ್ವಥೈವ ಸ್ತುತ್ಯಾಸ್ಪದವಾದದ್ದು.

★ ಗೌರೀಶ ಕಾಯ್ಕಿಣಿ

ಸಾದರ ಸ್ವೀಕಾರ

೧. **ಜೀವನಸಿದ್ಧಿ** (ಶ್ರೀ. ಜ. ಚ. ನಿ. ಷಷ್ಟ್ಯಬ್ದಿ ಸಮಾರಂಭ, ಸ್ಮಾರಕ ಸಂಪುಟ)

ಸಂಪಾದಕರು: ಶ್ರೀ ಸದಾಶಿವ ಒಡೆಯರ ಮತ್ತು ಶ್ರೀ ಚೆನ್ನವೀರ ಕಣವಿ. ಪ್ರಕಾಶಕರು: ಶ್ರೀ ಸಂಗಪ್ಪ ಪಂಪಣ್ಣ ಶೆಟ್ಟರ, ಗುರುಕೃಪಾ ಸ್ಟೋರ್ಸ್, ಕೊಪ್ಪಳ (ರಾಯಚೂರ ಜಿಲ್ಲೆ). ಬೆಲೆ: ರೂ. ೧೨. ಪುಟ: xvi+೨+೨೫೨.

೨. **ಶಾಸನಗಳಲ್ಲಿ ಶಿವಶರಣರು**

ಲೇಖಕರು: ಡಾ. ಎಂ. ಎಂ. ಕಲಬುರ್ಗಿ. ಪ್ರಕಾಶಕರು: ಸಿರಿಗನ್ನಡ ಪ್ರಕಾಶನ, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಬೆಲೆ: ಸಾದಾ ಪ್ರತಿ: ರೂ. ೬, ಕ್ಯಾಲಿಕೊ ರೂ. ೮, ಪುಟ: xvi+೨+೨೫೨.

೩. **ವರ್ಣನಾತ್ಮಕ ಭಾಷಾ ವಿಜ್ಞಾನ**

ಲೇಖಕರು: ಶ್ರೀ ಜೆ. ಎಸ್. ಕುಳ್ಳಿ. ಪ್ರಕಾಶಕರು: ಸಿರಿಗನ್ನಡ ಪ್ರಕಾಶನ, ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಬೆಲೆ: ಸಾದಾ: ರೂ. ೬, ಗ್ರಂಥಾಲಯ ಪ್ರತಿ ರೂ. ೮. ಪುಟ: ೧೦+೪+೧೮೨.

೪. **ಕನ್ನಡದ ವಾಗ್ರೂಢಿಗಳು**

ಲೇಖಕರು: ಶ್ರೀ ಎಂ. ರಾಜಗೋಪಾಲಾಚಾರ್ಯ. ಪ್ರಕಾಶಕರು: ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ. ಬೆಲೆ: ಸಾದಾ ರೂ. ೬, ಡೀಲಕ್ ರೂ ೮. ಪುಟ: xvi+೨೨೨.

೫. **ಬದುಕಿನ ಬೆಳಕು** (ಸಾಮಾಜಿಕ ಕಾದಂಬರಿ)

ಲೇಖಕರು: 'ಪ್ರಭುಪ್ರಸಾದ'. ಪ್ರಕಾಶಕರು: ಶ್ರೀ ಕೆ. ಎಸ್. ಮೊಹರವಾಡೆ, ಬಿ. ಎ. ಬಿ. ಕಾಂ., ಕಮರೀಪೇಟೆ, ಭಾರತಚೌಕ, ಹುಬ್ಬಳ್ಳಿ. ಬೆಲೆ: ರೂ. ೪. ಪುಟ: xii+೨+೩೧೪.

೬. **ಗಂಡ ಹೆಂಡರ ಜಗಳ ಗಂಧ ತೀಡಿದ್ಹಾಂಗ** (ಕವನ ಸಂಕಲನ)

ಲೇಖಕರು: ಶ್ರೀ ಸೋಮಶೇಖರ ಇಮ್ರಾಪೂರ. ಪ್ರಕಾಶಕರು: ಸಿರಿಗನ್ನಡ ಪ್ರಕಾಶನ, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಬೆಲೆ: ರೂ. ೪. ಪುಟ: xxii+೪+೭೦.

೭. **ಹೊಸ ಮುಖ** (ವಿದ್ಯಾರ್ಥಿ ಕವನ ಸಂಕಲನ)

ಸಂಪಾದಕರು: ಡಾ. ಎಂ. ಬಿ. ಕೊಟ್ರಶೆಟ್ಟಿ ಮತ್ತು ಪ್ರೊ. ಜೆ. ಎಸ್. ಕುಳ್ಳಿ. ಪ್ರಕಾಶಕರು: ಕರ್ನಾಟಕ ಸಂಘ, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. ಭಾವದೀಪ್ತಿ (ಕವನ ಸಂಕಲನ)

ಲೇಖಕರು: ಶ್ರೀ ವಸಂತ ಕುಷ್ಟಗಿ. ಪ್ರಕಾಶಕರು: ಬತ್ತರೀಶ ಪ್ರಕಾಶನ; ಶಹಾಬಾದ (ಜಿ. ಗುಲಬರ್ಗಾ). ಪುಟ: ರೂ. ೧-೭೫. ಬೆಲೆ: ೧೪+೧+೬೪.

೯. ಮನನ (ಕವನ ಸಂಕಲನ)

ಲೇಖಕರು: ಸೀ. ಹೊಸಬೆಟ್ಟು. ಪ್ರಕಾಶಕರು: ಶ್ರೀ ಕೆ. ವಿ. ಉಡುಪ, ಯುಗ ಪುರುಷ ಪ್ರಕಟಣಾಲಯ, ಕಿನ್ನಿಗೋಳಿ (ದ. ಕ.). ಬೆಲೆ: ರೂ. ೨. ಪುಟ: ೮೦.

೧೦. ಶ್ರೀಶೈಲ ಮಹಾತ್ಮೆ (ಕವಿ ಮುದ್ಗಲನಾಥ ವಿರಚಿತ ಕಾವ್ಯ)

ಸಂಪಾದಕರು: ಶ್ರೀ ಎನ್. ಕೆ. ಹೆಗಡೆ, ಜನತಾ ವಿದ್ಯಾಲಯ, ಶಿರಾಲಿ (ಉ. ಕ.). ಪ್ರಕಾಶಕರು: ಶ್ರೀ ಎನ್. ಕೆ. ಹೆಗಡೆ, ಮುಖ್ಯಾಧ್ಯಾಪಕರು, ಜನತಾ ವಿದ್ಯಾಲಯ, ಶಿರಾಲಿ (ಉ. ಕ.). ಬೆಲೆ: ರೂ. ೨-೫೦. ಪುಟ: xxxxii+೮+೮೯.

ಸಂಪಾದಕೀಯ

"ವಿಜ್ಞಾನ ಭಾರತಿ"ಯ ಉದಯ

ಈ ಸಂಚಿಕೆಯೊಂದಿಗೆ 'ಕರ್ನಾಟಕ ಭಾರತಿ'ಗೆ ಮೂರು ವರುಷಗಳು ತುಂಬುತ್ತವೆ. ಮೊದಲ ಎರಡು ವರುಷ 'ಅಯನ ಪತ್ರಿಕೆ'ಯಾಗಿ, ಕಳೆದ ಒಂದು ವರುಷದಿಂದ ತ್ರೈಮಾಸಿಕ ಪತ್ರಿಕೆಯಾಗಿ ನಡೆದು ಬಂದ, 'ಕರ್ನಾಟಕ ಭಾರತಿ'ಯು ಮುಂದಣ ಸಂಚಿಕೆಯೊಂದಿಗೆ, ವೈಜ್ಞಾನಿಕ ಲೇಖನಗಳಿಗೆ ಮಾತ್ರ ಮೀಸಲಾಗಿರುವ "ವಿಜ್ಞಾನ ಭಾರತಿ" ಎಂಬ ಸ್ವತಂತ್ರ "ಅಯನ ಪತ್ರಿಕೆ"ಯೊಂದು ಪ್ರಾರಂಭವಾಗುತ್ತಿದೆಯೆಂದು ತಿಳಿಸಲು ಸಂತೋಷವೆನಿಸುತ್ತದೆ.

ಕನ್ನಡದಲ್ಲಿ ವೈಜ್ಞಾನಿಕ ಸಾಹಿತ್ಯವನ್ನು ಬೆಳಗಿಸಲು, ಕನ್ನಡವನ್ನು ವಿಜ್ಞಾನಕ್ಷೇತ್ರದಲ್ಲಿ ಪಳಗಿಸಲು ಒಂದು ಸ್ವತಂತ್ರ ಪತ್ರಿಕೆ ಅಗತ್ಯವೆಂದು ಈ ಅವಧಿಯಲ್ಲಿ ತೋರಿಬಂದ ಕಾರಣ ವಿಶ್ವವಿದ್ಯಾಲಯ ಈ ಮೂರನೆಯ ಉಪಕ್ರಮವನ್ನು ಕೈಗೆತ್ತಿಕೊಂಡಿದೆ. ಮೂರು ವರುಷಗಳಲ್ಲಿ ಸಾಧಿಸಿದ ಈ ಮೂರು ಘಟ್ಟಗಳು "ಭಾರತಿ"ಯ ಪ್ರಗತಿಗೆ ಸಾಕ್ಷಿಯೆನಿಸಿವೆ. ಉನ್ನತ ಮಟ್ಟದ ಲೇಖನಗಳನ್ನು ಪ್ರಕಟಿಸಿ ಲೇಖಕರ, ವಾಚಕರ ಸಂಖ್ಯೆಯನ್ನು ಬೆಳೆಸಿದುದಕ್ಕೆ ನಿದರ್ಶನವೆನಿಸಿದೆ.

ಈ ಸಾಧನೆ ಉತ್ತರೋತ್ತರಗೊಳ್ಳಲು 'ಭಾರತಿ' ವಾಚಕವರ್ಗ, ಲೇಖಕವರ್ಗಗಳಿಂದ ಮೊದಲಿನಂತೆ ಸಹಕಾರವನ್ನು ಬಯಸುತ್ತದೆ.

ಶಂ. ಬಾ. ಜೋಶಿ ಅವರಿಗೆ ಗೌರವ

ವಿದ್ವತ್ತಿನ ತಳಹದಿ ಕುಸಿಯುತ್ತಿರುವ ಈಗಿನ ಕಾಲದಲ್ಲಿ ಸಂಸ್ಕೃತಿ, ಸಂಶೋಧನೆಗಳ ವ್ಯವಸಾಯಗೆಯ್ಯುವ ವಿರಳ ಸಾಹಿತಿಗಳಲ್ಲಿ ಶ್ರೀ. ಶಂ. ಬಾ. ಜೋಶಿ ಅವರೂ ಒಬ್ಬರು. ಕಳೆದ ಮೂರು ದಶಕಗಳಿಂದ 'ಮೌನ ತಪಸ್ವಿ'ಯಂತೆ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುತ್ತ ಬಂದ ಅವರ ಸಾಧನೆಯನ್ನು ಸಿಂಹಾವಲೋಕನಗೆಯ್ದರೆ, ಕರ್ನಾಟಕ-ಸಂಸ್ಕೃತಿಯ ಅಭ್ಯಾಸ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಬೆರಗುಗೊಳಿಸುತ್ತದೆ. ನಾಡು, ನಾಡವರು, ನುಡಿ, ಸಾಹಿತ್ಯ, ಸಂಸ್ಕೃತಿ ಇವುಗಳ ಉಗಮ, ಆಗಮ, ಸಂಗಮಗಳ ಸೂಕ್ಷ್ಮ ನಿರೀಕ್ಷೆ, ಪರೀಕ್ಷೆಗಳ ಫಲವಾಗಿ ಹೊರಬಂದ ಅವರ ಲೇಖನ ವ್ಯವಸಾಯದ ನಾಯಕಕೃತಿಯಾದ "ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ" ಎಂಬ ಗ್ರಂಥಕ್ಕೆ ಈ ವರುಷ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪಾರಿತೋಷಕ ಲಭಿಸಿದುದು ಕನ್ನಡಕ್ಕೆ ಸಂದ

ಒಂದು ದೊಡ್ಡ ಗೌರವ, "ಭಾರತಿ" ಶ್ರೀ ಜೋಶಿಯವರಿಗೆ ಈ ಪ್ರಸಂಗದಲ್ಲಿ ಅಭಿಮಾನವನ್ನು ವ್ಯಕ್ತಪಡಿಸಿ, ಶುಭವನ್ನು ಕೋರುತ್ತದೆ.

ಅನಕೃ ಅವರಿಗೆ ಗೌರವ ಪೀಠ

ಆಧುನಿಕ-ಕನ್ನಡ ಸಾಹಿತ್ಯದ ನವೋದಯ ಯುಗವನ್ನು ಪ್ರಗತಿಶೀಲ ಯುಗಕ್ಕೆ ತಿರುಗಿಸಿದ ಧೀಮಂತ ಸಾಹಿತಿ ಅನಕೃ, ಕಾದಂಬರಿ, ಸಣ್ಣ ಕಥೆ, ನಾಟಕ, ವಿಮರ್ಶೆ, ಪ್ರಬಂಧ ಮೊದಲಾದ ಕ್ಷೇತ್ರಗಳಲ್ಲಿ ಅಮೋಘ ಸೇವೆಯನ್ನು ಸಲ್ಲಿಸಿದವರು. ಕನ್ನಡದ ವೈಚಾರಿಕ ಸಾಹಿತ್ಯಕ್ಕೆ, ಅದರ ಅಭಿವ್ಯಕ್ತಿ ಮಾಧ್ಯಮವಾದ ಗದ್ಯಕ್ಕೆ ಹೊಸ ಕಸುವು ಮೂಡಿಸಿದವರು ಅನಕೃ. ಅವರು ಕನ್ನಡದ ಅಭಿಮಾನವನ್ನು ಮುಂದುಮಾಡಿಕೊಂಡು ಬದುಕಿದವರಲ್ಲ. ಕನ್ನಡವೇ ತಾವಾಗಿ ಬದುಕಿದವರು. ಇಂಥ ಹಿರಿಮೆಯನ್ನು ಪಡೆದ ಅನಕೃ "ರಾಜ್ಯ ಸಾಹಿತಿ ಅಕಾಡೆಮಿ"ಯ ಅಧ್ಯಕ್ಷರಾದುದು ಸಾಹಿತಿಯೊಬ್ಬರು ಸಾಹಿತ್ಯ ಕ್ಷೇತ್ರದ ನ್ಯಾಯವಾದ ಪಾಲನ್ನು ಪಡೆದುದರ ಕುರುಹು. ಈ ಪ್ರಸಂಗದಲ್ಲಿ ಅನಕೃ-ಅವರಿಗೆ 'ಭಾರತಿ' ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಕನ್ನಡ ಅಧ್ಯಯನ ಸಂಸ್ಥೆಗೆ ಡಾ|| ಚಟರ್ಜಿ ಅವರ ಸಂದರ್ಶನ

ರಾಷ್ಟ್ರೀಯ ಪ್ರಾಧ್ಯಾಪಕರೂ, ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆದ ಡಾ|| ಸುನೀತಿಕುಮಾರ ಚಟರ್ಜಿ ಅವರು ಕನ್ನಡ ಅಧ್ಯಯನ ಸಂಸ್ಥೆಯ ಅತಿಥಿಗಳಾಗಿ ಆಗಮಿಸಿದ್ದರು. ಮೂರು ದಿನಗಳವರೆಗೆ ಸಂಸ್ಥೆಯ ಪ್ರಗತಿ, ವ್ಯಾಪ್ತಿಗಳನ್ನು ಅವಲೋಕಿಸಿದ ಶ್ರೀಯುತರು, ವಿಶ್ವವಿದ್ಯಾಲಯದ ಅಧ್ಯಾಪಕ ಮತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ಕುಲಪತಿ ಡಾ|| ಅಡಕೆ ಅವರ ಅಧ್ಯಕ್ಷತೆಯಲ್ಲಿ ಉಪನ್ಯಾಸವನ್ನಿತ್ತರು. ಸಂಸ್ಕೃತವು ಭಾರತದ ಹಿರಿಮೆಯ ಸಂಕೇತವೆಂದು, ಹೇಳುತ್ತ ಈ ಕಾಲದಲ್ಲಿ ಅದರ ಮಹತ್ವವೇನೆಂಬುದನ್ನು ವಿವರಿಸಿದರು. ಭಾರತೀಯ ಪ್ರಾಂತಭಾಷೆಗಳು ಪದಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು, ಕೃತಿಗಳನ್ನು ಪರಸ್ಪರ ಭಾಷಾಂತರ ಮಾಡಿಕೊಂಡು ತಂತಮ್ಮ ಭಾಷೆಯನ್ನು ಶ್ರೀಮಂತಗೊಳಿಸಿಕೊಳ್ಳುವದರ ಮೂಲಕ ಭಾಷಾ ಭಾವೈಕ್ಯವನ್ನು, ಭಾರತೀಯ ಭಾವೈಕ್ಯವನ್ನು ಸಾಧಿಸಬೇಕು ಎಂದು ಕರೆ ನೀಡಿದರು.

ಕನ್ನಡ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ

ರಾಜ್ಯ ಸಾಹಿತ್ಯ ಅಕಾಡೆಮಿ ಈ ವರುಷ ಕನ್ನಡದ ಕೆಲವು ಲೇಖಕರಿಗೆ ಸಾವಿರ ರೂಪಾಯಿಯ ಪ್ರಥಮ ಬಹುಮಾನ, ಐನೂರು ರೂಪಾಯಿ ದ್ವಿತೀಯ

ಬಹುಮಾನವಿತ್ತು ಗೌರವಿಸಿದೆ. **ಕಾದಂಬರಿ:** ಶ್ರೀ ಮ. ನ. ಮೂರ್ತಿ— "ನಾಟ್ಯರಾಣಿ ಶಾಂತಲಾ (ದ್ವಿತೀಯ), **ವಿಮರ್ಶೆ:** ಶ್ರೀ ಬಿ ಎಚ್ ಶ್ರೀಧರ— ಕಾವ್ಯಸೂತ್ರ (ಪ್ರಥಮ), **ಸಣ್ಣಕತೆ:** ಶ್ರೀ ಈಶ್ವರಚಂದ್ರ— "ತೀರ" (ಪ್ರಥಮ), ಶ್ರೀ ವೀರಭದ್ರ— "ಈ ಭೂಮಿ ಆ ಆಕಾಶ" (ದ್ವಿತೀಯ), **ನಾಟಕ:** ಶ್ರೀ ಬಿ. ಸೀತಾರಾಮಶಾಸ್ತ್ರಿ— "ಕ್ಷೀರಸಾಗರ" (ಪ್ರಥಮ), ಶ್ರೀ ಪರ್ವತವಾಣಿ— "ಕವಿ ಭಿಕ್ಷೆ" (ದ್ವಿತೀಯ), **ಕವನ:** ಶ್ರೀ ಎಂ. ರಾಮಚಂದ್ರ "ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು (ಪ್ರಥಮ), ಶ್ರೀ ಸಿಪಿ ಲಿಂಗಣ್ಣ "ಶ್ರುತಾಶ್ರುತ" (ದ್ವಿತೀಯ). **ಪ್ರಬಂಧ ಮತ್ತು ಸಂಶೋಧನೆ:** ಶ್ರೀ ಪ್ರ. ಗೋ. ಕುಲಕರ್ಣಿ— "ಕನ್ನಡ ಭಾಷಾ ಚರಿತ್ರೆ" (ಪ್ರಥಮ), ಶ್ರೀ ಜಿ. ಎಂ. ಉಮಾಪತಿಶಾಸ್ತ್ರಿ— "ವಿವೇಕ ಚಿಂತಾಮಣಿ" (ದ್ವಿತೀಯ), **ವಿಜ್ಞಾನ:** ಡಾ. ಎ. ವಿ. ನರಸಿಂಹಮೂರ್ತಿ "ಕನ್ನಡ ಲಿಪಿಯ ಉಗಮ ಮತ್ತು ವಿಕಾಸ" (ಪ್ರಥಮ), ಡಾ. ಕೆ. ಎಂ. ಕೃಷ್ಣರಾವ್— "ಕನ್ನಡ ಭಾಷಾ ಸ್ವರೂಪ" (ದ್ವಿತೀಯ). ಸರಕಾರದಿಂದ ಸನ್ಮಾನಿತರಾದ ಈ ವಿದ್ವಾಂಸರಿಗೆ "ಭಾರತಿ" ಶ್ರೇಯಸ್ಸನ್ನು ಕೋರುತ್ತದೆ.

ಕಿಟೆಲ್ ಕೋಶದ ಪುನರ್ಮುದ್ರಣ

ಭಾರತೀಯ ಸಾಹಿತ್ಯಕ್ಷೇತ್ರದ ಮಹಾಸಾಧನೆಗಳಲ್ಲಿ ರೆ. ಎಫ್. ಕಿಟೆಲ್ ಅವರ ಕನ್ನಡ-ಇಂಗ್ಲೀಷ್ ಶಬ್ದ ಕೋಶವೂ ಒಂದು. ಹಲವು ವರ್ಷಗಳ ದುಡಿಮೆ, ಹಲವು ವಿದ್ವಾಂಸರ ನೆರವು, ಹಲವು ಕೃತಿಗಳ ಬಳಕೆಯ ಫಲವಾಗಿ ೧೮೯೪ರಂದು ಮೂಡಿಬಂದ ಈ ಕೃತಿ ಈಗ ಪುನರ್ಮುದ್ರಣಗೊಳ್ಳುತ್ತಿರುವುದೂ ಒಂದು ಸಾಧನೆಯೆಂದೇ ಹೇಳಬೇಕು. ಈ ಕಾರ್ಯವನ್ನು ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಚಾರ್ಯರಾದ ಪ್ರೊ. ಎಂ. ಮರಿಯಪ್ಪಭಟ್ಟ ಅವರು ಸಮರ್ಥವಾಗಿ ಹೊತ್ತುನಿತ್ತರಿಸುತ್ತಿರುವರು. ಅವರ ಪರಿಶ್ರಮ ಪಾಂಡಿತ್ಯಗಳ ಫಲವಾಗಿ ಈ ಕೋಶದ ಪ್ರಥಮ ದ್ವಿತೀಯ, ತೃತೀಯ ಸಂಪುಟಗಳು ಮದ್ರಾಸ, ಉಡುಪಿ, ಮೈಸೂರುಗಳಲ್ಲಿ ಬಿಡುಗಡೆ ಹೊಂದಿ ಚತುರ್ಥ ಸಂಪುಟ ಕಿಟೆಲ್‌ರ ಕಾರ್ಯಕ್ಷೇತ್ರವಾದ ಧಾರವಾಡದಲ್ಲಿ, ಅದೂ ಅವರ ಪುಣ್ಯನಾಮವನ್ನು ಧರಿಸಿನಿಂತ 'ಕಿಟೆಲ್ ಕಾಲೇಜ'ದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಒಂದು ವಿಶೇಷ ಸಂಗತಿ. ಈ ಸಂದರ್ಭದಲ್ಲಿ "ಕಿಟೆಲ್-ಸ್ಮರಣೆ" ಎಂಬ ಗ್ರಂಥ ಹೊರಬರುವುದು ಕಾಲೋಚಿತ ಕಾರ್ಯ. ಈ ಸಮಾರಂಭ ಕಿಟೆಲ್‌ರ ಘನತೆಗೆ ತಕ್ಕಂತೆ ಉಜ್ವಲವಾಗಿ ನೆರವೇರಲಿ ಎಂದು "ಭಾರತಿ" ಹಾರೈಸುತ್ತದೆ.

ಲೇಖಕರ ಪರಿಚಯ

೧. **ಶ್ರೀ ಶಿವಶರಣ ಜಾವಳಿ**

ಕನ್ನಡ ಅಧ್ಯಾಪಕರು, ವೂಮೆನ್ಸ್ ಕಾಲೇಜ, ಗುಲಬರ್ಗಾ.

೨. **ಶ್ರೀ ಎಂ. ಎಸ್. ನಾಗರಾಜರಾವ್**

ಕ್ಯೂರೇಟರ್, ಕೆ. ಆರ್. ಐ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. **ಶ್ರೀ ಗುರುಮೂರ್ತಿ ಕೆ. ಗೌಡರ**

ಅಧ್ಯಾಪಕರು, ಮಾನವಶಾಸ್ತ್ರವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. **ಡಾ॥ ಕೆ. ಎಸ್. ಅಮೂರ**

ಮುಖ್ಯ ಪ್ರಾಧ್ಯಾಪಕರು, ಗಣಿತ ವಿಭಾಗ, ಸ್ನಾತಕೋತ್ತರ ಕೇಂದ್ರ, ಗುಲಬರ್ಗಾ.

೫. **ಶ್ರೀ ಬಿ. ವ್ಹಿ. ಮಲ್ಲಾಪೂರ**

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೬. **ಡಾ॥ ಎಂ. ಎಂ. ಕಲಬುರ್ಗಿ**

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಕ. ವಿ., ಧಾರವಾಡ.

೭. **ಶ್ರೀ ಜಿ. ವ್ಹಿ. ತೊಗರ್ಸಿ**

ಕಾರ್ಟೋಗ್ರಾಫರ್. ಭೂಗೋಲ ವಿಭಾಗ, ಕರ್ನಾಟಕ ಸಾಯನ್ಸ್ ಕಾಲೇಜ, ಧಾರವಾಡ.

೮. **ಶ್ರೀ ಸಂಗಮೇಶ ಹಂಡಿಗಿ**

ಶಿಕ್ಷಕರು, ವ್ಹಿ. ಎಸ್. ಪಾಟೀಲ ಹೈಸ್ಕೂಲ, ರೋಣ (ಜಿ. ಧಾರವಾಡ).

೯. **ಶ್ರೀ ಜಿ. ಎಂ. ಭೈರೊಡಗಿ**

ಕನ್ನಡ ಅಧ್ಯಾಪಕರು, ಶ್ರೀ ಚನ್ನಬಸವೇಶ್ವರ ಕಾಲೇಜ, ಭಾಲ್ಕಿ.

೧೦. **ಶ್ರೀ ಗುರುಲಿಂಗ ಕಾಪಸೆ**

ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ.

೧೧. **ಶ್ರೀ ಸಿ. ವ್ಹಿ. ಕೆರಿಮನಿ**

ಕನ್ನಡ ಅಧ್ಯಾಪಕರು, ಮುನ್ಸಿಪಲ್ ಕಾಲೇಜ, ಲಕ್ಷ್ಮೇಶ್ವರ.

೧೨. **ಶ್ರೀ ಎಂ. ವಿ. ಜಂಬುನಾಥನ್**

ಸಂಖ್ಯಾಶಾಸ್ತ್ರದ ವಿಶ್ರಾಂತ ಪ್ರಾಧ್ಯಾಪಕರು, ಮಾನಸಗಂಗೋತ್ರಿ, ಮೈಸೂರ.

೧೩. ಶ್ರೀ ಆರ್. ರಾಜಪ್ಪ

ಕನ್ನಡ ಅಧ್ಯಾಪಕರು, [illegible] ಕಾಲೇಜು, ಬೆಂಗಳೂರು.

೧೪. ಶ್ರೀ ರಮೇಶ, ಎಸ್. ಗೊಂಡಬೋಳೆ

ಭೌತಶಾಸ್ತ್ರದ ಅಧ್ಯಾಪಕರು, ಕಿಟೆಲ್ ಕಾಲೇಜು, ಧಾರವಾಡ.

೧೫. ಶ್ರೀ ಶ್ರೀಪಾದ ಪಾಟೀಲ

ಕನ್ನಡ ಅಧ್ಯಾಪಕರು, ಕೆ. ಪಿ. ಎಸ್. ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಕಾರವಾರ.

೧೬. ಶ್ರೀ ವಿಲ್ಸನ್ ಕಟೀಲ

ರಿಸರ್ಚ್ ಅಸಿಸ್ಟೆಂಟ್, ಕನ್ನಡ ಅಧ್ಯಯನ ಸಂಸ್ಥೆ, ಕ. ವಿ., ಧಾರವಾಡ.

೧೭. ಶ್ರೀ ಎಸ್. ರಾಜಶೇಖರ

ಇತಿಹಾಸದ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೧೮. ಶ್ರೀ ಗೌರೀಶ ಕಾಯ್ಕಿಣಿ

ಪ್ರಸಿದ್ಧ ಲೇಖಕರು, ಗೋಕರ್ಣ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
5	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
6	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
7	ಗದ್ಯಮಂಜರಿ	2·00
8	ಕಾವ್ಯವಿಲಾಸ	1·50
9	ಗದ್ಯವಿಲಾಸ	1·25
10	ಕಾವ್ಯಕುಂಜ	1·50
11	ಕಾವ್ಯಮಂಜರಿ ಭಾಗ ೧, ಸಂಪುಟ ೩	2·00

II. Research Publications Series (ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	*—R. V. Joshi*		15·00
2	The Karnatak Theatre *—H. K. Ranganath*		Ord. binding	3·00
			Half calico	5·00
3	Some Problems in Jaina Psychology *—T. G. Kalghatgi*		Full cal.	7·00
			Half calico	6·00
4	ಕನ್ನಡ ಜಾನಪದ ಗೀತಗಳು	—ಬಿ. ಎಸ್ ಗದ್ದಗಿಮಠ		10·00
5	The Concept of Comedy	*—G. S. Amur*		7·00 $ 2 or Sh. 13
6	Local Self-Government in Mediaeval Karnatak *—G. S. Dikshit*			7·00 $ 2 or Sh. 13
7	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	—ಎಂ. ಎಸ್. ಸುಂಕಾಪುರ		8·00
8	Basic Syllabus in Practice	*—N. R. Hiremath*		10·00 $ 3 or £. 1
9	The Later Phase in the Development of W. B. Yeats	*—S. R. Mokashi*		10·00 $ 3 or £. 1

10 Some Studies in Boolean Algebra — 7·00
—E. Sampathkumarachar — $ 2 or Sh 14

11 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ — 12·00

12 A History of South Kanara *—K. V. Ramesh* — 30·00

13 A Critical Study of the Hindu Astronomy in the Light and Language of the Modern — 12·00
—D. A. Somayaji — $ 4 or Sh. 25

14 The Havyaka Dialect of North Kanara — 12·00
—K. G. Shastri — $ 4 or Sh. ·25

III. Extension Lectures Publications Series

(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism — 1.50
—R. D. Ranade — Cents 50 or Sh. 4

2 Hindu Code Bill *—P. B. Gajendragadkar* — 2·00

3 Karnataka's Trans-Oceanic Contacts — 3.00
—B. A. Saletore

4 Kālidāsa *—R. D. Karmarkar* — 4.00

5 Bhavabhūti *—R. D. Karmarkar* — 3.00
$ 1 or Sh. 7

6 Bāṇa *—R. D. Karmarkar* — 3·00

7 Rockets, Satellites and Space Travel — 2·00
—G. B. Pant

8 Purandara and Haridāsa Movement — 6.00
—M. V. Krishna Rao — $ 2 or Sh. 13

9 ಮಹಾಕವಿ ಷಡಕ್ಷರದೇವ — 3.00
—ಬಿ. ಶಿವಮೂರ್ತಿಶಾಸ್ತ್ರೀ — 4·00

10 Śaṅkara's Advaita *—R. D. Karmarkar* — 3·00

11 ಸಾಹಿತ್ಯ: ಸಂಪ್ರದಾಯ ಮತ್ತು ಹೊಸ ಮಾರ್ಗ — 4·00
— ವಿ. ಸೀತಾರಾಮಯ್ಯ

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು — 3·00
—ದ. ರಾ. ಬೇಂದ್ರೆ

13 ವಿಚಾರಸಾಹಿತ್ಯ ನಿರ್ಮಾಣ —ಕೆ. ಎಸ್. ಕಾರಂತ — 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ — 2·50
—ಆದ್ಯ ರಂಗಾಚಾರ್ಯ

15 ಸಾಹಿತ್ಯವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ — 3·00

IV. Economics Series

1	A Survey of Handicrafts in Eight Districts of the Mysore State —*S. S. Mensinkai*	5·00
2	Community Development and Employment —*D. M. Nanjundappa*	3·00
3	Research Reporting in Social Sciences —*M. H. Gopal*	2·00
4	Economy of Scarcity Areas —*T. K. Meti*	4·00 $ 1 or Sh. 7
5	Foreign Trade and Economic Development —*V. L. D'souza*	1·50
6	Food and Freedom —*V. M. Dandekar*	2·50
7	Local Taxation in Urban Areas —*D. M. Nanjundappa & M. V. Nadkarni*	3·00
8	Economic Development in India —*R. Balakrishna*	5·00
9	Economic Development of the under-developed regions in Italy —*T. K. Meti*	10·00 $ 5 or Sh. 30
10	Rural Industrialisation: An Integrated Approach —*V. S. Vyas*	3·00 $ 1 or Sh. 7

V. ಕನ್ನಡ ಕಾವ್ಯಮಾಲೆ (Kannada Classical Series)

1	ರಾಜಶೇಖರವಿಳಾಸ ಸಂಗ್ರಹ ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	2·00
2	ಸೋಮನಾಥ ಚಾರಿತ್ರ ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	5·00
3	ರಾಜಶೇಖರವಿಳಾಸಂ ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	10·00
4	ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	6·00
5	ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ	12·00
6	ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ	20·00
7	ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨ ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ	8·00
8	ಹರಿಹರದೇವಕೃತ ಪುರಾತನರ ಆರು ರಗಳೆಗಳು ಸಂ. : ಆರ್. ಸಿ. ಹಿರೇಮಠ	3·50

9	ನೇಮಿನಾಥ ಪುರಾಣಂ	ಸಂ. : ಬಿ. ಎಸ್. ಕುಲಕರ್ಣಿ	6.00
10	ಅಕ್ರೂರಚರಿತ್ರೆ	ಸಂ. : ಬೆಟಗೇರಿ ಕೃಷ್ಣಶರ್ಮಾ	Half Cal. 6·00 Ord. 4.00
11	ಜೀವಂಧರಚರಿತೆ	ಸಂ.: ಬಿ. ಎಸ್. ಕುಲಕರ್ಣಿ	7·00

VI. ಉಪನ್ಯಾಸಗ್ರಂಥಮಾಲೆ

(Kannada Extension Lectures Booklets Series)

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

1. ಭವಭೂತಿ — ಕೆ. ಕೃಷ್ಣಮೂರ್ತಿ
2. ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂ.ವಾ. ಯೋಜನೆ ಹಾಗೂ ಒಕ್ಕಲುತನ — ಎನ್. ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿಸೋಜಾ
6. ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ
14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಪತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ

27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎಸ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ತಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41 ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಆಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ
46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ — ಬಿ. ಬಿ. ಮಹೀಶವಾಡಿ
55 ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು — ಬಿ. ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ

60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
— ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು
— ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು ? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ
76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ ? — ಎಂ ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ — ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ

92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ— ಎಂ. ಎಸ್. ಎಸ್. ರಾವ್
103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ
104. ಪೇಟಿ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ
106. ಮೈಲಾರದೇವರು — ಶ್ರೀನಿವಾಸ ರಿತ್ತಿ
107. ಭಗವದ್ಗೀತೆ — ಎಲ್. ಸಿ. ಪಾಟೀಲ
108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ
109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಮಲ್ಲಾಪುರ
110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ
111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ
112 ತಮಿಳು ಶಿವಭಕ್ತೆ ಕಾರಿಕಾಲಮ್ಮ — ಎಂ. ಎಸ್. ಲಠ್ಠೆ
113. ಜಾನಪದ ವೀರಗೀತೆಗಳು — ಬಿ. ಬಿ. ಮಹೀಶವಾಡಿ
114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ
115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ
116. ಭಾರತದ ಪ್ರಾಚೀನ ನಾಣ್ಯಗಳು — ಎ. ಎಂ. ಅಣ್ಣಿಗೇರಿ
117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ
118. ಯೋಜನೆಗಳು ಹಾಗೂ ಗ್ರಾಮೋದ್ಯೋಗಗಳು — ವ್ಹಿ.ಬಿ.ಅಂಗಡಿ
119. ಮಾನವವಿಜ್ಞಾನ ಹಾಗು ಆಧುನಿಕ ಭಾರತ — ಎಲ್. ಎಸ್. ಐನಾಪುರ

120. ಹಳ್ಳಿಗರೇಳ್ಗೆ ಸಾಧಿಸುವ ಬಗೆ — ಬಿ. ಆರ್. ಪಾಟೀಲ
121. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ

VI ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0.50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1.00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1.00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1.50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1.50
6	ಸಾಹಿತ್ಯವಿಮರ್ಶೆ	1.50
7	ಗಾಂಧೀತತ್ವವಿಶ್ಲೇಷಣೆ	1.50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2.50

VIII. Other Publications (ಇತರ ಪ್ರಕಟನೆಗಳು)

1	Hubli City—A Study in Urban Economic Life —*B. R. Dhekney*	10.00 $ 3 or £ 1
2	Private International Law — *N. K. Dixit & Negalur Ranganath*	10.00
3	The Structure of Kannada — *R. C. Hiremath*	5.00
4	विवेकचिंतामणि (Marathi rendering of Nijaguna Shivayogi's Viveka Chintamani in Kannada) (Joint publication of the Karnatak University, Dharwar & the Poona University, Poona) —Ed. *D. N. Awalikar*	6.75
5	ಸಸ್ಯಶಾಸ್ತ್ರ — ಸಿ. ಎಸ್. ಚಿಕ್ಕಣ್ಣಯ್ಯ	1.50
6	ರಸಾಯನಶಾಸ್ತ್ರ — ಆರ್. ಎಸ್. ಹಮಸಾಗರ	4.00
7	ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ	3.00
8	ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ —(ಅನು. : ಎಂ. ಎಸ್. ದೇಶಪಾಂಡೆ)	5.00
9	ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ	2.50
10	Studies in State Administration —Ed. *G. S. Halappa*	15.00

11 Yashodhara Charita 5·00
Ed. *K. Krishnamoorthy* $ 1·50 or Sh. 10

12 Essays in Sanskrit Criticism 5·00
—*K. Krishnamoorthy*

13 The First General Elections in Goa 3·00
—*G. S. Halappa, A. M. Rajashekharaiah &*
K. Raghavendra Rao

14 Sunyasampadane—Vol. I (*English version of a Kannada work with Commentary & Notes*) 12·00
$ 4 or Sh· 20
—Ed. *S. C. Nandimath, L. M. A. Menezes and*
R. C. Hiremath

15 Kavi Kaumudi —Ed *K. Krishnamoorthy* 1·50

16 ಚನ್ನಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 15·00

17 ಷಟ್‌ಸ್ಥಲಪ್ರಭೆ —ಆರ್. ಸಿ. ಹಿರೇಮಠ 7·00

18 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

19 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20 00
—ಸಂ. ಆರ್. ಸಿ. ಹಿರೇಮಠ

20 Sunyasampadane—Vol. II 20·00
—Ed. *S. S. Bhoosanurmath &* $ 5 or Sh· 30
Armando Menezes

21 ಬಸವಣ್ಣನವರ ವಚನಗಳು —ಸಂ ಆರ್. ಸಿ. ಹಿರೇಮಠ 20·00

22 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

23 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

24 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

25 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

26 Critical Essays on Indian Writing in English 20·00
—Ed. *M. K. Naik, S. K. Desai and* $ 4 or Sh. 30
G. S. Amur

27 Sāyaṇa's Subhāṣita-Sudhānidhi 10·00
—Ed. *K. Krishnamoorthy*

28 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ. ಎಂ. ಕಲಬುರ್ಗಿ

29 Urban Studies: An Aid to Research — 30·00
—B. N. Sinha & T. N. Achut Rao — $ 10

30 Sunyasampadane – Vol. III — 20·00
—Ed. S. S. Bhoosnurmath & Armando Menezes — $ 5 or Sh. 30

31 Old People of Makunti — 10·00
—H. M. Marulasiddaiah

32 Sunyasampadane – Vol. IV. — 20.00
-Ed. S.S. Bhoosnurmath & Armando Menezes — $ 5 or Sh. 30

33 Sirsi: An Urban Study — 20·00
—Dr. B. N. Sinha — $ 7

34 Contributions to the Understanding of Indian Civilization. — 3.00
—Baidyanath Saraswati — $ 1 or Sh. 8

35 ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ — 6·00

IX. UNIVERSITY JOURNALS

Annuals :

1 Journal of the Karnatak University — Science

2 Journal of the Karnatak University — Humanities

3 The Journal of Karnatak University — Social Sciences

Rate of Annual Subscription for Each Journal:

Rs. 5-00 (In India)

2 Dollars
14 Shillings } (Foreign)

Quartarly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/- (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Monthly : 50 paise
Annual : Rs. 6/-

X. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ. ಪಠ್ಯಪುಸ್ತಕಗಳು

			ರೂ. ಪೈಸೆ
1.	ರಾಜ್ಯಶಾಸ್ತ್ರ ಪರಿಚಯ	....	3 – 00
2.	ಸಂಸ್ಕೃತ ಗದ್ಯಪದ್ಯ	....	3 – 50
3.	ಉದ್ಯಾನಶಾಸ್ತ್ರ ಪರಿಚಯ	....	3 – 75
4.	ಅರ್ಥಶಾಸ್ತ್ರ ಪರಿಚಯ	....	4 – 00
5.	ವಾಣಿಜ್ಯಶಾಸ್ತ್ರ ಪರಿಚಯ	....	5 – 00
6.	ತರ್ಕಶಾಸ್ತ್ರ ಪರಿಚಯ	....	3 – 00
7.	ಜಗತ್ತಿನ ಇತಿಹಾಸ	....	4 – 50
8.	ಬೀಜಗಣಿತ – ಕಲನಶಾಸ್ತ್ರ ಪರಿಚಯ	....	4 – 50
9.	ಸಮಾಜಶಾಸ್ತ್ರ ಪರಿಚಯ	....	3 – 00
10.	ಮಾನವಶಾಸ್ತ್ರ ಪರಿಚಯ	....	3 – 00
11.	ಸಸ್ಯಶಾಸ್ತ್ರ ಪರಿಚಯ	....	5 – 50
12.	ಪ್ರಾಯೋಗಿಕ ರಸಾಯನಶಾಸ್ತ್ರ	....	3 – 50
13	ಗಣನಶಾಸ್ತ್ರ ಪರಿಚಯ	....	5 – 00
14.	ಭೂಮಂಡಲ ಪರಿಚಯ	....	8 – 50
15.	ರಸಾಯನಶಾಸ್ತ್ರ	....	8 – 00
16.	ಸಂಗೀತಶಾಸ್ತ್ರಪರಿಚಯ	....	4 – 00
17.	ಪ್ರಾಣಿಶಾಸ್ತ್ರಪರಿಚಯ	....	7 – 00

ಪದವಿ ಪ್ರಥಮ ಭಾಗದ ಪಠ್ಯಪುಸ್ತಕಗಳು

18. ಸಂಸ್ಕೃತ ಗದ್ಯ–ಪದ್ಯ	....	3–00
19. ರಾಜ್ಯಶಾಸ್ತ್ರ	....	4–00
20. ಮಾರಾಟ ಹಾಗು ವಿಕ್ರಯ ಶಾಸ್ತ್ರ	....	4–50
21. ಕಾರ್ಯನಿರ್ವಹಣಶಾಸ್ತ್ರ	....	6–50

ಪೂರಕ ಗ್ರಂಥಗಳು

1. ಆಯುರ್ವೇದ ವಿಜ್ಞಾನ	....	7–00

RATES OF COMMISSION

ALLOWED ON PURCHASES OF UNIVERSITY PUBLICATIONS.

I. **Text-books** (Books Prescribed for University Exams. Only).

15% commission on purchases of 25 copies or more at a time.

II **Other publications including University Journals**

25% commission on purchases worth Rs. 100/- or above but below Rs. 5,000/- at a time.

$33\frac{1}{3}$% commission on purchases worth Rs. 5,000/- or above at a time.

Concession to students

The copies of the University Journals are sold at half the price to past and present students of the Karnatak University, Dharwar.

N. B. : 1. Publications are not sent by V.P.P. Packing and forwarding charges to be paid by the customer.

2. Remittances should be sent to the *Registrar, Karnatak University, Dharwar*, either by M.O., postal payment order or by Demand Draft payable at Dharwar.

ವಿಶ್ವವಿದ್ಯಾಲಯದ ಯಾವದೇ ಪ್ರಕಟಣೆಗಳನ್ನು ವ್ಹಿ.ಪಿ. ಮೂಲಕ ಕಳಿಸಲಾಗುವದಿಲ್ಲ. ಅಂಚೆವೆಚ್ಚ ಮತ್ತು ಪುಸ್ತಕಗಳನ್ನು ಕಳುಹಿಸುವ ಖರ್ಚು ಪ್ರತ್ಯೇಕ. ಸಂಬಂಧಪಟ್ಟ ಹಣವನ್ನು ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮನಿಯಾರ್ಡರ್, ಪೋಸ್ಟಲ್ ಆರ್ಡರ್ ಇಲ್ಲವೆ ಡಿಮಾಂಡ್ ಡ್ರಾಫ್ಟ್ ಮೂಲಕ ಮುಂಗಡ ಕಳುಹಿಸಬೇಕು.

For details, please write to :

The Director,
Extension Service & Publications,
Karnatak University,
DHARWAR-3 (Mysore State)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗ ವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೩ (ಮೈಸೂರು ರಾಜ್ಯ)